ಆ . . . . . . ಹ।
ನಾಸುಪಾರ್ಶ್ವಜಿನೇಂದ್ರ ॥
ಆಶೈಲದೊಳು ಪೂಜ್ಯಪಾದಮುನೀಂದ್ರ ಮ।
ಹಾ ಸಿದ್ಧರಸವನು ರಚಿಸಿ ॥
ಭಾಸುರಕೀರ್ತಿವಡೆದು ಮುಕ್ತಿಪುರಕೆ ವಿ।
ಲಾಸದಿಂದೆಯ್ದಿದನೆಂದು ॥

ಅಂತಪ್ಪ ಪುಣ್ಯಸ್ಥಲದೊಳಗಿಹ ಭವ್ಯ।
ಸಂತತಿಗಾ ಪಾರ್ಶ್ವೇಶ ॥

ಅಂತವಿಲ್ಲದ ಸೌಖ್ಯವನೊಲಿದಿತ್ತು।
ಸಂತತ ಪಾಲಿಸುತಿಹನು ॥
ದುರಿತವಿದೂರ ಜಿನಪದಭಕ್ತ ಭಾ।
ಸುರ ಗುಣ ಗಣ ಮಣಿ ಭರಣ ॥

ವರ ಜೈನವಿಪ್ರಾನ್ವಯಾಂಬರ ಭಾನು ದೇ।
ವರಸನೆಂದೆಂಬ ದ್ವಿಜನು ॥
ಅರಲಂಬನ ಗೆಲಿದಾ ಪಾರ್ಶ್ವೇಶನ।
ನಲವಿಂದೊಲಿದು ತದ್ವಿಪ್ರ ॥

ಸುಲಲಿತವಪ್ಪ ಸದ್ಗತಿಯ ಸಾಧಿಪೆನೆಂದು।
ಹಲ ಹಗಲಿಂದ ಪೂಜಿಪನು ॥

ಆತನಣುಗನರುಹತ್ಪದ ಪಂಕೇ।
ಜಾತ ಮಧುಪ ದೇವರಸ ॥

ಈತೆರದಿಂ ಗುರುದತ್ತನ ಚರಿತೆಯ।
ಪ್ರೀತಿಯಿಂದಾನುಸುರಿದೆನು ॥

* * * *

End:

ಇದು ಸಾರ ಸುಖವ ಸಂತತವೀವ ಕೈವಲ್ಯ ।
ಸುದತಿಗೆಱೆಯ ತಾನಾದ ॥

ಸದಮಲ ಪುಣ್ಯ ಪುರುಷನ ಚರಿತ್ರ ವಿಂ ।
ತಿದನು ಭವ್ಯರು ಪಾಲಿಪುದು ॥

Colophon:

ಗುರುದತ್ತಚರಿತ್ರೆ ಸಮಾಪ್ತಂ.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಗ್ರಂಥಪಾತ ಬಹಳ.

ಇದು ಸಾಂಗತ್ಯರೂಪವಾದುದು. ಕವಿ ದೇವರಸ. ಜೈನಮತದವನು. ಈತನ ಕಾಲವನ್ನು ಸು. ಕ್ರಿ. ಶ. ೧೬೫೦ ಎಂದು ಕವಿಚರಿತ್ರಕಾರರು ಬರೆಯುತ್ತಾರೆ. ಈ ಗ್ರಂಥದಲ್ಲಿ ೮೧೩ ಪದ್ಯಗಳಿರುವಂತೆ ಕವಿಚರಿತ್ರೆಯಲ್ಲಿ ಹೇಳಿದೆ. ಆದರೆ ಈ ಪ್ರತಿಯಲ್ಲಿ ೬೮೩ ಪದ್ಯಗಳಿಗೇ ಗ್ರಂಥವು ಸಂಪೂರ್ಣವಾಗಿದೆ. ಗ್ರಂಥಾದಿಯಲ್ಲಿ ೨೪ ಜಿನರು, ಸಿದ್ಧಾದಿಗಳು, ಶಾರದೆ, ಸರ್ವಾಹ್ಣಯಕ್ಷ ಮುಂತಾದವರಸ್ತುತಿಯಿದೆ. ಪೂರ್ವ ಕವಿಗಳಲ್ಲಿ ಪೂಜ್ಯಪಾದ ಪಂಪ ಭಟ್ಟಾಕಳಂಕ ಮೊದಲಾದವರನ್ನು ಕವಿಯು ಸ್ತುತಿಸಿದ್ದಾನೆ. ಈ ಕಥೆಯನ್ನು ವೀರಜಿನರ ಶ್ರೀಸಮವಸರಣದಲ್ಲಿ ಮಾರಮಥನ ಗೌತಮರು ಶ್ರೇಣಿಕ ಮಹಾರಾಜನಿಗೆ ಹೇಳಿದಂತೆಯೂ, ಅದನ್ನು ಕವಿಯು ಆಚಾರ್ಯಗುರು ಸಂತಾನದಿಂದರಿತು ಪೇಳದಂತೆಯೂ ಬರೆಯುತ್ತಾನೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು. ಪುಸ್ತಕಾಂತ್ಯದಲ್ಲಿ:—'ಶ್ರೀಮುಖ ಸಂವತ್ಸರದ ಕಾರ್ತಿಕ ಶುದ್ಧ ೧ ದಲ್ಲು ಉಮ್ಮತ್ತೂರ ಹೊಸ ಬಸ್ತಿಯ ವರ್ಧಮಾನಸ್ವಾಮಿಯ ಸನ್ನಿಧಿಯಲ್ಲಿ ವರ್ಧಮಾನ ಶಿಕಾವಳಿಗೆ (?) ಜೋಯಿಸರ ಸೂರಯ್ಯನು ಬರೆದ ತ್ರಿಪುರದಹನ ಸಾಂಗತ್ಯ, ಗುರುದತ್ತನ ಚರಿತೆ ಸಮಾಪ್ತ' ಎಂದಿದೆ.

No. 329. ಗುರುದತ್ತಚರಿತ್ರೆ. (ಕಥೆ.)
GURUDATTACARITRE. (STORY.)

Substance, paper. Size, 10¼ × 9¼ inches. Pages, 66. Lines, 20 on a page. Character, Kanarese. Condition, fair. Appearance, new.

Begins on page 25. The other works herein are:—(1) Tripuradahanasāṅgatya 1 b. (2) Bharatēsvara caritre 91.

Complete in 683 stanzas.

Same work as the above. For other particulars see under No. 328 ante.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲ. ಗ್ರಂಥಪಾತ ವಿಶೇಷ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಪುಸ್ತಕದ ಪ್ರತಿಕೆಯು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಮಿಕ್ಕ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 330. ಗೊಮ್ಮಟೇಶ್ವರಚರಿತ್ರೆ. (ಕಥೆ)

GOMMAṬĒŚVARA CARITRE. (STORY.)

Substance, Śrītāla. Size, 14¼ × 2 inches. Pages, 217. Lines, 9 on a page. Character, Kanarese. Condition, slightly injured. Appearance, old. Mode of writing, not bad.

Begins on fol 11 *a*. The other work herein is Lōkasvarūpa, 1*a*.

Complete.

A poem in the Sāngatya metre describing the story of Gommaṭēsvara of Kārkala in South Kanara district. The author Candrama was a disciple of Srutasāgara. This work was written at the instance of King Bhairava. The author states that Immaḍi Bhairava, the son of Bhaira, performed the ceremony of Abhisēka to Gommaṭeśvara in the Śaka year 1568—Parthiva (A.D. 1646) in honour of his father. Date of Transcription.— Fifth day of the dark fortnight of the lunar month Nija caitra in the year Raktākṣi Śaka 1727 corresponding to 1805 A.D.

Name of the scribe.—Kāpettina Dharanappa Heggade of Kārkala-for the King of Mangalore.

From the above facts, it is understood that the temple of Gommatēśvara must have been in existence even before Immadi Bhairava. In a kyfiiath of Karkala preserved in this library it is stated that the temple was constructed by one Pandepa vadeya, a remote descendant of Bhairava.

Beginning:

ಸುರ ನರಪತಿ ನುತ ಚರಣ ಸರೋ[ಜಾ](ಜ)[ತ]ಭಾ।
ಸುರತ್ರರ ಕೇವಲಬೋಧ॥
ಪರಮಾರ್ಹಂತಲಕ್ಷ್ಮೀಪತಿ ನಮಗೆ ನೀ।
ಶರಣಾಗು ನೇಮಿ ಜಿನೇಶ॥

* * * *

ಶ್ರುತಸಾಗರ ಮುನಿಗತಿಪ್ರಿಯಶಿಷ್ಯ ಸ।
ನ್ನುತ ಕವಿ ಚಂದ್ರಮ ನಾನು॥
ಪ್ರತಿಯಿಲ್ಲವೆನಲೀ ಕೃತಿಯ ಪೇಳ್ವೆನು ಬುಧ
ತತಿ ಮೆಚ್ಚುವಂತೆ ಕನ್ನಡದಿಂ॥
ಜಿನಮತವಾರ್ಧಿವರ್ಧನ ಚಂದ್ರಮ ಭವ್ಯ।
ಜಿನಹೃತ್ಕುವಲಯ ಚಂದ್ರಮನು॥
ಅನುಪಮ ವಿಬುಧ ಚಕೋರ ಚಂದ್ರಮನೆಂದು।
ಜನರೊಲ್ದು ಬಣ್ಣಿಪರವನ॥

ವ್ರತಗುರುವೆನಗೆ ಮಹೇಂದ್ರಕೀರ್ತ್ಯಾಚಾರ್ಯ ।
ಶ್ರುತಸಾಗರಮುನಿರಾಯ ॥
ನುತ ವಿದ್ಯಾಸಾಗರ ಗುರುವೆನೆ ಪುಣ್ಯದೊಂ
ದತಿಶಯಕೆನ್ನೆಣೆಯುಂಟೆ ॥
ಈ ಜಗದೊಳು ಕೀರ್ತಿ ಪಸರಿಸಿ ನಿಲ್ವಂತೆ ।
ಶ್ರೀ ಜಿನರಾಜನ ಕೃತಿಯು ॥
ಮೂಜದೆ ಪೇಳಿಸ ಲಲಿತಕೀರ್ತ್ಯಾಚಾರ್ಯ ।
ನೋಜೆಯಿಂ ಪೇಳ್ವೆನೀ ಕೃತಿಯು ॥
ಅರಿರಾಯರ ಗಂಡ ಡಾವಣಿಯೆಂದೆಂಬ ।
ಬಿರುದಾಳ್ವ ಭೈರವನೃಪನ ॥
ಕರುಣಸಹಾಯದಿಂದೀ ಕೃತಿಯನು ಪೇಳ್ವೆ ।
ಧರೆಯ ಜನರು ಮೆಚ್ಚುವಂತೆ ॥

* * *

ಏಕೆನ್ನು ಒಹುಸಾತು ನಾಕಲೋಕವೆ ಬಂದು ।
ಶ್ರೀ ಕಾರಕಳದ ಕೃತಿಯನು ॥
ತಾಕಂಡುಘುರಿ(ಸಿ)ತೋ ಎಂಬಂತೆ ಲೋಕಕ ।
ನೇಕ ವಿಸ್ಮಯ ಪುಟ್ಟಿಪುದು ॥
ಇದು ಶ್ರುತಸಾಗರಮುನಿರಾಯನ ಶಿಷ್ಯ ॥
ಚದುರ ಚಂದ್ರಮ ವಿರಚಿಸಿದ ॥
ಮದನಾರಿ ಗುಮ್ಮಟಸ್ವಾಮಿಯ ಚರಿತೆಯೊಳ್ ।
ಮೊದಲನೆ(ಯ) ಸಂಧಿ ಶುಭಮಸ್ತು ॥

Colophon :

(ಮೊದಲನೆಯ ಸಂಧಿ ಸಂಪೂರ್ಣಂ.)

ಆದಿಜಿನೇಶನ ಸುಕುಮಾರನಣ್ಣನೊಳ್ ।
ಕಾದಿ ಗೆಲಿದ ಬಲುಧೀರ ॥
ಮೇದಿನಿ ಜನಕೆ ಮಂದಾರ!ನಮ್ಮನು ಕಾಯೊ ।
ಆಧಾರದಿಂ ಗುಮ್ಮಟೇಶ ॥

* * *

ಶ್ರೀ ವೀರನರಸಿಂಹ ಬಂಗರಾಜೇಂದ್ರನ ।
ಪಾವನ ಗರ್ಭಾಬ್ಧಿ ಚಂದ್ರ ॥
ಭೂವಳಯದೊಳುಳ್ಳ ಭೋಗದೇವೇಂದ್ರ ವಿ ।
ಭಾವದ ವೈರಿ ಮೃಗೇಂದ್ರ ॥
ಕಮ್ಮಗಣೆಯ ನರಸಿಯ ಪೋಲ್ವ ರೂಪಿನ ।
ಗುಮ್ಮಟಾಂಬಿಕೆಯ ಗರ್ಭದೊಳು ॥

ಇಮ್ಮಡಿ ಭೈರವರಾಯ ಪುಟ್ಟಿದನವ ।
ಹಮ್ಮಿನ ದೊರೆಗಳ ಗಂಡ ॥
ಆತನ ಪಟ್ಟದರಸಿ ಭುವನದೊಳು ವಿ ।
ಖ್ಯಾತೆಯೊ ಕಲಿಯುಗದೊಳಗೆ ॥
ಸೀತೆಯೆನಿಸಿ ಮಲ್ಲಿದೇವಿಯಮ್ಮನು ಜಗ ।
ನ್ಮಾತೆಯೊಪ್ಪಿದಳು ಧರೆಯೊಳು ॥
ಅವರಿರ್ವರ ಗರ್ಭದೊಳುದಯಿಸಿದನು ।
ಭುವನೈಕವೀರ ಪಾಂಡ್ಯೇಂದ್ರ ॥

*   *   *   *

ಅವನನುಜಾತನು ಚಂದ್ರಶೇಖರನೆಂಬ ।
ಸುವಿವೇಕಿ ಪುಟ್ಟಿದ ಬಳಿಕ ॥

*   *   *   *

ಆತನನುಜ ನಿಮ್ಮಡಿ ಭೈರವರಾಯ ।
ನೂತನ ಮನಸಿಜಕಾಯ ॥

*   *   *   *

ಕೊಟ್ಟ ಭಾಷೆಗೆ ತಪ್ಪುವರ ಗಂಡ ರಣಕೆ ಹಿ ।
ಮ್ಮೆಟ್ಟುವ ದೊರೆಗಳ ಗಂಡ ॥
ಪಟ್ಟಪೊಂಬುಚ್ಚಪುರವರಾಧೀಶ್ವರ ।
ಪಟ್ಟದ ದೊರೆ ಭೈರವೇಂದ್ರ ॥
ಶ್ರೀವೀತರಾಗಗಲ್ಲದೆ ಮಿಕ್ಕ ದೇವರ್ಗೆ ।
ಯೆರಗುವ ಭಾವದೊಳಿಲ್ಲ । (?)
ಆವ ಕಲೆಯೊಳು ಸೋಡಿದರವಗಿ(ದಿ)ರಿಲ್ಲ ॥
ಕೋವಿದ ರಣರಂಗಮಲ್ಲ ॥
ಆತನ ಜನಕ ಭೈರವರಾಯನಿಗೆ ಪುಣ್ಯ ।
ಖ್ಯಾತಿಗಳಾಗಲೆಂದೆನುತ ॥
ನೂತನ ಜನ್ಮಾಭಿಷೇಕವ ಗುಮ್ಮಟ ।
ನಾಥಗೆಯನುಮಾಡಿಸಿದ ॥

End :

ಶ್ರೀಗುಮ್ಮಟ ಸ್ವಾಮಿಯ ಚರಿತ್ರೆಯ ಬೇಗ ।
ರಾಗದಿಂದೋದುವ ಕೇಳ್ವ ॥
ಭೋಗಿಗಳಿಗೆ ಯೋಗಿಗಳಿಗೆ ಸಂಪದ ಸುಖ ।
ವಾಗುತಿರಲಿ ನಿರಂತರವು ॥
ಇದರೊಳ್ ಕೊಂಕುಳ್ಳೊಡೆ ತಿದ್ದಲಿ ಬಲ್ಲವ ।
ರದು ತಾನಿರಲು ಭೂಷಣವೆ ॥

ಸುದತಿಯು ಕಡೆಗಣ್ಣ ನೋಟ ಕುರುಳ್ಪುರ್ಬು ।
ಮುದವ ಪುಟ್ಟಿಸವೆ ಲೋಕದೊಳು ॥
ಇದು ಶ್ರುತಸಾಗರಮುನಿರಾಯನ ಶಿಷ್ಯ ।
ಚದುರ ಚಂದ್ರಮ ವಿರಚಿಸಿದ ॥
ಮದನಾರಿ ಗುಮ್ಮಟಸ್ವಾಮಿಯ ಚರಿತೆಯೊಳ್ ।
ಪದಿನೇಳನೆಯ ಸುಸಂಧಿ ॥

Colophon :

ಅಂತು ಸಂಧಿ ೧೭ಕ್ಕಂ ಪದ ೨೩೧೪ಕ್ಕಂ ಮಂಗಳಮಹಾ ಶ್ರೀ

(ವಿ-ವಿ.)—

ಸಮಗ್ರ. ಶಿಥಿಲ. ಲಿಪಿ ಸಾಮಾನ್ಯವಾಗಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ಗೊಮ್ಮಟೇಶ್ವರನ ಚರಿತ್ರೆಯೂ, ಕಾರ್ಕಳದಲ್ಲಿ ಆತನ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ ಹೇಳಿದೆ. ಗ್ರಂಥಾದಿಯಲ್ಲಿ ನೇಮಿಜಿನೇಶನ ಸ್ತುತಿಯಿದೆ. ಬಳಿಕ ಕವಿ (ಚಂದ್ರಮ) ಗುಮ್ಮಟ (ಬಾಹುಬಲಿ) ಚಂದ್ರನಾಥ, ಸಿದ್ಧಾದಿಗಳು, ಯಕ್ಷಯಕ್ಷಿಯರು ಜಗದಂಬಿಕೆ, ಧಿಟ್ಟಬ್ರಹ್ಮ, ಚೆಟ್ಟದಬ್ರಹ್ಮ, ಹೊಂಬುಜದ ಪದ್ಮಾಂಬೆ ಇವರನ್ನು ನಮಸ್ಕರಿಸಿ ಮಹೇಂದ್ರಕೀರ್ತಿ ಮೊದಲಾಗಿ ಶ್ರುತಸಾಗರನ ವರೆಗೆ ಗುರುಗಳನ್ನು ಸ್ತೋತ್ರಮಾಡಿದ್ದಾನೆ. ಉಳಿದವಿಷಯಗಳನ್ನು ಮೇಲೆ ಉದಾಹರಿಸಿರುವ ಭಾಗಗಳಿಂದಲೂ ಕರ್ಣಾಟಕ ಕವಿಚರಿತೆ ೨ ನೆಯ ಸಂಪುಟದಿಂದಲೂ ತಿಳಿಯುವುದು. ಗ್ರಂಥಾಂತ್ಯದಲ್ಲಿ.

‹ ತಪ್ಪಂ ಬರೆ[ದಾತ](ದ)ಂ ಕಡು ಜಡ।
ನಪ್ಪಾತ (ಂತಾಂ) [ನೆ](ಗಡೆ)ಂದು ಬಯ್ಯ ಲ್ವೇ[ಡ](ಡಿ)ಂ ॥
ತ[ಪ್ಪುಕ್ಕು](ಪ್ಪಂ) ಶುದ್ಧ(ಮು)ಮಕ್ಕುಂ ।
ತಪ್ಪ[ಳ್ಳ] (ಳ್ಳೊ) ಡೆ ತಿದ್ದಿ(ರ್) ಕೊ[ಂಬು](ಳ್ವು) ದುತ್ತಮ ಪುರುಷ[ರೊ]ರ್

ಸ್ವಸ್ತಿಶ್ರೀ ಶಾಲೀವಾಹನ ಶಕವರ್ಷ ೧೭೨೭ ನೆಯ ವರ್ತಮಾನಕ್ಕೆ ಸಲ್ಲುವ ರಕ್ತಾಕ್ಷಿನಾಮ ಸಂವತ್ಸರದ ನಿಜ ಚೈತ್ರ ಬ ೫ ಯಲ್ಲು ಮಹಾರಾಜೇಶ್ರೀ ಮಂಗಳೂರ ಧೊರೆಗಳ ಸನ್ನಿಧಾನಕ್ಕೆ ಶ್ರೀಕಾರಕಳದ ಕಾಪೆಟ್ಟಿನ ಧರಣಪ್ಪ ಹೆಗ್ಗಡೆಯು ಬರೆದೊಪ್ಪಿಸಿದ ಗುಮ್ಮಟಸ್ವಾಮಿಯ ಚರಿತೆಗೆ ಮಂಗಳ ಮಹಾಶ್ರೀ. ಎಂದಿದೆ.—

No. 331 ಚಂದ್ರನ ಷಷ್ಠಿಯ ನೋಂಪಿ.
CANDRANAṢAṢṬHIYANOMPY.

Substance, Śrītāḷa. Size, $10\frac{3}{16} \times 1\frac{7}{8}$ inches. Pages, 17. Lines, 9 on a page. Character, Kanarese. Condition, slightly injured. Appearance, old.

Begins on fol. 48*a* of the MS. described under No. 318 ante.

Complete.

Deals with the procedure for the ceremony of Candranatha Ṣaṣthi according to jāins.

Beginning :

ಕಂ॥ ಜಿನಚಂದ್ರನ ಮುಖದರ್ಶನ।
ದನಿತಱಿತೊಳ್ಳಘನಿಕರ ಸಕಳ ಜೀವಾವಳಿಗೆಂ॥
ತೆನೆ ಚಂದ್ರನ ದರ್ಶನ ದಿಂ[ದಂ]।
ಘನತರಮೊಸಱ್ವಂತೆ ಚಂದ್ರಕಾಂತಗ್ರಾವಂ॥(?)
ಮನವೊಲಿದು ಭಕ್ತಿಭರದಿಂ।
ದನವರತಂ ಚಂದ್ರನಾಥನಂ ವಂದಿಸಿ ಮೇ॥
ದಿನಿಯೊಳ್ ಚಂದ್ರನ ಷಷ್ಠಿಯ।
ಘನತರ ಮೆನಿಸಿರ್ದ್ದ ಕಥೆಯನಾಂ ವಿರಚಿಸುವೆಂ॥
ನಿಲ್ಲದೆ ಪಲವುಲಖೊಗಳ।
ಲ್ಸಲ್ಲವೆ ಭಾವಿಪೊಡೆ ಗೂಢನಾಗದೊಳದಱಿಂ॥ (?)
ದೆಲ್ಲಾ ನೋಂಪಿಯ ಫಲಗಳು।
ಮಿಲ್ಲಿಯೆ ಬಂದಿರ್ಕ್ಕು(?) ನೋಂಪಿಯಿದು ಕೇವಳಮೇ॥

ವ॥ ಮತ್ತಾನೋಂಪಿಯ ಕಥಾವತಾರವೆಂತೆಂದೊಡೆ;

ಕಂ॥ ಜಂಬೂದ್ವೀಪದ ಮಧ್ಯದೊ।
ಳಂಬರಮಂ ಮುಟ್ಟ ಮೇರುಗಿರಿಯಿಂ ತೆಂಕಲ್॥
ತುಂಬಿದ ನಾಡುಗಳಿಂದೆ ಕ।
ರಂ ಬಗೆವೊಡೆ ರಮ್ಯಮಾಯ್ತು ಭರತಕ್ಷೇತ್ರಂ॥
ಆಭರತಕ್ಷೇತ್ರದೊಳತಿ[ಶಯ]।
ಶೋಭೆಯನಾಂತೆಸೆವ ಮಗ[ಧವಿಷಯ](ಧೆ) ಯಂತದ ನಾಳ್ವಂ॥
ಭೂಭುವನನುತಂ ಶ್ರೇಣಿಕ।
ನಾಭೂಪನ ರಾಜಧಾನಿ ತಾಂ ರಾಜಗೃಹಂ॥

ವ॥ ಅಂತು ವಿಭೂತಿಯಂ ತಾ[ಳಿದ]ಟ್ಟಿ ರಾಜಗೃಹವೆಂಬ ಪೊಬಲೊಳ್ ತನ್ನ ಪಟ್ಟದರಸಿ ಚೇಳನಿ ಮಹಾದೇವಿವೆರಸಿ ಶ್ರೇಣಿಕ ಮಹಾಮಂಡಳೇಶ್ವರಂ ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯುತ್ತಮಿರ್ದ್ದೊಂದು ದಿವಸಂ ವಿಚಿತ್ರ ಚಿತ್ರಿತ ಭಿತ್ತಿಗಳಿಂ, ರಮಣೀಯತರ ಮಣಿಕುಟ್ಟಿಮದಿಂ, ಸುತ್ತಿದ ಮತ್ತವಾರಣಂಗಳಿಂ, ಕೆತ್ತಿಸಿದ ದಿಶಾಪುತ್ರಿಕೆಗಳಿಂ, ಕಸ್ತೂರಿಯ ಸಾರಣೆಗಳಿಂ, ಮುತ್ತಿನ ರಂಗವಲ್ಲಿಗಳಿಂ,

* * * *

ರಾಗರಸದಿಂದೋಲಾಡುತ್ತುಂ, ಲೀಲೆಯಿಂದೊಡ್ಡೋಲಗಂಗೊಟ್ಟಿರ್ದ್ದ ಪ್ರಸ್ತಾವದೊಳ್,

ಕಂ॥ ಪರಿತಂದು ಋಷಿನಿವೇದಕ।
ನರಸಂಗಾನತನುಮಾಗಿ ಕರಯುಗಳಮನಾ॥
ದರದಿಂ ಮುಗಿದವಧಾರಿಪು।
ದೆರಡಿಲ್ಲದೆ ದೇವ ದಿವ್ಯಚಿತ್ರದಿನಿತ್ತಲ್॥

* * *

ಕಂ॥ ಎನೆ ನೆಗಟ್ದಿ ವೀರನಾಥನ ।
ವಿನುತ ಶ್ರೀಸಮವಸರಣಮವತರಿಸಿದುದೊ ॥
ಯ್ಯಾನೆ ನಮ್ಮ ಪುರದ ಪಡುವಣ ।
ಘನತರ ವಿಪುಳಾದ್ರಿಯಲ್ಲಿ [ಗೆ] ಬಂದಿತ್ತುಮಾಗಳ್ ॥

* * * *

ವೃ ॥ ಶ್ರೀನಿಳಯಂ ಮನೋವಿಜಯಮಾನತಭೂವಳಯಂ ಕಷಾಯದಾ ।
ವಾನಳವಾರಿ ಮೋಹರಿಪುಹಾರಿ ಲಸದ್ಗುಣಧಾರಿ ಭವ್ಯತಾಂ ॥
ಭೋನಿಧಿ ಚಂದ್ರನಾನತಶತೇಂದ್ರ (ನ) ನಾಕುಳಬೋಧರುಂದ್ರನೆಂ ।
ಬೀನುತಿ ವೀರನಾಥ ! ನಿನಗಲ್ಲದೆ (ಯೇಂ) ಪೆಱರ್ಗುಂಟೆ ಲೋಕದೊಳ್ ॥

ವ ॥ ಎಂದನೇಕಸ್ತುತಿಶತ ಸಹಸ್ರಂಗಳಿಂ ಸ್ತುತಿಯಿಸಿ ತ್ರಿಭುವನವಲ್ಲಭನಂ ಪಲವರ್ಚನೆಗಳಿಂದರ್ಚ್ಚಿಸಿ, ಪೊಡಮಟ್ಟು ಗೌತಮ ಸ್ವಾಮಿಗಳ್ಗೆ ಪಾದಾರ್ಚನೆಗೆಯ್ದು, ವಂದಿಸಿ, ಸುತ್ತಲುಮಿರ್ದ್ದ ಋಷಿಸಮುದಾಯಮಂ ಪರಿವಿಡಿಯಿಂ ಬಂದಿಸಿ, ಮನುಷ್ಯಕೋಷ್ಠದೊಳ್ಕುಳ್ಳಿರ್ದ್ದು, ತಾವಿರ್ವ್ವರುಂ ನಿರ್ಮ್ಮಲಚಿತ್ತದಿಂ ಧರ್ಮಶ್ರವಣಮಂ ಕೇಳ್ದು ತದನಂತರಂ ಚೇಳಿನಿ ಮಹಾದೇವಿ ಜ್ಞಾನಚತುಷ್ಟಯ ನಿಷ್ಠಿತರುಂ ಸಪ್ತರ್ದ್ಧಿ ಸಂಪನ್ನರುಂ ಯೋಗಿಜನವಂದ್ಯರುಮಪ್ಪ ಗೌತಮಗಣಧರಸ್ವಾಮಿಗಳ್ಗೆ ಕರಕಮಲಂಗಳಂ ಮುಗಿದು ವಿನಯದಿಂ ಮೆಲ್ಲನೆ ಬಿನ್ನಪಮೊಂದಿಂತೆಂದಳ್.

ಕಂ ॥ ಕೈಸೋಂಕಲಾದ ವನಿತಾ ।
ಸಂಸರ್ಗಮನುಳ್ಳಪುರುಷಱಿಂ ಸ್ತ್ರೀಯಱಿನಾ ॥
ಸಂಸರ್ಗ್ಗಮಿಲ್ಲದಿರ್ದೊಡೆ ।
ಮೈಸೋಂಕುವಱಿಂದೆ ಮಿಶ್ರದೋಷಂ ಬರ್ಕುಂ ॥

ಯೆಂತುಂ ಕಳೆಯಲ್ಬಾರದ ।
ಸಂತತಮೊಡನೊಡನೆ ನಡೆವ ಮಿಶ್ರಿತದೋಷಂ ॥

ಮಂತಿಗಳಂ [ತೆ] (ದದೆ) ಕೆಡಿಸುವು ।
ದಂ ತಡೆಯದೆ ಬೆಸಸಿಮೆಂದೊಡಾ ಮುನಿಮುಖ್ಯರ್ ॥

ಆದೊಡೆ ಚಂದನ ಷಷ್ಠಿಯ ।
ನಾದರದಿಂ ನೋಂಪುದಿದುವೆ ಸುಖಕರಣಂ ಮ ॥
ತ್ತೀ ದೋಷವರಣಮೆಂತೆನೆ ।
ಪಾದರಸಂ ಪೊನ್ನುವಿಡಿದು ಜರಗಂ ಬಿಡುವೊಲ್ ॥

* * * *

ವೃ ॥ ಎಂದನುರಾಗದಿಂ ಬೆಸಗೊಳಲ್ ಜಿನದತ್ತೆಗೆ ದೇವಿ ಪೇಳ್ದಳಾ ।
ನಂದದಿನಂದು ಭಾದ್ರಪದಮಾಸದ [ಕೃಷ್ಣ] ಪಕ್ಷದ ಷಷ್ಟಿಯಿಂದೆ ಮು ॥ (?)
(ನೋಂಪುವ ।
ನ್ನೊಂದು ದಿ[ವಸ] (ನಂ) ದಿವಾಂತ್ಯದೊಳು ಮಿಂದು ದಣಿಂ (?) ಬವನುಟ್ಟು
ಬರ್ಂದು ಮಹೋತ್ಸವಂ ಬೆರತು ಮಾಡಿತ್ಕೆ ಜಿನಂಗಭಿಷೇಕ ಪೂಜೆಯಂ ॥

ವ ॥ ಅಂತು ಜಿನೇಶ್ವರಂಗಭಿಷೇಕ ಪೂಜೆಯಂ ಮಾಡಿ ತದನಂತರಂ . ತಮಾ(?)ಗುರುಗಳುಮಂ ಪೂಜಿಸಿ, ಯೇಕಭುಕ್ತಮನಕ್ಕೆ, ವುಪವಾಸಮನಕ್ಕೆ ನೋಂಪಿಸಹಿತಂ ಕೈಕೊಂಬುದಂತು ಕೈಕೊಂಡು ಷಷ್ಠಿಯ ದಿವಸಂ ಪಗಲೆಲ್ಲಂ ಜಿನಪೂಜಾನಂದದೊಳ್ ಜಿನಮತೋದಿತಮಪ್ಪ ಪುಣ್ಯ ಕಥಾಕಥನ ಪ್ರಸಂಗದೊಳಂ ಪೊತ್ತುಗಳೆವುದು.

End:

ಶ್ರೇಣಿಕ ಮಹಾಮಂಡಲೇಶ್ವರಂ ಭೋಗದೊಳ್ ನಾಗೇಂದ್ರನುಮನೈಶ್ವರ್ಯದೊಳ್ ದೇವೇಂದ್ರನುಮಂ ವಿಭವದೊಳ್ವಯಚ್ಚ್ರೇಂದ್ರನುಮಂ ಕಮನೀಯತರಮೂರ್ತಿಯೊಳ್ ಕಾಮದೇವನುಮಂ ; ಪೋಲ್ತೆಯೊಳು ; ಚೇಳನಿ ಮಹಾದೇವಿ ಯು[ಮ]ಂ ಜಿನ ಭಕ್ತಿಯೊಳ್ ಶಚೀ ಮಹಾದೇವಿಯುಮಂ ಗುರುಭಕ್ತಿಯೊಳ್ ರುಕ್ಮಿಣೀ ಮಹಾದೇವಿಯುಮಂ ಪಾತಿವ್ರತ್ಯದೊಳ್ಸೀತಾದೇವಿಯುಮಂ ರೂಪಿನೊಳ್ ರತೀ ಮಹಾದೇವಿಯುಮಂ ಪೋಲ್ತ(ಳ)ಂ ತಿರ್ಪರುಂ ಮಹಾಪ್ರಖ್ಯಾತಗುಣಾವಳಿಗೆ ಸಂದು ಯಶಸ್ಕೀರ್ತಿಯಂ ತಾಳಿ ಜಿನಧರ್ಮಪ್ರದೀಪಕರಪ್ಪ ಪಲಂಬರ್ಮಕ್ಕಳಂ ಪಡೆದು, ಫಲವು ನಿಧಿನಿಧಾನಂಗಳ್ಗೊಡೆಯರಾಗಿ, ಪಲಕಾಲಂ ರಾಜ್ಯಂಗೆಯುತ್ತಮಿರ್ದ್ದರಿತ್ತಲ್

ಕಂ ॥ ನಾನಾಪ್ರಕಾರದಿಂದಂ ।
ತಾನಪ್ಪುದು ಮಿಶ್ರದೋಷನಘಹರಿಪೊಂ ॥ (?)
ದೀ ನೋಂಪಿಯ ನಿಳಿಕೆಯ್ವಾ ।
ಹೀನಗುಣರ್ ಮಾಟ್ಪ ಧರ್ಮದೊಳ್ ಪುರುಳುಂಟೇ ॥

ಧರೆಯೊಳ್ ಚಂದ್ರನಷಷ್ಠಿಯ ।
ವರನೋಂಪಿಯ ನೊಲಿದು ನೋಂಪ ನೋನಿಪ ಭವ್ಯ ॥
ರ್ಗುರುತರದುರಿತಾಪಹರಂ ।
ದೊರೆಕೊಳ್ಗುಂ ಸಕಲಸೌಖ್ಯಮುಂ ಪರಮಪದಂ ॥

ಇಂತೆಸೆವೀ ಕಥೆಯಂ ಭುವ ।
ನಾಂತರದೊಳ್ ಪೇಟ್ವಕೇಳ್ವ ಭವ್ಯರ್ಗೆಲ್ಲಂ ॥
ಸಂತತಮುಕ್ತಿ ಶ್ರೀಯನ ।
ನಂತಗುಣಾಂಬೋಧಿ ಚಂದ್ರನಾಥಂ ಕುಡುಗುಂ ॥

Colophon:

(ಸಂಪೂರ್ಣಂ).

(ವಿ.ವಿ.)—

ಸಮಗ್ರ. ಶಿಥಿಲ. ಇದರೊಡನೆ ಇನ್ನೂ ಅನೇಕ ಗ್ರಂಥಗಳಿವೆ. ಅವನ್ನು ೩೧೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಚಂಪೂರೂಪವಾದುದು. ಇದರಲ್ಲಿ ಜೈನಮತಾನುಸಾರವಾಗಿ ಚಂದ್ರನಾಥಜಿನನ ಷಷ್ಠಿಯ ನೋಂಪಿಯ ವಿಧಾನವು ಉಕ್ತವಾಗಿದೆ ಕವಿಯಾರೆಂಬುದು ತಿಳಿಯುವುದಿಲ್ಲ. ಉಳಿದ ವಿಷಯಗಳನ್ನು ಉದಾಹೃತಭಾಗಗಳಿಂದ ತಿಳಿಯುವುದು.

No. 332. ಜಯನೃಪಚರಿತ್ರೆ-
JAYANṚPACARITRE (KĀVYA).

Substance, paper. Size, $10\frac{11}{16} \times 8\frac{1}{2}$ inches. Pages, 300. Lines, 18 on a page. Character, Kanarese. Condition, fair. Appearance, old.

Complete in 16 Sandhis.

A work on the life history of king Jaya; by Mangarasa. The work has been described in detail in " The Lives of Kannada Poets " Vol. II.

Beginning :

ಸೂ ॥ ಶ್ರೀಮತ್ಸೋಮಾನ್ವಯ ಕುಲತಿಲಕಂ ।
ಸೋಮಪ್ರಭುಸುತ ವಿಕ್ರಮಕೌರವ ।
ನಾಮನನನಿಯಂ ಪರಿಪಾಲಿಸಿ ಸಾಧಿಸಿದಂ ಮುಕ್ತಿಯನು ॥

ಶ್ರೀಮದಖಿಲ ಸುಮನೋಗಣ ಭಾಸಿ ಸ ।
ದಾಮೃತಫಲವಿತಗಣ ವಿಲಸದ್ಗುಣ ।
ಧಾಮಂ [ವಿ] (ನ) ಮದಾನಂದಾಕರನವಮಲಚ್ಛಾಯಾಯೋಗಂ ॥
ಕಾಮಪ್ರಸರಾಪಹರಂ ವರರ ।
ವ್ಯಾಮರಭೂರುಹವೆಸೆ ಚೆಲ್ವಂದಳೆ ।
ದಾಮಹಿತಾಧೀಶ್ವರನೆಮಗೀಗಭಿಮತ ಸಂಸಿದ್ಧಿಯನು ॥

* * * *

ಶ್ರೀ [ವಧುಗು] ಮದ್ಗುಣಂ (ಸಂ) ಯುತಗುಣ ಭದ್ರ ।
ಸ್ವಾಮಿಯ ಕೋವಿದ ಕವಿಪರಮೇಷ್ಠಿ ।
ಸ್ವಾಮಿಯ ಬಾಹುಬಲಿಸ್ವಾಮಿಯ ಸನ್ನುತರೆನಿಪಕಳಂಕ ॥

ಸ್ವಾಮಿಯ ಮೈಮೆವಡೆದ ಜಿನಸೇನ ।
ಸ್ವಾಮಿಯ ನಿರ್ಮಲತರ ಪೂಜ್ಯಪದ ।
ಸ್ವಾಮಿಯ ಪದಮಂ ನೆನೆದು ಬಳಿಕ್ಕೀ ಕಾವ್ಯಮನುಸುರುವೆನು ।

ವಿಲಸದಮಲವಾಗ್ರುಚಿಯಿಂ ಭವ್ಯಾ ।
ವಳಿಯ ಮನದ ಕತ್ತಲೆಯಂ ಕದಲಿಸಿ ।
ಬಳಿಯೊಳ್ಕವಲಯಕಾನಂದಮನೊದವಿಸಿ ಲೀಲೆಯೊಳು

ತೊಳೆವ ದಯಾಂಭೋನಿಧಿಯಂ ಬೆಚ್ಚಸಿ ।
ಯುಳವಿಗಳಿದ ಸತ್ಪಥದೊಳ್ ಚರಿಯಿಸು ।
ವಲಘುಗುಣ ಪ್ರಾಭೇಂದುಪದಂ ನಮ್ಮಂ ಪರಿರಕ್ಷಿಸುಗೆ ॥

ವಿವ [ವಿರ] (ರಿ) ಸಲಾ ಮುನಿಪುಂಗವನ ತನೂ ।
ಭವನಾ[ಶೃತಿ] (ಶ್ರುತ) ಮುನಿಯ ವರ ಪರಂಪರೆ ।
ಯವರ್ಗ [ಳು] (ಳ) ಮತ್ತಿನ (ನಾಲ್ಕಂ) ಸಂಘದೊಳೀವದೆಯಾಚರಿಪ ॥

ಭುವನಾಗ್ರದ ಸುಖಸಂಪದ [ಕಿಚ್ಚ್ಯೆ](ವಂಬಯ) ।
ಸುವ ಚಿತ್ತಂಬಡೆದು ವಿರಾಜಿಪ ಮುನಿ ।
ನಿವಹದ ಪದಪಂಕಜಕೆಱಗುವೆನಾಂ ಪಱಿಮೆವಸುಳಿಯಂತೆ ॥

ಜನ್ನನ ಜಾಣ್ ಮಧುರನ ಮಾಧುರ್ಯಂ ।
(ರ) ನ್ನನ ರಸಿಕತ್ವಂ ಗುಣವರ್ಮನ ।
ಬಿನ್ನಣಮಾ ಶ್ರೀವಿಜಯನ ಬಗೆ ಸುಜನೋತ್ತಂಸನ ರೀತಿ ॥

ಹೊನ್ನನ ಹೊಸದೇಸಿಯ ನುಡಿ ನೇಮಿಯ ।
ಕನ್ನಡದೊಳ್ಪ್ರಭಿನವ ಪಂಪನ ರಸ ।
ಮೆನ್ನೀಪೇಟ್ಟಿ ಕೃತಿಗೆ [ಸಿ] (ಸೇ)ರುಗೆ ಪಿರಿದುಂ ನಿರ್ವಿಘ್ನತೆಯಿಂ ।
ದ್ವಾರಾವತಿಯ ಪುರಾಧೀಶ್ವರಲ ।
ಕ್ಷೀರಮಹಾನ್ವಯ (ಚೆಂಗಾಳ್ವ) ಮಹೀ ।
ನಾರೀಧವ ನಿಜಸಚಿವರುಚಿರಕುಲದುಗ್ಧಾಂ [ತಾ] (ಭೋ) ನಿಧಿಗೆ ।
ತಾರಾತರುಣೀವಲ್ಲಭ ಜನಪದ ।
ವಾರಿಜಮಧುಕರಯಾಜ (ಕ) ಜನಚಿಂ ।
ತಾರತ್ನಂ ಚಿತ್ರಕಲಾಸದನಂ ಸುದತೀಜನ (ಮದನಂ) ॥
ವಿಲುಳಿತ ವಿಶ್ವಂಭರೆಯೆಂಬಬಲೆಯ ।
ಲಲಿತಶ್ರೀಮುಖಸುಂಬಂದದಿ ಕ ॥
ಣ್ಗೊಳಿಸುವ ಹೊಯ್ಸಳ ವಿಷಯದ ಮಧ್ಯದ ಹೊಸವೃತ್ತಿಯ ನಾಡ ॥
ಲಲಗುಪ್ರಿಯದಿಂ ಪರಿಪಾಲಿಪನು ।
ಜ್ವಲತೇಜ [ದವು] (ಂ ದಾ)ತು ಪುರಾಧೀಶಂ ।
ಲಲನಾಮಾಧವಸುತಸ [ಂ] ದೃ [ಷ್ಟ] (ಶ)ಂ ಮಾಧವಸುತ ವಿಜಯೇಂದ್ರಂ ॥
ಪ್ರಭುಕುಲದೀಪಂ ಪ್ರಮದಾಜನಚಿ ।
ತ್ತಭವಂ ಪ್ರಜ್ವಲತೇಜೋಪೇತಂ ।
[ಸುರುಚಿ] (ಶುಭತ)ರ[ಕೀರ್ತಿಯು]ತಂ ಸುರಭೂಜೋಪಮವಿತರಣಶೀಲಂ ॥
ತ್ರಿಭುವನಪತಿ ಜಿನಭಕ್ತಂ ವಾಸವ ।
ವಿಭವಂ ವಿನಯಾಂಬುಧಿ ಚಂದ್ರ (ಂ) ರಣ ।
ಕಭಿನವವಿಜಯಂ ವಿಜಯಾಜ್ಞನೆಗಧಿರಾಜಂ ವಿಜಯೇಂದ್ರಂ ॥
ಆತನ ಸುತ ಮಂಗರಸನೆನಾ(ಂ) ಸ ।
ತ್ಪ್ರೀತಿಯಿನೀಜಯನೃಪಚಾರಿತ್ರಮ ।
ನೋತ್ತಾಸುದ್ವೇಗಂ ಪರಿವರ್ದ್ಧಿನಿಯಿಂ ನೂತನರಸವರ್ದ್ಧಿನಿಯಿಂ ॥
ಖ್ಯಾತಿವಡೆದ ಕೋವಿದನಿಕುರುಂಬಮಿ ।
ದೇತೆಱ [ದೆಂದೆ] (ನೆಂದು) ತಿರಸ್ಕರಿಸದೆ ಮನ ।
[ನೋ] ಪ್ರೋತು ಕರಂ ಮತ್ತಿದಱತೊಳ್ತೀವಿದ ತಪ್ಪಂ ತಿದ್ದುವುದು ॥

*   *   *   *

ಈ ತೆಱದಿಂ ದುರ್ಜನರಂ ದೂಷಿಸಿ ।
ನೀತಿನಿಪುಣರೆನಿಸುವ ಸಜ್ಜನರಂ ।
ಪ್ರೀತಿಮಿಗಿಲ್ಪುತಿಯಿಸಿ ಸಾಕೊಳಗಮಿದಾನೆಯ ಸಕ್ಕರೆಯಂ ॥

ಓತೊಡವೆರಸುವ ತೆಱದಿಂ ನವರಸ ।
ರೀತಿವಡೆದ ಸಕ್ಕದದೊಳ್ ಕನ್ನಡ ।
ವಾತಂ ಸಮ [ನ] (ಅತಿ) ಬೆರಸಿ ಜಯನೃಪಚಾರಿತ್ರಮನೋತುಸಿರ್ದ್ದೆಂ ॥

ತಕ್ಕರಗೋಷ್ಠಿ ತನೂದರಿಯರ ಪೊಸ ।
ತಕ್ಕೆ ತೊಡಂಬೆಯುಲರ್ಪೊಸ ಜೇನೆಯ್ ।
ಸಕ್ಕರೆ ತೀವಿದ ತನಿವಾಲೂದುಮ ತೆಂಕಣ [ತೆಂಬೆ] (ತಣ್ಣೆ)ಲರು ॥

ಮಕ್ಕಳ್ ಮುದ್ದುವೆ [ರಡ] (ರೆದ) ನುಡಿ ಮಧುರಿತು ।
ಚೊಕ್ಕಳಿಕೆಯ ನವಚಂದ್ರಿಕೆಯೆನೆ ಹೃದ ।
ಯಕ್ಕೆ ವಿಲಾಸಮನೀವುದು ಸತ್ಪ್ರಭುರಾಜನ ಸವಿವಾತು ॥

* * *

ಇದು ವಿಪುಲಾಚಲದೊಳು ವೀರೇಶನ ।
ಪದಸನ್ನಿಧಿಯೊಳು ಗೌತಮಗಣಧರ ।
ರೊದವಿದ ಕಾರುಣ್ಯದೊಳಾ ಶ್ರೇಣಿಕನೃಪತಿಗೊಗೆದ ಕಥನಂ ॥

ತದನಂತರದೊಳ್ಜನ ಸೇನಾರ್ಯಂ ।
ಮುದದಿಂ ವಿರಚನೆಗೆಯ್ದು ಲಸತ್ಕೃತಿ ।
ಯಿದನಾಂ ಪುಣ್ಯನಿಮಿತ್ತಂ ಹಿಡಿದು (೦) ಹರಿಸ [ದಿಂದಿ] (ದೊಳುಸು) ರಿ [ದುಸುದ್ದೆಂ] (ದೆನು) ॥

* * * *

ಸರಸಿಜಶಂಖವಿರಾಜಿತ ಹಸ್ತಂ ।
ನಿರುತಮನಂತಲಸದ್ಭೋಗಯುತಂ ।
ವರರುಚಿರ ಶ್ರೀಸಮುಚಿತಗಾತ್ರಂ ಬಹುಲೋಕಾಧಾರಂ ॥

ತರುಣೀಜನಕಾಮೋದಯಕಾರಣ ।
ನುರುವಿಕ್ರಮನಾ ಪುರುಷೋತ್ತಮನೆನೆ ।
ಕರಮೆಸೆದಂ ವಿಷ್ಣುವಿನಂದದೊಳಾ ಪ್ರಭುಕುಲಮಣಿದೀಪಂ ॥

ಇದು ಸುರನರಫಣಿ ಪರಿವೃಢಪಿನಮಿತ್ರ ।
ವಿದಿತವಿನಯಗುಣಗಣಯುತ ಜನಪತಿ ।
ಪದಸರಸಿಜ ಮದಮಧುಕರನತಿ ಚತುರಕಲಾಪರಿಪೂರ್ಣಂ ॥

ಸದಮಲಚರಿತಂ ಪ್ರಭುರಾಜಂ ಸಂ ।
ಮುದದಿಂ ರಚಿಸಿದ ಜಯನೃಪಕಾವ್ಯದೊ ।
ಳೊದವಿ ಮನೋಹರಮಂ ಪಡೆಯುತ್ತೊಂದನೆಯ ಮಿಸುಪಸಂಧಿ ॥

Colophon :

ಅಂತು ಸಂಧಿ ೧ ಕ್ಕಂ ಮಂಗಳಂ.

ವರಸೋಮಪ್ರಭರಾಜೇಂದ್ರಂಗಂ ।
ತರುಣಿಗೆ ಸೌಂದರಿಗಂ ಜನಿಯಿಸಿ ಜಯ ।
ಧರಣೀಪತಿ ಸಕಲಕಲಾಕೋವಿದನಾಗಿ ಹರ್ಷಮಪಡೆದಂ ॥

* * * *

End.

ಭವವಾರಾಶಿಯೊಳಾಟಿದ್ದಿರದೆ ಮುಱಿಂ ।
ಗುವ ದೇಹಿಗಳಂ ತನ್ನ ಕರುಣದಿಂ ।
ತವೆಯೆತ್ತುತ್ತೆ ಸಂತತಮಾರ್ಯಾಖಂಡ (ದ ದೇಶ)ಂ ಗಳೊಳು ॥
ರವಿಶಶಿಕೋಟಿದ್ಯುತಿ [ವಿಟ್ಟ] (ಕಾಶಂತ) ।
ದ್ದಿ (ವಿ) ಜಾವಳ ತ [ಸ್ಥೆ] (ನ್ನ) ಡಿಗನವರತಂ ।
ಸವಿನಯದಿಂ ಮುಗ್ಗುತ್ತಿರೆ ವೈಭವದೊಳ್ ವಿಹರಿಸುತಿರ್ದ್ದಗಂ ॥

ಈ ಯಂದದೆ ಕೆಲಕಾಲಂ ವಿಹರಿಸಿ ।
ಮಾಯಂ ಮೊದಲಾದ ಕಷಾಯಂಗಳ ।
ದಾಯಂಗೆಡಿಸಿ ಬಟಿಕಮಾ ಗಂಧಕುಟಿಯುಮಂ ಬಿಸುಟಬಿದು ॥

ಕಾಯಜರಿಪು ಕೈಲಾಸಶಿಖರದೊಳ್ ।
ಕಾಯೋತ್ಸರ್ಗದೆ ನಿಂದಮೃತ ಶ್ರೀ ।
ಜಾಯೆಯೊಳೊಡಗೂಡಿದನೆಲ್ಲಾ ಭುವನಂ ಪೊಗಟ್ಟಿಂದದೊಳು ।

ಇದು ಸುರನರಪಣಿ * * ಜಯನೃಪಕಾವ್ಯದೊ ।
ಳೊದವಿಮನೋಹರಮಾದುದು ಪದಿನಾಱನೆಯ ಮಿಸುಪ ಸಂಧಿ ॥

Colophon:

ಅಂತು ಸಂಧಿ ೧೬ ಕ್ಕಂ ಪದನು ೧೧೧೩ ಕ್ಕಂ ಮಂಗಳ ಮಹಾ.

(ವಿ.ವಿ.)—

ಸಮಗ್ರ. ಲಿಪಿ ಉತ್ತಮ, ಗ್ರಂಥಪಾತವು ಕಡಿಮೆ. ಕಾಗದದಪ್ರತಿ.

ಇದು ಪರಿವರ್ಧಿನೀ ಷಟ್ಪದಿಯಲ್ಲಿ ಬರೆದಿದೆ. ೧೬ ಸಂಧಿಗಳನುಳ್ಳದು. ಕವಿ ಮಂಗರಸ. ಮಿಕ್ಕ ವಿಷಯಗಳನ್ನು ಉದಾಹೃತಭಾಗಗಳಿಂದಲೂ, ಕರ್ಣಾಟಕ ಕವಿ ಚರಿತ್ರೆ ಎರಡನೆಯ ಸಂಪುಟದಿಂದ ನೋಡಿ ತಿಳಿದುಕೊಳ್ಳುವುದು.

No. 333. ಜಿನಧರ್ಮ.
JINADHARMA.

Substance, palm-leaf. Size, $15\frac{1}{16} \times 1\frac{1}{4}$ inches. Pages, 6, Lines, 5 on a page. Character, Kanarese, Condition most injured. Appearance old. Begins on fol. 56*b* of the Ms. described under No. 324 ante. Complete.

A work in 43 stanzas. in Sāngatya metre on the religious duties of Jains. The name of the author and other particulars regarding the work are not available.

Beginning:

ಶ್ರೀ ಪರಮಾತ್ಮನೆ ಕಮನೀಯ ರೂಪನೆ ।
ಶ್ರೀಪತಿ ಕರುಣಾಂಬುಧಿಯೆ ॥
ತ್ರೈಪುರಾರ್ಚಿತ ಪಾದಕಮಲ ಯುಗಳನೆ ।
ಪಾಪಹರನೆ ಜಯ ಜಯತು ॥
ದಾನವ ಧರ್ಮವ ಮಾಡ . . . . ।
. . . . ॥
ದಾನವ ಧರ್ಮವ ಮಾಡಿದ ಮನುಜರು ।
ನಾನಾರಾಗದಿ ಸುಖಿಸುವರು ॥

* * * *

ಗಂಡನೊಬ್ಬನಲ್ಲದೆ ಹೆಂಡತಿಗೆ ।
ಗಂಡರಿಬ್ಬರಿಲ್ಲ ನೋಡಿ ॥
ಅ . ಂಡಿತ ಜಿನಧರ್ಮವ ನಂಬಿ . . . ।
. . . . . ನೇನೆಂಜೆ ॥
ವೀರ ಬಲ್ಲಾಳಯು ಮಾರಿ ಮಸಣಿಯೆಂಬ ।
ವೀರ ಬೊಮ್ಮಕೋಟಿಗಳ ॥
ಮಾರಹರನ ಜಿನಧರ್ಮವ ನಂಬದ ।
ನಾರಿ ನರಕವೆಯ್ದುವಳು ।

End:

ಅವಸರವಾಗಿಯೆ ಅಕ್ಕ ನೀ ಮಾಡನೆ ।
ಯೆವ್ರ ಬೇಗೆಯನು ಬಿಟ್ಟುಕೊಂಡು ॥ (?)
ಕವಿದೆನೀ ಪೂಜಾರಿಯೆನ್ನ ಮನೆಗೆ ಮಾರಿ ।
ನವಗಿಂದು ವೇಳೆಯುವಿಲ್ಲ (? ವೀಳೆಯ)
. . . . . . ಮುರುವನಕೆಗೊಡಸಸ
ಮಾಡಕ್ಕ ಗುರುಗಳಿಗೆನುತ ॥
ಕೂಡೆಕೂಡೆ ಬಂದು ಹೇಳುವ ಬಗೆಯನು ।
ಪೀಡೆ ಹೋಗು ಪೂಜಾರಿ ॥

Colophon:

ಶ್ರೀ ಜಿನಗತಿಯೆಂದು ನಂಬಿದ ಮನುಜಗೆ ।
ಮೂಜಗವೆಲ್ಲರು ಹಿತರು ॥
. . . . ಯಾಗಿ ಸಕಲರು ವಂದಿಪ
ರೀಜಿನಧರ್ಮನೆ ಶರಣು ॥

(ನಿ.ವಿ.)—

ಸಮಗ್ರ. ಅತ್ಯಂತ ಶಿಥಿಲ. ಓಲೆಗಳು ಮುರಿದಿವೆ. ಲಿಪಿ ಉತ್ತಮ.

ಇದು ಸಾಂಗತ್ಯರೂಪವಾಗಿದೆ. ೪೩ ಪದ್ಯಗಳಿವೆ. ಗ್ರಂಥದ ಕೊನೆಯಲ್ಲಿ ‘ ಸಕಲರು ಗಂಡಿಪರೀ ಜಿನಧರ್ಮನೆ ಶರಣು ” ಎಂದಿರುವುದರಿಂದ ಇದನ್ನು ‘ ಜಿನಧರ್ಮ ’ ವೆಂದು ಬರೆದಿದೆ. ಕವಿ, ಮುಂತಾದ ವಿಷಯಗಳಾವುವೂ, ಇದರಿಂದ ತಿಳಿಯುವುದಿಲ್ಲ.

No, **334**, ಜಿನಧರ್ಮ.

JINADHARMA.

Substance, paper. Size, $10\frac{7}{16} \times 9\frac{7}{16}$ inches. Pages, 4. Lines, 20 on a page. Character, Kanarese. Condition, good. Appearance, new.

Begins on page 61 of the Ms. described under No. 325 ante.

Complete.

Same work as the above.

(ವಿ.ವಿ.)—

ಸಮಗ್ರ. ಗ್ರಂಥ ಪಾತ್ರವುಂಟು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. **335**. ಜಿನಮುನಿತನಯ (ಶತಕ).

JINAMUNITANAYA (ŚATAKA).

Substance, palm-leaf. Size, $12 \times 1\frac{3}{16}$ inches. Pages, 34. Lines, 4 on a page. Character, Kanarese. Condition, very much injured. Appearance, old.

Begins on fol. 33*a*.

The other works herein are :—(1) Śivaprārthanā Śataka 1*a*. (2) Gaṇita (in Sanskrit) 12*a*. (3) Gaṇita by Rājāditya 17*a*. (4) Jinākṣaramāle 23*a*. (5) Sārasangrahagaṇita 29*b*.

Complete.

A work in kanda metre containing 106 stanzas. The expression " Jinamunitanaya " appearing at the end of each stanza might be the reason for giving that name to the work. It deals with the general morals and with the religious duties of Jains. The name of the author is Nūtanāgacandra and his date according to Kavicarite is about 1659 A.D.

Beginning :

ಶ್ರೀಮತ್ಪರಮಜಿನೇಂದ್ರಂ ।
ರಾಮಾಂತಕನನಿಮಿಷೇಂದ್ರ ವಂದಿತ್ರಪಾದಂ ॥
ಶ್ರೀಮದ್ಭವ್ಯೋತ್ತಮರೊಳ್ ।
ಕ್ಷೇಮಯಶಶ್ಶ್ರೀಯನೀಗೆ ಜಿನಮುನಿತನಯಾ ॥

ಸಕಲ ಸುಖಮ[ನ]ಯನನಂತಂ ।
ಸಕಲಂ ಪ್ರಜ್ಞಾಸ್ಪದಂ ನಿರಂಜನನಮಲಂ ॥
ಸಕಲಂ ದೋಷವಿನಾಶಂ ।
ಸಕಲೇಂದ್ರಿಯ ವಿಜಯ . . . ಜಿನಮುನಿತನಯಾ ॥

ಜಿನರೊಳ್ ನುಡಿ ಪರಮಾಗಮ ।
ಮನುನಯದಿಂದೊಪ್ಪುವಾಗಮಾತ್ಮನೆ ತತ್ವಂ ॥
ಮನವೊಸೆದು ನಂಬಿ ತತ್ವ[ಮ](ಂ) ।
ನೆನೆವುದು ಸಮ್ಯಕ್ತ್ವಯುಕ್ತಿ ಜಿನಮುನಿತನಯಾ ॥
ಕೇಳುವ ಭವ್ಯರ ಪುಣ್ಯಂ ।
ಪೇಳುವ ಕವಿ, ನೂತನಾಗಚಂದ್ರನ ಭಾಗ್ಯಂ ॥
ಪಾಲಿಪ ಜಿನೇಂದ್ರಧರ್ಮಮ ।
ನೇಳಸದಿರು ಮೋಕ್ಷಗಾಮಿ ಜಿನಿಮುನಿತನಯಾ ॥
ಪ್ರಾಣಿಗಳನೋವಿ ಕಾವುದು ।
ಪ್ರಾಣಿಗಳೊಳಗಾರ್ತ ರೌ[ಲ]ದ್ರಮೆಂಬಿವನುಳವುದು ॥ (?)
ಜಾಣಾದಯಾಮೂಲಂ ಕ ।
ಲ್ಯಾಣಂ ತಾನೆಸೆವ ಧರ್ಮ ಜಿನಮುನಿತನಯಾ ॥

End :

ಅಱಿದು . . . . ।
. ನಂ ಮತ್ತಱಿದು ನಂಬಿಮುಕ್ತಿಯನಱಿವುದು ॥ (?)
ಅಱಿಯದೆ ಮಱೆದಿದ್ದಾರ್ ।
ಕುರಿಗಳು ನರಕದಲಿ ಬಿದ್ದರ್ ನವೆವುತ್ತ . . ॥
ಸಂದ ಚಿದಾನಂದದೊಳಾ ।
ನಂದದೆ ನಿಜಗುಣದೊಳೊಂದಿ ನಿಂದಾತ್ಮನು ತಾ ॥
ನೊಂದಿ ಪರಮಾತ್ಮನಪ್ಪುದು ।
ಸಂದ . . . . ಜೀವ ಜಿನಮುನಿತನಯಾ ।
ಭಾವಿಸುತಿರ್ಪ್ಪರ್ ಪಸುವರ್ಗಳು ।
ಭಾವನೆಯಿಂ ಕೂಗಿ ತಾನೆ ಕಡದುಱು . . . ನೆ ॥ (?)
ಭಾವನೆಯಿಂದಪ್ಪುದು ಯ ।
ದ್ಭಾವಂ ತ[ಬ್ಧ] (ದ್ಭಾ)ವ [ತಿಯ] (ಮ)ತ್ತೆ ಜಿನಮುನಿತನಯಾ ॥

Colophon :

ಜಿನಮುನಿತನಯಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಗ್ರಂಥಪಾತವಿದೆ. ಇದರೊಡನೆ ಶಿವಪ್ರಾರ್ಥನಾ ಶತಕ, ಗಣಿತ (ಸಂಸ್ಕೃತ), ಗಣಿತ (ರಾಜಾದಿತ್ಯ), ಜಿನಾಕ್ಷರಮಾಲೆ, ಜಿನಮುನಿತನಯ—ಎಂಬ ಪುಸ್ತಕಗಳೂ ಇವೆ.

ಇದು ಕಂದದಲ್ಲಿ ಬರೆದಿದೆ. ೧೦೬ ಪದ್ಯಗಳಿವೆ. ಪ್ರತಿಪದ್ಯದ ಕೊನೆಯಲ್ಲಿಯೂ 'ಜಿನಮುನಿತನಯ' ಎಂದಿದೆ. ಈ ಕತದಿಂದ ಇದಕ್ಕೆ ಜಿನಮುನಿತನಯ ಎಂದು ಹೆಸರಾಯಿತು. ಇದು ಜಿನಧರ್ಮ ಬೋಧಕವಾಗಿಯೂ, ನೀತಿಬೋಧಕವಾಗಿಯೂ ಇದೆ. ಕವಿ ನೂತನನಾಗಚಂದ್ರ. ಶೈಲಿ ಸಾಮಾನ್ಯವಾಗಿದೆ. ಈ ಕವಿಯ ಕಾಲವು ಸು. ಕ್ರಿ.ಶ. ೧೬೫೦ ಇರಬಹುದೆಂದು ಕವಿಚರಿತ್ರೆಯಲ್ಲಿ ಬರೆದಿದೆ.

No. 336. ಜಿನಮುನಿತನಯ (ಶತಕ)-
JINAMUNITANAYA (ŚATAKA).

Substance, palm-leaf. Size, 14¾ × 1¼ inches. Pages, 15. Lines, 5 on a page. Character, Kanarese. Condition, most injured. Appearance, old.

Begins on fol. 4*b* of the Ms. described under No. 324 ante.

Incomplete, contains the stanzas 1 to 98.

Same work as the above.

(ವಿ-ವಿ.)—

ಅಸಮಗ್ರ. ೧ ರಿಂದ ೯೮ ಪದ್ಯಗಳಿವೆ. ಅತ್ಯಂತ ಶಿಥಿಲ. ಓಲೆಗಳು ಬಹಳ ಮಟ್ಟಿಗೆ ಮುರಿದು ಹೋಗಿವೆ. ಇದರೊಡನೆ ಜಿನಾಕ್ಷರಮಾಲೆ, ಗಣಿತ, ನೀತಿ ಪದ್ಯಗಳು, ಸಟೀಕ ನೀತಿಶಾಸ್ತ್ರ ಸಮುಚ್ಚಯ, ಅಹಿಂಸಾ ಚರಿತ್ರೆ, ಪಂಚಾಣುವ್ರತದ ಕಥೆ, ಜಿನಧರ್ಮ, ಕಾಮದೇವನ ತೊರವಿ ಎಂಬಿವಿವೆ

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 337. ಜಿನಮುನಿತನಯ (ಶತಕ)-
JINAMUNITANAYA (ŚATAKA).

Substance, paper. Size, $10\frac{7}{16} \times 9\frac{7}{16}$ inches. Pages, 9. Lines, 20 on a page. Character, Kanarese. Condition, fair. Appearance, new.

Begins on page 3 of the Ms. described under No. 325 ante.

Incomplete ; contains the stanzas 1 to 98.

Same work as the above.

(ವಿ-ವಿ.)—

ಅಸಮಗ್ರ ೧ ರಿಂದ ೯೮ ಪದ್ಯಗಳಿವೆ. ಗ್ರಂಥಪಾತ ಬಹಳ. ಇದರೊಡನೆ ಜಿನಾಕ್ಷರಮಾಲೆ ಮುಂತಾದ ಇನ್ನೂ ಕೆಲವು ಪುಸ್ತಕಗಳು ಬರೆದಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ಹೆಚ್ಚು ತಿಳಿಯಲಪೇಕ್ಷಿಸುವವರು ೩೩೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 338. ಜಿನಮುನಿತನಯ (ಶತಕ).
JINAMUNITANAYA (ŚATAKA).

Substance, Śrītála. Size, $10\frac{1}{2} \times 1\frac{13}{16}$ inches. Pages, 19. Lines, 7 on a page. Character, Kanarese. Condition, good. Appearance, old.

Contains the stanzas 1 to 93 complete.

Same work as the above.

(ವಿ.ವಿ.)—

ಅಸಮಗ್ರ. ೧ ರಿಂದ ೯೩ ಪದ್ಯಗಳವೆ. ಶ್ರೀತಾಳಪ್ರತಿ. ಈ ಪ್ರತಿಯು ಮೊದಲಲ್ಲಿ 'ಶಾ. ಶ. ೭೫೬ ಮಾಘ ಶು ೧೦' ಎಂದು ಮಸಿ (ಶಾಯಿ) ಯಿಂದ ಬರೆದಿದೆ. ಹಿಂದೆ ವರ್ಣಿತ ವಾಗಿರುವ ಗ್ರಂಥವೇ ಆಗಿದೆ. ಮಿಕ್ಕ ವಿಷಯಗಳನ್ನು ೩೩೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 399. ಜಿನವಚನಾಮೃತಶರಧಿ.
JINAVACANĀMṚTAŚARADHI.

Substance, palm-leaf. Size, $12\frac{3}{16} \times 1\frac{5}{16}$ inches. Pages, 190 Lines, 5 on a page. Character, Kanarese. Condition, much injured. Appearance, old.

Contains the Sandhis 1 to 5 complete, 6th and 7th incomplete, and wants foll. 87 to 101.

The religious duties of Jains are described herein. The name of the author is Nēmivrati. In the beginning of the work he refers to Nemijineśa, Koṇḍa kundācārya and others.

Beginning:

ಸುರಘಿತರಾಂಗ ದಿವಾಕರ ಶಶಿಕೋಟಿ ।
ಕಿರಣ ಸ್ವರೂಪ ಸ್ವಭಾವ ॥

ವರಬೋಧಮಯನಾದ ನೇಮಿಜಿನೇಶನ ।
ಚರಣಕಮಲಕೆರಗುವೆನು ।

ಜ್ಞಾನಜಲಧಿಯೊಳು ಗೆದ್ದ ಪರ ।
ಮಾನಂದ ಸುಖಮಯರಾಗಿ ॥

ಏನೊಂದರವಲಂಬವಿಲ್ಲದೆ ಜೀವಿಪ ।
ಮಾನ ಸಿದ್ಧರಿಗೆರಗುವೆನು ॥

*   *   *   *

ಶ್ರೀಮದುತ್ತಮ ಕೊಂಡ ಕುಂದಾಚಾರ್ಯರ ।
ನೇಮಿಚಂದ್ರ ಮುನಿಪತಿಯ ॥

ಕಾಮವಿಜಯ ಗುಣಭದ್ರರು ಮೊದಲಾದ ।
ಸ್ವಾಮಿಗಳನು ಪೊಗಳುವೆನು ॥

ತ್ರಿಭುವನದೊಳು ಕ್ಷಾಯಿಕವೇದರೆಂಬ ।
ಪ್ರಭುಗಳುಂಟವರ ಹೃದಯಾದ ॥
ಉಭಯ ನಯಗಳೊಳಗುದಯಿಪನತಿಶಯ ।
ವಿಭವಗಳಿಗೆ ನಮಿಸುವೆನು ॥
ಹನ್ನೊಂದು ತೆರದ ಜೈನರುಗಳುಂಟವರಿಗೆ ।
ಚೆನ್ನಾಗಿ ತ್ರಿಕರಣದಿಂದ ॥
ನನ್ನೊಳಗಿಹ ಭಕ್ತಿಯಿಂದ ಪೊಗಳಿಯೆಲ್ಲ ।
ಗಿರ್ನ್ನು ಪೇಳುವೆನು ಧರ್ಮವನು ॥

* * * *

ವೃಜನಹರನಜಿನಚರಣಗಳೆರಡನು ।
ಭಜಿಸುವ ಶ್ರಾವಕರೆಂಬ ॥
ಪ್ರಜೆಗಳೆಲ್ಲರಿಗೆ ಪೇಳುವ ಚರಿತೆಯೊಳಗು ।
ನಿಜದರ್ಶನಿಕನ ಸಂಧಿ ॥

Coiophon :

ಇದು [ಮೊದಲಾ] ಜಿನವಚನವೆಂಬಮೃತಶರಧಿಯೊಳ ।
ಗುದಯಿಸಿದುದು ಶ್ರಾವಕರ ॥
ಸದಮಲನೆಲೆಯೊಳಗೊಂದನೆಯದು ಸಂಧಿ ।
ಮದನಾರಿಜನರ ಸಂಬಂಧಿ ॥
ಮುಂದೀಸುವ್ರತಿಕನ ನೆಲೆ ಮೊದಲಾದುವ ।
(ರಂದ) ಕೇಳಿದ ಸಜ್ಜನರು ॥
ಇಂದು ಶಕ್ತಿಯು ಮೀಱದಾಚರಿಸಿದವಗೆ ।
ಮುಂದೆ ಮಹಾಸುಖಸಿದ್ಧಿ ॥

End :

ದೇಶದೇಶಗಳೊಳಗಿಹ ಸರ್ವ ಜೀವಗ ।
ಳಾಸೆಯೆಂಬ ಶರಧಿಯೊಳು ॥
ಲೇಸಾಗಿ ಮುಳುಗಿ ಸುಖಿಸುವವರಲ್ಲದೆ ।
ಆಸೆಯಿಲ್ಲದ ದೇಶವಿಲ್ಲ ॥
ಉಡುವುದುಂಬುದು ಬಗೆಬಗೆಯಾಭರಣವ ।
ತೊಡುವುದು ಜಗಳವಾದಲ್ಲಿ ।
ಕಡಿವುದು ಕೆಲಬರೀರುಳ್ಳ ಹಗಲೊಳು ತಮ್ಮ ।
ಮಡದಿಯೊಡನೆ ಮಲಗಿಹುದು ॥
ಕೆಲಬರುಂಬುದಕೆ ಕೂಳಿಲ್ಲದೆ ತೊಳಲುವ ।

(ವಿ.ವಿ.)—

ಅಸಮಗ್ರ. ೧ ರಿಂದ ೫ (ನಿಜದರ್ಶನಿಕ, ಅಣುವ್ರತ, ಗುಣವ್ರತ (ಶೀಲಸಪ್ತಕ) ನರಕ, ಮಧ್ಯಮಲೋಕ) ಸಂಧಿಗಳು ಸಮಗ್ರವಾಗಿವೆ. ೬ ಮತ್ತು ೭ ನೆಯ ಸಂಧಿಗಳು ಅಸಮಗ್ರ

ವಾಗಿವೆ. ಆರನೆಯ ಸಂಧಿಯ ೭೩ ನೆಯ ಪದ್ಯಾರ್ಧದಿಂದ ಏಳನೆಯ ಸಂಧಿಯ ಮೊದಲ ೧೯ ಪದ್ಯಗಳನ್ನು ಉಳ್ಳ ೧೪ ಓಲೆಗಳು ಹೋಗಿವೆ. ಪ್ರತಿ ಅತಿ ಶಿಥಿಲವಾದುದು. ಅಕ್ಷರಗಳು ಸಾಮಾನ್ಯವಾಗಿವೆ.

ಇದು ಸಾಂಗತ್ಯರೂಪವಾದುದು. ಜೈನಮತ ಧರ್ಮವು ಇದರಲ್ಲಿ ಉಕ್ತವಾಗಿದೆ. ಐದನೆಯ ಸಂಧಿಯ ಕೊನೆಯಲ್ಲಿ ' ಅಧ್ಯಾತ್ಮಚರಿತ್ರ ಧ್ಯಾನಿಸುವ ಭವ್ಯರಿಗೆ ಸು, ಸಾಧ್ಯ ನಿರ್ವಾಣವೆಂದರಿವ ॥ ಸದ್ಯೋಗಿ ನೇಮಿವ್ರತಿಯು ಪೇಳ್ದ ಚರಿತೆಗೆ । ಮಧ್ಯಮಂಗಳವಹುದಿಲ್ಲಿ ॥' ಎಂದಿರುವುದರಿಂದ ಈ ಗ್ರಂಥಕರ್ತನು ನೇಮಿವ್ರತಿಯೆಂದು ಗೊತ್ತಾಗುತ್ತದೆ. ಆದರೆ ಕವಿಯ ವಿಷಯವಾಗಿ ಈ ಪ್ರತಿಯಿಂದ ಇನ್ನೇನೂ ತಿಳಿಯುವುದಿಲ್ಲ. ಗ್ರಂಥಾದಿಯಲ್ಲಿ ನೇಮಿಜಿನೇಶನ ಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳನ್ನೂ, ಕೊಂಡಕುಂದಾಚಾರ್ಯ ಮೊದಲಾದ ಸ್ವಾಮಿಗಳನ್ನೂ, ಶ್ರಾವಕವೇದಕರನ್ನೂ ಸ್ತುತಿಸಿ ಜೈನ ಧರ್ಮವನ್ನು ಬೋಧಿಸಲು ಆರಂಭಮಾಡಿದ್ದಾನೆ. ಈ ಗ್ರಂಥವು ೧೭ ನೆಯ ಶತಮಾನದಲ್ಲಿ ಹುಟ್ಟಿರಬಹುದೆಂದು ಕವಿಚರಿತ್ರಕಾರರ ಅಭಿಪ್ರಾಯವು.

No. 340. ಜಿನಾಕ್ಷರಮಾಲೆ (ಸ್ತೋತ್ರ)
JINĀKṢARAMĀLE (STŌTRA).

Substance, palm-leaf. Size, 12 × $1\frac{3}{16}$ inches. Pages, 13. Lines, 4 on a page. Character, Kanarese. Condition, very much injured. Appearance, old.

Begins on fol. 23a of the Ms. described under No. 335 ante.

Complete.

A work in Kanda metre containing 39 stanzas written in praise of Jina. The peculiarity of these stanzas is that the last letter of the previous stanza forms the first letter of the succeding stanza. Thus letters from ' k to ḷ ' in order are made the first letters of the stanzas.

Beginning :

ಶ್ರೀಮತ್ಸ್ವಮಸ್ತ ಲೋಕ ಶಿ ।
ಖಾಮಣಿ ! ನಿಷ್ಕಪಟವಿನಯ ವಿನಮಿತ್ರಜನಚಿಂ ॥
ತಾಮಣಿ ! ಜಿನ ! ನಿಮಗೆಱಗೆ ಮ ।
ಹಾಮಹಿಮ ಪ್ರಾಪ್ತರಪ್ಪರೆಂಬುದು ಲೋಕಂ ॥
ಕಂತು ಮದಹರಣ ! ದುರಿತಬ ।
ಳಾಂತಕ ! ದಿವಿಜೇಂದ್ರವಂದ್ಯ ! ನಿರ್ವೃತಿ ಲಕ್ಷ್ಮೀ ॥
ಕಾಂತ ! ಭವತ್ಪದಯುಗಮಂ ।
ಚಿಂತಿಸುವಂಗಾವುದಱಿದು ತುಹಿನಕರನಖಾ ॥
ಖಚರಸುರೋರುಗ ನರರಾ ।
ತ್ರಿಚರಚಮೂವಂದ್ಯ ನೆಱೆಯೆ ಭಾವಿಸುವಾಗಲ್ ॥
ಸಚರಾಚರೋರ್ವಿಯೊಳ್ ಜಿನ ।
ನ ಚರಿತ್ರಂ ಚಿತ್ರಮೆಂದು ಪೊಗೞ್ವುದು ಜಗಂ ॥
ಗಜವೈರಿಪೀಠ ! ಜಿನನಾ ।
ಥ ! ಜಗನ್ನುತ ಬಂದು ಭಕ್ತಿಯಿಂ ನಿನ್ನ ಪದಾಂ ॥

ಬುಜಮಂ ಕಂಡೊಡೆ ದುರಿತ ।
ವ್ರಜಮೊಮ್ಮೆಯು ಬಿದಱಿ ಕೆದಱಿ ಕೆಡೊಗುವುಮೋಘಂ ॥

End:

ಕ್ಷತ್ರಿಯ ಕುಲದೊಳ್ಪುಟ್ಟಿ ಜ ।
ಗತ್ರಯಪತಿ ನಿನಗೆ ಭಕ್ತನಾದಂದೇಕ ॥
ಚ್ಛತ್ರಚ್ಛಾಯೆಯಿನಖಿಳಧ ।
ರಿತ್ರಿಯನಾಳ್ಕೆ ಪಡೆಗುಮುಳದಂತಾಱಂ ॥
ಱತೊಬ್ಬಿನ ಸೊಡಱಿಂ ಚರುವಿಂ ।
ಚಿಬ್ಬಂ ಬೊಯಿದೆಲೆಯನಲರಿನಕ್ಷತೆಯಿಂ(ದಂ) ಮ ॥
ಚ್ಚುಬ್ಬರಿಸಿ ನಿನ್ನನರ್ಚಿಸೆ ।
ನಿಬ್ಬರಮಾಗಿರ್ದ್ದ ನರಕಗತಿಯೊಳ್ ಬೀೞಂ ॥
ೞಾಂತಂಬರಂ ಬು (ಧಪೊರ್ಗ) ।
ಳ್ವಂತಕ್ಕರ ಮಾಲೆಯಂ ಜಿನಸ್ತವನದೋಳೋ ॥
ರಂತಿರೆ ಪೇೞ್ದಿಂ ಹಿಮಸೇ ।
ತ್ವಂತವರಂ ಪರೆವಿನಂ ಕುರುಳ್ಗಳ ಸವಣಂ ॥
ಮಳೆ ಕೊಳ್ಗ ಧಾನ್ಯವರ್ಗ್ಗದ ।
ಬೆಳೆಬೆಚ್ಚರ್ಗೆ ಸತ್ಯಶೌಚರಪ್ಪರ್ಮ್ಮನುಜರ್ ॥
ಬೆಳಗುವುದು ಜೈನಧರ್ಮ್ಮಂ ।
ಜಳನಿಧಿಚಂದ್ರಾರ್ಕತಾರೆ ಧರೆಯುಳ್ಳನೆಗಂ ॥

Colophon:

ಜಿನಾಕ್ಷರಮಾಲೆ ಸಂಪೂರ್ಣಂ.

(ವಿ.ವಿ.)—

ಸಮಗ್ರ. ಅತಿ ಶಿಥಿಲ.

ಇದು ಕಂದದಲ್ಲಿ ಬರೆದಿದೆ. ಪದ್ಯಗಳು ೩೯. ಜಿನಸ್ತೋತ್ರರೂಪವಾಗಿದೆ. ಹಿಂದಿನ ಪದ್ಯದ ಕೊನೆಯಕ್ಷರವು ಮುಂದಿನ ಪದ್ಯದ ಮೊದಲಕ್ಷರವಾಗುವಂತೆ 'ಕ' ಕಾರದಿಂದ 'ೞ' ಕಾರದ ವರೆಗೂ ಬರೆದಿದೆ. ಕವಿ ಕುರುಳ್ಗಳ ಸವಣ, ಅಥವಾ ಶಾಂತಿಪುರಾಣ ಕರ್ತೃವೆನಿಸಿದ ಪೊನ್ನನು. ಶೈಲಿ ಪ್ರೌಢವಾಗಿದೆ. ಪದ್ಯಗಳು ಮನೋಹರವಾಗಿವೆ. ಈತನ ಕಾಲವು ಸು. ಕ್ರಿ.ಶ. ೯೫೦ ಎಂದು ಕವಿಚರಿತ್ರೆಯಲ್ಲಿ ಹೇಳಿದೆ.

No. 341. ಜಿನಾಕ್ಷರಮಾಲೆ (ಸ್ತೋತ್ರ)-
JINĀKṢARAMĀLE (STŌTRA).

Substance, palm-leaf. Size, $12\frac{5}{16} \times 1\frac{1}{4}$ inches. Pages, 7. Lines, 4 on a page. Character, Kanarese. Condition, most injured Appearance, old.

Begins on fol. 1a of the Ms. described under No. 324 ante.

Complete.

Same work as the above.

(ವಿ.ವಿ.)—

ಸಮಗ್ರ ಅತ್ಯಂತ ಶಿಥಿಲ. ಓಲೆಗಳು ಅನೇಕವಾಗಿ ಮುರಿದು ಹೋಗಿವೆ. ಇದರೊಡನೆ ಜಿನಮುನಿತನಯ, ಜಿನಾಲಯ ವಿಷಯ, ನೀತಿಪದ್ಯಗಳು, ಸಟೀಕ ನೀತಿಶಾಸ್ತ್ರ ಸಮುಚ್ಚಯ, ಅಂಜನಾ ಚರಿತ್ರೆ. ಪಂಚಾಣುವ್ರತದ ಕಥೆ. ಜಿನಧರ್ಮ, ಕಾಮದೇವನ ತೊರವಿಯೆಂಬ ವಿವೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 342. ಜಿನಾಕ್ಷರಮಾಲೆ (ಸ್ತೋತ್ರ). JINĀKṢARAMĀLE (STŌTRA).

Substance, paper. Size, $10\frac{7}{16} \times 9\frac{7}{16}$ inches. Pages, 3. Lines, 20 on a page. Character, Kanarese. Condition, fair. Appearance, new.

Begins on page 1 of the Ms. described under No. 325 ante.

Complete.

Same work as the above.

(ವಿ.ವಿ.)—

ಸಮಗ್ರ. ಆದರೆ ಗ್ರಂಥಪಾತ ಬಹಳ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದೊಡನೆ ಜಿನಮುನಿತನಯ ಮುಂತಾದ ಇನ್ನೂ ಕೆಲವು ಗ್ರಂಥಗಳವೆ.

No. 343. ಜೀವಂಧರ ಚರಿತ್ರೆ (ಕಾವ್ಯ). JĪVANDHARACARITRE (KĀVYA).

Substance, Śrītāla. Size, $10\frac{9}{16} \times 2\frac{1}{8}$ inches. Pages, 198. Lines, 11 on a page. Character, Kanarese. Condition, slightly injured. Appearance, old.

Complete in 18 Sandhis.

By Bhāskara, son of Basavānka.

Herein is described how Jīvandhara, son of Satyandhara king of Rajapuri obtained salvation. The author states that this is the Kanarese version of the Sanskrit Jivandhara caritra by Vādībhasūri and that it was written in the Śaka year 1345 corresponding to A.D. 1423 in a Jaina temple at Penugoṇḍa.

Beginning :

ರಾಯ ಮಗಧ ನೃಪೇಂದ್ರಚಂದ್ರನ ।
ಜೇಯನೆನಿಪ ಸುಧರ್ಮಮುನಿಪನು ।
ನಾಯಿಯಿಂದಱುಹಿದನು ಜೀವಂಧರನ ಸುಚರಿತೆಯ ॥
ಶ್ರೀಮದಖಿಳೇಂದ್ರೋತ್ತಮಾಂಗ ।
ಸ್ತೋಮಮಣಿಮಕುಟಾಂಶುಚಂ [ಡ] (ಚ) ।
ತ್ಕೋಮಲಾಂಘ್ರಿದ್ವಯನಚಿಂತ್ಯನಜಾತನದ್ವಿತಯ ॥

ಕಾಮಮದಹರನಮಳಮುಕ್ತಿ ।
ಶ್ರೀಮುಖಾಬ್ಜದಿನೇಶನರ್ಹ ।
ತ್ಸ್ವಾಮಿ ಮುದದಿಂದೀಗೆಮಗೆ ಕೈವಲ್ಯಸಂಪದವ ॥

* * * *

ವಿನುತನೇಮಿಯ ರೀತಿ ಗುಣವ ।
ರ್ಮನ ಚಮತ್ಕೃತಿ ನಾಗವರ್ಮನ ।
ನೆನಹು ಹೊನ್ನನ ದೇಶಿ ವಿಜಯನ ಭಾವವಗ್ಗಳನ ॥
ಸನುನಯೋಕ್ತಿ ಗಜಾಂಕುಶನ ಬಿ ।
ನ್ನಣ ಯಶಶ್ಚಂದ್ರನ ಬಹುಜ್ಞತೆ ।
ಯನುಕರಿಸಲೀ ಕಾವ್ಯದೊಳಗೆನಗವರ ಕರುಣದಲಿ ॥

ತೊಡಗಿದಮಳಪ್ರ (ಸ) ಕಡೆಗದು ।
ನಡೆಯದಿರೆ ಬೇಸತ್ತು ವೋನವ !
ಹಿಡಿದು ಕಾಣದೆ ನೋಡಿ ಪರಿಕಿಸಿ ನೆಗಟ್ಟ ಪದಗಳನು ॥
ತೊಡೆದು ಮರಳ ಪರೋಕ್ತಿಗಳೆನಳ ।
ವಡಿಸಿಕೊಂಡಕ್ರಮದಿ ಸದರದ ।
ನುಡಿಯನೊಂದಿಸಿ ಬೇಟ್ವವನು ಕವಿಯೋ ಧರಿತ್ರಿಯಲಿ ॥

ಗರುಡನಭ್ರವನಡರೆ ಪಿಕವಾ ।
ಪರಿಯ ನೆಗೆವಂತರಿಲಸುತ ಸಾ ।
ಗರವ ದಾಂಟ[ಲಿ] (ಲು) ನವಿಲು ಲಂಘಿಪ ತೆಱದಿ ಗಣಧರರು ॥
ವಿರಚಿಸಿದ ಸತ್ಕೃತಿಯನಿದ ವಿ ।
ಸ್ತರಿಸಲಾನೆನಿತ (ರ) ವಕರುಣದಿ ।
ಪರಮ ಭಕ್ತ್ಯಂಗನೆಯ ವಶದಿಂ ಪೇಳ್ದೆನಾನೆಂದ ॥
ಕೃತಿಗೆ ನಾಮ ವಿಶುದ್ಧಗುಣನ ।
ಪ್ರತಿಮಜೀವಂಧರನ ಕಥೆ ತ ।
ತ್ಕೃತಿಗಧಿಪ ಸರ್ವಜ್ಞನೀಕೃತಿ ರಚಿತ (?) ಕವಿವರನು ॥
ವಿತತವಿಶ್ವಾಮಿತ್ರ ಗೋತ್ರ ।
ನ್ವಿತ ಸರಸಬಸವಾಂಕಸುತ ವಿ ।
ಶ್ರುತನು ಭಾಸ್ಕರನೆಂದೊಡೊಪ್ಪುವುದರಿದೆ ಧರಣಿಯಲಿ ॥

ವಾದಿಮದಗಜಸಿಂಹ ಸೂರಿಗ ।
ಳಾದಿಯಲಿ ನವಸಂಸ್ಕೃತದಿ ಸಂ ।
ಪಾದಿಸಿದ ಭೂವಿನುತ ಜೀವಂಧರನ ಚರಿತ್ರ(ವ)ನು ॥
ವೇದಿಸುವೆನುರು ಭಾಮಿನಿಯ ಷ ।
ಟ್ಪಾದದಿಂ ಕನ್ನಡದೊಳೊಲಿ (ದಿ) ದ ।
ನಾದರಿಸಿ ಕೇ [ಳೂ] (ಳುವು)ದು ಭವ್ಯಸಮೂಹವೊಲವಿನಲಿ ॥

ಶ್ರೀಮದನುಪಮವೀರಜಿನಪದ ।
ಧಾಮರಸಮಧುಕರನು ಸದ್ಧ ।
ರ್ಮಾಮೃತಾಂಭೋರಾಶಿವರ್ಧನ ಚಂದ್ರನೆಂದೆನಿಪ ॥

ಭೂಮಿಪಾಲಲಲಾಮನಭಿನವ ।
ಕಾಮನಮಳಗುಣಾಭಿರಾಮ ಮ ।
ಹಾಮಹಿಮ ಮಗಧೇಂದ್ರ ಪಾಲಿಸುತಿರ್ದನೊಲವಿನಲಿ ॥

ಲೀಲೆಯಿಂದೀಪರಿಯಲವನಿಯ ।
ಪಾಲಿಸುತ್ತಿರಲೊಂದುದಿನ ವನ ।
ಪಾಲನೆಯ್ತಂದೆಱಗಿ ವಿಪುಳಾದ್ರಿಯಲಿ ಸನ್ಮತಿಯ ॥

ಲಾಲಿತಶ್ರೀ ಸಮವಸರಣ ಸು ।
ಲೀಲೆಯಿಂ ನೆಲೆಸಿರ್ದುದೆನೆ ಭೂ ।
ಪಾಲ ಪೀಠದಿನಿಳಿದು (ಭಯ) ಭಕ್ತಿಯಲಿ ವಂದಿಸಿದ ॥

ಒಸಗೆದಂದಂಗಂಗಚಿತ್ತವ ।
ನೆಸಗಿ ವಿಮಳಾನಂದಭೇರಿಯ ।
ನೊಸೆದು ಪೊಯ್ಯಿಸಿ [ಲ] ಸಮವಸರಣಕೆ ಭವ್ಯಜನಸಹಿತ ॥
ವಸುಮತೀಶ್ವರ ಬಂದು ಘನ ಸಂ ।
ತಸದಿ ಬಲಗೊಂಡಕ್ಷಯಗೆ ವಂ ।
ದಿಸಿ ಕರಾಬ್ಜವ ಮುಗಿದು ಸಂಸ್ತುತಿಸಿದನು ಜಿನಪತಿಯ ॥

* * * *

ಈತ ಮರ್ತ್ಯನು ದೇವನಲ್ಲ ಮ ।
ಹಾತಿಶಯದ ತಪೋಗ್ನಿಯಿಂದಿದಿ ।
ರಾತ ಕರ್ಮಾರಣ್ಯವನು ಖಂಡಿಸಿ ಭವಾಟವಿಗೆ ॥

ಜ್ಯೋತಿಮಯ ತಾನಾಗಿ ಭುವನ ।
ಖ್ಯಾತಿವೆತ್ತನು ತಪದ ಮಹಿಮೆಗಿ ।
ದೇತಱತಿಶಯವೆಂದು ಭೂಮಿಪಗಱುಹಿದನು ಮುನಿಪ ॥
ಎನಲು ಭೂಮಿಪನೀತ ಮುನ್ನಾ ।
ರನುಪ(ಮ) ದ್ವಿಜನೋ ಮಹೀಪಾ ।
ಲನೊ ವಣಿಗ್ವಂಶಜನೊ ರೌಪ್ಯಾಚಲ[ನೊ] (ದ) ಖೇಚರನೊ ॥
ನನಗೆ ಪೇೞಲೀತನ ಲಸದ್ವ ।
ರ್ತನೆಯನನಿತುವನೆನಲು ಕೇಳೆಲೆ ।
ಜನಪ ! ಎಂದು ಸುಧರ್ಮ ಮುನಿಪತಿ ಪೇೞಲನುಗೆಯ್ದ ॥

Colophon:

ಇದು ವಿನಮದಮರೇಂದ್ರ ಶ್ರೀಜಿನ ।
ಪದಕಮಲಷಟ್ಚರಣ ವಾಣೀ ।
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ॥

ಚದುರ ಭಾಸ್ಕರರಚಿತ ಧರ್ಮ ।
ಪ್ರದ[ವ] (ನ) ಜೀವಂಧರನ ಚರಿತೆಯೊ ।
ಳದುವೆ ಪೂರ್ವ ಪ್ರಸಂಗವವನೀಪಾಲ ಕೇಳೆಂದ ॥

ಪ್ರಥಮ ಸಂಧಿ ಸಮಾಪ್ತಂ.

ರಾಜರಾಜನ ಪುರವ ನಗುತಿಹ ।
ರಾಜಪುರಿ (ಯಲಿ) ಸಕಲ ಮಹಿಯನು ।
ರಾಜಮಣಿ ಸ [ತ್ಪಾ] (ತ್ಯಂ) ಧರನು ಪಾಲಿ [ಸುತಿರ್ದ] (ಸಿದ) ನೊಲವಿನಲಿ ॥

* * * *

ಒಂದು ದಿನ ಜೀವಂಧರನು ತ ।
ನ್ನಂದಿರದಿ ಧವಳಾರದಲಿ ಸಾ ।
ನಂದದಲಿ ತನ್ನರಸಿಯರು ಸಹಿತೇರಿ ವಿಹರಿಸುತ ॥
ನಂದನದೊಳದಿರಿನಲಿ ವನಚರ ।
ವೃಂದವತಿ ಬೆಡಗಿಂದಲಾಡಲು ।
ಮಂದಹಾಸದೊಳರದೆ ನೋಡುತ್ತಿರ್ದನೊಲವಿನಲಿ ॥
ವನಚರಿಯನೊಂದನ್ಯವನಚರ ।
ನನುನಯದಿ ನೆರೆಯಲ್ಕೆ ಕಂಗನೆ ।
ಕನಲಿ ತದ್ವನೆಚರಿಯ ವಲ್ಲಭ ಬಂದು ತಾನದನು ॥
ಹ [ರ] (ನ) ನ [ಯೆ] (ವೆ)ಯ್ದಿಸಲುಭಯಪಕ್ಷದ ।
ವನಚರಾವಳಿ ಕಾದಿ ಮಡಿಯಲು ।
ಜನಪ ಜೀವಂಧರನು ಕಂಡೋರಂತೆ ಬೆರಗಾದ ॥
ಈಗ ನೋಡುತ್ತಿರಲು ಕಪಿಗಳು ।
ರಾಗಿಸಿದ್ದುವು ಮುಗುಳೆ ತಾನೆಂ ।
ತೀಗಳೀಕ್ಷಿಸುತಿರಲು ಮಡಿದುವು ನರರ ಸಂಸಾರ ॥
ಆಗದೀ [ಗ] ವನಚರಗಳಂತೆ ವಿ ।
ಯೋಗವಸ್ಥಿರವೆನುತ ನೃಪ ವೈ ।
ರಾಗದಿಂದುದ್ಯುಕ್ತ (ನಾದನು) ತಪಕೆ ವಹಿಲದಲಿ ॥

End:

ಧುರದೊಳೋಡದಿರನ್ಯಸತಿಯರ ।
ನೆರೆಯದಿರು ನನ್ನಾಣೆಯಾಜ್ಞೆಯ ।
ಕೊಱತೆಯನು ಮಾಡದಿರು ಕಾರ್ಯವ ಬಿಡದಿರಾವನೊಳು ॥
ಜಱೆಯದಿರು ಹಿರಿಯರನು ಧರ್ಮವ ।
ತೊಱೆಯದಿರು ಜಿನಪಾದಪದ್ಮವ ।
ಮಱೆಯದಿರು ಸುತಯೆಂದು ಬೋಧಿಸಿದನು ಕುಮಾರಕನ ॥
ವರಕುಮಾರವಸುಂಧರನ ನೀ ।
ಪರಿಯ(?) ಬೋಧಿಸಿ ಬಳಿಕ ಜೀವಂ ।
ಧರನು ತನ್ಮುನಿವರರ ಕೈಯ [ಲು] (ಲಿ) ದೀಕ್ಷೆಯನು ಕೊಂಡಾ ॥

ಅರುಹ ನೆಲಸಿಹ ಸಮವಸರಣದಿ ।
ನಿರಸನದಿ [ಲು] (ನು) ಗ್ರೋಗ್ರತಪವನು ।
ವಿರಚಿಸಿ (ಯ) ಮೋಕ್ಷವನು ಪಡೆದನು ಭೂಪಕೇಳೆಂದ ॥

ಪರಮ ಮೋಕ್ಷವ ಪಡೆದು ಸರ್ವೇ ।
ಶ್ವರನು ದಿಟತಾನಾದ ಜೀವಂ ।
ಧರನೃಪಾಲಕನೀತನೆಂದಾ ಶ್ರೇಣಿಕಗೆ ಮೊದ [ಲು] (ಲ) ॥

ತೆಱನನಾ ಗೌತಮಮುನೀಶ್ವರ ।
ನಱುಹೆ ವಿಸ್ಮಯಬಟ್ಟು ಹರುಷದ ।
ಶರಧಿಯೊಳಗೋಲಾಡಿದನು ಮಗಧೇಂದ್ರನನವರತ ॥

ಬಳಿಕ ಶ್ರೇಣಿಕನಾ ಮುನೀ [ಶ್ವ] (ಶರು) ।
ಗಳಗೆಱಗಿ ಬೀಳ್ಕೊಂಡು ತನ್ನಯ ।
ಹೊಬಲಿಗೆಯ್ದಿಯೆ ಬಿಡದೆ ಜೀವಂಧರನ ನೆನೆನೆನೆದು ॥

ಪುಳಕಿತಾಂಕುರನಾಗಿ ಧರಣೀ ।
ತಳವನೆಮುಳಕ್ಷತ್ರ ಧರ್ಮದೊ ।
ಳೊಲಿದು ಮಾಗಧಾಧೀಶ ಪಾಲಿಸುತಿರ್ದನೊಲವಿನಲಿ ॥

ಧರೆಯೊಳೀ ಜೀವಂಧರನ ಭಾ ।
ಸುರದ ಚರಿತೆಯ (ನಮಿತ್ರವಾಗಿ) ಪ ।
ಸರಿಸಿದ [ರಿಗಗ] (ರ) ದಾರಿದ್ರ್ಯಭವ ದುಷ್ಕರ್ಮವಡಗುವುವು ।

ಸಿರಿ ಸುತೇಜಾಯುಷ್ಯಸಂಪದ ।
ಪರಮಸದ್ಗತಿಯಹುದು ಸರ್ವೇ ।
(ಶ್ವರನ ಮತವಿದು) ನಂಬೆನುತ ಭಾಸ್ಕರ[ದೇವ](ನು) ಬೋಧಿಸಿದ

ಧರಣಿಯೊಳಗುಳ್ಳಖಿಳ ತೀರ್ಥಂ ।
ಕರರ ಸದ್ದರ್ಶನದ ಫಲ ವಿ ।
ಸ್ತರದಿ ಚಾತುರ್ವಿಧದ ದಾನವ ಮಾಡಿದನಿತು ಫಲ ॥

ಸುರುಚಿರದೊಳರ್ಹತ್ಪ್ರತಿಷ್ಠೆಯು ।
ವಿರಚಿಸಿದ ಫಲವಹುದು ಜೀವಂ ।
ಧರನ ಚರಿತೆಯಲೊಂದು ಪದವನು ಕೇಳ್ದ ಮನುಜರಿಗೆ ॥

ಶರಗತಿತ್ರಯ ಚಂದ್ರ ಸಂಖ್ಯೆಯ ।
ವರಶಕಾಬ್ದಕ್ರೋಧಿ ಸಂವ ।
ತ್ಸರದ ಫಾಲ್ಗುಣ (ಶುದ್ಧ) ದಶಮಿ ದಿನೇಶವಾರದಲಿ ॥

ಮೆಱೆವ ಪೆನುಗೊಂಡೆಯ ಸುಶಾಂತೀ ।
ಶ್ವರನ ಜಿನವಾಸದಲಿ ಜೀವಂ ।
ಧರನ ಚರಿತೆಯ ರಚಿಸಿದನು ಜಾಣ್ಮೆಯಲಿ ಭಾಸ್ಕರನು ॥

Colophon :

ಇದು ವಿನಮುದರೇಂದ್ರ ಶ್ರೀಜನ।
ಪದಕಮಲಷಟ್ಚರಣ ವಾಣೀ।
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ॥

ಚದುರ ಭಾಸ್ಕರರಚಿತ ಧರ್ಮ।
ಪ್ರದನ ಜೀವಂಧರನ ಚರಿತೆಯೊ।
ಳದುವೆ ನಿರ್ವಾಣಾದಿವರ್ಣನೆಯೊ ಪ್ರಬಂಧದಲಿ॥

ಅಂತು ಸಂಧಿ ೧೮ ಕ್ಕಂ ಪದನು 1000 ಕ್ಕಂ ಮಂಗಳ ಮಹಾ।

ಈಪ್ರತಿಯನ್ನು ಬರೆದ ಕಾಲ ಮುಂತಾದುವು,—

“ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೬೭ ನೆಯ ಸಂದ ಕ್ರೋಧನ ಸಂವತ್ಸರದ ಫಾಲ್ಗುಣ ಶುದ್ಧ ೨ ರೇವತಿ ನಕ್ಷತ್ರದಲ್ಲು ಮೈಸೂರ ಬಸ್ತಿ ಶಾಂತಯ್ಯನವರ ಮಗ ದೊಡ್ಡಯ್ಯನು ತನಗೆ ಬರೆದಂಥ ಜೀವಂಧರನ ಷಟ್ಪದಿ ಮೈಸೂರ ಚೈತ್ಯಾಲಯದಲ್ಲಿ ಸಂಪೂರ್ಣವಾಯ್ತು ಭದ್ರಂ ಶುಭಂ ಮಂಗಳಮಹಾಶ್ರೀ.”

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ.

ಇದು ಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ರಾಜಪುರಿಯ ಸತ್ಯಂಧರರಾಜನ ಮಗ ಜೀವಂಧರ ರಾಜನು ಮೋಕ್ಷವನ್ನೆಯ್ದಿದ ಕಥೆಯು ವರ್ಣಿತವಾಗಿದೆ. ಕವಿ ಭಾಸ್ಕರನು. ಬಸವಾಂಕನ ಮಗನು. ವಿಶ್ವಾಮಿತ್ರ ಗೋತ್ರದವನು. ವಾದೀಭಸೂರಿ ಸಂಸ್ಕೃತದಲ್ಲಿ ರಚಿಸಿರುವ ಜೀವಂಧರ ಚರಿತ್ರೆಯನ್ನು ತಾನು ಕನ್ನಡಿಸಿದಂತೆ ಹೇಳಿದ್ದಾನೆ. ಪೆನುಗೊಂಡೆಯ ಶಾಂತೀಶ್ವರನ ಜಿನಾಲಯದಲ್ಲಿ ಶಕ ೧೩೪೬ (ಕ್ರಿ. ಶ. ೧೪೨೪) ರಲ್ಲಿ ಈ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ. ಗ್ರಂಥಾದಿಯಲ್ಲಿ ಜಿನಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಅನುಬದ್ಧಕೇವಲಿಗಳು, ಕೇವಲಿಗಳು ಭೂತಬಲಿ ಮುಂತಾದ ಗುರುಗಳು ಇವರನ್ನು ಸ್ತುತಿಸಿ ದುಷ್ಕವಿನಿಂದೆ ಮುಂತಾದುವನ್ನು ಹೇಳಿ, ಪೂರ್ವ ಕವಿಗಳಲ್ಲಿ ಗುಣವರ್ಮಾದಿಗಳನ್ನು ಹೊಗಳಿ, ಸ್ವವಿಷಯವನ್ನು ವಿವರಿಸಿ ಕಥೆಯನ್ನು ಹೇಳಲು ಪ್ರಾರಂಭಿಸಿದ್ದಾನೆ. ಉಳಿದ ವಿಷಯಗಳನ್ನು ಮೇಲೆ ಉದಾಹರಿಸಿರುವ ಪದ್ಯಭಾಗಗಳಿಂದ ತಿಳಿಯುವುದು.

No. 344. ಜೀವಂಧರ ಚರಿತ್ರೆ- (ಕಾವ್ಯ-)
JĪVANDHARA CARITRE. (KĀVYA.)

Substance, Śrītāla. Size, 13½ × 1⅛ inches. Pages, 142. Lines, 9 on a page. Character, Kanarese. Condition, slightly injured. Appearance, old.

Contains Sandhis 1 to 16 complete. In the 17th Sandhi 1 to 85 stanzas are complete and 86th incomplete.

Same work as the above ; by Bhāskara.

(ವಿ.ವಿ.)—

೧ ರಿಂದ ೧೬ ಸಂಧಿಗಳು ಪೂರ್ಣವಾಗಿವೆ. ೧೭ ನೆಯ ಸಂಧಿಯಲ್ಲಿ ಮೊದಲಿಂದ ೪೫ ಪದ್ಯಗಳು ಪೂರ್ಣವಾಗಿವೆ. ೪೬ ನೆಯದು ಅಪೂರ್ಣವಾಗಿದೆ. ಶ್ರೀ ತಾಳೆ ಪ್ರತಿ. ೭೧ ಓಲೆಗಳಿವೆ. ಕಡೆಯಲ್ಲಿ ಕೆಲವು ಓಲೆಗಳು ಹೋಗಿವೆ. ಸ್ವಲ್ಪ ಶಿಥಿಲ. ಲಿಪಿ ಉತ್ತಮ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹಿಂದಣ ನಂಬರನ್ನು ನೋಡುವುದು.

No. 345. ಜೀವಸಂಬೋಧನೆ- (ತತ್ತ್ವ.)

JĪVASAMBODHANE (TATTVA.)

Substance, Śrītāla. Size, 7 3/16 × 1 13/16 inches. Pages, 389. Lines, 8 on a page. Character, Kanarese. Condition, Slightly injured. Appearance, old.

Complete.

This is a campūkāvya in 12 adhikārās. By Bandhu Varma. He belonged to Vaiśya community. The work is written as addresed to the soul, expounding the doctrines of Jainism.

Beginning:

ಯೇನ ಸ್ವಯಂಬೋಧಮಯೇನ ಲೋಕಾ।
ಆಶ್ವಾಸಿತಾಃ ಕೇಚನ ವಿತ್ತಕಾರ್ಯೇ॥
ಪ್ರಬೋಧಿತಾಃ ಕೇಚನ ಮೋಕ್ಷಮಾರ್ಗೇ।
ತಮಾದಿನಾಥಂ ಪ್ರಣಮಾಮಿ ನಿತ್ಯಂ॥
ಶಾ॥ ಶ್ರೀನಾರೀರಮಣೀಯಪಾದಕಮಲಂ ಶುದ್ಧಂ ಪ್ರಸಿದ್ಧಂ ಲಸದ್।
ಜ್ಞಾನಾಗಾರಮಪಾರದೃಗ್ಬಳಸುಖಖ್ಯಾತಂ ವಿನೂತಂ ವಿನೇ॥
ಯಾನೀಕಪ್ರವಿರಾಜಿತಂ ತ್ರಿಭುವನಾಧೀಶಂ ಜಿನೇಶಂ ಸಮಾ।
ಧಾನಪ್ರಾಪ್ತಿಯನೀಗೆ ಭವ್ಯನಿಕರಕ್ಕಾಚಿತ್ಯಮಂ ಸ್ತುತ್ಯಮಂ॥

*　　　*　　　*　　　*

ಕಂ॥ ಅಱಿವಿಲ್ಲದೆ ತಕ್ಕಡೆಯೊಳ್।
ತಱಿಸಲ್ಲದೆ ತೊಡರ್ದು ನಮೆವ ಜೀವಕ್ಕೆಲ್ಲಂ॥
ನೆಱೆಯೆ ಹಿತಮೆಂದು ಬಗೆದಿದ।
ನಱಿಪುವೆನಱಿವಂತು ಜೀವಸಂಬೋಧನೆಯಂ॥

ವ॥ ಜೀವ [ವ್ರ] (ದ್ರ) ವ್ಯ ಮೆಂತಪ್ಪುದೆಂದೊಡೆ :— ಜ್ಞಾನದರ್ಶನ ಕರ್ತೃತ್ವ ಭೋಕ್ತೃತ್ವ ದೇಹಮಾತ್ರೋರ್ಧ್ವಗತಿಸ್ವಭಾವಗುಣಮನಂತಸಾದ್ಯನಿಧನಪರ್ಯವಸಾನಮಪ್ಪುದದುತಾಂ ಮುಕ್ತಿಜೀವಂ. ಸಂಸಾರಿ ಜೀವನಿಂದಿರ್ತ್ರರನಕ್ಕುಮಲ್ಲಿ ಜ್ಞಾನಾವರಣೀಯಂ, ದರ್ಶನಾವರಣೀಯಂ, ವೇದನೀಯಂ ಮೋಹನೀಯಮಾಯುಷ್ಯ ನಾಮಗೋತ್ರಮಂತರಾಯಮೆಂಬನಾದಿ

ಸುಸಿದ್ಧ ಮಪ್ಪಷ್ಟವಿಧ ಕರ್ಮಂಗಳಂ ನಿರ್ಮೂಲಂಗೆಯ್ದು ಮೂರುಂ ಲೋಕದ ತುದಿಯೊಳ್ ಸಿದ್ಧರಾಗಿರ್ದ ಜೀವಂಗಳೆಲ್ಲಂ ಮುಕ್ತಜೀವಂಗಳೆಂಬುದಕ್ಕುಂ.

* * * *

ಉ ॥ ಮೊ ॥ ಮೋಹಮನುಂಟುಮಾಡುತ್ತಳವರ್ಧಜಯಂಗಳೊಳಾಸೆವಟ್ಟತಿ ।
ಸ್ನೇಹಿತ್ರನಾಗದಿರ್ಕೆಡಿಸಲಿರ್ಪ ಕಳತ್ರದೊಳೊಳ್ಳಿತಲ್ಲದೀ ॥
ದೇಹದೊಳಪ್ಪುಕೆಯ್ದು ನಡೆಯಿಲ್ಲತಿ ದುರ್ಗತಿ ದುರ್ಮದೋತ್ತಮ ।
ಪ್ಪೈಹಿಕ ಕಾರ್ಯಮಂ ಬಿಸುಟು ಮಾಣ್ದಿರಲಾಗದು ಭವ್ಯಜೀವನೇ ॥
ಇಂದ್ರಾದಿಭಿಃ ಕ್ಷೀರಸಮುದ್ರತೋಯೈಃ ॥
ಸಂಸ್ನಾಪಿತೋ ಮೇರುಗಿರೌ ಜಿನೇಂದ್ರಃ ॥
ಯಃ ಕಾಮಜೇತಾ ಜನಸೌಖ್ಯಕಾರೀ ।
ಸಂಶುದ್ಧಭಾವಾದಜಿತಂ ನಮಾಮಿ ॥

Colophon:

ಇದು ಜಿನಶಾಸನ ಪ್ರಭಾಸನ ಶೀಲೋದಿತ ಬಂಧುವರ್ಮ ನಿರ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್ ಅಧ್ರುವಾಭಿಧಾನಂ ಪ್ರಥಮಾಧಿಕಾರಂ ಸಮಾಪ್ತಂ.

ಧ್ಯಾನಪ್ರಬಂಧಂ ಪ್ರಭವೇನ ಯೇನ ।
ನಿಹತ್ಯ ಕರ್ಮಪ್ರಕೃತೀ ಸ್ಸಮಸ್ತಾಃ ॥
ಮುಕ್ತಿ ಸ್ವರೂಪಾಂ ಪದವೀಂ ಪ್ರಪೇದೆ ।
ತಂ ಶಾಂಭವಂ ನೌಮಿ ಮಹಾನುರಾಗಾತ್ ॥

End:

ಎಲೆ ಜೀವನೆ ! ಸಹಜ ಶಾರೀರ|ಮಾನಸಾಗಂತುಕದುಃಖಂಗಳೆಂಬ ನೆಗಳ್ವಿಂಡಿನಿಂ[ಯಿ](ದಿ)ಡಿಕಿಱಿದಿರ್ದ ಸಂಸಾರಮೆಂಬ ಕ್ಷಾರವಾರಿಧಿಯಂ ದಾಂಟುವಾಸನ್ನ ಭವ್ಯಜನಂಗಳ್ಗೆ ಅಧ್ರುವಾಶರಣಸಂಸಾರೈಕತ್ವಾನ್ಯತ್ವಾಶುಚಿತ್ವಾಸ್ರವಸಂವರನಿರ್ಜರಲೋಕಬೋಧಿದುರ್ಲಭ ಧರ್ಮಮೆ ಪ್ರಧಾನಮಪ್ಪ ಕರಣೋಪಾಯಮಾದ ಪಡಗೆಂದು ಕರಮರಿದಾತ್ತುರ್ದ ನೆಗಳ್ವರ್. ಕರ್ಮಂಗಳೆಂಬ ನೆಗಳ್ವಿಂಡಮಂ ನಿರ್ಮೂಲಂಗೆಯ್ದು ಸಂಸಾರ ಸಮುದ್ರಮಂ ದಾಂಟಿ ತದುತ್ತರತಟಸಮೀಪವರ್ತಿಯಾದ ನಿತ್ಯನಿರ್ಮಲ ನಿರಪಾನಂದ ನಿಜಾವಾಸಮಾದ ಕೈವಲ್ಯದೊಳ್ಕೂಡಿ ಸುಖಮಿರ್ಪರಿ.

ಚಂ ॥ ಪರಮಸುಖಂ ಮಲಕ್ಷಯದಿನುಗ್ರಮಲಕ್ಷಯಮಾತ್ಮಶುದ್ಧಿಯಿಂ ।
ನಿರುಪಮಿತಾತ್ಮಶುದ್ಧಿ ಸುಚರಿತ್ರದಿನಾಸುಚರಿತ್ರದೋಜೆ ಭಾ ॥
ಸುರತರಧರ್ಮದಿಂದೊಗೆದೊಡಾಗಳೆ ಧರ್ಮಮೆ ಮೂಲ ಮತ್ತಮಾ- (?) ।
ಚರಣೆಗಮಾತ್ಮಶುದ್ಧಿಗೆ ಮಲಕ್ಷಯಕಂ ವರ ಸೌಖ್ಯರಾಶಿಗಂ ॥
ಮ ॥ ವಿ ॥ ಮನುವಂಶೋತ್ತಮ ಬಂಧುವರ್ಮರಚಿತಂ ಶ್ರೀ ಜೀವಸಂಬೋಧನೋ ।
ನ್ನತನಾಮಪ್ರವಿರಾಜಿಯುಂ ನೆಗಳ್ದನುಪ್ರೇಕ್ಷಾದಿರಭ್ಯಾಕ್ತ್ಯ್ಯಪಾ (?)
ಶ್ರಿತಮಂ ಭಾವಿಸೆ ಧರ್ಮ ನಿಲ್ಗುಮದರಿಂದ ಪ್ತ್ಯಾಗಸಂಬಂಧನ ।
ಕ್ಷತಿಯಂ ಮಾಡಿಯೆ ಗೆಲ್ಲಮಂ ಪಡೆಯುವರ್ ಸಂಸಿದ್ಧಿಯಂ ಸಿದ್ಧಿಯಂ ॥

ಭವಾರ್ಣವೇ ಜಂತು ಸಮೂಹಮೇನ ।
ಮಾಕರ್ಷಯಾಮಾಸ ಹಿ ಧರ್ಮಪೋತಾತ್ ॥

ಮಜ್ಜಂತಮುದ್ದಿಶ್ಯ ಯಯೋವ ಸೋಪಿ ।
ತಂ ವೀರನಾಥಂ ಪ್ರಣಮಾಮಿ ಭಕ್ತ್ಯಾ ॥

Colophon :

ಇದು ಜಿನಶಾಸನ ಪ್ರಭಾಸನ ಶೀಲೋದಿತನಿಧಿತ (?) ಬಂಧುವರ್ಮ ನಿರ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್ ಧರ್ಮಾಭಿಧಾನಂ ದ್ವಾದಶಾಧಿಕಾರಂ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಅಕ್ಷರಗಳು ಚೆನ್ನಾಗಿವೆ. ಆದರೆ ಅಲ್ಲಲ್ಲಿ ತಪ್ಪುಗಳೂ ಇವೆ.

ಇದು ಚಂಪೂರೂಪವಾಗಿದೆ. ಇದರಲ್ಲಿ ಅಧ್ರುವಾಭಿಧಾನ (ಅಧ್ರುವಾನುಪ್ರೇಕ್ಷೆ) ಅಶರಣಾಭಿಧಾನ, ಸಂಸಾರಾಭಿಧಾನ, ಏಕತ್ವಾಭಿಧಾನ, ಅನ್ಯತ್ವಾಭಿಧಾನ, ಅಶುಚಿತ್ವಾಭಿಧಾನ, ಆಸ್ರವಾಭಿಧಾನ, ಸಂವರಾಭಿಧಾನ, ಲೋಕಾಭಿದಾನ, ನಿರ್ಜರಾಭಿಧಾನ, ಬೋಧಿದುರ್ಲಭಾಭಿಧಾನ, ಧರ್ಮಾಭಿಧಾನಗಳೆಂದು ಕ್ರಮವಾಗಿ ಹನ್ನೆರಡು ಅಧಿಕಾರಗಳಿವೆ. ಗ್ರಂಥಾದಿಯಲ್ಲಿ ಜಿನೇಶ, ಸಿದ್ಧ, ಆಚಾರ್ಯಾದಿಗಳು, ಸರಸ್ವತಿ ಇವರ ಸ್ತುತಿಯಿದೆ. ಇದರಲ್ಲಿ ಜೀವನನ್ನು ಸಂಬೋಧಿಸಿ ಜೈನಮತ ತತ್ವಗಳನ್ನು ಹೇಳಿದೆ. ಕವಿ ಬಂಧುವರ್ಮ. ಈತನು ವೈಶ್ಯಜಾತಿಯವನೆಂದೂ, ಸು. ಕ್ರಿ. ಶ. ೧೨೦೦ ರಲ್ಲಿದ್ದಿರಬಹುದೆಂದೂ ಕವಿಚರಿತ್ರೆ ೧ ನೆಯ ಸಂಪುಟದಲ್ಲಿ ಬರೆದಿದೆ. ‘ ನುತವೈಶ್ಯೋತ್ತಮನೆಂಬುದಕ್ಕೆ ಬದಲಾಗಿ ಈ ಪ್ರತಿಯ ಕೊನೆಯಲ್ಲಿರುವ ಪದ್ಯದಲ್ಲಿ ‘ ಮನುವಂಶೋತ್ತಮ’ನೆಂದು ತಪ್ಪು ಬರೆದಿರಬೇಕು. ಚತುರ್ವಿಂಶತಿ ತೀರ್ಥಂಕರಸ್ತುತಿರೂಪವಾದ ೨೪ ಸಂಸ್ಕೃತ ಶ್ಲೋಕಗಳು, ಪ್ರತಿಯೊಂದು ಅಧಿಕಾರದ ಆದ್ಯಂತಗಳಲ್ಲಿ ಕ್ರಮವಾಗಿ ಒಂದೊಂದಿದೆ. ಈ ಗ್ರಂಥದಿಂದ ಮತ್ತೇನೂ ಹೆಚ್ಚು ತಿಳಿದುಬರುವುದಿಲ್ಲ. ಪುಸ್ತಕಾಂತ್ಯದಲ್ಲಿ ‘ ಸ್ವಸ್ತಿ ಶ್ರೀಶಕವರ್ಷಂ ೧೭೭೪ ನೆಯ ಪರೀಧಾವಿ ಸಂವತ್ಸರದ ಅಧಿಕ ಭಾದ್ರಪದ ಶುದ್ಧ ೧೫ ಯಲ್ಲು ಮಲೆಯೂರ ದೇವಚಂದ್ರಯ್ಯನವರ ಮಗ ಪುಟ್ಟಯ್ಯನು ಬರೆದ ಜೀವಸಂಬೋಧನಾ ಗ್ರಂಥಾವತಾರದೊಳ್ ದ್ವಾದಶಾಧಿಕಾರ ಸಂಪೂರ್ಣ ಜಯಮಂಗಳ ಮಹಾಶ್ರೀ. ಕನಕಗಿರಿ ವಿಜಯಪಾರ್ಶ್ವನಾಥಾಯ ನಮಃ, ಉದ್ಯೋಗಪುರದ ಚಂದ್ರಪ್ರಭ ಜಿನೇಂದ್ರಾಯ ನಮಃ ” ಎಂದಿದೆ.

No. 346. ಜೈನಮತಗ್ರಂಥ- JAINAMATAGRANTHA.

Substance, paper. Size, 12½ × 8½ inches. Pages, 53. Lines, 22 on a page. Character, Kanarese. Condition, much injured. Appearance, old.

Begins on page 19. The other works herein are :—(1) Jumālābad kyfiat I. (2) Kings of Kārkaḷa (Kyfiat) 10. (3) Kyfiat of chauṭarasa 70. (4) Kyfiat of Ajilas 112.

Complete.

Describes the Jain customs and gives on account of the twenty-four Tirthankaras and the Jain kings.

Beginning :

ಕಂ ॥ ಎನಿಬರ್ ಜನರಿಂ ಚಕ್ರಿಗ ।
ಳೆನಿಬರ್ ಬಲದೇವರೆನಿಬರಚ್ಯುತರುಂ ತಾ ॥
ವೆನಿಬರ್ ವೃಷಭೇಶ್ವರ ಬೆಸ ।
ನೆನಿಬರ್ ಪ್ರತಿವಾಸುದೇವರವಸರ್ಪಿಣಿಯೊಳ್ ॥

ದಶ ಕೋಟಾ ಕೋಟಿಸಾಗರ ಅಪ್ರಮಿತಉತ್ಸರ್ಪಿಣಿ ಅವಸರ್ಪಿಣಿ ಕಾಲಂಗಳು. ಅವಸರ್ಪಿಣಿಗೆ ಕಾಲಂಗಳು ಆರು.

* * * *

ಭೋಗ ಭೂಮಿಜರಲ್ಲಿ ಜನಿಸಿದ ಮರುದೇವಿಯಮ್ಮನ ಗರ್ಭದಲ್ಲಿ ಈ ನಾಭಿರಾಜನಿಂದ ಕಲ್ಯಾಣಪುರಸ್ಸರವಾಗಿ ಹುಟ್ಟಿದ ಬಾಲಕನನ್ನು, ದೇವೇಂದ್ರನು ಬಂದು ಸಾಷ್ಟಾಂಗಪ್ರಣೀತನಾಗಿ, ಐರಾವತವೆಂಬ ಗಜಸ್ಕಂಧಾರೂಢನ ಮಾಡಿ ಶತೇಂದ್ರರ! ಕೂಡಿಕೊಂಡು ಮಹಾಮೇರು ಪರ್ವತಕ್ಕೆ ಕೊಂಡು ಹೋಗಿ ಪಾಂಡುರ ಶಿಲೆಯಲ್ಲಿ ಸ್ಥಾಪನೆ ಮಾಡಿ ಕ್ಷೀರಸಮುದ್ರದ ಜಲವನ್ನು ತಂದು ಅಭಿಷೇಕವನ್ನು ಸಾವಿರ[ದ ಎ](ದೆ)ಂಟು ಕಲಶದಿಂದ ಮಾಡಿ ಅಷ್ಟವಿಧಾರ್ಚನೆ ಪೂಜೆ ಮಾಡಿ ವೃಷಭನಾಥಾದಿ ಅಷ್ಟೋತ್ತರ ಸಹಸ್ರನಾಮಧೇಯದಿಂದ ಸ್ತೋತ್ರಮಾಡಿ ಆನಂದ ನರ್ತನವಾಗಿ ಪುನಃ ಅಯೋಧ್ಯಾಪಟ್ಟಣಕ್ಕೆ ತಂದು ನಾಭಿರಾಜ ಮರುದೇವಿಯಮ್ಮನವರ ವಶಕ್ಕೊಪ್ಪಿಸಿ ದೇವ ಬಾಲಕರನಿಲಿಸಿ ಹೋದ ಮೇಲೆ-ಎಂಬತ್ತುನಾಲ್ಕು ಲಕ್ಷ ಪೂರ್ವ ಪರಮಾಯುಷ್ಯನಾಗಿ ಪಂಚ ಶತಧನುರುತ್ಸೇಧ ಸುವರ್ಣವರ್ಣ ದಿವ್ಯದೇಹದಲ್ಲಿ ಇಪ್ಪತ್ತೊಂದು ಲಕ್ಷ ಪೂರ್ವ ಕುಮಾರ ಕಾಲದಲ್ಲಿ ಇದ್ದು ಪುನಃ ದೇವೇಂದ್ರನು ಯಶಸ್ವತಿ ಸುನಂದಾದೇವಿಯೆಂಬ ರಾಜಕುಮಾರ್ತಿಯರನ್ನು ತಂದು ವಿಧಿಪೂರ್ವಕವಾಗಿ ವಿವಾಹ ಕ್ರಿಯೆಯನ್ನು ಮಾಡಿದನು.

* * * *

ವರ್ಧಮಾನ ಭಟ್ಟಾರಕರು ಹನ್ನೆರಡು ವರ್ಷಂ ಛದ್ಮಸ್ಥ ಕಾಲಂಪೋಗೆ ಜೃಂಭಿಕ ಗ್ರಾಮದ ಸಮೀಪದ ಋಜುಗತಿಯೆಂಬ ತೊರೆಯ ತಡಿಯ ಮನೋಹರೋದ್ಯಾನದ ಮಣಿಶಿಲಾತಳದೊಳು ಷಷ್ಠೋಪವಾಸದಿಂ ಸಾಳಕ ದ್ರುಮದಡಿಯೊಳು ವೈಶಾಖ ಶು ೧೦ ಅಪರಾಹ್ಣದೊಳು ಚಂದ್ರ ಹಸ್ತೋತ್ತರ ಮಧ್ಯಮಾಶ್ರಿತನಾಗೆ ಕೇವಲ ಜ್ಞಾನೋತ್ಪತ್ತಿಯಪ್ಪುದುಂ ತತ್ಕಲ್ಯಾಣಪೂಜಾ ಪೂರ್ವಕಂ ದೇವೇಂದ್ರನಿಂ ಅಷ್ಟೋತ್ತರ ಸಹಸ್ರನಾಮದಿಂ ಸ್ತುತನಾಗಿ ಸಮವಸರಣದಿಂ ಹನ್ನೆರಡು ವರ್ಷಂ ಐವತ್ತಾರು ದೇಶಮಂ ವಿಹರಿಸಿ ಧರ್ಮೋಪದೇಶಮಂ ಮಾಡಿ ಪಾವಾಪುರದ (ಪಂಪಾಪುರದ ?) ಉದ್ಯಾನವನಕ್ಕೆ ಬಂದು ಸಮವಸರಣಮಂ ವಿಸರ್ಜಿಸಿ ಪರಮ ಶುಕ್ಲಧ್ಯಾನದಿಂ ಸಕಲ ಕರ್ಮ ನಿರ್ಮೂಲಗೆಯ್ದು ವರ್ಧಮಾನ ಭಟ್ಟಾರಕರು ಮೋಕ್ಷಲಕ್ಷ್ಮೀ ವಲ್ಲಭರಾದರು.

ಜೈನರ ಜಾತಿಯಲ್ಲಿ ಬ್ರಹ್ಮ ಕ್ಷತ್ರ್ಯ ವೈಶ್ಯ ಶೂದ್ರರೆಂದು ನಾಲ್ಕು ವರ್ಣ(ಂಗಳು). ಇದರಲ್ಲಿ ಬ್ರಹ್ಮವರ್ಣದಲ್ಲಿ ಗರ್ಭಾನ್ವಯಮಾಡಿ ಷೋಡಶ ಕ್ರಿಯೆ, ಯಜನ ಯಾಜನಾದಿ ಷಟ್ಕ್ರಿಯೆ. ಕ್ಷತ್ರಿಯರಲ್ಲಿ ದುಷ್ಟನಿಗ್ರಹ ಶಿಷ್ಟಪರಿಪಾಲನಾದಿ ಕ್ರಿಯಗಳು. ವೈಶ್ಯರಲ್ಲಿ ದೇವಪೂಜೆ ಗುರುವಂದನೆ ಸ್ವಾಧ್ಯಾಯ ಸಂಯಮ ತಪಸ್ಸು ದಾನ ಇತ್ಯಾದಿ ಷಟ್ಕ್ರಿಯೆ. ಶೂದ್ರರಲ್ಲಿ ಕೃಷ್ಯಾದ್ಯಾರಂಭ ಶುಶ್ರೂಷಾದಿಗಳು.

End :

೬೪. ಧರ್ಮರಾಯ, ೬೫ ಶ್ರೇಣಿಕ ಮಹಾರಾಯ, ೬೬ ಜಿನದತ್ತರಾಯ, ೬೬ ಪಾಂಡಿರಾಜ, ೬೮ ಭೂತಳ ಪಾಂಡಿರಾಯ. ಭೂತಳ ಪಾಂಡಿರಾಜನ ಕಾಲಪರ್ಯಂತರ ಜೈನ ಅರಸುಳ ಆಳಕೆಯಿತ್ತು. ಆಮೇಲೆ ಜೈನ ಅರಸುಗಳು ಆಳುವುದು ನಿಂತಿತು.

(ಸಂಪೂರ್ಣಂ.)

(ವಿ-ವಿ.)—

ಇದು ಗದ್ಯ ರೂಪವಾಗಿದೆ ಇದರಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರ ಚರಿತ್ರೆಯೂ ಜೈನರಜಾತಿಕಟ್ಟಲೆಯೂ ಜೈನ ಅರಸರ ವಂಶಾವಳಿ (ಹೆಸರುಮಾತ್ರ)ಯೂ ಉಕ್ತವಾಗಿವೆ. ಕವಿ ಮುಂತಾದ ವಿಷಯಗಳು ಗೊತ್ತಾಗುವುದಿಲ್ಲ. ಈ ಗ್ರಂಥದೊಡನೆ ಈ ಪ್ರತಿಯಲ್ಲಿ ಜಮಾಲಾಬಾದ್ ಕೈಫಿಯತ್, ಕಾರ್ಕಳದ ಅರಸರು (ಕೈಫಿಯತ್) ಚೌಟರಸರ ಕೈಫಿಯತ್, ಅಜಿಲರ ಕೈಫಿಯತ್ ಎಂಬಿವೂ ಇವೆ.

No. 347. ಜೈನಮತಗ್ರಂಥ.
JAINAMATAGRANTHA

Substance, paper. Size, 10⅜ × 9½ inches. Pages, 58 Lines, 20 on a page. Character, Kanarese. Condition, good. Appearance, new.

Begins on page 17. The other works herein are :—(1) Jumālābād kyfiat I. (2) Kings of Karkaḷa (kyfiat) 8. (3) Kings of four Yugas 75. (4) Kyfiat of Cauṭarasas 79. (5) Kyfiat of Ajilas 113

Complete.

Same work as the above.

(ವಿ-ವಿ.)—

ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಆದ ಕಾರಣ ಇದರ ಸಂಬಂಧವಾದ ವಿಷಯಕ್ಕಾಗಿ ಹಿಂದಿನ ನಂಬರನ್ನು ನೋಡಿ ತಿಳಿಯುವುದು.

No. 348. ತ್ರಿಪುರದಹನ ಸಾಂಗತ್ಯ.
TRIPURADAHANA SĀNGATYA.

Substance, palm-leaf. Size, 14 × 1⅝ inches. Pages, 34 Lines, 7 on a page. Character, Kanarese. Condition, much injured. Appearance, old.

Begins on fol. 1a of the MS described under No. 328 ante.

Complete in 282 stanzas.

An allegorical work in Sangatya metre, explaining how according to Jain philolosophy one can attain salvation by conquering the three stages of life viz. birth, old age and death, described as 'Tripuras' or "Three Towns."

The author is Māyaṇa, a vaisya by caste and a disciple of Bhānumuni. For other particulars see extracts given below.

Beginning :

ಶ್ರೀಸುರ ನರ ಶುರಗರು . ರೆ ಪ್ರೊ . . ।
ದೀಶನ ಪದ ಪದ್ಮವನು ॥
ವ್ಯಾಸದ ಭರಿ . . . . ?
. . . . ದು ॥

ಪಾಪ ಪಂಕಜವನೆಲ್ಲವ ಕೊರಗಿಸಿ ಬಹು ।
ರೂಪಿನ ಜೀವ ಕೈರವದ ॥
ತಾಪವಳಿದು ಪಾಲಿಪ ಚಂದ್ರನಾ [ದಿ] (ಥ)ನ ।
ಶ್ರೀಪಾದಗಳ . . . . .

*　　　*　　　*

ಆವುದು ತ್ರಿಪುರನಾ ಪುರವನು ಸುಟ್ಟ ।
ದೇವನದಾವನೆಂಬುದನು ॥
ತಾವಱಿಯದೆ ತಮ್ಮ ಮನಕೆ ಬಂದಂದದೆ ।
. . . . . . ॥
(ಮೇದಿನಿ ಯಾದುದು ರಥ) ಚಂದ್ರ ಸೂರಿಯು ।
ರಾದರುಗಡ ! ಗಾಲಿಗಳು ॥
ವೇದ ನಾಲ್ಕು ಹಯುವಾದುಪೆಂಬೀ ಮಾತು ।
ಸಾದರವೆ ನೋಱ್ಪರಿಗೆ ॥
ಕ್ಷೀರವಾರಿಧಿ . . . .
. . . . ಗಳು ॥
ಭೂರಿ . ತ್ರಗೆಯಾದುವೆಂಬೀ ಮಾತನು ।
ಸೇರುವೆಯೆಂದೆನಬಹುದೆ ! ॥
ಮಂದರಗಿರಿಯಾದುದು ಗಡ ! ಧನು ! ಧರ ।
ಣೀಂದ್ರ . . . . . ॥
. . . . ಣವೆಂಬುದು ।
ಸಂದೇಹವೇನಲ್ಲದಿಹುದೆ ! ॥
ಸರಸಿಜಭವ ಸಾರಥಿಯಾದ ಧರೆಯೆಂಬ ।
ವರರಥವನು ಮೇಘ ತಾಗಿ ॥
ಸರಿಸವ ಮಾಡಿ ನ . . . . ।
. . . . . . ಚ್ಚುವರು ॥
ಲೋಕವೀರೇಳಕೆ ನೆಱೆ ಬಲ್ಲಿದನು ಪಿ ।
ನಾಕಿಯೆಂಬರು ಕಥೆಯೊಳಗೆ ॥
ನಾಕಿಗಳನು ಕೂಡಿ ತ್ರಿಪುರಕೆ ನಡೆದೀ ।
ಕಾಕುಮಾತ . . . . ॥

*　　　*　　　*

ಪದಿನಾಲ್ಕು ಭುವನವೆಲ್ಲವು ಪುರುಷೋತ್ತಮ ।
ನುದರದೊಳಿರುತಿರ್ದ ತಾನು ॥
ಅಧಟ ರಕ್ಕಸನ ಮೇಲಿರದೆ ಸಂಗ್ರಾಮವ ।
ನೊದವಿಸಿದುದು ಚಿತ್ರಮಲ್ತೆ ॥
ಈ ತೆಱದಲಿ ಮದನಾರಿಶಯನೊಳು ತಿ । (?)
ಖ್ಯಾತಿವಡೆದ ತ್ರಿಪುರವನು ॥

ಜಾತರೂಪವ ತಳೆದಾದಿ ರಸುಟ್ಟ । (?)
ಕೌತುಕಮನು ಪೇಳುವೆನು ॥

ಜನನ ಜರಾಮರಣಗಳೆಂಬ ಪೆಸರಿಂದ ।
ಘನತರವಹ ಮೂರು ಪುರವು ॥

ಅನಿಮಿಷ ನರನಾಗಲೋಕಕಚ್ಚರಿಯಾಗಿ ।
ನೆನಹಿಗೆ ನಿಲುಕದಂತಿಹುದು ॥
ಇಂತಪ್ಪ ಪುರವರದನುವ ನು (ಸು) ರುವ್ರೊಡೆ ।
ನಂತಗಲ್ಲದೆ ಕವಿರಾಜ ॥
ಸಂತತಿಗಳಿಗೆ ಗೋಚರವಲ್ಲವವನಿಂ ।
ಪಂತಿಂತೆಂದೆನಬಹುದೆ ॥
ಅವಿನಯವೆನಿಪ ವನವು ಬಳಸಿಹುದಾ ।
ದಿವಿ ಜಾರಿಯು ಪುರವರವ ॥
ಹವಣಿಸಬಾರದನಂತಾನುಬಂಧಿಯೆ ।
. . ಕ ಮಲಷಂಡೆಗಳು ॥

ಜ್ಞಾನಾವರಣೀಯವು ಮೊದಲಾದೆಂಟು ।
ಭೂನುತ ಮರ್ಗವರ್ಗಗಳು ॥
ಏನೆಂಬೆನಾಪುರದಷ್ಟದಿಕ್ಕಿನೊ ।
ಳಾ ನಭವನು ಮುಟ್ಟುತಿಹುದು ॥

* * * *

ಚೆನ್ನದ ಕಳಶ ಕನ್ನಡಿ ವ್ಯಜನವನ ।
ತ್ರ್ಯನ್ನತ ಛತ್ರ ಚಾಮರವ ॥
ಚೆನ್ನಾಗಿ ಪಿಡಿದೋಲೈಸುವರಾಸುರ ।
ಕನ್ನೆಯರತಿರಾಗದಲಿ ॥

ಗರುಡ ಗಂಧರ್ವರು ಕಿನ್ನರರು ಕಿಂ ।
ಪುರುಷರು ಯಕ್ಷ ರಾಕ್ಷಸರು ॥
ನೆರೆದು ನಾನಾ ಪರಿಯೊಳು ಕೊಂಡಾಡುತ ।
ಲಿರಲಾ ಸಮಯದೊಳಿತ್ತ ॥

ಬಲ್ಲಿದ ಮೋಹಾಸುರನು ಮೂಜಗದೊಳ ।
ಗೆಲ್ಲರ ಸದೆಬಡಿವುದನು ॥
ಎಲ್ಲ ಮುಖದಿಂದ ಬಂದಮರರು ಪಾಣಿ ।
ಪಲ್ಲವಗಳ ನೊಸಲಿಗೆ ಮುಗಿದು ॥

ಭಾಳದೊಳಿರಿಸೆ ಭಕ್ತಿಯ ಭರದಿಂದಲೆ ।
ಬೀಳುತಲವನಿಯಲವರು ॥
ಪೇಳಿದರಾದೀಶ್ವರನೊಳು ಖಳನದೊಂ ।
ದೂಳಿಗವನು ತಮತಮಗೆ ॥

ಬಟ್ಟಿವ್ರು ನಿಜಚರಣಾರವಿಂದವ ಮನ ।
ಮುಟ್ಟಿ ಪೂಜಿಪ ಮಹಿಮೆಯನು ॥
ಕೊಟ್ಟಿವ್ರು ಸರ್ವಸ್ವವನವನಿಗೆ .
ಕಟ್ಟುವ . ದಕರಣಗಳು ॥

* * * *

ಈ ಪರಿಯೊಳು ತ್ರಿಪುರವ ಸುಟ್ಟು ತ್ರಿಜಗಕೆ ।
ತಾ ಪತಿಯಾಗಿ ಮೋಕ್ಷವನು ॥
ಆ ಪುರುಪರಮೇಶ್ವರ ಪಡೆದಖಿಲ ಸು ।
ಖಾಪದಪತಿಯೊಳೊಂದಿದನು ॥
ಆದಿಯೊಳಾದೀಶ್ವರ ತ್ರಿಪುರವ ಸುಟ್ಟ ।
ಭೇದಮನುಱಿತೆ ಕೇಳ್ವವರ ॥
ಎಯ್ದಿದ ಪಾತಕವಿರದು ಮತ್ತವರುಗ ।
ಳೆಯ್ದುವರೂರ್ಧ್ವಗತಿಯನು ॥
ಈ ಚರಿತವನು ಪೇಳಿದನಾವನೆಂದೆನೆ ।
ಭೂಚಕ್ರದೊಳು ಬೆಸಗೊಳಲು ॥
ವಾಚಿಸುವೆನು ನಾನದನೊಲಿದಖಿಳಕ ।
ಳಾಚದುರರು ಕೇಳುವುದು ॥
ಚಪ್ಪನ್ನ ದೇಶಗಳೆಲ್ಲಕೆ ತಾ ಮಣಿ ।
ದರ್ಪಣವೆನಲತಿ ಬೆಡಗಿಂ ॥
ಇಪ್ಪುದು ಹೊಯ್ಸಳ ನಾಡದಱೊಳಗೆ ಮ
ತ್ತೊಪ್ಪುವುದತಿಶಯದಿಂದ ॥
ಅದಱ ಪೆಸರು ನಯನಾ ಪುರವೆಂದತಿ ।
ವಿದಿತವಾಗಿಹುದಿಳೆಯೊಳಗೆ ॥
ಅದನಭಿವರ್ಣಿಪ ನಾವನೊ ಚೆಲುವಿನ ।
ಸದನವು ತಾನಾಗಿಹುದು ॥
ದಕ್ಷಿಣದೇಶದೊಳಾವನಾಗಲಿ ತನ್ನ ।
ನೀಕ್ಷಿಸಿದವರ ಪಾತಕಮಂ ॥
ತಕ್ಷಣದೊಳು ಕೆಡಿಸುವ ಕಾವೇರಿಯು ।
ಪಕ್ಷದೊಳಗೆ ರಾಜಿಪುದು ॥

End :

ಚಂದ್ರಾದಿತ್ಯರುಗಳ ತನಿವೆಳಗನು ।
ನಿಂದಿಸುತ್ತಿಹ ದಿವ್ಯ ದೇಹ ॥
ದಿಂದಾ ಪುರದೆ ಭವ್ಯರ ಭಾಗ್ಯವೆನೆ ನೇಮಿ ।
ಚಂದ್ರಜಿನೇಂದ್ರ ನೊಪ್ಪಿಹನು ॥
ಈ ಪುರದೊಳಗೊಪ್ಪುವನು ತಳೆದನು ನಯ ।
ನಾಪುರ ದೊಳಗೊರ್ವ ಪರದ ॥

ರೂಪಕಂದರ್ಪನು ನಿಜಕುಲ ಭವನಕೆ ।
ದೀಪನು ತಾನಾಗಿಹನು ॥

ಜಿನಪದಭಕ್ತನು ಘನಪುಣ್ಯಭಾಜನು ।
ಅನುಪಮ ಶೀಲಾನ್ವಿತನು ॥
ವಿನಯಾಭರಣಭೂಷಿತನು ಮಾಯಣ ಸೆಟ್ಟಿ ।
ಯನುಪಮ ಶೀಲಾನ್ವಿತನು ॥
ತಂದೆ ತಾಯ್ಗಳು ಬಂಧುಗಳಾನಂದದಿ ।
ಯಂದೀತ ಮಾಯಣ ಸೆಟ್ಟಿ ॥
ಯೆಂದು ಕರೆಯಲು ಪೆಸರೀ ಧರೆಯೊಳು ।
ಸಂದುದು ನಾಣೆಯವಾಗಿ ॥
ವಸುಧೆಯೊಳುಳ್ಳ ಭವ್ಯರುಗಳಿಗೆಲ್ಲಕೆ ।
ಶಿಶು ತಾನಾದುದಂದ ॥
ಉಸುರುವ ಪದ ಪದ್ಯದೊಳು ತನ್ನ ಪೆಸರನು ।
ಶಿಶುಮಾಯಣ ನೆಂದಿಡುವನು ॥
ಇಂತಪ್ಪ ಶಿಶುಮಾಯಣ ಪೇಳ್ದ ತ್ರಿಪು ।
ರಾಂತಕ ಚರಿತೆ ಯಿಳೆಯೊಳು ॥
ಸಂತತ ಸುಖಮಿರಲಾ ಶಶಿ ರವಿ ಬಿಂಬ ।
ಸಂತತಿಗಳು ರಾಜಿಪನ್ನ ॥
ಅಭಯರಾಗೀ ವಿಭುಗಳು ಸರ್ವ ಧಾರ್ಮಿಕ ।
ಸಭೆಯಲ್ಲವು ಪ್ರಭುವಾಗಿ ॥
ಅಭಿಮತ ಸುಖದೊಡಗೂಡಿರಲೀ ಕೃತಿ ।
ತ್ರಿಭುವನದೊಳಗೊಪ್ಪುತಿರಲಿ ॥
ಶಕ ವರ್ಷದ ಸಾವಿರದ ನೂಱಱತೊಳು ।
ತ್ಸಕಲವಾದಾಱು ವತ್ಸರದ ॥
ಪ್ರಕಟಿತ ಪುತ್ರ ವರುಷ ಮಾಘ ಶುದ್ಧದಿ ।
ಯಕಲಂಕ ಪಾಡ್ಯದೊಳಾಯ್ತು ॥

Colophon :

ತ್ರಿಪುರ ದಹನ ಸಾಂಗತ್ಯ ಸಮಾಪ್ತಂ.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲ. ಲಿಪಿ ಸಾಮಾನ್ಯ. ೧, ೨, ೪ ನೆಯ ಓಲೆಗಳು ಮುರಿದು ಹೋಗಿವೆ. ೧೧ ನೆಯ ಓಲೆಯಿಲ್ಲ. ಇದರೊಡನೆ ಗುರುದತ್ತ ಚರಿತ್ರೆ, ಭರತೇಶ್ವರ ಚರಿತ್ರೆಗಳಿವೆ.

ಇದು ಸಾಂಗತ್ಯರೂಪವಾದುದು. ಈ ಕಥೆ ಪುರಾಣದಲ್ಲಿ ಹೇಳುವ ತ್ರಿಪುರದಹನವಲ್ಲ. ಜೀವನು ಜನನ ಜರಾಮರಣಗಳೆಂಬ ಮೂರು ಪುರ (ತ್ರಿಪುರ)ವನ್ನು ದಹಿಸು ಎಂದರೆ ಜನನಾದಿಗಳಿಂದ ಮುಕ್ತನಾಗಿ ಮೋಕ್ಷವನ್ನು ಪಡೆಯುವಿಕೆಯು ಜೈನಮತಾನುಸಾರವಾಗಿಯೂ, ಕಥಾ

ರೂಪವಾಗಿಯೂ ಹೇಳದೆ. ಕೃಷ್ಣ ಮಿಶ್ರವಿರಚಿತ ಪ್ರಬೋಧ ಚಂದ್ರೋದಯದಲ್ಲಿ ಮೋಹಾದಿಗಳನ್ನು ವ್ಯಕ್ತಿಗಳಾಗಿ ಕಲ್ಪಿಸಿ ಕಷ್ಟವಾದ ವೇದಾಂತ ವಿಷಯವನ್ನು ಸುಲಭವಾಗಿ ನಾಟಕ ರೂಪದಲ್ಲಿ ತಿಳಯಿಸುವ ಹಾಗೆ ಇದರಲ್ಲಿ ಕಥಾರೂಪದಲ್ಲಿ ಹೇಳುತ್ತಾನೆ. ಕವಿಯು ವಿಷಯವಾಗಿ ಈ ಗ್ರಂಥದಲ್ಲಿ—‘ಚಪ್ಪನ್ನ ದೇಶದಲ್ಲಿ ಹೊಯ್ಸಳನಾಡು. ಅದರಲ್ಲಿ ನಯನಾಪುರವೆಂಬ ಊರು. ಅಲ್ಲಿಗೆ ಸಮೀಪದಲ್ಲಿ ಪಾತಕವನ್ನು ಪರಿಹಾರಮಾಡುವ ಕಾವೇರೀನದಿಯಿದೆ. ನಯನಾ ಪುರದಲ್ಲಿ ನೇಮಿಜಿನೇಶನ ದೇವಾಲಯವಿದೆ. ಮತ್ತು ಆ ಊರಿನಲ್ಲಿ ಮಾಯಣ್ಣ ಸೆಟ್ಟಿಯೆಂಬ ಪರದ (ವೈಶ್ಯ) ನಿದ್ದನು. ಈತನೇ ಈ ಗ್ರಂಥಕರ್ತನು. ‘ವಸುಧೆಯೊಳುಳ್ಳ ಭವ್ಯರುಗಳೆಲ್ಲಕೆ ಶಿಶು ತಾನಾದುದರಿಂದ ಉಸುರುವ ಪದಪದ್ಯದೊಳು ತನ್ನ ಪೆಸರನು ಶಿಶುಮಾಯಣನೆಂದಿಡುವೆನು’ ಎಂದು ಹೇಳಿದ್ದಾನೆ. ಈತನ ಗುರು ಭಾನುಮುನಿ. ‘ಎನ್ನನುದ್ಧರಿಸಿ ವ್ಯ . . . . ಸನ್ನು ತವೆನೆ ಕೆಡ. ದ ಭಾನುಮುನಿಪನ ಚೆನ್ನಡಿಗಳಿಗೆರಗುವೆನು. ಎಂದು ಹೇಳಿಕೊಂಡಿದ್ದಾನೆ. ಗ್ರಂಥಾದಿಯಲ್ಲಿ ಚಂದ್ರನಾಥ, ಶಾಂತಜಿನ, ನೇಮೀಶ್ವರ, ವರ್ಧಮಾನ, ಸಿದ್ಧಾದಿಗಳು, ಭಾನುಮುನಿ, ಅರುಹನ ಮತದಾಗಮವನ್ನು ಹೇಳುವ ವರಕವಿರಾಜರು ಮುಂತಾದವರನ್ನು ನುತಿಸಿ, ‘ಇಷ್ಟದೇವತೆಗಳನ್ನು ನಾನಾಪರಿಯಲ್ಲಿ ಬಲವಂದು ಪಾಪವಿಲ್ಲದೆ ತ್ರಿಪುರವ ಸುಟ್ಟುದೊಂದು ಮಹಾಪರಿಯನು ಪೇಳುವೆನು’ ಎಂದು ಬರೆಯುತ್ತಾನೆ. ‘ಶಕ ವರ್ಷದ ಸಾವಿರದ ನೂಱುತೊಳು ತ್ಸಕಲವಾದಾಱುವತ್ತುರದ ಪ್ರಕಟಿತ ಪುತ್ರವರುಷ ಮಾಘ ಶುದ್ಧದಿನಕಳಂಕ ಪಾಡ್ಯದೊಳಾಯ್ತು’ ಎಂದು ಹೇಳಿದ್ದಾನೆ. ‘ಉತ್ಸಕಲ’ ಎಂದರೆ ಅಸಂಪೂರ್ಣವಾದ ಎಂದು ಅರ್ಥ ಮಾಡಿದರೆ ಶಕ ೧೧೯೪ (ಕ್ರಿ.ಶ. ೧೧೭೨) ನೆಯದಾದ ಪುತ್ರ (ನಂದನ) ಸಂವತ್ಸರದಲ್ಲಿ ಈತನು ಈ ಗ್ರಂಥವನ್ನು ಬರೆದಿರಬೇಕು. ಆದರೆ ಕವಿಚರಿತ್ರೆಯಲ್ಲಿ ಈತನ ಕಾಲವು ‘೧೨೩೦ ?’ ಎಂದು ಬರೆದಿದೆ. ಅಂಜನಾ ಚರಿತ್ರೆಯಲ್ಲಿ ಈತನು ರನ್ನಹೊನ್ನ, ಜನ್ನ ಮುಂತಾದವರನ್ನು ಸ್ತುತಿಸಿದ್ದಾನೆ. ಆದ ಕಾರಣ ಈತನು ಜನ್ನನಿಗಿಂತ ಈಚಿನವನು ಎಂದರೆ ಕ್ರಿ.ಶ. ೧೨೭೫ ಕ್ಕಿಂತಲೂ ಈಚಿನವನೆಂದು ಕವಿಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಮ-ರಾ-ರಾ- ಎ. ವೆಂಕಟಸುಬ್ಬಯ್ಯ, ಎಮ್.ಎ., ಪಿ.ಎಚ್.ಡಿ., ಎಲ್.ಎಲ್.ಬಿ., ಯವರು ಕ್ರಿ.ಶ. ೧೩ ನೆಯ ಶತಮಾನದ ಮಧ್ಯಭಾಗದವನೆಂದು ಊಹಿಸುತ್ತಾರೆ. ಆದ ಕಾರಣ ಈ ಕವಿಯ ಜೀವಿತ ಕಾಲಕ್ಕಾಗಿ ‘ಕವಿಚರಿತ್ರೆ’ ಯ ೧ ನೆಯ ಸಂಪುಟದ ೨೮೧ ನೆಯ ಪುಟವನ್ನೂ, ೨ ನೆಯ ಸಂಪುಟದ L. xxiii ಪುಟವನ್ನೂ, ಕೆಲವು ‘ಕನ್ನಡ ಕವಿಗಳ ಜೀವನಕಾಲ ವಿಚಾರ’ ದ ೨೮೯ ನೆಯ ಪುಟವನ್ನೂ ನೋಡುವುದು.

No. 349. ತ್ರಿಪುರದಹನಸಾಂಗತ್ಯ-
TRIPURADAHANASĀNGATYA.

Substance, paper. Size, $10\frac{1}{2} \times 9\frac{1}{2}$ inches. Pages, 24. Lines, 20 on a page. Character, Kanarese. Condition, good. Appearance, new.

Begins on page 1 of the MS. described under No. 329 ante.

Complete.

Same work as the above.

For other particulars see under No. 348 ante.

(ವಿ-ವಿ.)—

ತ್ರಿಪುರದಹನ ಸಾಂಗತ್ಯ ಸಮಗ್ರ. ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯು. ಅಕ್ಷರಗಳು ಉತ್ತಮವಲ್ಲ. ತಪ್ಪುಗಳಿವೆ. ಗ್ರಂಥ ಪಾತ್ರವುಂಟು. ಕವಿ ಶಿಸುವಾಯಣ. ಹಿಂದೆ ವರ್ಣಿತವಾದ ಗ್ರಂಥವೇ ಸರಿ. ಉಳಿದ ವಿಷಯಗಳನ್ನು ೩೪೮ ನೆಯ ನಂಬರಿನಿಂದ, ನೋಡಿ, ತಿಳಿಯುವುದು.

No. 350. ತ್ರಿಲೋಕ ಶತಕ.

TRILŌKAŚATAKA.

Substance, palm-leaf. Size, $13\frac{5}{8} \times 1\frac{5}{16}$ inches. Pages, 21. Lines, 7 on a page. Character, Kanarese. Condition, injured. Appearance, old.

Begins on fol. 30*a*.

The other works herein are :—(1) Ratnākarādhīśvaraśataka I *a*. (2) Aparājiteśvaraśataka 17*a*.

Complete in 129 stanzas.

Gives a description of the world according to Jainism. The name of the author is Ratnakaravarni. His native place was Vēnupura. The work was written in the Śaka year 1479 corresponding to 1557 A.D.

Beginning :

ಕಂ॥ ಪೂರ್ವವಿದೇಹದೊಳಿಸಕಂ ।
ದೋರ್ವಂಗಪರಾಜಿತೇಶ್ವರಂಗೆನ್ನ ಮನಃ ।
ಪೂರ್ವಕದಿ ನಮಿಸಿ ಪೇಳ್ವೆಂ ।
ಪೂರ್ವಾಚಾರ್ಯಾನುಸುತದಿ ಲೋಕಸ್ಥಿತಿಯಂ ॥
ತ್ರೆಱವಾದ ಶಾಸ್ತ್ರದೊಳ್ಮ ।
ನ್ನಱಿಪಿದ ಲೋಕಸ್ವರೂಪಮಂ ನಾನೀಗಳ್ ॥
ಕಿಱಿದಱತೊಳ್ ಸೂಚಿಸುವೆನದ ।
ನಱಿಯಲ್ಬೇಕೆಂದು ಮಂದಮತಿಗಳ್ ಪಲಬರ್ ॥
ಕಡೆಯಿಲ್ಲದೆಸೆವ ಗಗನದ ॥
ನಡುವಿರ್ಕ್ಕುಂ ಮೂಱುಗಾಳಿಯಾ ಗಾಳಿಗಳಾ ॥
ಒಡಲೊಳ್ ಷಡ್ದ್ರವ್ಯಂ ತ ।
ಳ್ತಡಿದುದದೇ ಲೋಕಮದಱ ಬಾಹ್ಯಮಲೋಕಂ ॥

* * * *

ಆ ನರಕೋರ್ವರೆಯಿಂ ಮೇ ।
ಲೀ ನರಲೋಕಕ್ಕೆ ಕೆಳಗೆ ನಲ್ವಡುವಿರ್ಕ್ಕುಂ
ಶ್ರೀ ನಾಗಲೋಕವಂತದು ।
ತಾನಾಗಮದಲ್ಲಿ ಭವನ ಲೋಕಮುಮೆನಿಕುಂ ॥

ನೆರೆದೀಳ್ಕೋಟಿಯುಮೆಪ್ಪ ।
ತ್ತೆರಡೇ ಲಕ್ಕಂಗಳಕ್ಕುಮಾ ಭವನಂಗಳ್ ॥
ಅರುಹನಾಲಯಮುಮನಿತೇ । (?)
ಸುರರೆನಿಸುವರಲ್ಲಿ ಪುಟ್ಟಿದವರುಂ ಸುಖಿಗಳ್ ॥

(ಇದು ಭವನ ಲೋಕ ಸೂಚನೆ).

End :

ಪ್ರಣ[ಮ] (ವ) ಸ್ವರೂಪ[ತ್ರೈ] (ತೇ)ನಮ ।
ರಣದೂರ ನಮೋ ನಮೋ ನಮೋಸ್ತು ಸ್ವಾಹಾ ॥
ಗುಣಾಗುಣಿಯೋಗಾಯ ನಮೋ ।
ಮಣಿತ್ರಯ್ಯೈಕಾರ್ಥನೇ ಚಿದಂಬರಪುರುಷಾ ॥
ಸಿದ್ಧಾಯ ನಮಸ್ಸ್ವಾಹಾ ।
ಸಿದ್ಧಾಂತಾಮೃತ ಸಮುದ್ರ ಸಾರಾಯ ನಮಃ ।
ಸ್ಸಿದ್ಧ ಪರಮೇಷ್ಠಿನೇ ನಮ (?) ।
ಉದ್ಧೂತಮಲಾಯ ತೇ ನಿರಂಜನ ಸಿದ್ಧಾ ॥

॥ ಆಶೀರ್ವಾದ ಪದ್ಯಂ ॥

ಮ॥ವಿ॥ ಮಣಿಕ್ಯಲಂ ಗತಿಯಿಂದು ಶಾಲಿಶಕಕಾಲಂ ಸಂದಿರಲ್ ತಾಳವಾಂ ।
ಗಣದೊಳ್ವೇಣು ಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ ॥
ಕ್ಷಣ ತಾತ್ಪರ್ಯಮಿದೀ ತ್ರಿಲೋಕ ಶತಕಂ ತಾನೀ ಪಗಲ್ತೊಟ್ಟು ಮುಂ ।
ದಣ ವೀರಾಂಗದಯೋಗಿ ಮುಟ್ಟುತಿಳ್ಯೊಳ್ ಸಲ್ಲೀಲೆಯಿಂದೊಪ್ಪುಗುಂ ॥

(ಸಂಪೂರ್ಣಂ).

(ಎ.ಎ.)—

ಸಮಗ್ರ. ಶಿಥಿಲ. ಲಿಪಿ ಉತ್ತಮ. ಈ ಪ್ರತಿಯಲ್ಲಿ ೧೨೮ ಪದ್ಯಗಳಿವೆ. ಇದರೊಡನೆ ರತ್ನಾಕರಾಧೀಶ್ವರ ಶತಕ ಮತ್ತು ಅಪರಾಜಿತೇಶ್ವರ ಶತಕಗಳಿವೆ.

ಇದು ಕಂದ, ವೃತ್ತಗಳಲ್ಲಿ ಬರೆದಿದೆ. ಇದರಲ್ಲಿ ಜೈನಮತಾನುಸಾರವಾಗಿ ಪ್ರಪಂಚ ಸ್ಥಿತಿಯು ಹೇಳಿದೆ. ನರಕಲೋಕ, ಭವನಲೋಕ, ನರಲೋಕ, ವ್ಯತ್ಯಂತರಲೋಕ, ಜ್ಯೋತಿರ್ಲೋಕ, ಸ್ವರ್ಗಲೋಕ, ಕುಭೋಗ ಭೂಮಿ, ನಿಗೋದ, ಸಿದ್ಧಲೋಕ ಮುಂತಾದ ವರ್ಣನಾ ಭಾಗಗಳಿವೆ. ಗ್ರಂಥಾದಿಯಲ್ಲಿ ಅಪರಾಜಿತೇಶ್ವರ ಸ್ತುತಿಯಿದೆ. ಕವಿ ರತ್ನಾಕರವರ್ಣಿ ಈತನ ಸ್ಥಳವು ವೇಣುಪುರವೆಂದೂ, ಶಾ. ಶ. ೧೪೭೯ (1557 A.D.) ರಲ್ಲಿ ಈ ಗ್ರಂಥವನ್ನು ರಚಿಸಿದನೆಂದೂ ಗ್ರಂಥಾಂತ್ಯದ ಕೊನೆಯ ಪದ್ಯದಿಂದ ತಿಳಿದು ಬರುತ್ತದೆ. ಹೆಚ್ಚು ವಿಷಯಗಳಿಗಾಗಿ ಕರ್ಣಾಟಕ ಕವಿಚರಿತ್ರೆ ಮುಂತಾದುವನ್ನು ನೋಡಬಹುದು.

ಈ ಪುಸ್ತಕದ ಕೊನೆಯಲ್ಲಿ ' ರತ್ನಾಕರ ವರ್ಣಿನಾಮಕೃತ ಶತಕತ್ರಯಂ ವಾಚಿಸಿದ ವರ್ಗೆ ಆಯುರಾರೋಗ್ಯ ಯ್ಯೆಶ್ವರ್ಯ ವಿಶಾಲಮತಿ ಸಿದ್ಧಿಸುಗುಂ. ತಪ್ಪಿದ್ದೊಡೊಪ್ಪಗೊಂಡು ತಿದ್ದಿ ವಾಚಿಪುದು. ತಪ್ಪು ಬರೆ[ದಾಯ](ದನೆ)ಂದು ಬರೆದಾತನಂ ಬಯ್ಯಲಾಗದು ಸುಜನರ್. ರತ್ನಾಕರ ಶತಕ ತೃತೀಯ ಕ್ಯಂಜಯ ಮಂಗಳಮಹಾ ' ಎಂದಿದೆ.

No. 351. ತ್ರಿಲೋಕ ಶತಕ.

TRILŌKAŚATAKA.

Substance, Śrītala. Size, 7 13/16 × 2 1/8 inches. Pages, 19. Lines, 10 on a page. Character, Kanarese. Condition, slightly injured. Appearance, old.

Begins on fol. 1*a*.

The other work herein is :—(1) Sahasranāma 10*b* (in Sanskrit).

Complete in 127 stanzas.

Same work as the above. By Ratnākaravarṇi.

(ವಿ-ವಿ.)—

ಸಮಗ್ರ. ೧೨೭ ಪದ್ಯಗಳಿಗೆ ಪೂರ್ಣವಾಗಿದೆ. ಸ್ವಲ್ಪಮಟ್ಟಿಗೆ ಶಿಥಿಲ. ಲಿಪಿ ಚೆನ್ನಾಗಿದೆ. ಕೊನೆಯ ಒಂದು ಪಕ್ಕದಲ್ಲಿ ಸಹಸ್ರನಾಮವಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 352. ತ್ರಿಲೋಕ ಶತಕ.

TRILŌKAŚATAKA.

Substance, Śrītala. Size, 8 11/16 × 1 15/16 inches. Pages, 30. Lines, 6 on a page. Character, Kanarese. Condition, most injured. Appearance, old.

Begins on fol. 67. The other works herein are :—(1) Ratnākarādhīśvaraśataka 1*a*. (2) Aparājiteśvaraśataka 33*a*.

Incomplete. Contains 1 to 114 stanzas.

Same work as the above.

(ವಿ-ವಿ.)—

ಅಸಮಗ್ರ. ೧ ರಿಂದ ೧೧೪ ಪದ್ಯಗಳು ಮಾತ್ರ ಇವೆ. ಅತ್ಯಂತ ಶಿಥಿಲ. ಲಿಪಿ ಉತ್ತಮ. ಇದರೊಡನೆ ರತ್ನಾಕರಾಧೀಶ್ವರ ಶತಕ ಮತ್ತು ಅಪರಾಜಿತೇಶ್ವರ ಶತಕಗಳಿವೆ. ಅಲ್ಲದೆ ಈ ಶತಕಗಳ ಆದ್ಯಂತಗಳಲ್ಲಿ ಒಂದೊಂದು ಅಥವಾ ಎರಡೆರಡು ಓಲೆಗಳಲ್ಲಿ ಶ್ರೀರಾಮ, ಚಿಕ್ಕದೇವರಾಜ ಮುಂತಾದವರ ವಿಷಯವಾಗಿರುವ ಒಂದೆರಡು ಪದ್ಯಗಳು ಕಂಡು ಬರುತ್ತವೆ. ಇವುಗಳಾವುವೂ ಈ ಗ್ರಂಥಕ್ಕೆ ಸಂಬಂಧಪಟ್ಟುವಲ್ಲ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೩೫೦ ನೆಯ ನಂಬರಿನಲ್ಲಿ ನೋಡುವುದು.

ಈ ಶತಕದ ಹಿಂದಣ ಮತ್ತು ಮುಂದಣ ಓಲೆಗಳಲ್ಲಿ ಕೆಲವು ಪದ್ಯಗಳಿವೆ. ಅವನ್ನಿಲ್ಲಿ ಬರೆಯಲಾಗಿದೆ. ಮುಂದಣ ಓಲೆಗಳಲ್ಲಿ :—

' ರಮಂತೇ ಯೋಗಿನೋನಂತೇ ।
ಸತ್ಯಾನಂದ ಚಿದಾತ್ಮನಿ ॥
ಇತಿ ರಾಮಪದೇನಾಸೌ ।
ಪರಂ ಬ್ರಹ್ಮಾಭಿಧೀಯತೇ ॥

ಭವ ಭವಾರ್ಜಿತ ದುರಿತಕೋಟಿಯ ।
ತವಿಸುವಗ್ಗದ ನಾಮ ಸರಸಿಜ ।
ಭವ ಭವೇಂದ್ರರಿಗಮಲ ಪದವಿಯನೀವ ಗುಣನಾಮ ॥

ಶಿವನ ನಚ್ಚಿನ ನಾಮ ಗಿರಿಸಂ ।
ಭವೆಯ ನೇಮದ ನಾಮ ಸುರವರ ।
ಭುವನ ಪಾವನನಾಮ ಸಿತಾಪತಿಯ ಸಿರಿನಾಮ ॥

ಗಿರಿಜೆ ! ಕೇಳು ಸಹಸ್ರನಾಮದ ।
ಸರಿ ಕಣಾ ರಘುರಾಮಚಂದ್ರಮ ।
ಪರಮ ಮಂಗಳನಾಮ ನಿರುಪಮ ನಿಗಮವಿಶ್ರಾಮ ।

ನಿರುತ್ತರವಿದು ನಿಜವೆಂದು ಬಗೆ ನಿ ।
ರ್ಧರಿಸಿದೆವು ನಿಗಮಾರ್ಥದಲಿ ನಿನ ।
ಗುರುತರಾನುಗ್ರಹದ ಬೀಜಾಕ್ಷರವಿದೀಗೆಂದ ॥

ದೇವಿ ! ಕೇಳಾದಡೆ ಸಮಸ್ತ ।
ಸ್ಥಾವರದ ಜಂಗಮದ ಜಗತೀ ।
ಜೀವದಂತರ್ಯಾಮಿಯಹ ವಿಷ್ಣುವಿನ ಮಹಿಮೆಯನು ॥

ಆವನುಪಮಿಸಬಹುದು ಹೊಗ[ಳದು] (ಳಲು) ।
ಠಾವುಗಾಣವು ಶ್ರುತಿಗಳಮಮ ಮ ।
ಹಾ ವಿಭುವಿನ ಮಹತ್ವ ತತ್ವವನರಿವನಾರೆಂದ ॥

ಕಥಾ ಸರಣಿ ಸಮಾಪ್ತಂ.

ಮಿರುಪ ಕರ್ಣಾಟಕದ ಪೂರ್ವಿಕ ।
ರೊರೆದು ಪೇಳದ ಪ್ರಾಕೃತ ವ್ಯಾ ।
ಕರಣ ಭಾಷಾಮಂಜರಿಯೊಳತಿ ಶೋಧಕನು [ತಾನೆ] (ಯೆ)ನಿಸಿ ॥

ಬರೆದನಿದ ತೆರಕಾಂಬಿ ಪುರ ಭೂ ।
ಸುರರೊಳುತ್ತಮ ಗಿರ್ಯಮಾಂಬಾ ।
ವರತನುಜ ತಿಪ್ಪಣ್ಣ ಲೇಖರಿ ನಾಗ್ವಿಲಾಸ ಕವಿ ॥

ಶ್ಲೋ॥ ಶ್ರೀಮನ್ಮಂಗಳದೇವತಾ ಕುಚತಟೇ ಕಾಶ್ಮೀರಪಂಕಪ್ರಭಾ ।
ಸ್ತೋಮೋನ್ಮಿಶ್ರಿತ ಕೌಸ್ತುಭಾರ್ಕ ವಿಕಸದ್ರುಕ್ತಾಬ್ಜವೋ ಬಾಹುದಂ ॥
ಡಾಮರ್ತ್ಯದ್ರುಮಶಾಖೆ ತಳ್ತ ಚಿಗುರೋ ಪೇಳೆಂಬಿನಂ ತೋರ್ಪುದೇಂ ।
ದ್ರಾಮೋಘಾಭಯಪಾಣಿ ದೇವವಿಭುಗೀಗೌತ್ಸುಕ್ಯಮಂ ಸಂತತಂ ॥

ಹಿಂದಣ ಓಲೆಗಳಲ್ಲಿ,

ಶಾ॥ ಭಾರದ್ವಾಜಸ ಗೋತ್ರಜಾತ ಕಳಲೇ ವಂಶಾಬ್ಧಿ ಚಂದ್ರೋದಯಂ ।
ವೀರಕ್ಷ್ಮಾಪತಿ ಸಂಭವಂ ಶ್ರಿತಜನಾನೇಕೈಕ ಕಲ್ಪದ್ರುಮಂ ॥
ಶ್ರೀರಾಮಾಂಘ್ರಿ ಕುಶೇಶಯಾಸವ ಪಿಬದ್ಭೃಂಗಾಯಮಾನಂ ಮಹೀ ।
ಶೂರಾಗ್ರೇಸರ ನೊಪ್ಪುಗುಂ ದಳಪತಿ ಶ್ರೀಚಿಕ್ಕದೇವೇಂದ್ರನುಂ ॥

ಕಂ॥ ದಳಪತಿ ಚಿಕದೇವೇಂದ್ರಂ ।
ಕಳಲೇ . . . ವಿಬುಧೇಡ್ಯರಾಜ ಮನೋಜ್ಞಂ ॥
ಬಳಯಿಪನಿಂತಮಿತ ನೀತಿಯು । (?)
ತಿಳಿಯಲ್ಕಾರಾಜ ರಾಜಸುಖನಂತೆಸೆಗುಂ ॥
ಶ್ರೀಮನ್ಮಹಿ ಶೂ . . . . . ।
(ಚಾ)ಮ ಚಮೂಪಾಲ ದೇವರಾಜೇಂ . . . . ಶ್ರೀ ॥
ರಾಮಧ್ಯಾನಾಮೃತಮಂ ।
ಸೋಮಂಬೋಲ್ನಿಚ್ಚಮುಂಟಿ ಸುಜನರ ಪೊರೆವಂ ॥
ರಕ್ತಾಕ್ಷಿ ವತ್ಸರಾಷಾಢ । ದಶಮ್ಯಾಂ ರವಿವಾಸರೇ ॥
ಲಿಖಿತಂ ಲಿಪಿಕಾರೇಣ । ತಿಪ್ಪಣ್ಣಾಖ್ಯ ಮನೀಷಿಣಾ ॥

ಕಂ॥ ತಪ್ಪಿರೆ ತಿದ್ದಲ್ವೇಲ್ಕುಂ ।
ಒಪ್ಪುವ ಪಳೆಗಪಿಗಳುಸಿರ್ದ ಕನ್ನ(ಡ)ಗಬ್ಬದಿ ॥
ತಿಪ್ಪಣ್ಣಾಖ್ಯಂ ಲೇಖರಿ ।
ಯುಪ್ಪಂ ಸೇನಾನಿ ದೇವರಾಯ ನಿಕಟದೊಳ್ ॥

ಎಂದಿದೆ.—

No. 353. ತ್ರಿಷಷ್ಟಿಲಕ್ಷಣ ಮಹಾಪುರಾಣ-
TRIṢAṢṬILAKṢAṆAMAHĀPURĀṆA.

Substance, paper. Size, $12\frac{3}{8} \times 7\frac{7}{8}$ inches. Pages, 580. Lines, 19 on a page. Character, Kanarese. Condition, good. Appearence, old Complete.

Deals with the lives of twenty-four Tirthaukarās. The work is also known as Cāvundarāyapurāna after the name of the author Cāvundarāya who had the titles of Vīramārtāṇḍa Guṇaratnabhūṣaṇa etc. He was a pupil of Ajitasēnācārya and a court paṇdit of Nolamba kulāntaka of Ganga dynasty.

Beginning:

ಶ್ರೀವೃಷಭ ಜಿನೇಂದ್ರಾದಿ ಮ ।
ಹಾವೀರ ಜಿನಾಂತಮಾದ ಜಿನಪತಿಗಳ್ ಭ ॥
ವ್ಯಾವಳಿಗೆ ಚತುರ್ವಿಂಶತಿ ।
ದೇವರ್ದಯೆಗೆಯ್ಗೆ ವಿಮಳರತ್ನತ್ರಯಮಂ ॥

ಶ್ರೀಮದಶೋಕಂ ಮುಕ್ಕೊಡೆ ।
ಚಾಮರತತಿ ದಿವ್ಯಭಾಷೆ ಸುರತೂರ್ಯ್ಯರವಂ ॥
ಪೂಮಳೆ ಕೇಸರಿ ಪೀಠಂ ।
ಭಾಮಂಡಲಮೆಸೆಯೆ ನೆಗಳ್ವನೊಸೆದಾದಿಜಿನಂ ॥

* * * *

ವ॥ ಅಂತು ಗುಣಮಣಿ ವಿಭೂಷಣರುಂ ಶೀಲಾಲಂಕಾರರುಂ ಜಗತ್ಪವಿತ್ರ ಚಾರಿತ್ರರುಂ ವಿಜಿತ ದುರಿತಾರಾತಿಸೇನರುಮೆನಿಸಿದಜಿತಸೇನ ಭಟ್ಟಾರಕರೆ ಗುರುಗಳಾಗೆ ಗಂಗ ಕುಲಾಚಲ ಶಿಖರಶೇಖರ[ರು] (ನು)ಂ ಗಂಗ ಚೂಡಾಮಣಿಯುಂ ಜಗದೇಕವೀರ[ರು] (ನು)ಂ ಧರ್ಮ್ಮಾನುರಾಗನುಮೆನಿಸಿದ ನೊಳಂಬ ಕುಲಾಂತಕ ದೇವನೆ ತನಗೆ ಪರಮ ಸ್ವಾಮಿ[ಗಳಾ] (ಯಾ)ಗೆ ಜಗತ್ಪವಿತ್ರ ವಂಶನುಮಾ[ಸಿ]ಗಿ.

ಮ॥ ಸ್ರ॥ ಚಲದಿಂ ರಾಜಯ್ಯನೊಳ್ತಳ್ತಿರಿದ ಭುಜಬಲಂ ರಾಜನೆಂಕೊಂಡ ವೀರಂ ।
ನೋಡದಂತಂತಾಗೆ ಗೋವಿಂದನನಿರದೆಯೆ ಬೆಂಕೊಂಡ ಬಲ್ಲಾಳ್ತನಂ ಮಾಂ ॥
ಡಲ ರಾ[ಜ್ಯಶ] (ಜ್ಯಾಸ)ಕ್ತನಂ ರಾಚಯಾನನಧಿಕನಂ ದಾಳಿಯೊಳ್ ಕೊಂದ [ಶೌರ್ಯಂ ।
ಪಲಗಾಶ್ಚರ್ಯ್ಯ ಪ್ರತಾ[ಪಾನ] (ಪೋನ್ನ)ತನೆನೆ ನೆಗಟ್ದಿಂ ವೀರಮಾರ್ತಾಂಡ [ದೇವಂ ॥

ಕಂ॥ ನಡೆಯಲ್ ಬಗೆದಂ ತ್ರನ್ನಿ ।
ರ್ದೆಡೆಯಿಂದ(ಂ) ತಳರ್ದನೆತ್ತ ಮೊಗಸಿದನಾ[ರೋ] (ವಂ) ॥
ಗಡಿಯಿ[ಂದೆ ನನ್ನೊ] (ಟ್ಟನಣ್ಣ) ನೆಂದುಂ ।
ಪ[ದು] (ಡಿ)ಕೆಯಾ ಮೊಲನಂತೆ ಕುಂಬುತಿರ್ಪರ್ ಪಗೆವರ್ ॥
ಮುಳಿ[ದಾ] (ದ)ನಸಹಾಯ ವಿಕ್ರಮ ।
ನೊಳಕೊಳ್ಳ್ವುದು ಕಾವುದೆಮ್ಮನೆಂದೆಂದರಿ ಮಂ ॥
ಡಳಿಕರ್ಭಯವಶದಿಂ ದೀ ।
ವಳಿಗೆಯ ಪರಿಯಂತೆ ಪೊಕ್ಕಪರ್ಮನೆಮನೆಯಂ ॥

ವ॥ ಇಂತೆನಿಸಿ ನೆಗಟ್ದಿ ಸಮ್ಯಕ್ತ್ವರತ್ನಾಕರಂ ಶ್ರೀಮಚ್ಚಾಮುಂಡರಾಜಂ.

ಕಂ॥ ವಿರಚಿಸಿದರ್ ಮುನ್ನೆ ಮಹಾ ।
ಪುರಾಣಮಂ ನೆಗಟ್ದಿ ಕೂಚಿಭ[ಡ್ಡಾ] (ಟ್ಟಾ)ರಕರುಂ ॥
ಪರಮ ಶ್ರೀನಂದಿ ಮುನೀ ।
ಶ್ವರರುಂ ತದನಂತರಂ ಜಿನಾಗಮ ತಿಲಕ[ರು] (ರ್) ॥

ಚಂ॥ ಕವಿಪರಮೇಶ್ವರರ್ ಬರೆದುದಂ ಜಿನಸೇನ ಮಹಾ ಮುನೀಶ್ವ । (?)
ರವಿರಚಿಸಲರ್ದು ಮಾಣೆ ಗುಣಭದ್ರ ಮುನೀಶ್ವರರೆಯ್ದೆ ಪೇಳ್ವ ॥ (?)
ಲ್ಲವಿಸಿದುದಂ ತ್ರಿಷಷ್ಟಿ ಪುರುಷಪ್ರತಿ ಬ[ಂಧ] (ದ್ಧ) ಪುರಾಣಮಂ ಮಹೋ ।
ತ್ಸವದೊ[ಳ್]ಳೆ ಭವ್ಯಕೋಟಿಗಳಿಪಲ್ಬ[ಗ](ರೆ)ದಂ ಗುಣರತ್ನಭೂಷಣಂ ॥

* * * *

ನಾಗದತ್ತನುಂ ವರಾಹನುಮಾರ್ಯನುಂ ಮನೋಹರನುಂ ಚಿತ್ರಾಂಗದನುಂ ಸಾಮಾನಿಕನುಂ ಜಯಂತ್ರನುಮಹಮಿಂದ್ರನುಮಾಗಿ ವೀರಸಾದೊಂ. ಲೋಲುಪನುಂ ಸಕುಳನು ಮಾರ್ಯನುಂ ಮನೋರಥನುಂ ಶಾಂತ್ರಮದನನುಂ ಸಾಮಾನಿಕನುಮಪರಾಜಿತನುಮಹಮಿಂದ್ರನುಮಾಗಿ ಸುವೀರನುಮಾದೊಂ. ನೀ(ಂ)ವಿವಿಧಸಂಸಾರಮಂ, ಪ್ರಿಯವಿಪ್ರಯೋಗಲಕ್ಷಣಮುಪ್ಪುದನರಿದು ಶೋಕಾಕುಲಿತನಾಗಬ್ವೇಡ. ನಮಗವರಿರ್ದ ನೆಲೆಯಕ್ಕುಮೆಂದು ದುಃಖಮನಾರಿಸೆ ಭರತರಾಜನುಂ ಮುನಿಜನಮಂ ವಂದಿಸಿ ಪ್ರೊಳಲ್ಗೆ ಬಂದೊಂದು ದಿವಸಂ ಮಣಿದರ್ಪಣದೊಳ್ ನಿಜಪಲಿತದರ್ಶನೋತ್ಪನ್ನ (ವೈರಾಗ್ಯ) ನರ್ಕಕೀರ್ತಿಗೆ ರಾಜ್ಯಮಂ ಕೊಟ್ಟು ಕೇಶೋತ್ಪಾಟನಾನಂತರಂ ಮನಃ ಪರ್ಯಾಯ ಜ್ಞಾನಮಾಗೆ ತದನಂತರಂ ಮತ್ತ ಮಂತರ್ಮುಹೂರ್ತದಿಂ ಕೇವಲಿಯಾಗಿ ಪೂರ್ವಲಕ್ಷ ಕಾಲಂ ವಿಹರಿಸಿ ನಿರ್ವಾಣಕ್ಕೆ ಸಂದಂ.

Colophon :

ಇದು ಸಕಲ ಶಾಸ್ತ್ರ ಸಂಯಮ ಸಂಪನ್ನ ಶ್ರೀ ಮದಜಿತಸೇನ ಭಟ್ಟಾರಕ ಚರಣ ಕಮಲ ಚಂಚರೀಕ ಧರ್ಮವಿಜಯ ಶ್ರೀ ಮಚ್ಚಾಮುಂಡರಾಜ ವಿರಚಿತ ತ್ರಿಷಷ್ಟಿಲಕ್ಷಣ ಮಹಾ ಪುರಾಣದೊಳಾದಿಪುರಾಣಂ.

ಶ್ರೀ ಮದಮರೇಂದ್ರ ಶಿ । ?
ಖಾಮಣಿಗಣ ಕಿರಣ ಜಾಲಜಟಿಲಿತಚರಣಂ ॥
ಚಾಮೀಕರಾಂಗ ಕರಜಿತ ।
ಸ್ವಾಮಿಗಳೆಮಗೀಗೆ ಮೋಕ್ಷ ಲಕ್ಷ್ಮೀಪದಮಂ ॥

* * * *

ವಿದ್ಯಾಧರಾಧಿರಾಜನಪ್ಪ ರಾವಣನಯ್ನೂರ್ವರರಸಿಯರ್ಗಂ ಸೀನಗ್ರಗಣ್ಯೆಯಾಗಿ ಮಹಾದೇವಿ ಪಟ್ಟಗಟ್ಟಂಗಟ್ಟಿಸಿ ಕಾಮಭೋಗಸುಖಮನನುಭವಿಸಿ ಸುಖದಿನಿರ್ಪುದು. ರಾಮಂ ಬಂದು ರಾವಣನಂ ಗೆಲ್ದು ನಿನ್ನನೊಯ್ವೆನೆಂಬ ಪುಳುವಗೆಯಂ ಬಿಸುಳ್ವುದೆನೆ, ನಿಶ್ಚಲಮತಿಯಾಗಿರ್ದ ಸೀತೆಯಲ್ಲಿಗೆ ರಾವಣಂ ತಾನೆ ಬಂದು ಸಾಮಭೇದ ದಂಡಂಗಳಿಂ ಬಗ್ಗಿಸಿ ನೋಡಿ ತನಗೆ ಬಸಮಾಡಲಾರದೆ ಮುಳಿದು ಕೆಳದರ್ದ ನುಡಿಯೆ ಮಂಡೋದರಿ ಮಾಕೊರ್ಂಡು ಸೀನೀಕೆಯಂ ಮುಟ್ಟಿದೊಡೆ ಗಗನಗಾಮಿನೀ ವಿದ್ಯೆಯೆಲ್ಲಂ ವಿನಾಶಕ್ಕೆ ಸಲ್ಗುಂ. ವಿದ್ಯಾಹೀನರಾದಂದು ವಿದ್ಯಾಧರರ ಕಿಂಚಿತ್ಕರರಪ್ಪರಲ್ಲದೆಯುಂ ಸುಲೋಚನೆಯಿನರ್ಕಕೀರ್ತಿ ಸ್ವಯಂಪ್ರಭೆಯಿನಶ್ವಗ್ರೀವಂ ಸುತಾರೆಯಿನಶನಿಘೋಷಂ ಪರಿಭವಮನೆಯ್ದಿದಂತೆ ನೀನುಮೀಕೆಯ ಕಾರಣದಿನೆಯ್ದಲ್ವೇಡ. ಪೆಂಡಿರ ನುಡಿಯಿಂದೆಸಕದೆನ್ನಮಾತ್ರಂ ಕೇಳ್ವುದಿನ್ನು ಸೀತೆಯನೊಪ್ಪಿಸುವುದೆನೆ ರಾವಣಂ ಮರುಮಾತುಗುಡದೆ ಮುಳಿದು ಪೋಗಿ ಪೊಟಿಲಂ ಪೊಕ್ಕಂ.

End :

ಈ ಪೇಟಿದ್ದೀ ಚತುರ್ವಿಧ ಧ್ಯಾನಂಗಳೊಳಂ ಶುಕ್ಲ ಧ್ಯಾನಂಗಳೊಳಂ ಶುಕ್ಲ ಧ್ಯಾನದಿಂ ಸಕಲ ಕರ್ಮ ನಿರ್ಮೂಲನಂಗೆಯ್ವ ಶ್ರೀವರ್ಧಮಾನ ಭಟ್ಟಾರಕ ಮೋಕ್ಷ ಲಕ್ಷ್ಮೀವಲ್ಲಭರುಂ ತ್ರಿಲೋಕ ಚೂಡಾಮಣಿಗಳುಮಾದರಿತ್ತ ದೇವೇಂದ್ರರೆಲ್ಲರುಂ ಬಂದುಮಾದಿಭಟ್ಟಾರಕರ್ಗೆ ಮಾಡಿದಂದದೊಳ್ ಪರಿನಿರ್ವಾಣ ಮಹಾ ಕಲ್ಯಾಣ ಪೂಜೆಯಂ ಮಾಡಿ ತದನಂತರಮಾನಂದನೃತ್ಯಮನಾಡಿ ಪೋದರ್.

Colophon:

ಇದು ಸಕಲ ಭುವನ ಜನವಂದ್ಯ ಸಂಯಮ ಸಮಾಧಾನ ವಿರಚಿತ ದುರಿತಾರಾತಿಸೇನ ಶ್ರೀಮದಜಿತ ಸೇನ ಭಟ್ಟಾರಕ ಶ್ರೀಪಾದಪದ್ಮ ಪ್ರಸಾದಾಸಾಧಿತ ರತ್ನತ್ರಯಾಲಂಕೃತ ಧರ್ಮ ವಿಜಯ ಶ್ರೀಮಚ್ಚಾಮುಂಡರಾಜ ವಿರಚಿತಮಪ್ಪ ತ್ರಿಷಷ್ಟಿಲಕ್ಷಣ ಮಹಾ ಪುರಾಣದೊಳ್ ವರ್ಧಮಾನ ಭಟ್ಟಾರಕರ ಪುರಾಣಂ ಪರಿ ಸಮಾಪ್ತಂ.

(ವಿ-ವಿ.)—

ಸಮಗ್ರ. ಲಿಪಿ ಚೆನ್ನಾಗಿದೆ. ತಪ್ಪುಗಳಿವೆ.

ಇದು ಗದ್ಯರೂಪವಾದುದು. ಆದರೆ ಅಲ್ಲಲ್ಲಿ ಪದ್ಯಗಳೂ ಇವೆ. ಇವು ಪ್ರಾಕೃತ ಸಂಸ್ಕೃತ ಕನ್ನಡ ಮೂರು ಭಾಷೆಗಳಲ್ಲಿಯೂ ಬರೆದಿವೆ. ಗ್ರಂಥಾದಿಯಲ್ಲಿ ವೃಷಭಜಿನೇಂದ್ರಾದಿ ಚತುರ್ವಿಂಶತಿ ಜಿನಸ್ತುತಿಯಿದೆ. ಬಳಿಕ ಗೃಧ್ರಪಿಂಛಾಚಾರ್ಯರು ಮೊದಲಾಗಿ ಅಜಿತಸೇನಾಚಾರ್ಯರ ವರೆಗೆ ಗುರುಸ್ತುತಿಯಿದೆ. ಈ ಗ್ರಂಥಕ್ಕೆ ಚಾವುಂಡರಾಯಪುರಾಣವೆಂದೂ ಹೆಸರು.

ಕವಿ ವೀರಮಾರ್ತಂಡ ಗುಣರತ್ನಭೂಷಣ ಮುಂತಾದ ಬಿರುದುಳ್ಳ ಚಾವುಂಡರಾಯನೆಂಬುವನು. ಈತನು ಅಜಿತಸೇನಾಚಾರ್ಯರ ಶಿಷ್ಯನೂ ಗಂಗಕುಲಾಚಲ ಶೇಖರನಾದ ನೊಳಂಬ ಕುಲಾಂತಕ ದೇವನ ಆಶ್ರಿತನೂ ಆಗಿದ್ದನು. "ಚಲದಿಂ * * * ವೀರಮಾರ್ತಾಂಡ ದೇವಂ' ಎಂಬ ಪದ್ಯದಿಂದ ಈತನು ಯುದ್ಧವೀರನೆಂಬುದು ಸ್ಪಷ್ಟವಾಗುವುದು.

ಈ ಪುರಾಣದ ಕಾಲಮುಂತಾದ ವಿಷಯಗಳನ್ನು ತಿಳಿಯಿಸುವುವಾದ ಪದ್ಯಗಳು ಈ ಪ್ರತಿಯಲ್ಲಿ ಕಂಡು ಬರುವುದಿಲ್ಲವಾದ ಕಾರಣ ಆ ವಿಷಯಗಳಿಗಾಗಿ ಕರ್ಣಾಟಕ ಕವಿಚರಿತ್ರೆ ೧ ನೆಯ ಸಂಪುಟವನ್ನು ನೋಡುವುದು.

No. 354. ತ್ರಿಷಷ್ಟಿಲಕ್ಷಣ ಮಹಾಪುರಾಣ.
TRIṢAṢṬHILAKṢNAPURĀṆA.

Substance, Śrītāla. Size, $24\frac{3}{8} \times 2\frac{1}{4}$ inches. Pages, 376. Lines, 8 on a page. Character, Kanarese. Condition, slightly injured. Appearance, old.

Complete.

Same work as the above.

Date of transcription:—Monday the tenth day of the dark fortnight of the lunar month Kārtika in the year Raktākṣi, Saka year 1727 corresponding to 1805 A.D.

Name of the scribe:—Bangarabaḷiya Candayyādhyāpaka of Veṇupura who copied this at the instance of the Chief of Māgalūru.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಉತ್ತಮ. ಪುಸ್ತಕದ ಕೊನೆಯಲ್ಲಿ "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೭೨೭ ನೇ ವರ್ತಮಾನ ರಕ್ತಾಕ್ಷಿ ಸಂ॥ ಕಾರ್ತಿಕ ಬ. ೧೦ ಯು ಚಂದ್ರವಾರದಲ್ಲು ಶ್ರೀವೇಣುಪುರದ ತ್ರಿಭುವನ ಚೂಡಾಮಣಿ ಬಸದಿಯ ಶ್ರೀಚಂದ್ರನಾಥಸ್ವಾಮಿ ಸನ್ನಿಧಾನದಲ್ಲಿ ತತ್ಪತ್ತನಸ್ಥ ಬಂಗರಬಳಿಯ ಚಂದಯ್ಯಾಧ್ಯಾಪ(ಕ)ನು

ಮೊಗಲೂರ ವು॥ ರಾಜಶ್ರೀ ದೊರೆಯುವರಿಗೆ ಬರೆ(ಮ)ಕೊಟ್ಟ ಮತಾನುಸಾರದ ಚಾವುಂಡರಾಯ ಪುರಾಣ, ಅನುಷ್ಟುಪ್ ಶ್ಲೋಕ ಪ್ರಮಾಣಪದ ೯೦೦೦ ಕ್ಕಂ ಮಂಗಲ ಮಹಾಶ್ರೀ. ಭದ್ರಂ ಭೂಯಾತ್, ವರ್ಧತಾಂ ಜೈನಶಾಸನಂ, ಶ್ರೀಮದಾದಿ ಬ್ರಹ್ಮಣೇನಮಃ. ಯಾದೃಶಂ ಪುಸ್ತಕಂ ದೃಷ್ಟ್ವಂ । ತಾದೃಶಂ ಲಿಖಿತಂ ಮಾಯಾ ॥ ಯದಿ ಶುದ್ಧಮಶುದ್ಧಂ ವಾ । ಮಮದೋಷೋ ನವಿದ್ಯತೇ ॥ " ಎಂದಿದೆ.

ಮೇಲೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹೆಚ್ಚು ತಿಳಿಯಬಲ್ಲೆ ಕ್ಷೆಸುವವರು ೩೫೩ ನೆಯ ನಂಬರನ್ನು ನೋಡಿ ತಿಳಿಯುವುದು.

No. 355. ತ್ರಿಷಷ್ಟಿಲಕ್ಷಣ ಮಹಾಪುರಾಣ-
TRIṢAṢṬHILAKṢAṆAMAHĀPURĀṆA.

Substance, paper. Size, $12\frac{1}{8} \times 7\frac{3}{8}$ inches. pages, 134. Lines, 40 on a page. Character, Kanarese. Condition, slightly injured. Appearance, old.

Complete.

Same work as the above.

(ವಿ-ವಿ.)—

ಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲ. ಬರೆವಣಿಗೆ ಉತ್ತಮ.

ಮೇಲೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹೆಚ್ಚು ತಿಳಿಯ ಬಯಸುವವರು ೩೫೩ ನೆಯ ನಂಬರನ್ನು ನೋಡತಕ್ಕದ್ದು.

No. 356. ತ್ರೈಲೋಕ್ಯ ರಕ್ಷಾಮಣಿಸ್ತೋತ್ರ-
TRAILÔKYARAKSĀMAṆISTÔTRA.

Substance, palm-leaf. Size, $16\frac{5}{8} \times 1\frac{3}{16}$ inches. Pages, 3. Lines, 6 on a page. Character, Kanarese. Condition, very much injured. Appearance, old.

Begins on fol. 1*a*.

At the end of the work there are some stanzas taken from various other works.

Contains 13 stanzas complete ; all the stanzas end in the word "Trailōkyarakṣāmaṇi" and hence perhaps the name of the work.

Beginning:

ಶಾ॥ ಶ್ರೀಯುಂ ಜ್ಞಾವನಮುಂ ವಿಲಾಸ . . . . ।
ಶ್ರೀ . . . . ॥
ಶ್ರೀಯೆಂಬಂತಿರೆ ನಿಷ್ಠೆಯಾಗಿರೆ ಯಿವರ್ಕ್ಕಂ ಪ್ರಾರ್ಥಿಸಂ ಶಾಶ್ವತ । (?)
ಶ್ರೀಯುತ ದೇವರದೇವ ಕೊಟ್ಟರ್ ದಯೆ . . . . ॥

* * * *

ಮ॥ ವಿ॥ . . . . ಖಂಗಳಂ ಕಂಡೆನುಂ।
ಡೆನವರ್ಕಳ್ಕದೆ ಬಳ್ಕದೆ(ಂ) ಚಳತ್ರನುಂ ಮೆಯ್ಯೊಡ್ಡಲಮೆಂ(ಮ್ಮೆಂ) ನಿರಂ ॥ (?)
ಜನ ಸಂಸಾರ ಸ . . . . ।
. . . . ॥
ಇದುವೆ ತಾ್ರಸನ ಝುಲ್ಲರೀ ಮುಂಜರೀ(ಲೀ)ಲಾಲಂಕೃತಂ ಲೋಕಮ। (?)
ದುರ್ಗದು ಮಾಯಾತ್ರಯುವ . . . . ॥
. . . . ।
. . . ಪಾಪರ್ಗಂ ಮಾಳ್ಪುದುಂ ಯೆನಗೆ ನೀಂ ತ್ರೈಲೋಕ್ಯರಕ್ಷಾಮಣೀ ॥ (?)

End :

ಮ॥ ವಿ॥ ಮಱೆದಾಂ . . ಜುಗುಪ್ಸೆನಿಲ್ಲದ ಮನಂ ತತ್ತ್ವಾರ್ಥದೊಳ್ಕೂಡದ।
ಳ್ಕಱಿನಾಳ್ವಂದದಿ ಬೋಧಿಬ್ಬಿ ವಶದಿಂ . ಬೋಧಿಗಪ್ಯಾಕುಳಂ ॥
ನೆಱೆವಕ್ಕಾಂ ನೆಱೆದಿರ್ದ ಬೋಧಿಯಾನದಂ ಕೈವಲ್ಯಬೋಧಾರ್ಥಿಗಾಂ।
ತಱಿಸಂದಿಂ ಕುಡುದೇವ ಬೋಧಿಯಾನದಂ ತ್ರೈಲೋಕ್ಯರಕ್ಷಾಮಣೀ ॥
ವಿಪುಲ ಶ್ರೀ ಕೊಪಣಾದ್ರಿತೀರ್ಥನಿಲಯಂ ನಾಗೇಂದ್ರ ಚಂದ್ರಂ ಬುಧಾ।
ಧಿಪರಿರ್ದಾಲಿಸೆ ನಚ್ಚಬೇಳ್ದ[ನ]ತಿಶಯ ಸ್ತೋತ್ರಂಗಳಿಂದಂ ಜಿನಾ ॥
ಧಿಪರಿಂದಂ ಸ್ತುತಿಗೆಯ್ಯುತಿಪ್ಪೆನಗೆ ನೀಂ ಚಂದ್ರಪ್ರಭಸ್ವಾಮಿ ಮಾ।
ಡುಪಮಾತೀತಮೆನಿಪ್ಪ ಮುಕ್ತಿಸುಖಮಂ ತ್ರೈಲೋಕ್ಯರಕ್ಷಾಮಣೀ ॥

(ವಿ-ವಿ.) —

ತ್ರೈಲೋಕ್ಯರಕ್ಷಾಮಣಿ ಸ್ತೋತ್ರ ; ಅತ್ಯಂತ ಶಿಥಿಲ. ಈ ಪುಸ್ತಕದಲ್ಲಿ ಮೊದಲ ಓಲೆಯು ಮುರಿದು ಹೋಗಿರುವುದರಿಂದ ಒಂದರಿಂದ ಒಂಬತ್ತು ಪದ್ಯಗಳು ಅಸಮಗ್ರವಾಗಿವೆ. ಇದರೊಡನೆ ಎಂಟು ಓಲೆಗಳಲ್ಲಿ ಅನೇಕ ಪುಸ್ತಕಗಳಿಂದ ಸಂಗ್ರಹಿಸಿ ಬರೆದ ಪದ್ಯಭಾಗವಿದೆ. ಈ ಪದ್ಯ ಭಾಗದಲ್ಲಿ ಕೆಲವು ಸಂಸ್ಕೃತ ಶ್ಲೋಕಗಳೂ ಇವೆ.

ಇದರಲ್ಲಿ ಹದಿಮೂರು ವೃತ್ತಗಳಿವೆ. ಎಲ್ಲ ವೃತ್ತಗಳೂ 'ತ್ರೈಲೋಕ್ಯರಕ್ಷಾಮಣಿ' ಎಂಬ ಅಂಕಿತದಿಂದ ಪೂರ್ಣವಾಗುತ್ತವೆ. ಕವಿ ಮುಂತಾದ ವಿಷಯಗಳು ತಿಳಿಯುವುದಿಲ್ಲ.

ಕರ್ಣಾಟಕ ಕವಿಚರಿತ್ರೆಯ ೩ ನೆಯ ಸಂಪುಟದಲ್ಲಿ ೨೬೧ ನೆಯ ಪುಟದಲ್ಲಿ ಈ ಗ್ರಂಥವು (ತ್ರೈಲೋಕ್ಯರಕ್ಷಾಮಣಿ ಸ್ತೋತ್ರ, ವೃತ್ತ ೧೩, ಸು. ೧೨೦೦, ಕವಿ ಗೊತ್ತಿಲ್ಲ) ವರ್ಣಿತವಾಗಿದೆ.

No. 357. ದ್ರವ್ಯಸಂಗ್ರಹ (ಲಘುವೃತ್ತಿ).

DRAVYASANGRAHA (LAGHUVṚTTI).

Substance, Śrītāla. Size, 14 5/16 × 1 15/16 inches. Pages, 120. Lines, 7 on a page. Character, Kanarese. Condition, slightly injured. Appearance, old.

Complete.

A work giving in Kanarese word for word meaning for the prākṛit work Dravyasangraha of Nemicandra. The name of the author is Bāḷacandrapanḍitadēva a student of Abhayacandra siddhāntadēva. From a stanza in the work, the date of Bāḷacandrapanḍitadēva is fixed as 1213 A.D.

Beginning:

ಆರ್ಯ್ಯಾ ಜಿನವರವೃಷಭಂ ನತ್ವಾ ಜಿನೋದಿತದ್ರವ್ಯ ಸಂಗ್ರಹಸ್ಯ ಸುವೃತ್ತಿಂ.
ವಕ್ಷ್ಯೇ ಕರ್ಣಾಟಗಿರಾ, ರತ್ನತ್ರಯ ಜನ್ಮ ಸಂಪತ್ತ್ಯೈ.

ಸಮ್ಯಕ್ ಶ್ರದ್ಧಾನ ಜ್ಞಾ . . . . ಧ್ಯಾನಂಗಳಂ, ಶ್ರದ್ಧೇಯಜ್ಞೇಯ ಚರಣೀಯ ಧ್ಯೇಯಂಗಳುಂ ಪರಮಾರ್ಥಂಗಳುಂ ಆಪ್ತೋಕ್ತಂಗಳುಮಪ್ಪ ಜೀವಾಜೀವ ದ್ರವ್ಯಂಗಳಂ ಪೇಳ್ವ ದ್ರವ್ಯ ಸಂಗ್ರಹಮೆಂಬಧ್ಯಾತ್ಮ ಶಾಸ್ತ್ರಮಂ ಮೋಕ್ಷ . . . . ವ್ಯಜನಂಗಳೆ ಪೇಳುತ್ತಮದರಾದಿಯೊಳು ಚತುರನಿಯೋಗ ಚತುರುದಧಿಪಾರಗ ಶ್ರೀಮನ್ನೇಮಿ ಚಂದ್ರ ಸಿದ್ಧಾಂತದೇವರು ಮಂಗಳಾರ್ಥಮಾಗಿ ವಿಶಿಷ್ಟೇಷ್ಟ ದೇವತೆಗೆ ನಮಸ್ಕಾರವ . . . .

ಗಾಹೆ :—

ಜೀವಮಜೀವಂ ದಂಬಂ ವರವಸಹೇಣ ಜೇಣಣಿಂದೆಂ ।
ರಂದೆ ವಿಂದ ವಿಂದ ವಂದವಂದೇತಂ ಸಂವದಾಶಿರಸಾ ॥ (?)

ಜೀವಂ = ಜ್ಞಾನದರ್ಶನ ಯೋಪಯೋಗ (?) . . . . ಮುಂ ಅಜೀವಂ = ದ್ವಿರೇತ (?) ಲಕ್ಷಣಮನುಳ್ಳ ಅಜೀವಮೆಂಬ ದಂಬಂ = ಬಹುಗುಣ ಪರ್ಯ್ಯಾಯಂಗಳನುಳ್ಳ ದ್ರ[ಬ್ಯ] (ವ್ಯ)ಂ, ಜಣ = ದರ್ಶನಜ್ಞಾನ ಚಾರಿತ್ರ ಮೋಹನಿಯಮಂ ಗೆಲ್ದ ಸಂಯ ಸೆ (?) . . . . ಯಾಶಾ ಸಂಯುತಾದ್ಯೇಕಾದಶ ಜಿನರ್ಗಂ, ವರ = ಅವರೊಳುತ್ಕೃಷ್ಟರುಂ,

ಗಾಹೆ :—

End:

ಔದ್ಧತ್ಯ ಪರಿಹಾರಾರ್ಥ ಮುತ್ತರ ಸೂತ್ರಾವತಾರಂ ।
ದಂವ ಸಂಗಹಮಿಹಂ ಮುಣಿಣಾಹ ।
ದೋಸ ಸಂಚಯ ಚುದಾ ಸುದಪುಂಣೋ ॥
ಸೋದಯಂತು ತಣುಸುತ್ತ ದರಿಣಾ ।
ಣೇಮಿಚಂದ ಮುಣಿಣಾ ಭಣಿಯಂಜ ॥ (?)

ಸೋದಯಂತು = ಶೋಧಿಸುಗೆ, ದೋಸಸಂಚಯಚುದಾ = ರಾಗಾದಿ ದೋಷಸಮೂಹದಿಂ ಬಿಡಲ್ಪಟ್ಟ, ಸುದಪುಂಣಾ = ಶ್ರುತಪೂರ್ಣರಪ್ಪ, ಮುಣಿಣಾಹ = ಜಿನಮುನೀಶ್ವರರು, ಜಂ = ಆವುದಾನುಮೊಂದು, ದಂಬ ಸಂಗಹಮಿಣಂ = ದ್ರವ್ಯ ಸಂಗ್ರಹಮೆಂಬಧ್ಯಾತ್ಮ ಶಾಸ್ತ್ರಮುಂ, ತಣುಸುಂ ತಧರ = ಅಲ್ಪ ಶ್ರುತಧರನಪ್ಪ, ಣೇಮಿಚಂದ ಮುಣಿಣಾ = ನೇಮಿಚಂದ್ರ ಮುನಿಯಿಂದ, ಭಣಿಯಂ = ಪೇಳಿಪಟ್ಟುದು.

Colophon:

ಇದು ಸಕಳಾಗಮ ಸಂಯಮ ಶ್ರೀ ಮನ್ನೇಮಿ ಚಂದ್ರ ಭಟ್ಟಾರಕಾಭಯಚಂದ್ರ ಸಿದ್ಧಾಂತದೇವ ಶ್ರೀಪಾದಪದ್ಮ ಪ್ರಸಾದಾಸಾದಿತ ಸಕಳಾಗಮ ಸಂಯಮ ಸಂಪನ್ನ ಶ್ರೀ ಬಾಳಚಂದ್ರ ಪಂ

ಡಿತ ದೇವರಾಗಮ ವಿರುದ್ಧವಾಗದಂತು ದ್ರವ್ಯಸಂಗ್ರಹ ಸೂತ್ರಾನುಗತ ಕರ್ಣಾಟ ಲಘುವೃತ್ತಿಯಂ ವಿರಚಿ[ಥ](ಸಿದ)ರದಂ (?) ರಾಗದ್ವೇಷಮಿಲ್ಲದರುಂ ಆಗಮಜ್ಞರುಮಪ್ಪ ಜಿನಮುನಿಗಳನುಸರಿಸಿ ತಿದ್ದಿರ್ ಪೇಳ್ದೆ ;—

ಶ್ಲೋ॥ ರತ್ನತ್ರಯವತಾಂ ಖ್ಯಾತಿಪೂಜಾಲಾಭಾಮಮೋತಿತಂ ।
ಭವ್ಯೋತ್ತಮ ಮಹಂವಂದೇ । ಮದ್ರತ್ನತ್ರಯ [ವಿ]ಶುದ್ಧಯೇ । (?)
ಆಗಮಶ್ಚ ತದಾಧಾರ । ಸಂಘಸ್ಯ ತೀರ್ಥಮುಚ್ಯತೇ ॥
ಧರ್ಮೋಧರ್ಮೀಚ ಸತ್ತೀರ್ಥ । (?) ಶರಣೋತ್ತಮ ಮಂಗಳಂ ॥

ಕಂ॥ ಪರಮಾಭಯೇಂದು ಸೈದ್ಧಾಂ ।
ತರ ಶಿಷ್ಯಂ ಬಾಳಚಂದ್ರ ಪಂಡಿತ ದೇವಂ ॥
ವರನಯನೇಕ್ಷೇಪವಿಭಾ । (?)
ಸರಪ್ರಮಾಣಾವಿನಿಶ್ಚಿತಾರ್ಥಪ್ರಕರಣಂ ॥ (?)
ಶಕವರ್ಷಂ ಬಾಣ ಪದಾ ।
[ರ್ತ](ರ್ಥ) ಕಳಾಧರರೂಪ ಸಂಖ್ಯೆಯಿಂದೆಸೆಯೆ ಜಗ ॥
ತ್ಪ್ರಕಟಾಂಗಿರ [ಶ](ಸ) ರತ್ಸ್ಯಾ । (?)
ರ್ತಿಕಮಾಸ ಬಳಕ್ಷ ಪಂಚಮೀವಾಸರದೊಳ್ ॥
ಪಸರಿಸೆ ನಿಜಕೀರ್ತಿ ದ್ರ ।
ವ್ಯ ಸಂಗ್ರಹದ ವೃತ್ತಿಯಂ ಸುಲ(ಕ್ಷ)ಣ ಯುತಮಂ ॥
. . ನವ ಕನ್ನಡದಿಂ ನಿ । (?)
ರ್ಮಿಸಿದಂ ಭವ್ಯೈಕ ಹಿತ[ನಾ]ಮನಾರ್ಯಸ್ತುತಮಂ ॥

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ.

ಇದು ಪ್ರಾಕೃತದಲ್ಲಿರುವ ನೇಮಿಚಂದ್ರಕೃತ ದ್ರವ್ಯ ಸಂಗ್ರಹಕ್ಕೆ ಕರ್ಣಾಟಕಾರ್ಥವು. ಇದರಲ್ಲಿ ಮೂಲ ಶ್ಲೋಕಗಳೂ, ಕನ್ನಡ ಅರ್ಥವೂ ಇದೆ. ಕವಿ ಅಭಯ ಚಂದ್ರಸಿದ್ಧಾಂತ ದೇವನ ಶಿಷ್ಯನಾದ ಬಾಳಚಂದ್ರಪಂಡಿತದೇವನೆಂಬುವನು. ಈತನು ಈ ಗ್ರಂಥವನ್ನು 'ಶಕ ವರ್ಷಂ ಬಾಣಪದಾರ್ಥ ಕಲಾಧರ ರೂಪ ಸಂಖ್ಯೆ' ಯಾದ 'ಆಂಗೀರಸ' ಸಂವತ್ಸರದಲ್ಲಿ ರಚಿಸಿದಂತೆ ಹೇಳುತ್ತಾನೆ. ಪದಾರ್ಥವೆಂಬುದಕ್ಕೆ ಸಪ್ತಪದಾರ್ಥಗಳೆಂದು ರೂಢಿಯಿದೆ. ವೇದಾಂತ ಶಾಸ್ತ್ರದಲ್ಲಿ ಎರಡೇ ಪದಾರ್ಥಗಳು. ಶೈವರಲ್ಲಿ ಪಶುಪತಿ ಪಾಶಗಳೆಂದು ಮೂರು ಪದಾರ್ಥಗಳು. ಜೈನರಲ್ಲಿ ಮೂರು ಪದಾರ್ಥಗಳಿವೆಯೋ ಇಲ್ಲವೋ ತಿಳಿಯದು. ಪದಾರ್ಥಕ್ಕೆ ೩ ಸಂಖ್ಯೆಯನ್ನೂ ರೂಪಕ್ಕೆ ೧ ಸಂಖ್ಯೆಯನ್ನೂ ಕೊಟ್ಟರೆ ಆಂಗೀರಸ ಸಂವತ್ಸರವು ಶಾ.ಶ. ೧೧೩೫ ಆಗುತ್ತದೆ (ಕ್ರಿ.ಶ. 1213).

No. 358. ದ್ವಾದಶಾನುಪ್ರೇಕ್ಷೆ-
DVĀDAŚĀNUPREKṢE.

Substance, Śrītāla. Size, $10\frac{7}{16} \times 1\frac{1}{2}$ inches. Pages, 188. Lines, 8 on a page. Character, Kanarese. Condition, very much injured. Appearance, old.

Complete in 12 Parichēdas.

Describes in twelve chapters the doctrines of jain philosophy. In these chapters it is described how one can attian salvation by realising the real nature of objects and their relation to each other.

The name of the author is Vijayaṇṇa.

Beginning :

ದ್ವಾದಶಾನುಪ್ರೇಕ್ಷೆಯ ಕೇಳಿ ಭವ್ಯರು ।
ಸಾಧಿಸಿ ಸ್ವರ್ಗ ಮೋ . . . ॥
. . . . ।
. . ಕಿರಣ ರಂಜಿಸುವ ॥
ಕೋಮಲ ಪದ ಕಮಲನು ವೃಷಭೇಶಂಗೆ ।
ಪ್ರೇಮದಿಂದ ವಂದಿಸುವೆಂ ॥
ದುರ್ಧರವೆನಿಪ . . . . . ।
. . . . ನಿಪ ಸಿದ್ಧರಿಗೆ ॥
ಸಿದ್ಧಿಪದವಿ ಯಾಗಬೇಕೆಂಬ ಬಗೆಯಿಂದ ।
ಶುದ್ಧಮನದಿ ವಂದಿಸುವೆಂ ॥
ಹದಿಮೂರು ತೆಱದ ಚರಿತ್ರವ ಧರಿಯಿಸಿ ।
ಸದಮಲ ಚರಿತರೆನಿಪರ ॥
ಮದನನ ಗೆಲಿದಾಚಾರ್ಯರ ಪಾದಕೆ ।
ಮುದದಿಂದಲಿ ವಂದಿಸುವೆಂ ॥

* * * *

ವಚನ ॥ ಅಲ್ಲಿ ಸಮಸ್ತ ದ್ರವ್ಯಂಗಳು ದ್ರವ್ಯಾರ್ಥಿಕ ನಯದಿಂ ನಿತ್ಯವಾಗಿಯುಂ ಪರ್ಯಾಯಾರ್ಥಿಕನಯದಿನನಿತ್ಯಂಗಳಪ್ಪುದಱಿಂ ಶರೀರೇಂದ್ರಿಯ ವಿಷಯೋಪಭೋಗ ಪರಿಭೋಗ ದ್ರವ್ಯಂಗಳೆಲ್ಲ ಜಲಬುದ್ಬುದಂಗಳವೊಲನಿತ್ಯ ಸ್ವಭಾವಂಗಳಪ್ಪುದಱಿ ನಮಳಜ್ಞಾನ ದರ್ಶನೋಪಯೋಗ ಸ್ವಭಾವಂ ಪೊಱಗಾಗಿ ಜೀವಕ್ಕವಶೇಷ ವಸ್ತುಗಳೆಲ್ಲಮನಿತ್ಯಂಗಳೆಂದು ಚಿಂತಿಸುವುದು ಅನಿತ್ಯಾನುಪ್ರೇಕ್ಷೆಯಕ್ಕುಮಿಂತುಚಿಂತಿಸುವಂಗೆ ಬಾಹ್ಯವಸ್ತುಗಳೊಳು ತೊಡರ್ಪಿಲ್ಲವಪ್ಪುದಱಿನನುಭವಿಸಿ ಬಿಟ್ಟ ಗಂಧ ಮಾಲ್ಯಾದಿಗಳಗಲ್ಕೆಯೊಳ್ ದುಃಖಮಿಲ್ಲದವೊಲವರಗಲ್ಕೆಯೊಳ್ಸಂಕ್ಲೇಶಂ ಪುಟ್ಟದೆಂಬುದು ತಾತ್ಪರ್ಯಂ.

ಮ ॥ ವಿ ॥ ವರರಾಜ್ಯಂ ಸುರಚಾಪ ಬಂಧುಜನಮುಂ ಸಂಧ್ಯಾರುಣಂ ಮತ್ತವಾ ।
ರಣಮುಂ ವಾಜಿ ರಥಂ ಪದಾತಿನಿವಹಂ ಸ್ತ್ರೀ ಯರ್ಕಳುಂ ಪುತ್ರರುಂ ॥
ಬರೆ ಮೇಘಾಕೃತಿ ರೂಪು ಯೌವನ ಬಲಂ ವಿದ್ಯುಚ್ಚಲಂ ನೋಳ್ಪಡಂ ।
ನಿರುತಂ ನಂಬಲು ಬೇಡ ಜೀವ ! ನಿನಗಂ ಸದ್ಧರ್ಮವೊಂದೇ ಧ್ರುವಂ ॥

Colophon :

ಇದು ಶ್ರೀಮದ್ದೇವೇಂದ್ರ ವೃಂದ ಮಣಿಮಕುಟ ಕಿರಣಾರಂಜಿತ ಪಾದಾರವಿಂದ ದ್ವಂದ್ವ ಭಗವದರ್ಹತ್ಪರಮೇಶ್ವರ ಮುಖ ಕಮಲ ವಿನಿರ್ಗತ ದ್ವಾದಶಾನುಪ್ರೇಕ್ಷೆಯೊಳಧ್ರುವಾನುಪ್ರೇಕ್ಷಾನಿರೂಪಣಂ ಪ್ರಥಮ ಪರಿಚ್ಛೇದಂ

ಇನ್ನ ಶರಣಾನುಪ್ರೇಕ್ಷೆಯಂ ಪೇಳ್ದ ಪರಾವೃ|ವೆಂದರೆನವೋಸ್ತು.

ಶ್ರೀಮದಮರನರಪತಿ ನತ ಪಾದಂಗೆ ।
ಸಾಮಜಾರಿ ವಿಷ್ಟರಗೆ ॥
ಸೋಮಾರ್ಕ ಕೋಟಿ ತೇಜಗೆ ತಾನು ವಂದಿಪೆ ।
ಸ್ವಾಮಿಯಜಿತ ನಾಥಂಗೆ ॥

*　　　*　　　*

ಪ್ರಾಕೃತ ಸಂಸ್ಕೃತ ಪರಿಚಯವಿಲ್ಲದ ।
ಲೋಕದ ಭವ್ಯ ನಿಕರಕೆ ॥
ಈ ಕೃತಿಯನು ಕನ್ನಡದಿಂದ ಲಱಿಯಲು ।
ಬೇಕೆಂದು ಪೇಳದೆ ಮುದದಿಂ ॥
ತ್ರಿಜಗದಭ್ಯುದಯ ಪದವನೀವ್ರದು ಶಾಸ್ತ್ರ ।
ಸುಜನರು ಭಾಪಿಸುವರಿಗೆ ॥
ಅಜರಾಮರವಿಗು ಜಿನಭಾಷೆ ತಪ್ಪದು ।
ವಿಜಯಣ್ಣಗಳು ಹೇಳಿದರು ॥

*　　　*　　　*

ಸಮ್ಯಕ್ತ್ವ ಸುವ್ರತರೊಳು ದೃಢವಾಗಿಯೆ ।
ನಿರ್ಮಳ ನಿಜಗುಣವಱಿದು ॥
ಕರ್ಮಕ್ಷಯವ ಕ್ರಮದಿ ಮಾಡಲೆಂದತಿ ।
ಕೂರ್ಮೆಯಿಂದ (ಲಿ) ಪೇಳದೆನು ॥
ಛಂದೋಲಂಕಾರದೋಷವ ನೋಡದೆ ।
ಸಂದ ಧರ್ಮೋಪದೇಶವನು ॥
ಒಂದನೆ ನೋಡಿ ಸುಗಂಧವ ಬಿಡದೀವ ।
ಚಂದನ ಮುರುಡಾದರೇನು ॥

*　　　*　　　*

ವರ ಕುಂತಳದೇಶದ ಬೆಳುವಲದೊಳು ।
ಪುರವೊಂದಿಹುದತಿ ಚಲುವಿಂ ॥
ಪರಿವೇಷ್ಟಿತ ಕೋಟೆ (?) ನಾಲ್ಕು . . . . ।
. . . . ಮೆನ ಬಾವಿ ॥
ಆ ಪುರಾಧಿಪ ನೋಡಲಧಿಕ ಗುಣಾಢ್ಯನು ।
ರೂಪ ಸೌಭಾಗ್ಯ ಸಂಪನ್ನ ॥
ಭೂಪತಿಗಳೊಳಧಿಕನು ಜಿನಧರ್ಮ ಪ್ರ ।
ದೀಪಕನಧಿಕ ಸ . ಷ್ಟ ॥
ಸನ್ನುತ ನಿರ್ಮಳ ಕೀರ್ತಿಯನುಳ್ಳನು ।
ಹೊನ್ನಬಂದಿಯ ದೇವಭೂಪ ॥
ಅನ್ನದಾನದಿ ನಾಲ್ಕನು ಸತ್ಪಾತ್ರಕ ।
ಚೆನ್ನಾಗಿ ಅನುದಿನವಾಗಿ ॥

ಆ ಸಂಘನಾಯಕನತಿ ಪ್ರೇಮದಿಂದೀ ।
ದೇಶದ ಮೇಲಣ ಕೃಪೆಯಿಂ ॥

ಭಾಸುರ ಹೊಸ ಕನ್ನಡದಿಂದ ಪದನಾದಿ ।
ಲೇಸಾಗಿ ಹೇಳಬೇಕೆಂದು ॥
ಪ್ರಾಕೃತ ಸಂಸ್ಕೃತವೀ ಕರ್ಣಾಟದ ।
ಲೋಕಕೆ ತಿಳವುದಲ್ಲೆಂದೀ ॥
ಲೋಕೋಪಕಾರ ನಿಮಿತ್ತ[ಲೀ] (ಮೊ) ಶಾಸ್ತ್ರವ ।
ಬೇಕೆಂದು ಮುದದಿ ಪೇಳಿಸಿದ ॥

ನಿಧಿ ದ್ರವ್ಯ ಪುರಮಿಂದು ಶಕಕಾಲ ಪೋಗಲು ।
ಒದವಿದ ವಿಭವ [ಸಂ] ವತ್ಸರದ ॥
ಮಧುಮಾಸದೊಳೀ ಶಾಸ್ತ್ರ ಸಂಪೂರ್ಣ ।
ಮುದದೊಳಾಯಿತು ಕೇಳ ಬುಧರು ॥

ಇಂತಪ್ಪ ಶಾಸ್ತ್ರವಂ ಮೆನಬಾವಿಯು ಶ್ರೀ ।
ಶಾಂತಿನಾಥನ ಬಸ್ತಿಯಲಿ ॥
ಸಂತೋಷದಿ ಹೊನ್ನಬಂದಿಯ ದೇವೇಂದ್ರ ।
ನಿಂತು ಸಂಪೂರ್ಣ ಮಾಡಿಸಿದ ॥

End :

ಮ ॥ ವಿ ॥ ವರ ರಾಜ್ಯಂಗಳನೆಯ್ದಿ ಸಾಧಿಸಲು ಬರ್ಕುಂ ಚಕ್ರವರ್ತಿತ್ವಮುಂ ।
ಪುರುಹೂತತ್ವಮನಾಂತು ಸ್ವರ್ಗದ ಮಹಾ ಭೋಗೋಪಭೋಗಂಗಳುಂ ॥
ನಿರುತಂ ಬೋಧಿಸಲಕ್ಕಿವೆಲ್ಲ (.) ಸುಭಂ (?) ಜೀವಕ್ಕೆ ಸಂಸಾರದೊಳ್ ।
ದೊರೆಕೊಳ್ಗುಂ ಸಲೆ ಬೋಧಿರತ್ನಮೆ ಕರಂ ನೋಡಲ್ಕಹಾ ದುರ್ಲಭಂ ॥

Colophon :

ಇತಿ ಶ್ರೀಮದ್ದೇವೇಂದ್ರ ವೃಂದ ಮಣಿಮಕುಟ ಕಿರಣರಂಜಿತಪಾದಾರವಿಂದ ದ್ವಂದ್ವ ಭಗವದರ್ಹತ್ಪರಮೇಶ್ವರ ಮುಖಕಮಲ ವಿನಿರ್ಗತ ದ್ವಾದಶಾನುಪ್ರೇಕ್ಷೆಯೊಳು ಬೋಧಿ ದುರ್ಲಭಾನುಪ್ರೇಕ್ಷಾ ನಿರೂಪಣಾಂ ದ್ವಾದಶ ಪರಿಚ್ಛೇದಂ.

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಲಿಪಿ ಉತ್ತಮ.

ಇದು ಸಾಂಗತ್ಯದಲ್ಲಿ ಬರೆದಿದೆ. ಅಲ್ಲಲ್ಲಿ ಕೆಲವು ವಚನಗಳೂ ವೃತ್ತಗಳೂ ಕಂದಗಳೂ ಇವೆ. ಪರಿಚ್ಛೇದ ೧೨. ಇದರಲ್ಲಿ ಅಧ್ರುವಾನುಪ್ರೇಕ್ಷೆ, ಅಶರಣಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಅಶುಚಿತ್ವಾನುಪ್ರೇಕ್ಷೆ, ಆಸ್ರವಾನುಪ್ರೇಕ್ಷೆ ಸಂವರಾನುಪ್ರೇಕ್ಷೆ, ನಿರ್ಜರಾನುಪ್ರೇಕ್ಷೆ, ಧರ್ಮಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆಗಳೆಂಬ ಹನ್ನೆರಡು ಅನುಪ್ರೇಕ್ಷೆಗಳು ಅಥವಾ ಚಿಂತನೆಗಳು ಹೇಳಿವೆ. ಗ್ರಂಥಾದಿಯಲ್ಲಿ ವೃಷಭ ಜಿನಸ್ತುತಿಯಿದೆ. ಅನಂತರ ಸಿದ್ಧಾದಿಗಳು ಸರಸ್ವತಿ, ಗಣಧರರು ವಿಜಯಕೀರ್ತಿ, ಪಾರ್ಶ್ವಕೀರ್ತಿ ಮುಂತಾದವರನ್ನು ಕವಿ ಹೊಗಳುತ್ತಾನೆ. ಕವಿ ವಿಜಯಣ್ಣ. ಈತನ ಸ್ಥಳ ಮತ್ತು ಇವನು ಗ್ರಂಥವನ್ನು ರಚಿಸಿದ ಕಾಲ

ಷ್ಟುಂತಾಗಿ ಎಲ್ಲ ವಿಷಯಗಳನ್ನೂ ಉದಾಹೃತ ಭಾಗಗಳಿಂದ ತಿಳಿಯುವುದು. ಪ್ರತಿಯ ಕೊನೆಯಲ್ಲಿ ' ದ್ವಾದಶಾನುಪ್ರೇಕ್ಷೆಯ ಈವ(ಯುವ) ಸಂವತ್ಸರದ ಫಾಲ್ಗುಣ ಬಹುಳ ಬಿದಿಗೆ ಗುರುವಾರದಲ್ಲು ಮಂಗಳ ಮಹಾ ಶ್ರೀ ' ಎಂದಿದೆ.

No. 359. ದ್ವಾದಶಾನುಪ್ರೇಕ್ಷೆ-
DVĀDAŚĀNUPRĒKṢE.

Substance, Srītāla. Size, $16\frac{3}{8} \times 2\frac{1}{4}$ inches. Pages, 2. Lines, 11 on a page. Character, Kanarese. Condition, good. Appearance, old. Complete in 14 stanzas.

Begins one fol 23-*b* of the Ms. described under No. 321 ante.

A brief description in 14 stanzas of the chief principles of jain religion. These principles are given in an elaborate form in the work described under No. 357 ante.

The name of the author is Bāḷacandramuni.

Beginning :

ಉ ॥ ವಾ ॥ ಶ್ರೀ ದಿವಿಜೇಂದ್ರ ವಂದಿತ ಪದಾಂಬುಜ ದುರ್ಜಯ ಘಾತಿಕರ್ಮ ವಿ।
ಚ್ಛೇದನ ಬೋಧ ಬೋಧಿತ ಜಗತ್ರಯ ವಸ್ತು ಸಮೂಹ ಸೌಖ್ಯ ಸಂ॥
ಪಾದನಭೂತ ಹೇತು ನುತ ದಿವ್ಯ ನಿನಾದಮುಮಾತ್ಮ ಭಾವದಿಂ।
ದೋದಿ ಮಹತ್ವಮಂ ಪರಮ ತತ್ವಮನೀವುದು ನೀಂ ಜಿನೇಶ್ವರಾ ॥

ಬೇಡಿದ ಭಂಗಿಯಿಂ ನೆರಪಿದೆನ್ನದನಂ ನವರತ್ನ ಸಂಚಯಂ।
ನಾಡೆ ಮನಕ್ಕೆ ಬರ್ಪ ವನಿತಾನಿಕರಂ ಕಮನೀಯ ಯೌವನಂ॥
ನೋಡೊಡಲೆಂಬಿವಾವ ತೆಱದೀ ಕಿಡುಗುಂ ಕಿಡದೊಪ್ಪುವಾತ್ಮನೊ।
ಳ್ಮೂಡುವ ಚಿತ್ತ್ವಮಂ ಗುಣ ಗುಣೋತ್ತಮಮಂ ಪಯೆಗೆಯ್ ಜಿನೇಶ್ವರಾ ॥

ಅರಿಹಪನ್ಮದಲ್ಲಿ ಶರಣಾದಪನೆಂಬವರುಗ್ರಮಪ್ಪ ಸಂ।
ಸಾರದೊಳಾವ ದೇಹಿಗಳಿಗಂ ಶರಣಾದಪೆ ನೀನೆ ಕರ್ಮ ಸಂ॥
ಹಾರಕ ಮಾರದೂರ ಪರಮಾತ್ಮ ಪದಸ್ಥಿತ ಪಾರಿಣಾಮಿಕಾ।
ಧಾರ ಸುಸೌಖ್ಯಮಂ ಪರಮ ಕಾರಣಮಂ ದಯೆಗೆಯ್ ಜಿನೇಶ್ವರಾ ॥

End :

ಕರ್ಮಮೆ ಪೊಲ್ಲದೆಂತೆನೆ ಶರೀರಿಗೆ ದುರ್ಗತಿ ಹೇತುವಾದುದಾ।
ಕರ್ಮಮೆ ಬಲ್ಲಿತೆಂದಱಿದು ಸಂಯಮಮಂ ನೆಱಿ ತಾಳ್ಪ ಸಂತತಂ॥
ನಿರ್ಮಳಮಪ್ಪನಾದಿ ನಿಜಶುದ್ಧದೊಳಿರ್ಪುದೆ ಧರ್ಮಮೆಂಬುದೋ।
ರೊರ್ಮೆಯುಮಂತೆದಂ ನೆನೆವುತಿರ್ಪುದ ನೀನೆನಗೀ (ನಿನ್ನೆನಗೀ) ಜಿನೇಶ್ವರಾ ॥
ವಿನಱಿಯುಂಟೆ ಬೇಱತೆ ನಿಜಶುದ್ಧಮಶುದ್ಧದೊಳಾದ ಭೇದಮಂ।
ಕಾಣಱಿಯುತ್ತಮಿರ್ಪರವು ಬೋಧಿಯುಮೆಂದಱಿದಾತ್ಮತತ್ವಮಂ ॥

ಧ್ಯಾನಿಸಿ ಕರ್ಮಮಂ ಕಿಡಿಸಿ ಮುಕ್ತಿಗೆ ಸಲ್ವ ನಿಜ ಸ್ವರೂಪಮಂ ।
ನೀನಱಿದೀವುದಾ(ವ್ರುದ)ದು[ಮದೇ](ಯೋ)ವ್ರುದು ಪೇಳೆನಗಂ ಜಿನೇಶ್ವರಾ ॥
ಆದುದು ಬಾಳಚಂದ್ರ ಮುನಿವಾಕ್ಯದೊಳಂಗಮದೋಜೆಯಿಂದಮಿೞ ।
ದ್ವಾದಶ ಭೇದಮಂ ಜಿನಗುಣಾಸ್ತವನಂಗಳನಾತ್ಮ ತತ್ವ ಸಂ ॥
ಪಾದನ ಹೇತುವಪ್ಪುವಿವನೋದಿಸುವೋದುವ ಕೇಳುತಿರ್ಪವಂ ।
ಗಾದರದಿಂದ ಮಾ[ಡೂ](ಡುವು)ದು ಮುಕ್ತಿಯನಕ್ಷಯಮಂ ಜಿನೇಶ್ವರಾ ॥

Colophon:

ಇತಿ ಕರ್ಣಾಟಕ ಭಾಷಾ ದ್ವಾದಶಾನುಪ್ರೇಕ್ಷಾ.

(ವಿ.ವಿ.)—

ಸಮಗ್ರ. ಈ ಪುಸ್ತಕದೊಡನೆ ನೀತಿಸಾರಸಮುಚ್ಚಯ (ಸಂಸ್ಕೃತ ಶ್ಲೋಕ. ಕನ್ನಡ ಟೀಕೆ) ಪದ್ಯ ಸಂಗ್ರಹ (ಅನೇಕ ಪುಸ್ತಕಗಳಿಂದ ಸಂಗ್ರಹಿಸಿ ಬರೆದಿರುವ ಪದ್ಯಗಳು) ಯೋಗಾಮೃತ, ವ್ರತಸ್ವರೂಪ, ಪರಮಾಗಮ ಸಾರ, ಕರ್ಮ ಪ್ರಕೃತಿ, ಪರಮಾತ್ಮ ಜ್ಯೋತಿ, ದ್ವಾದಶಾನುಪ್ರೇಕ್ಷೆ (ಪ್ರಾಕೃತದಲ್ಲಿ) ಗಳಿವೆ.

ಇದು ಪದ್ಯರೂಪವಾಗಿದೆ. ೧೪ ಉತ್ಪಲಮಾಲಾ ವೃತ್ತಗಳಿವೆ. ಪದ್ಯಗಳ ಕೊನೆಯಲ್ಲಿ 'ಜಿನೇಶ್ವರಾ' ಎಂಬ ಅಂಕಿತವಿದೆ. ಕವಿ ಬಾಳಚಂದ್ರಮುನಿ. ಈತನೂ ದ್ರವ್ಯ ಸಂಗ್ರಹಕ್ಕೆ ವೃತ್ತಿಯನ್ನು ಬರೆದಿರುವ (ನಂ. ೩೫೭) ಅಭಯಚಂದ್ರ ಸಿದ್ಧಾಂತದೇವನ ಶಿಷ್ಯನಾದ ಬಾಳಚಂದ್ರ ಪಂಡಿತದೇವನೂ ಒಬ್ಬ ಕವಿಯೇ ಆಗಿರಬಹುದೋ ಏನೋ? ಹಾಗಿದ್ದರೆ ಈತನ ಕಾಲ ಮುಂತಾದ ವಿಷಯಗಳಿಗಾಗಿ ೩೫೭ ನೆಯ ನಂಬರಿನಲ್ಲಿ (ದ್ರವ್ಯಸಂಗ್ರಹ ಲಘುವೃತ್ತಿ) ನೋಡುವುದು.

No. 360. ಧರ್ಮಪರೀಕ್ಷೆ-
DHARMAPARĪKṢE.

Substance, Palm-leaf. Size, 15½ × 1 inches. Pages, 155. Lines, 7 on a page. Character, Kanarese. Condition, injured. Appearance, old mode of writing fair.

Complete.

A work in praise of jain religion, criticising the religion of the Brahmins. By Vṛttavilāsa.

Beginning:

ಸ್ರ ॥ ಶ್ರೀಮದ್ಭವ್ಯಾಳಿ ಚಕ್ರಪ್ರಕರ ಸುಖಕರಂ ಸರ್ವಮಿಥ್ಯಾಂಧಕಾರ ।
ಸ್ತೋಮಪ್ರಧ್ವಂಸಿ ಬೋಧಾಮಲಕಿರಣಗಣೋದ್ಭಾಸಿ ಮೋಕ್ಷಾಬ್ಜಿನೀ ಸು ॥
ಪ್ರೇಮಂ ಸ್ಯಾದ್ವಾದ ಪೂರ್ವಾಚಲ ಸಮುದಿತೆ ನಾಶ್ಚರ್ಯ ವೃತ್ತಾಭಿರಾಮಂ ।
ಹೇಮಾಂಗಂ ವರ್ಧಮಾನಾಹಿಮಕರನತಿ ನಿರ್ದೋಷಮಂ ಮಾಟ್ಕೆ ನಮ್ಮೊಳ್ ॥
ಮ ॥ ಸ್ರ ॥ ಪುದಿದೆಂಟುಂ ಕರ್ಮಮಂ ಸಂಹರಿಸಿದ ಗುಣಮೆಂಬರ್ಕೆ ಪಕ್ಕಾದ ಲೋ
ಕಾ ।
ಗ್ರದೊಳಾ ಪೂರ್ವಾಂಗದಿಂದಂ ತಿರಿಪಿನೊಳೆಸೆದಿರ್ಪ ಕ್ಷಯ ಶ್ರೀಯ ಸ್ಥೈ ॥

ಪೊಂದಿದ ದಿವ್ಯಜ್ಞಾನ ಸಂಪತ್ತಿಯನನುನಯದಿಂ ತಾಳ್ದ ಗಣ್ಯ ಪ್ರಭಾವಾ

ಸ್ಪದರಾದರ್ಮ್ಮಲ್ಕೆ ನಮ್ಮೊಳ್ನಿಜಸುಖಪದಮಂ ಸಿದ್ಧರತ್ಯಂತ ಶುದ್ಧರ್ ॥

* * * *

ಕಂ ಮಹಿಪತಿಗಳ ಸಭೆಯೊಳ್ ಚೆ ।
ಕ್ಕ ಹೇವಾರ್ಯನೊಮ್ಮೆ ನುಡಿದೊಡೆ ತಾರ್ಕ್ಷ್ಯರ್ಗಂ ॥ (?)
ಗಹಪತಿ ಸೆಡೆವಂತಂಜಿದ ।
ರ ಹಮ್ಮನುೞ್ದುರ್ಕನೊಕ್ಕರೀ ತರ್ಕಜ್ಞರ್ ॥ (?)

ಕಾರ್ಯ್ಯ ಪರರಪ್ಪವರ್ ಚಾ ।
ತುರ್ಯ್ಯರ್ ಸಕಳಾಗಮಾ[ಡಿ](ದಿ) ಶಾಸ್ತ್ರವಿದರ್ ಮಾ ॥
ತ್ಸರ್ಯ್ಯಮನೆ ಬಿಟ್ಟು ಕವಿತಾ ।
ಚಾರ್ಯ್ಯರ್ ತಿರ್ದುಗೆ ಮದೀಯ ಕೃತಿಯುಂ ದಯೆಯಿಂ ॥

ಉ ॥ ಮಾ ॥ ಸಾರದೆ ದುರ್ಜನಪ್ರಕರದಾನನಮಂ ಶತರಾಸ್ಯ ತುಂದುರಾ ।
ಚಾರರ ತುಂಡಮಂ ಕೃಪೆವಿಹೀನರ ದುರ್ಮೊರ್ಗಮಂ ನಿರಸ್ತ ಭೂ ॥
ಭಾರಕರಪ್ಪರಾಲಪನಮಂ ಮತದೊಂದಳಿಪಿಂದೆ ಸಂತತಂ ।
ಸಾರದೆ ಬಂದು ನರ್ತಿಸುಗೆ ವೃತ್ತವಿಳಾಸನ ವಕ್ತ್ರಪದ್ಮದೊಳ್ ॥

* * * *

ಉ ॥ ಮಾ ॥ ಮುನ್ನಿನ ಚಾರು ಸಂಸ್ಕೃತದ ಧರ್ಮ್ಮ ಪರೀಕ್ಷೆಯನೋದಬಲ್ಲವಂ ।
ಕನ್ನಡದಿಂದೆ ವರ್ತ್ತಿಸಬಲ್ಲವನಿಲ್ಲದೊಡಾಗದೆಂದು ದರ ॥ (?)
ಸನ್ನುತವಾಗಿ ಯೆಲ್ಲರರಿವಂತಿರೆ ಚಂಪುವೆನಿಪ್ಪ ಬಂಧದಿಂ ।
ಕನ್ನಡದಿಂದೆ ಪೇೞಿರ್ದ್ದನಿದನೋದುಗೆ ಕೇಳುಗೆ ಕೂರ್ತು ಸಜ್ಜನರ್ ॥

ಕಂ ॥ ವ್ರತಗುರುಗಳಮಳಕೀರ್ತಿ ।
ವ್ರತಪತಿಗಳ್ ಚಾರು ಸೂಕ್ತಿಮುಕ್ತಾಭರಣಾ ॥
ಶ್ರುತಗುರುಗಳೆಂಬ ಮಹಿಮೋ ।
ನ್ನತಿಯಿಂ ಕೃತಕೃತ್ಯನಲ್ತೆ ವೃತ್ತವಿಳಾಸಂ ॥

* * * *

ರಥೋದ್ಧತೆ ॥ ಪಾಟಲೀಪುತ್ರಾಖ್ಯಪಟ್ಟಣದಲ್ಲಿಯನ್ಯ ಪುರಾಣಮಂ ।
ಕೂಟಮಾಳ್ಪಾಕಾರಮಂ ಕುಮತಾಗಮಾಚರಣತ್ವನಿ ॥
ದರ್ಶನಂ ಮಾಡಲ್ಕೆ ನಿನ್ನ ಮನೋರಥಂ ದೊರೆಕೊಳ್ಗುತಾಂ ।
ಪಾಟಿ(ಪಂ) ಸಮ್ಯಕ್ತ್ವಮಂ ಜಿನಧರ್ಮ್ಮದೊಳ್ಕೆಳೆಯಂ ನೃಪಾ ॥

ಕಂ ॥ ಎಂದು ಮುನಿ ತನ್ನ ಮನದೊಳ ।
ವಿಂದಂ ಪೇೞಲ್ಕೆ ಕೇಳ್ದು ಧರ್ಮ್ಮಕ್ಕೆ ಸಖಂ ॥
ಸುಂದಯುಮಿಲ್ಲದೆ ಬಂದಪ ।
ವೆಂದುತ್ಸಾಹಮನ ತಾಳ್ದಂ ಖಚರೇಂದ್ರಂ ॥

ತನ್ನೆಯು ಸಖಿಂಗೆ ಸುಖಸಂ ।
ಪನ್ನತೆಯಂ ಕುಮತ ಕಥೆಯು ವೃತ್ತಿಯುನರಿ ॥
ಗರ್ನ್ನತೆಯಂ ಮಾಟಿತ್ರೊಂದನು ।
ವಂ ನೆನೆವಂ ಮುನಿಯು ಮತದೆ ವೃತ್ತವಿಳಾಸಂ ॥

Colophon:

ಇದು ವಿನಮದಮರ ಮಕುಟತಟ ಘಟಿತಮಣಿಗಣ ಮರೀಚಿ ಮಂಜರೀ ಪುಂಜರಂಜಿತ ಪಾದಾರವಿಂದ ಭಗವದರ್ಹತ್ಪರಮೇಶ್ವರ ವದನ ವಿನಿರ್ಗತ ಶ್ರುತಾಂಬೋಧಿವರ್ಧನ ಸುಧಾಕರಂ ಶ್ರೀಮದಮರ ಕೀರ್ತಿರಾವುಳ ವ್ರತೀಶ್ವರಚರಣ ಸರಸಿರುಹ ಷಟ್ಪದ (೦) ವೃತ್ತವಿಳಾಸವಿರಚಿತ ಮಪ್ಪ ಧರ್ಮಪರೀಕ್ಷೆಯೊಳ್ ಮನೋವೇಗ ಪವನವೇಗೋತ್ಪತ್ತಿ ವರ್ಣನಂ ಪ್ರಥಮಾಶ್ವಾಸಂ.

ಕಂ ॥ ಶ್ರೀಸುಜನಸ್ತುತನಖಿಳ ಕ ।
ಳಾಸದನಂ ಸಖಸುಖೋದಯಂ ದಾನಚರಾ ॥
ಭ್ಯಾಸಂ ಜಿನಧರ್ಮಾಬ್ಜ ದಿ ।
ನೇಶಂ ಸಮ್ಯಕ್ತ್ವ ರತ್ನ ರತ್ನಾಭರಣಂ ॥
ಅಂದು ಮುನೀಶಂಗೊಲವಿಂ ।
ವಂದಿಸಿ ಬೀಳ್ಕೊಂಡು ನಿಜಪುರಕ್ಕೆ ಬರುತ್ತಾ ॥
ನಂದದೊಳ್ ಮನೋವೇಗಂ ।
ಮುಂದೆ ಬರುತ್ತಿಪ್ಪ ತನ್ನ ಸಖನಂ ಕಂಡಂ ॥

End:

ಕಂ ॥ ಇದು ದುರಿತತಿಮಿರರವಿರುಚಿ ।
ಯಿದು ಸತ್ಕೈವಲ್ಯಪಥದ ನಿಶ್ರೇಣಿ ಸಮಂ ॥
ತಿದು ರತ್ನತ್ರಯ [ಸವರಿ] (ಖ)ನಿಯೆನಿ ।
ಪಿದು ಧರ್ಮಪರೀಕ್ಷೆ ಭವ್ಯಜನಹಿತ ಕರಣಂ ॥

ಚಂ॥ ಜಿನಪದಸೇವಕಂ ಜಿನಮುನೀಂದ್ರ ಪದಾರ್ಚಕನನ್ಯದೈವಮಂ ।
ಕನಸಿನೊಳಾ [ವಗ] (ಡೊಡಂ) ನೆನೆಯದುತ್ತಮ ಚಿತ್ತನುದಾರಮೇರು ಸ ॥
ಜ್ಜನನಿಧಿ ಸತ್ಯಶೌಚಗುಣದಾಗರವಾ [ಗ್ನೆ] (ಜ್ಞೆ)ಯು ಜನ್ಮಭೂಮಿಯಿಂ
ದನುನಯದಿಂದೆ ಕೀರ್ತಿಪುದು ವೃತ್ತವಿಳಾಸನ [ಜನ] ನೀ ಜಗಜ್ಜನಂ ॥

Colophon:

ಇದು ವಿನಮದಮರ * * * ಧರ್ಮಪರೀಕ್ಷೆಯೊಳ್ ಪವನವೇಗ ಮೊದಲಾಗಿ ಸಕಲ ವಿಪ್ರಜನಂಗಳ ವ್ರತನಿರೂಪಣ ವರ್ಣನಂ ದಶಮಾಶ್ವಾಸಂ.

(ಆ)ಶ್ವಾಸ ೧೦ ಕ್ಕೆ ವೃತ್ತಕಂದ ವಚನ ಶ್ಲೋಕ ಗದ್ಯ ಸಹ ಗ್ರಂಥ ಪ್ರಮಾಣ ೨೦೫೦ [೦] ಕ್ಕಂ ಜಯ ಮಂಗಳ ಮಹಾ.

(ವಿ ವಿ·)—

ಸಮಗ್ರ. ಶಿಥಿಲ. ಲಿಪಿ ಉತ್ತಮ.

ಇದು ಚಂಪೂರೂಪವಾಗಿದೆ. ಆಶ್ವಾಸ ೧೦. ಇದರಲ್ಲಿ ಬ್ರಾಹ್ಮಣಮತ ದೂಷಣವೂ ಜೈನಮತ ಶ್ಲಾಘನವೂ ಉಕ್ತವಾಗಿವೆ. ಕವಿ ಅಮರಕೀರ್ತಿರಾವುಳ ವ್ರತೀಶ್ವರನ ಶಿಷ್ಯನಾದ ವೃತ್ತವಿಲಾಸನೆಂಬುವನು. ಈತನ ಕಾಲವು ಸು. ೧೧೬೦ (ಕ್ರಿ.ಶ.) ಎಂದು ಕವಿಚರಿತ್ರೆಯಲ್ಲಿದೆ. ಗ್ರಂಥಾದಿಯಲ್ಲಿ ವರ್ಧಮಾನಜಿನಸ್ತುತಿಯಿದೆ. ಅನಂತರ ಸಿದ್ಧಾದಿಗಳನ್ನೂ, ಯಕ್ಷಯಕ್ಷಿಯರನ್ನೂ ಸರಸ್ವತಿಯನ್ನೂ, ಕೇವಳಿಗಳಿಂದ ಚಿಕ್ಕ ಹೇಮದೇವರವರೆಗೆ ಗುರುಗಳನ್ನೂ ಕವಿ ಸ್ತುತಿಸಿದ್ದಾನೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು.

No. 361. ಧರ್ಮಪರೀಕ್ಷೆ-
DHARMAPARĪKṢE.

Substance, palm-leaf. Size, $12\frac{3}{4} \times 1\frac{1}{4}$ inches. Pages, 280. Lines, 6 on a page. Character, Kanarese. Condition, injured. Appearance, old.

Almost complete.

Same work as the above ; by Vṛttavilasa.

(ವಿ-ವಿ.)—

ಸಮಗ್ರವೆನ್ನಬಹುದು. ದಶಮಾಶ್ವಾಸದ ಕೊನೆಯ ಪದ್ಯದ (ಜಿನಪದಸೇವಕಂ * * * * ವೃತ್ತವಿಳಾಸನನೀ ಜಗಜ್ಜನಂ) ಕಡೆಯ ನಾಲ್ಕು ಅಕ್ಷರಗಳೂ, ಆಶ್ವಾಸಾಂತ್ಯದ ಗದ್ಯವೂ ಇರುವ ಓಲೆ ಮಾತ್ರ ಹೋಗಿದೆ. ಶಿಥಿಲ. ಲಿಪಿ ಸಾಮಾನ್ಯ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ೩೬೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 362. ಧರ್ಮಪರೀಕ್ಷೆ-
DHARMAPARĪKṢE.

Substance, palm-leaf. Size, $13\frac{1}{2} \times 1\frac{7}{16}$ inches. Pages, 176. Lines, 6 on a page. Character, Kanarese. Condition, very much injured. Appearance, old.

Incomplete.

Same work as the above ; by Vrttavilāsa.

(ವಿ-ವಿ.)—

ಇದು ಅತ್ಯಂತ ಶಿಥಿಲ. ಕೊನೆಯ ಆಶ್ವಾಸದಲ್ಲಿ ಕೆಲವು ಪದ್ಯಗಳಿಲ್ಲ. ಮಧ್ಯೆ ಮಧ್ಯೆ ಅನೇಕವಾಗಿ ಓಲೆಗಳು ಹೋಗಿವೆ. ಇರುವ ಓಲೆಗಳು ಮುರಿದು ಹೋಗಿಯೂ, ಹುಳು ತಿಂದು ಅತ್ಯಂತ ಜೀರ್ಣವಾಗಿಯೂ ಇವೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ೩೬೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 363. ಧರ್ಮಾಮೃತಂ.
DHARMĀMṚTAM.

Substance, palm-leaf. Size, 20 $\frac{15}{16}$ × 1$\frac{5}{8}$ inches. Pages, 324. Lines, 10 on a page. Character, Kanarese. Condition, injured. Appearance, old.

Complete.

Deals with certain principles of morality, such as kindness to all beings, truthfulness, etc., according to the jain system.

The author's name is Nayasēna.

Beginning :

ಶಾ ॥ ಶ್ರೀರಾಃವಾರಮಣೀಯ ಪಾದಸರಸೀಜಾ[ತಂ] (ತಂ) ನಿಲಿಂಪೇಂದ್ರ ವೃಂ।
ದಾರಾಧ್ಯಂ ಭುವನತ್ರಯಪ್ರಭು ವಿನೇಯಾನೀಕ ಕಲ್ಪದ್ರುಮಂ ॥
ಧೀರಂ ನಿತ್ಯನನಂತನಕ್ಷಯಸುಖಂ ಮುಕ್ತ್ಯಂಗನೇಶಂ ಜಗ [ಃ] ।
ತ್ಸಾರಂ ವೀರಜಿನೇಂದ್ರನೀಗೆಮಗೆ ಮುಕ್ತಿಶ್ರೀ [ಯಃ] ಸುಖಾವಾಪ್ತಿಯಂ ॥
[ಣಂಪೊರ್ದೆ ಲೋಕಾ ।
ಮ ॥ ಸ್ರ ॥ ಪುದಿದೆಂಟುಂ ಕರ್ಮಬಂಧಂ ಪ[ರಿಪ] (ಱಿವ) ಡೆ ಕಿಡೆದೆಂಟುಂ ಗು
ಸೌಖ್ಯಾ ॥
ಗ್ರದೊಳ್‌ೀರಂತೊಪ್ಪಿ ನಿ[ೀವ] (ಂದ) ಚ್ಯುತರಮೂರ್ತಪರ್ಣಾತಸರ್
ಭ್ಯುದಯಾನ್ನಿತ್ಯರ್ಜಗನ್ಮಂಗಳರಮಳಗುಣೋತ್ತುಂಗರುದ್ಧೂತಲೇಪ ।
[(ಬಿಕ್ಕ) ಕಾರುಣ್ಯಾದಿಂದಂ ॥
ಮಾರ್ಗದದಿಂ ಸಿದ್ಧ(ರ್) ಸ್ವಕೀಯ [ಂ] ಪ್ರಭುತೆಯನೆಮಗಂ ಮಾ[ಳ್ಕೆ]

*   *   *   *

ಚಂ ॥ ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ ।
ದಶದೃಶವಾಪ್ಪಪೂರ್ವರಸ ಭಾವ (?) ಗಜಾಂಕುಶನೊಳ್ಪುವೆತ್ತು ರಂ ॥
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿ ರನ್ನನೊಜೆ ಶೋ ।
ಭಿಸಿ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ನಿರಂತರಂ ॥
ಕಂ ॥ ರಸಭಾವಂ ಗಮಕಂ [ಕ] (ಕಾ) ।
ಣಿಸಿ ನಾಣ್ಣುಡಿ ದೇಸಿ[ಯು] ವೆತ್ತ ಪೊಸನುಡಿ ಮಾರ್ಗಂ ॥
ಕುಸುಱಿಯ ಬಗೆಯಂಬನಿತಱೊ ।
ಳೆಸೆಯದ ಕೃತಿ ಕೃತಿಯೆ ಬಗೆದು ನೋಡಿತ್ತೊಡೆ ಜಗದೊಳ್ ॥
ಪೊಸಗನ್ನಡದಿಂ ವ್ಯಾವ ।
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡವಮಂ ಚಿಂ ॥
ತಿಸಿ ಕೂಡಲಾರದಕ್ಕಟ ।
ವಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ॥
ಸಕ್ಕದಮಂ ಪೇಱಿತ್ತೊಡೆ ನೆಱೆ ।
ಸಕ್ಕದಮಂ ಪೇ [ಳ್] (ಱಿಗ) ಶುದ್ಧ ಕನ್ನಡದೊಳ್ತಂ ॥

ದಿಕ್ಕು [ವೆ] (ವ್ರುದೆ) ಸಕ್ಕದಮಂ ।
ತ [ಂದಿ] ಕ್ಕು [ವೆ] (ದೆ) ಬೆರಸಲ್ಕೆ ಘೃತಮುಮಂ ತೈಲಮುಮಂ ॥
ಪರಿಣತರೆನಿಸುವ ನಿರ್ಮ ।
ತ್ಸರರಂ ನೆಚ್ಚಿಪುದು ಗಹನಮಲ್ಲದು ಜಡರಂ ॥
ಕರಮ[ಲ್ಲ] (ಱಿದು) ತಿಳಿಪಲೆಂತೆನೆ ।
ಖರಕರನಂ ಗೂಗೆಗೆಯ್ದೆ [ಕೂ] (ತೋ) ರ್ಪಂತಕ್ಕುಂ ॥

*   *   *   *

ಕಂ ॥ ಜಿನಮತ್ತದೊಳೆನಿತು ಸಾರಮು ।
ದನಿತುಂ ಲೇಸಾಗಿ ತೋರ್ಕುಂ [ದೀ] (ಪೊ) ಕೃತಿಯೊಳದೆಂ ॥
ತೆನೆ ಕನ್ನಡಿಯೊಳಗೆ ಜಲ ।
ಕ್ಕನೆ ತೋರ್ಪವೊಲಿಭದ ರೂಪು ವಿಸ್ತರದಿಂದಂ ॥
ಮಾನಿತಶೀಲ ನಿಧಾನನ ।
ನೂನಗುಣಂ ಸಕಲಭವ್ಯಜನ ಬುಧಜನಟಿ ॥
ತ್ತಾ [ಲ್ಹಾರ] (ನಂದ) ಕರಂ ಕೇಳ್ದಯ ।
ಸೇನಬುಧಂ ಸುಕವಿನಿಕರಪಿಕಮಾಕಂದಂ ॥
ಅತಿಶಯ ಜಿನೇಂದ್ರವಚನಾ ।
ಮೃತಮಂ ಸಕಳೈಕಜೀವಹಿತಮಂ ಪುಣ್ಯೋ ॥
ದಿತಮಂ ಭವ್ಯನಿಕಾಯ ।
ಸ್ತುತಮಂ ನೆಱೆಪೇೞ್ವೆನಱಿಯೆ ಧರ್ಮಾಮೃತಮಂ ॥

[ವಿಳಾಸಂ ।

ಮ ॥ ಸ್ರ ॥ ಅದು ಮತ್ತೆಂತೆಂದೊಡಿಂದ್ರ ಪ್ರಣುತಪದಯುಗಂ ಮೋಕ್ಷಲಕ್ಷ್ಮೀ
ಮದನೇಭೇಂದ್ರೋಗ್ರ ಕಂಠೀರವನಮಳಯಶಂ ನಿರ್ಮಲಂ ಸರ್ವಸೌಖ್ಯಾ ॥

ಯಿಂ ಮು ।

[ದ್ಯು] (ಭ್ಯು) ದಯಂ ಶ್ರೀವೀರನಾಥಂ ನೆಲಸಿರೆ ವಿಪುಳಾದ್ರೀಂದ್ರದೊಳ್ ಶೋಭೆ
ತ್ತಿದ ದೇವಾನೀಕದಿಂ ಸುತ್ತಿದ ಖಚರಧರಾಧೀಶ ಸಂದೋಹದಿಂದಂ ॥
ಶಾ ॥ ಅಂತಿರ್ದಾ ತ್ರಿಜಗೇಶನೊಂದು ಸಭೆಯೊಳ್ ಭವ್ಯಾಬ್ಧಿಗಂ ಚಂದ್ರನೆಂ ।
ಬಂತೊಪ್ಪಿರ್ದ ಸಮಸ್ತಶಾಸ್ತ್ರವಿದರಂ ದುಷ್ಕರ್ಮವಿಧ್ವಂಸರಂ ॥

ಶ್ರೇಣಿಕಂ ।

[ಭ್ರಾಂತಿ] (?) (ಮುಂ ತಾಂ) ಗೌತಮರಂ ಮುನೀಂದ್ರನತರಂ ಸದ್ಭಕ್ತಿಯಿಂ

ರ್ಮಮಂ ಧರ್ಮಮಂ ॥

ಸಂ[ತತ ಕೈಮುಗಿದಿರ್ದು] (ತೋಷಂ ಮಿಗೆ ಕೂರ್ತು) ಕೇಳ್ದನಧಿಕ ಶ್ರೀಗಾ

*   *   *   *

ಕಂ ॥ ದುರಿತವಶದಿಂದೆ ತಿಜ್ಞನೆ ।
ತಿರಿಯಾದೆ ಸುಖನಿಳಯಮಪ್ಪ ಮುಕ್ತಿಶ್ರೀಯೊಳ್ ॥
ನೆರೆದಿರ್ಪನೆಂಬ ಭವ್ಯರ್ ।
ಕರಮಾದರದಿಂದೆ ತಾಳ್ಪುವುದು ದರ್ಶನಮಂ ॥

ವ॥ ಆ ದರ್ಶನ [ಕ್ಕೆ] (ಸೌಖ್ಯಕಷ್ಟಾಂಗಮುಂ) ರಾಜ್ಯಕ್ಕೆ ಸಪ್ತಾಂಗಮುಂ ಶರೀರ [ಕ್ಕೆ ಅ] (ಕ್ಕ) ವಯವಮುಂ ಮರಕ್ಕೆ ಶಾಖೆಯುಮೆಂತಂತೆ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿ (ತ್ವ) ಮು (ಂ ಉ) ಪ ಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂಬ.

ಕಂ॥ ಎಸೆವಂಗವೆಂಟರಿಂ ರಂ ।
ಜಿಸುವ ಮಹಾನರ್ಘ್ಯಮಪ್ಪ ದರ್ಶನಮುಂ ಶಂ ॥
ಕೆಸದೆ ಕೈಕೊಂಡು ನಿರುತಂ । (?)
ಯೆಸಗುಗೆ (?) ತಾಂ ಬಳಕಮೈದಣುವ್ರತತತಿಯುಂ ॥

ವ॥ ಅವಾವುವೆಂದೊಡೆ—

ಕಂ ॥ ಕೊಲ್ಲದ ಪುಸಿಯದ ಕಳ ।
ವಿನಿಸಿಲ್ಲದ ಪರವನಿತೆಯುರ್ಗೆ ಪದಪಿಂ ಚಿತ್ತಂ ॥
ಸಲ್ಲದ ಪರಿಗ್ರಹ[ಖ] ಕ್ಕೆಳ ।
ಸಿಲ್ಲದ ಸುವ್ರತಮಿವೈದುಮಲ್ಲವೆ ರತ್ನಂ ॥
ಇಂತೀ ಪದಿನಾಲ್ಕುಮನ ।
ತ್ಯಂತಂ ದೃಢಹೃದಯನಾಗಿ ತಾಳ್ದಿರ್ದಂಗೋ ॥
ರಂತೆ ನಿರಂತರ ಸೌಖ್ಯಂ ।
ಭ್ರಾಂತಿಲ್ಲದೆ ಕೂಡುಗಲ್ಲಿ ಸಂದೆಯಮುಂಟೇ ॥
ಇನಿತುಮನೋ [ಳ] (ರ)ಂತಿರೆ ನೆ ।
ಟ್ಟನೆ ತಾಳ್ದದ ನರನ ಸುಖಮನೇವೊಗಳ್ವೆದೊ ಕೇ ॥
ಳನಿತರೊಳೊಂದಂ ತಾಳ್ದದ ।
ಮನುಜಂಗಂ ಮುಕ್ತಿಲಕ್ಷ್ಮಿ ಗಹನಮೆ ಧರೆಯೊಳ್ ॥

ವ॥ ಎಂಬುದುಂ ಗಣಧರದೇವರ್ಗೆ ಮಗಧಾವನೀವಲ್ಲಭಂ ಭಕ್ತಿಪೂರ್ವಕಂ ಬಂದಿಸಿ ನಿಮ್ಮಡಿ [ನೀಗೆ](ಯಿನೆ) ನಗೆ ತಿಳಿವಂತಾಗೆ ದರ್ಶನಮುಂ ನಿಶ್ಶಂಕಾದ್ಯಷ್ಟಗುಣಂಗಳುಂ ಪಂಚಾಣುವ್ರತಮುಮೆಂಬೀ ಪದಿನಾಲ್ಕು ಮಹಾರತ್ನಂಗಳೊಂದೊಂದಱೊಳ್ ಚರಿಯಿಸಿ[ದ] ನಿವೃತ್ತಿಯನೆಯ್ದಿದ ಮಹಾಪುರುಷರ ಕಥೆಗಳಂ ಬೆಸಸಲ್ವೇಳ್ಕುಮೆಂಬುದುಂ ಮೃದುಮಧುರ ಗಂಭೀರ ಧ್ವನಿಯಿಂದಿಂತೆಂದು ಪೇೞಲ್ತಗುಳ್ದರ್.

* * * *

ವ॥ ಮೇಲೆ ತಪಂಬಡುವನೆಂಬಾದೇಶಮಂ ಕೇಳ್ದು ಕಡೆಯೊಳ್ತಪಂಬಟ್ಟು ಮಡುಪಿ ಸರ್ವಾರ್ಥಸಿದ್ಧಿಯೊಳ್ ಪುಟ್ಟುವನೆಂದು ಗಣಧರಸ್ವಾಮಿಗಳ್ ಪೇೞ್ವುದುಂ ದರ್ಶನದೊಳಾದ ಪ್ರತ್ಯಕ್ಷಫಲಮಂ ಕಂಡು ನಂಬಿ.

ಮ॥ ಸ್ರ॥ ಪಿರಿದುಂ ಸಂತೋಷದಿಂದ ತನಗೆ ಸಕಲ ಸಾಮ್ರಾಜ್ಯಮುಂ ಕೈಗೆವಂದಂ।
ಕಂ ಶೀಲರತ್ನಾ ॥
ತಿರೆ ಪೆರ್ಚಿಂದೊಂದು ಮು[ಯ್ವೆ] (ಯ್ಕೀ)ಲ್ಲದೆ [ನಾ] (ನಲಿದನ) ನಂಗಾಂತ
ಕರನುರ್ವೀಪೂಜ್ಯನುದ್ವೃತ್ತಪನಘತಮಚಂಡಾಂಶು ತ್ರೈವಿದ್ಯಚಕ್ರೀ ।
ಶ್ವರಪಾದಾಂಭೋಜಭೃಂಗಂ ಸುಕವಿವನಮನಃ ಪದ್ಮನೀರಾಜಹಂಸಂ ॥

Colophon :

ಇದು ನಿಖಿಳದಿವಿಜಪರಿವೃಢಮಕುಟತಟಘಟಿತ ಮಣಿಗಣಕಿರಣ ವಿಲುಳಿತ ಚುಂಬನೀಯ ಪರಮಜಿನ ಚರಣಯುಗಳ ಸರಸಿರುಹ ಮತ್ತಮಧುಕರ ನಿರುಪಮ ಸಹಜಕವಿ ಜನ[ಮನಃ ಪದ್ಮಿನೀ](ಪಯಃ)ಪಯೋಧಿ ಹಿಮಕರನುತಭಾವಯುತ ದಿಗಂಬರದಾಸ ನೂತ್ನಕವಿತಾ ವಿಳಾಸಂ ಶ್ರೀಮನ್ನಯಸೇನದೇವ ವಿರಚಿತಮಪ್ಪ [ದರ್ಶನಷ್ಟಾಂಗವ್ಯಾವರ್ಣನಂ] ಧರ್ಮಾಮೃತಪುರಾಣ ದೊಳ್ ದರ್ಶನವ್ಯಾವರ್ಣನಂ ಪ್ರಥಮಾಶ್ವಾಸಂ.

ಕಂ॥ ಶ್ರೀಗಿದು ಮುಕುರಂ ಮುಕ್ತಿ ।
ಶ್ರೀಗಿದು ಲಾವಣ್ಯವೆನಿಪ ದರ್ಶನರತ್ನಂ ॥
ಬೇಗಂ ದೊರೆಕೊಳೆ ಪಿರಿದುಂ ।
ರಾಗಿಸಿದಂ ಸುಕವಿನಿಕರಪಿಕಮಾಕಂದಂ ॥

End :

ಚಂ॥ ಗಿರಿಶಿಖಿ ವಾಯುಮಾರ್ಗ ಶಶಿಸಂ (ಖ್ಯೆ) ಯೊಳಾವಗವೊಂದಿ ವರ್ತಿಸು ।
ತ್ತಿರೆ ಶಕಕಾಲಮುನ್ನತಿಯ ನಂದನ [ಸಂ] ವತ್ಸರದೊಳ್ ಮಹೋತ್ಸವಂ ॥
ಬೆರಸೆಸೆದಿರ್ದ ಭಾ(ದ್ರ)ಪದಮಾಸದೊಳಗ್ಗದ ಶುಕ್ಲಪಕ್ಷದೊಳ್) ।
ನಿರುಪಮಮಪ್ಪ ಪಾ[ಡ್ಯ] (ಡಿವ) ದೊಳೊಪ್ಪುವ ಹಸ್ತಯುತಾರ್ಕವಾರದೊಳ್॥
ಕಂ ॥ ಧರಣೀಪೂಜ್ಯಂ ಭವ್ಯೋ ।
ತ್ಕರವಂದ್ಯಂ ಕಾವ್ಯರತ್ನಮಮಳಯಶಶ್ರೀ ॥
ಕರಮೆನಿಸಿದ್ದೀ ಗ್ರಂಥಂ ।
ನಿರುತಂ ನಿರ್ವಾಣಮಾಯ್ತು ನಿರ್ವಿಘ್ನತೆಯಿಂ ॥
ಮ॥ ವಿ॥ (ಪಲರುಂ ಧರ್ಮಮನೊಲ್ಲದುಗ್ರನರಕಾಂಭೋರಾಶಿ) ಯೊಳ್ಬರ್ದುಕೋ '
ಟಲೆಗೊಳ್ವರ್ಗರಿವಂತು ಕನ್ನಡದಿನೊಪ್ಪಂಬೆತ್ತ ಜಾಣ್ಣ್ವಿತಿನಿಂ ॥
ಪಲವುಂ ದೇಸಿಯ ಸಂದುದಾಹರಣೆಯುಂ ಪೇಟ್ವೆಂಬುದಂ ಕೂರ್ಮೆಯಿಂ । (?)
ತಲೆಯುಂ ತೂಗುವಿವಂ ಜಿನೇಂದ್ರಮತಮಂ ವಾತ್ಸಲ್ಯರತ್ನಾಕರಂ ॥
ಕಂ॥ (ಮುಳುಗುಂದದೊಳರ್ದು ಮಹೋ ।
ಜ್ವಳಧರ್ಮಾಮೃತಮನರ್ತಿ) ಯಿಂದಂ ಭವ್ಯಾ ॥
ವಳಿಗಱಿಯಲ್ ಪೇಟ್ದಿ[ಂಧಾತ್ರೀ] (ನಿಳಾ) ।
[ವಳಯಂ ಪೂಜ್ಯಂ] (ತಳಪೂಜ್ಯಂ) ಸುಕವಿ (ನಿಕರ) ಪಿಕಮಾಕಂದಂ ॥

[ರಿಣೀ ।

ಮ॥ ವಿ॥ ಕುಲಶೈಲಾವ [ನಿ] (ಳ) ನಿಲ್ವಿನಂ ಸುರನಗೇಂದ್ರಂ ನಿಲ್ವಿನಂ ಧಾರಿ
ವಲಯಂ ನಿಲ್ವಿನಮಂಬುಧಿ ಪ್ರತತಿಗಳ್ ಕೇಳ್ನಿಲ್ವಿನಂ ನಿ[ಲ್ಕು] (ಲ್ಕೆ) ನಿ ॥
ರ್ಮ[ಳ] (ಲ) ಧರ್ಮಾ(ಮೃತಮೆಯ್ದೆ ತೋಯನಿಧಿಪರ್ಯಂತಂಬರಂ ಪರ್ವಿಭೂ ।
ತ[ಳ] (ಲ)ದೋಳ್ ಕಾಂಚನರಾಶಿಯಂತೆಸೆದು ತಚ್ಚಂದ್ರಾರ್ಕತಾರಂಬರಂ ॥
ಜಿನಧರ್ಮಂ ಸಕಳಾವನೀತಳಮುಮಂ ಪರ್ವಿಕ್ಕೆ ಭೂಪಾಲಕರ್ ।
ಜನಮಂ ನ್ಯಾಯದೊಳೊಂದಿ ರಕ್ಷಿಸುಗೆ ಭೂಲೋಕಕ್ಕೆ ಸಂತೋಷಮ ॥
ಪ್ಪಿನೆಗಂ ಧರ್ಮಳೆ ಕೊಳ್ಗೆ ಭವ್ಯನಿಕರಕ್ಕಾನಂದಮಂ ಮಾಟ್ಕೆ ಕಾಂ ।
ಚನಮುಂ ಕೀರ್ತಿಯುಮಕ್ಕೆದಿವ್ಯಸುಖಮುಂ ಭದ್ರಂ ಶುಭಂ ಮಂಗಳಂ ॥

Colophon :

(ಇದು ನಿಖಿಲದಿವಿಜಪರಿ) ವೃಢಮಕುಟತಟಘಟಿತ * * * * * ಧರ್ಮಾಮೃತ ಪುರಾಣಗೊಳ್ ಪರಿಗ್ರಹವ್ರತವ್ಯಾವರ್ಣನಂ ಚತುರ್ದಶಾಶ್ವಾಸಂ.

(ಶಿ-ವಿ.)—

ಇದು ಚಂಪೂರೂಪವಾಗಿದೆ. ಆಶ್ವಾಸ ೧೪. ಈ ಯಾಶ್ವಾಗಳಲ್ಲಿ ದರ್ಶನ, ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಪ್ರಭಾವನೆ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮ, ಅಪರಿಗ್ರಹ—ಈ ವ್ರತ ಕಥೆಗಳು ಕ್ರಮವಾಗಿ ಹೇಳಿವೆ. ಕವಿ ನಯಸೇನ. ಈತನು ‘ ಎನಿತೊಳವು ತರ್ಕಶಾಸ್ತ್ರವು । ವನಿತುವುನತಿಶಯದಿನೆಸೆಯೆ ನಯಸೇನ ಮುನೀಂ ॥ ದ್ರನೆ ಬಲ್ಲನೆಂಪುಧಾರಿಣಿ । ಮನದಾದರದಿಂದೆ ಪೊಗಟಿತೆ ಕೀರ್ತಿಯನಾಂತಂ ’ ಎಂಬುದರಿಂದ ತರ್ಕಶಾಸ್ತ್ರಜ್ಞನೂ, ಭಾಷಾಭೂಷಣದ ‘ ದೀರ್ಘೋಕ್ತಿರ್ನಯಸೇನಸ್ಯ ’ ಎಂಬ ಸೂತ್ರದಿಂದ ವ್ಯಾಕರಣಕರ್ತೃವೂ ಆಗಿದ್ದನೆಂದು ತಿಳಿದು ಬರುತ್ತದೆ. ಈತನು ಈ ಗ್ರಂಥವನ್ನು ‘ ಗಿರಿಶಿಖಿವಾಯುಮಾರ್ಗಶಶಿ ಸಂಖ್ಯೆಯದಾದ ನಂದನ ಸಂವತ್ಸರದಲ್ಲಿ ರಚಿಸಿದಂತೆ ಹೇಳುತ್ತಾನೆ. ಈ ರೀತಿ ಲೆಕ್ಕಮಾಡಿದರೆ ಶಕ ೧೦೩೩ ಆಗಬೇಕಾಗುತ್ತದೆ. ಆದರೆ ನಂದನ ವರ್ಷವು ೧೦೩೩ ಆಗುವುದಿಲ್ಲ. ೧೦೩೪ ಆಗುವುದು. ‘ ಗಿರಿ ’ ಎಂಬುದಕ್ಕೆ ನಾಲ್ಕು ಎಂದು ಲೆಕ್ಕವಿರುವ ಪಕ್ಷದಲ್ಲಿ ಈ ಕಾಲವು ಸರಿಹೋಗುವುದು. ಹಾಗಾದರೆ ಶಕ ೧೦೩೪ (ಕ್ರಿ.ಶ. 1112) ರಲ್ಲಿ ಈ ಗ್ರಂಥವು ವಿರಚಿತವಾಗಿರಬೇಕು. ಮುಳುಗುಂದದಲ್ಲಿ ಈ ಗ್ರಂಥವನ್ನು ಬರೆದಂತೆ ತಿಳಿಯುತ್ತದೆ. ಈತನ ಗುರುವು ನರೇಂದ್ರಸೇನ ಮುನಿಯೆಂದು ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿ ಮುದ್ರಿತವಾಗಿರುವ ಪ್ರತಿಯ ಪದ್ಯದಿಂದ ತಿಳಿದು ಬರುತ್ತದೆ. ಆದ ಕಾರಣ ಆ ಪದ್ಯವನ್ನು ಈಕೆಳಗೆ ಬರೆದಿದೆ.

ಮ॥ ವಿ॥ “ ಗುರು ವಿದ್ಯಾಬ್ಧಿ ನರೇಂದ್ರ ಸೇನ ಮುನಿಪಂ ತ್ರೈಲೋಕ್ಯಚಕ್ರೇಶ್ವರಂ ।
ಪರಮಶ್ರೀಜನನಿ ಪ್ರದೈವನಮಳಂ ಶ್ರೀಜೈನಯೋಗೀಶ್ವರರ್ ॥
ಪರಮಾರ್ಥಂ ತನಗಾಳ್ದರುತ್ತಮವಿನೇಯರ್ಬಂಧುವರ್ಗಂ ನಿಜಾ ।
ದರದಿಂದೆಂದೊಡೆ ಭಾಪ್ರ = ಧನ್ಯನೆ := ದಿಟಂ ವಾತ್ಸಲ್ಯರತ್ನಾಕರಂ ॥

ಮ॥ ಸ್ರ॥ ಸ್ಥಿರವಾಕ್ಯಂ ಸುಪ್ರತಾಂಭೋನಿಧಿ ಸಕಲಜಗತ್ಪಾವನಂ ರಾಜಪೂಜ್ಯಂ ।
ಪರಮಶ್ರೀಜೈನಧರ್ಮಾಂಬರ ದಿನಕರನುದ್ಯತ್ತಪೋಮೂರ್ತಿ ವಾಹ್ಯಾ ॥
ಭರಣಂ ತ್ರೈವಿದ್ಯಚಕ್ರೇಶ್ವರ ವಿಮಳಪದಾಂಭೋಜಭೃಂಗಂ ಜಿನಶ್ರೀ ।
ಚರಣಾಲಂಕಾರ ಶೀರ್ಷಂ ಸುಕವಿಜನಮನಃ ಪದ್ಮಿನೀರಾಜಹಂಸಂ ॥ ”

ಕನ್ನಡದಲ್ಲಿ ಗ್ರಂಥವನ್ನು ಬರೆಯಲು ತೊಡಗಿ ಸಂಸ್ಕೃತ ಪದಗಳನ್ನು ಹೇರಳವಾಗಿ ಉಪಯೋಗಿಸಬಾರದೆಂಬ ಅಭಿಪ್ರಾಯವನ್ನು ಸೂಚಿಸಿರುತ್ತಾನೆ. ಈ ಗ್ರಂಥಕ್ಕೆ ‘ ಕಾವ್ಯರತ್ನ ’ ವೆಂದು ಹೆಸರಿಟ್ಟಿರುತ್ತಾನೆ. ಗ್ರಂಥಾದಿಯಲ್ಲಿ ವೀರಜಿನನನ್ನು ಸ್ತುತಿಸಿದ್ದಾನೆ. ಅನಂತರ ಸಿದ್ಧಾದಿಗಳು, ಯಕ್ಷಯಕ್ಷಿಯರು, ಸರಸ್ವತಿ, ಅರ್ಹದ್ಬಲಾಚಾರ್ಯರಿಂದ ಅಕಳಂಕದೇವರ ವರೆಗಿರುವ ಗುರುಗಳು ಇವರನ್ನು ಸ್ತುತಿಸಿದ್ದಾನೆ.—ಈತನಿಗೆ ‘ ಸುಕವಿನಿಕರಪಿಕಮಾಕಂದ, ಸುಕವಿಜನ ಮನಃ ಪದ್ಮಿನೀರಾಜಹಂಸ ’ ಮುಂತಾದ ಬಿರುದುಗಳಿದ್ದಂತೆ ತಿಳಿಯುವುದು. ಆಶ್ವಾಸಾಂತ್ಯಗಳ ಗದ್ಯಗಳಲ್ಲಿ ‘ ದಿಗಂಬರದಾಸ, ನೂತ್ನಕವಿತಾ ವಿಲಾಸ ’ ಎಂಬ ಅಂಕಿತವೂ ಇವೆ. ಈತನು ತನ್ನ ಗುರುವಾದ ನರೇಂದ್ರಮುನಿಯ ವಿಷಯವಾಗಿ ಹೀಗೆ ಬರೆದಿರುತ್ತಾನೆ.

ಮ॥ ವಿ॥ ಪೊಡವೀಶಂ ಭುವನೈಕಮಲ್ಲನುತ ಪಾದಾಂಭೋಜರತ್ಯೂರ್ಜಿತರ್ ।
ದೃಢಚಿತ್ತರ್ ಗುಣಚಂದ್ರಪಂಡಿತರಿಳಾ ಲೋಕೈಕಪೂಜ್ಯರ್ ಮನಂ ॥
ಬಿಡೆ ತ್ರೈವಿದ್ಯಮಹಾಭಿಧಾನಮನದಂ ಕೂ[ಳ್ಕರ್ಕ] (ರ್ತಳ್ಕ)ಱಿಂ ಕೊಟ್ಟಗೆಂ ।
ದೊಡೆ ತ್ರೈವಿ[ದ್ಯಾ] (ದ್ಯ)ನರೇಂದ ಸೇನ ಮುನಿಪ್ರೊ[ಲ್ಭಾ] (ಲ್ವಾ)ಗ್ಮಿಶ
[ರಾಲೋಕದೊಳ್ ॥'

ಉಳಿದ ವಿಷಯುಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು. ಈ ಪ್ರತಿಯ ಕೊನೆ ಯಲ್ಲಿ—

ಶ॥ 'ಶ್ರೀಮತ್ಕಾಶಿಪುರೀಂದಿರೇಶ ವಿಬುಧನಾರ್ಥನುತ ಶ್ರೀಪದೋ ।
ದ್ಧಾಮಃ ಕಾಮಮದದ್ವಿಭಃ ಪ್ರಬಲಿತೋ ದಂಷ್ಟ್ರಾಂಕರಾಲಂ ಮೃಗೇಂ ॥
ದ್ರಾಮೋಹಾಂಧಪತಂಗಭವ್ಯ ಕುಮುದಸ್ತೋಮಂ ಸುಪಾರ್ಶ್ವಂ ಜಿನೇಂ ।
ದ್ರಾಮ . . . . ರತ್ನಾಕರಾ ॥ (?)

ಕಂ॥ ವೇಣುಪುರವರದ ಮಧ್ಯ ।
ಶ್ರೇಣಿಯ ಚೈತ್ಯಾಲಯದೊಳು ನೆಲಸಿದ ಭವ್ಯ ॥
ಪ್ರಾಣಂ ಸುಪಾರ್ಶ್ವ ಜಿನಪನ ।
ಮಾಣದೆಯಾರಾಧಿಸುತ್ತ ಧರ್ಮಾಮೃತಮಂ ॥

ನೆಱೆ ಶುಕ್ಲನಾಮ ಸಂವ ।
ತ್ಸರ ಭಾದ್ರಪದವಿಮಾಸ ಶುಕ್ಲ ಸುಪ . . . . . ॥
. . . . ।
ರೆದೆನು ಸಂಪೂರ್ಣವಾಗಿ ಧರ್ಮಾಮೃತಮಂ ॥

ಇಂದ್ರಾನ್ವಯೋದ್ಭವ(ನ)ನಾ ।
ಗೇಂದ್ರನ ತನುಜಾತನಾದ ಬೊಮ್ಮಣ ಕವಿ ದೇ ॥
ವೇಂದ್ರ ವೃಂದಾರ್ಚಿತ ಜಿನ ।
ಚಂದ್ರನ ಚೈತ್ಯಾಲಯದೊಳು ಬರೆದನು ಮುದದಿಂ ॥

ಎಲ್ಲಾ ಕಾ . . . . . . ।
. . . . ತೆ ಧರ್ಮಾಮೃತ ಕೃತಿ ॥

ಯುಲಿ(ಯೆ) ನಂಬುಗೆ[ಯು] ಭಾವನೆ ।
ನಿಲ್ಲಲು ಸುಗತಿಯನು ಪಡೆವುದೊಂದಚ್ಚರಿಯೇ ॥
ಗಾವಿಲರು ಯುಗ್ಗ ಮುದ್ದರು ।
ಭಾವಿಸುವರೆ ಪುಣ್ಯಕತೆಯ ಕೇಳ್ವರೆ ಸುಜನ[ರು] (ರ್) ॥ (?)
ಭಾವಕರು ಭವ್ಯಸಂತತಿ ।
[ಆ](ಯಾ) ವಾಗಲು ಪ . . . . ॥
ಕರ್ಮಪೂರಿತರು ಕುಹತ್ರರು ।
ಧರ್ಮಾಮೃತದಿರವ ನೋಡಿ ಮೆಚ್ಚರು ಹುಚ್ಚರು ॥
ದುರ್ಮತಿಯೊಳೊರೆದ ಮಿಥ್ಯಾ ।
ಧರ್ಮವೆ ತಾಂ ಸಹಜವೆಂದು ನಲಿವರು ಮನದೊಳ್ ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ ೧೬೭೧ ಶುಕ್ಲನಾಮ ಸಂವತ್ಸರದ ಭಾ . . . . ಭದ್ರಂ ಭೂಯಾತ್‌' ಅಂತು ಆಶ್ವಾಸ ೧೪ (೦ಗಳ್ಗ) ಪದ್ಯ ೨೦೮೦, ವಚನ ೨೦೨೦ ಅಂತು ೫೦೦೦ ಪದ್ಯ[ಕ್ಕ]ಂ ಮಂಗಳ ಮಹಾಶ್ರೀ' ಎಂದಿದೆ.

No. 364. ಧವಳದಹಾಡು ಮೊದಲಾದುವು.

DHAVAḶADAHĀDU ETC.

Substance, Śrītala. Size, $9\frac{1}{4} \times 1\frac{1}{16}$ inches. Pages, 126. Lines, 8 on a page. Character, Kanarese. Condition, very much injured. Appearance, old.

Incomplete.

Contains songs sung on auspicious occasions. The name of the author is not known.

Beginning:

ಮಂಗಳವಾಗಲಿ ಧರೆಗೆ | ಮಂಗಳವಾಗಲಿ ಜನಕೆ ॥
ಮಂಗಳಪತಿ ಶಯುವಾಗಲಿ . . . . . . ॥
. ರಪತಿಶತವಂದ್ಯರಿಗೆ | ನಿರುಪಮ ನಿಜಮಹಿಮರಿಗೆ ॥
ಅರಹಂತರಿಗಾನಂದದೊಳಭಿವಂದಿಪೆ । . . . ॥
. . . . ಹಿತರಿಗೆ । ಶಿವನು ಖ (?) ಸಂಪನ್ನರಿಗೆ ॥
ಭುವನಾರಾದರಿಗಾ । ನೆಱಗುವೆ ಸಿದ್ಧರಿಗೆ ॥

* * * *

ಸೊಗಸುವ ಸೊಬಗಿನೊಡನೆ । ಪೊಗದೋರುವ ಯೌವನದ ॥
ಪ್ನಗರಾಜೇಂದ್ರನ ಮದುವೆ । . . . . ॥
ತನ್ನಕುಲದ ಹಿರಿಯರನು । ಮನ್ನಿಸಿ ಕರೆಯಿಸಿ ಮನೆಗೆ ॥.
ಬಿನ್ನವಿಸಿದನವರಿಗೆ | ತನ್ನಂತಸ್ಥವನು ॥
ಯು . . . . | ನೂತನ ಯೌವನವಾಯಿತು ॥
ಈತಂಗೀಗವೆ ಮದುವೆಯ ಮಾಡುವುದೆನಲು ॥

* * * *

ಧರೆಯೊಳೆಸೆವ ಹೆಂಬೊಳಲೊ | . . ಪತಿ ನರಪಾಲ ॥
ಸರಿದೊರೆಯಾತ್ರನು ನಿರ್ವೊಳು | ಕೊಳ್ಳು ಕೊಡೆಗಹನು ॥
ಆತನ ಸತಿ ಶೀಲವತಿ | ನೀತಿ ನಿಪ್ರ(ಣೆ ಬಹುರೂ)ಪವತಿ ॥
ಭೂತಳನುತೆ ಜಗದಂಬಿಕೆ ಶೋಭಿಸುತಿಹಳ್ ॥
ಅವರಿರ್ವರಿಗುದಯಿಸಿದಾ । ಕುವರಿ ನಿನ್ನಯ . . . ॥
ಸವನಿಸಿ ಚಿನ್ನಕೆ ಪರಿಪಳ ಬೆರೆದಂತಿಹುದು ॥

* * * *

ಮದಗಜಗಳ ನಲಿದೇಱ । ಮದವರ್ಕ್ಕಳು ಕುಳ್ಳಿರಲು ॥
ಚದುರೆಯರಂದ ಚಮರಗಳ ಡಾಳಿಸುತಿರಲು ॥
ಯ . . ವಧುಗಳ ಜನಕರು । ಹಿರಿಯರು ದೊರೆಗಳು ಬಂಧುಗಳು ॥
ಕರಿತುರಗರಥಂಗಳ ನಲಿವವರೇಱಿದರೆ ॥
ಮೊದಲೊಳ್ ಋತುಮತಿಯಾದಾ । ಸುದತಿಗೆ ನಾಲ್ಕುದಿವಸದ ।
ವಿದಿತ ವಿಧಾನವು ಗರ್ಭಾದಾನವ . . . ದೂ ॥

*   *   *   *

ತಾವರೆಯಲಿ ಕಳಹಂಸೆ । ಭಾವವೆರಸಿ[ಯಿ]ರ್ಪ್ಪಂತೆ ॥
ದೇವಸಹಿತ ಸೆಜ್ಜೆಯ ಮನೆ . . . . . ರ್ದಾ ॥
. ರತಿಲೀಲೆಯೊಳು ಬಣ್ಣಿಪೊಡೆ । ಸತಿಯರು ಪಾಡು . . . ಲಾ ॥

ಮತವಲೆಂದೆೞಜೆ . . . . . ರಿ . ದೆನ . ವಾ . ॥
ಬೆಳಗಾಯಿತು ಬೆಳಗಿನೊಳು । ಗೆಲುವಿಂದಱತಿ ಕಣ್ದೆರೆದು ॥
ಝುಳಕವಮಾಡಿ ಸಿಂಗರಿಸಿ . . . ಚಿತಾರ್ಥದೊಳು ॥

ಪಡೆದರ ಮೊಗನೋಣ್ಬುದಕೆ । ತೊಡಕೆತಾತ್ರಗೆ ಕ . ಲ . ॥
ಮಡದಿವೆರ . . . . ಲ್ಲಿಯ ನಾರಿ . . . . . . ।
ಪಂಚಮದಿನದುದಯದಲಿ । ಮಿಂಚು . ಱತಿಯ ಸಿಂಗರಿಸಿ ಅಂಚೆ . ಮ
[ನೆವೆರಸಯ್ಯನ . . . ಡನಾ ॥

Colophon:

ಈ ಧವಲ ಸಮಾಪ್ತ.

End:

ಶೋಭನವ ಲಾಲಿಸುತಾ ಶೋಭೆಯ ಶೋಭೆಯ ಮಗ . . ಭವದ ಪಾರ್ತ್ಥ . . . ವೃತ್ತ ಪಡೆವವರು ॥ ಸೌಭಾಗ್ಯದ ಗೋಷ್ಠಿ ಯೊಳಗಿಹರು ॥

ಅಯ್ಯನುಡುಗೊ . ಯಿತ್ತಾ . . . . ಯಿಗಳು ಕೊಡಲು ಕಯ್ಯಾರೆ ಕೊಂಡು ಮಗನಿರಲು ॥ ಸೊಸೆ ಬಂದಳೊಯ್ಯನೆ ಮಾವನವರ ಮನೆಗೆ ॥

ನಾರಿ . . . . . .

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಗ್ರಂಥಪಾತ ಬಹಳ. ಲಿಪಿ ಸಾಮಾನ್ಯ.

ಇದು ಹಾಡಿನ ರೂಪದಲ್ಲಿದೆ. ಇದರಲ್ಲಿ ಸೀಮಂತದ ಧವಲ, ಜಾತಕರ್ಮ ಧವಲ, ಉಪನಯನದ ಧವಲ, ಭರತೇಶ್ವರನ ಧವಲ, ಭರತೇಶ್ವರನ ಶೋಭನ ಮುಂತಾದುವಿವೆ. ಇದು ಜೈನಕ್ರಿಯಾಕಲಾಪ ಮುಂತಾದುವನ್ನೊಳಗೊಂಡಿದೆ. ಕವಿ ಮತ್ತು ಕಾಲ ಮೊದಲಾದ ವಿಷಯಗಳು ಈ ಪ್ರತಿಯಿಂದ ತಿಳಿದು ಬರುವುದಿಲ್ಲ.

No. 365. ನವನಿಧಿಭಂಡಾರದ ನೋಂಪಿ-

NAVANIDHIBHANDĀRADANŌMPY.

Substance, Śritāla. Size, $10\frac{3}{8} \times 1\frac{7}{8}$ inches. Pages, 4. Lines, 8 on a page. Character, Kanarese. Condition, injured. Appearance, old.

Begins on fol. 32b. of the MS described under No. 318 ante.

Complete.

Describes the details of proedure, etc., for the performance of the ceremony of Navanidhibhaṇḍāra, according to Jains. The name of the author cannot be made out from this MS.

Beginning:

ಕಂ॥ ಶ್ರೀವರ್ಧಮಾನಜಿನಪಂ
ಗಾವಗವೊಲಿದೆಱಗಿ ಭಕ್ತಿಯಿಂ ನವನಿಧಿಭಂ ।
ಡಾರ (?) ದ ನೋಂಪಿಯ ಕಥೆಯಂ ।
ಭೂವಳಯಕ್ಕಱಿಯೆ ಪೇೞ್ವೆನತಿಶಯದಿಂದಂ ॥

ವ॥ ಜಂಬೂದ್ವೀಪದ ಭರತಕ್ಷೇತ್ರದ ಸುಗಂಧಿ ವಿಷಯದ ರಥಸಂಚಯಪುರಮನಾಳ್ವಂ ದೇವಪಾಲನೆಂಬರಸಂ. ಆತನರಸಿ ಲಕ್ಷ್ಮೀಮತಿ ಮಹಾದೇವಿಯೆಂಬಳ್. ಅವರಿರ್ವರುಂ ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತು ಮಿರಲೊಂದು ದೆವಸಂ ಸಕಲ ಗುಣಸಂಪನ್ನರಪ್ಪ ಶುಕ್ರಸಾಗರ ಭಟ್ಟಾರಕರೆನಿಪ ದಿವ್ಯತಪೋನಿಧಿಗಳ್ ಬಂದು ಪುರದ ಪೊಱವಣ ಮನೋಹರಮೆಂಬುದ್ಯಾನದೊಳಿರ್ಪುದುಂ,

* * * *

ಲಕ್ಷ್ಮೀಮತಿ ಮಹಾದೇವಿ ಕರಕಮಲಂಗಳಂ ಮುಗಿದು, ಯೆನಗೆ ಅನಂತ ಸುಖಕ್ಕ ಕಾ ಗಣಮಪ್ಪುದಾವುದಾನುಮೊಂದು ನೋಂಪಿಯಂ ಬೆಸಸಿಮೆನಲವರಿಂತೆಂದರ್.—ನವನಿಧಿ ಭಂಡಾರದ ನೋಂಪಿಯಂ ಆಷಾಢದ ನಂದೀಶ್ವರದಷ್ಟಮಿಯಾದಿಯಾಗಿ ಕಾರ್ತಿಕ ನಂದೀಶ್ವರದ ಪೌರ್ಣಮಾ ಪರ್ಯಂತಂ ದಿನಂಪ್ರತಿ ಶುಚಿರ್ಭೂತರಾಗಿ ಚೈತ್ಯಾಲಯಕ್ಕೆ ಬಂದು ದೇವರಮುಂದೆ, ಅರ್ಹತ್ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಸರ್ವಸಾಧುಗಳು ಜಿನಧರ್ಮ, ಜಿನಾಗಮ, ಜಿನ ಚೈತ್ಯಾಲಯಂಗಳಂ ಪೆಸರ್ಗೊಂಡು ಪುಂಜಮನಿಕ್ಕಿ ವಂದಿಸಿ ಕಡೆಯೊಳುಜ್ಜವಣೆಯಂ ಮಾಳ್ಪ ಕ್ರಮಮೆಂತೆಂದೊಡೆ :—ದೇವರ್ಗ್ಗೆ ಮಹಾಭಿಷೇಕ ಪೂಜೆಯಂ ಸವಿಸ್ತರಂ ಮಾಡಿಸಿ, ಮಂದರ ಮುಂದೆ ಸುಲಭಲಕ್ಷಣಾಕ್ಷತೆಯ ನೊಂಬತ್ತು, ಮಾನಪ್ರಮಾಣದಿನೊಂಬತ್ತು ಮಾಡಿ, ಪ್ರತ್ಯೇಕ ಮೊಂಬತ್ತು ಪುಷ್ಪಮಾಲೆಯೊಂಬತ್ತಡಕೆಯೊಂಬತ್ತೆಲೆಯೊಂಬತ್ತು ಫಲವೊಂಬತ್ತು ನಕ್ಷತ್ರಮಾಲೆಯನರ್ಚಿಸುವುದು. ತದನಂತರಂ ಕಥೆಯಂ ಕೇಳ್ವ ಕದಕನಂ ಪೂಜಿಸುವುದು. ನೋನಿಸಿದಜ್ಜಿಯರ್ಗ್ಗೆಡೆ ಕೊಡುವುದು. ಚಾತುರ್ವರ್ಣಕ್ಕಾಹಾರದಾನಮಂ ಮಾಳ್ಪುದು. ಇಂತಿದು ನೋಂಪಿಯುಜ್ಜವಣೆಯ ಕ್ರಮಂ.

End :

ಮತ್ತಮಾ ಪುರದೊಳ್ ಕಡುಬಡವನಪ್ಪ ಪ್ರಿಯದತ್ತನೆಂಬ ಪರದನಾತನ ಹೆಂಡತಿ ಬಂಧುಮತಿಯೆಂಬಳ್ ಪಲವು ಮಕ್ಕಳ ತಾಯಿ ತಾನುಮೀನೋಂಪಿಯಂ ಶಕ್ತಿಗೆ ತಕ್ಕಂತು ನೋಂಪೆ

ಸೆಂದು ಲಕ್ಷ್ಮೀಮತಿ ಮಹಾದೇವಿಯೊಡನೆ ಕೆಯ್ಕೊಂಡು ಯಥಾ ಶಕ್ತಿಯಿಂ ನೋಂತುಜ್ಜವಣೆಯಂ ಮಾಡಿದ ಪುಣ್ಯಪ್ರಭಾವದಿಂ ತದ್ಭವದೊಳ್ ದಾರಿದ್ರ್ಯ[ಭಾವ]ಮಂ ಪತ್ತುವಿಟ್ಟು ಧನಕನಕಸಮೃದ್ಧರಾಗಿ, ಮತ್ತಂ ಪಲವು ನಿಧಿ ನಿಧಾನಂಗಳಂ ಪಡೆದು ರಾಜಶ್ರೇಷ್ಠಿಪದಪಿಯಂ ಕೆಯ್ಕೊಂಡು ನೋಂಪಿಯೊಳಾದ ಮಹಾಮಹಿಮೆಯಂ ಪ್ರಭಾವಿಸುತ್ತಂ ನಾನಾ ಜಿನ ಜಿನಾಲಯಂಗಳಂ (ಸೇವೆ) ಮಾಡುತ್ತಮನಾಥ ಜನಂಗಳಂ ದಾನ ಸನ್ಮಾನಾದಿಗಳಿಂ ತಣಿಯಿಸುತ್ತಂ, ಮಹಾಸದ್ದಾನ ಪೂಜೆ ತಿರೋವಾಸಾವಿಗಳೊಳ್ಕೂಡಿದ ಶ್ರಾವಕ ಧರ್ಮದೊಳ್ನೆಗಳುತ್ತಂ, ಸಮಸ್ತ ಭೋಗೋಪ ಭೋಗಂಗಳಂ ವಿಭವಸಂಸಾರ ಸುಖಮಂ ತಣಿಯಿದುಂಡು ಪರಂಪರೆಯಿಂ ದೇವಪಾಲ ಮಂಡಲೇಶ್ವರನುಂ ಲಕ್ಷ್ಮೀಮತಿ ಮಹಾದೇವಿಯುಂ, ಪ್ರಿಯದತ್ತನೆಂಬ ರಾಜಶ್ರೇಷ್ಠಿಯುಂ ಬಂಧುಮತಿಯುಂ ಮೊದಲಾಗಿ ಆಮನಿಬರುಂ ಮುಮುಕ್ಷು ಮೋಕ್ಷ ಲಕ್ಷ್ಮಿಯೊಳ್ಕೂಡಿದರ್. ಇಂತೀ ನವನಿಧಿ ಭಂಡಾರದ ನೋಂಪಿಯಂ ನೋಂತವರ್ಗ್ಗಂ ನೋನಿಸಿದವರ್ಗ್ಗಂ ಮಂಗಳಂ.

Colophon:

(ಸಂಪೂರ್ಣಂ.)

(ವಿ.ವಿ.)—

ಸಮಗ್ರ. ಶಿಥಿಲ. ಇದರೊಡನೆ ಇನ್ನೂ ಅನೇಕ ಗ್ರಂಥಗಳಿವೆ. ಅವನ್ನು ೩೧೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಗದ್ಯರೂಪವಾದುದು. ಜೈನಮತಾನುಸಾರವಾಗಿ ನವನಿಧಿ ಭಂಡಾರದ ನೋಂಪಿಯನಾಚರಿಸುವ ಕ್ರಮ, ತತ್ಫಲ ಮುಂತಾದ ವಿಷಯಗಳು ವರ್ಣಿತವಾಗಿವೆ. ಶೈಲಿ ಸಾಮಾನ್ಯವಾಗಿದೆ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿಯುವಂತಿಲ್ಲ. ಶೈಲಿಯನ್ನು ನೋಡಿದರೆ ಇದು ಸುಮಾರು ಹದಿಮೂರನೆಯ ಶತಮಾನದಲ್ಲಿ ವಿರಚಿತವಾಗಿರಬೇಕೆಂದು ತೋರುತ್ತದೆ. ಮಿಕ್ಕ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು.

No. 366. ನಾಗಕುಮಾರಚರಿತ್ರೆ.
NĀGAKUMĀRACARITRE.

Substance, Śrītāla. Size, 13 × $1\frac{7}{8}$ inches. Pages, 438. Lines, 7 on a page. Character, Kanarese. Condition, slightly injured. Appearance, old.

Complete. Āsvāsas 8, Sandhis 32.

Deals with the story of Nāgakumāra who was a descendant of Jinadattarāya and who, it is stated, attained salvation through his piety.

Bāhubali is the author of the work up to 121st stanza in the 30th Sandhi of the 7th Āśvasa and Vardhamāna for the remaining portion. It is stated in 'the lives of Poets" that Bāhubali flourished in about 1560 A.D. He had Śānti Kīrtimunīndra as his teacher, who was himself a pupil of Lalita kīrti. Bāhubali wrote this

work at the instance of king Bhairavēndra who had the titles ' Arirāyaragaṇḍaradāvani, Śaranāgatavajrapangara, etc.

Particulars regarding the author are given in the extracts below

Beginning :

ಸೂ ॥ ಪೇಳುವೆ ನಾಗಕುಮಾರನ ಚರಿತೆಯು ।
ಕೇಳಿರೊ ಸಕಲ ಕೋವಿದರು ॥
ಶ್ರೀ ಸನ್ಮಾರ್ಗ ಪ್ರಕಾಶಸುಜ್ಞಾನಾಂಬು ।
ರಾಶಿವರ್ಧನ ! ಸರ್ವಶಾಂತ ॥
ಲೇಸುದೋರೆನಗೆ ಹೃತ್ಕುವಲಯಾಕವೃತಕ ।
ಲೇಶ ! ಶ್ರೀ ನೇಮಿಜಿನೇಶ ॥
ಜ್ಞಾನವೆ ಮೆಯ್ಯಾಗಿ ತ್ರಿಜಗವನಿರದೆ ಸು ।
ಜ್ಞಾನೋದರದೊಳಂಬಿಟ್ಟು ॥
ಆನಂದರಸದೊಳೋಲಾಡುವ ಸಿದ್ಧರಿ ।
ಗಾನೆಱಗುವೆ ಮನವೊಲಿದು ॥

* * * *

[ಬಲಗೊ](ಶರಣೆ)ಂಬೆ ಪರಮಪುರಾಣದ ಕಥೆಗಳ ।
ನೆರಡನೆ ಗಣಧರರೆನಿಸಿ ॥
ಧರೆ ಪೊಗಳ್ವನ ವಿಸ್ತರಿಸಿದ ಶ್ರೀ ಕವಿ ।
ಪರಮೇಷ್ಠಿ ಸ್ವಾಮಿಗಳಡಿಗೆ ।

* * * *

ಅಂದವಡೆದ ಗುಂಡಿಗೆಯ ಜಲವನು ಸುರೆ ।
ಯೆಂದು ಮಂತ್ರಿಸಿ ಪೇಟಿಲದನು ॥
ಕುಂದದೊಳಲಗ್ಗಳೆನಿಸಿ ವಾದಿಗಳ ಗೆಲ್ದ ।
ಕುಂದೇಂದುಮುನಿಗೆಱಗುವೆನು ॥

ನಿಕಳಂಕಸ್ವಾಮಿಗಳನು ತಪಿಸಿದ ಬೌದ್ಧ ।
ನಿಕರವ ಗೆಲ್ದು ಕರ್ಮದೊಳು ॥
ಸಕಲವಿದ್ವಜ್ಜನ ಪೊಗಳೆ ಸಿಂಗಳಕಟ್ಟಿ ।
ದಕಳಂಕಸ್ವಾಮಿಗೊಂದಿಪೆನು ॥

ನಾಗಾರ್ಜುನವಟುದ ಸಿದ್ಧರಸಕೆಣೆ ।
ಯಾಗಿ ಕಾಲ್ತೊಳೆದುದಕವನು ॥
ತೂಗಿ ತೋರಿದ ಪೂಜ್ಯಪಾದರ ಪಾದಕೆ ।
ಬಾಗುವೆನೆನ್ನಯ ಶಿರವ ॥
ಇಳೆಯೊಳು ಕಲಿಕಾಲಗಣಧರರೆನಿಸಿದ ।
ಲಲಿತಕೀರ್ತ್ಯಾರ್ಯರ ಪದಕೆ ॥

ಒಲವ್ರು ಕೈಮಿಗೆ ಸಾಷ್ಟಾಂಗದೊಳೆಱಗುವೆ।
ಸಲೆ ನನ್ನ ಪರಮಗುರುವಿಗೆ ॥
ಎನ್ನಯ ಗುರು ಶಾಂತಿಕೀರ್ತಿ ಮುನೀಂದ್ರರ।
ಚೆನ್ನಡಿದಾವರೆಗಳಗೆ ॥
ಎನ್ನಳಕಂಗಳ ತುಂಬಿವಿಂಡುಗಳನೆ।
ಭಿನ್ನವಿಲ್ಲದೆ ಚಾಚುವೆನು ॥

* * * *

ಭೇದಿಸಿ ಸತ್ಕಥನವನು ಕನ್ನಡಕೆ ತಾ।
ನಾದಿಗೆ ನೆಲಸಿ ಲೋಕದೊಳು ॥
ಆದಿತೀರ್ಥೇಶನ ಕಥೆಯ ವಿಸ್ತರಮಾಡಿ।
ದಾದಿಪಂಪನ ಪೊಗಳುವೆನು ॥
ಚಂದ್ರಜಿನರ ಕಥಾರಸ ಪಾರ್ಥಿವರ್ಧನ।
ಚಂದ್ರನೆನಿಸಿದಗ್ಗಳನ ॥
ರುಂದ್ರಕಲೆಗಳನ್ನೊಳು ತೋರ್ಗೆ ನಿಜಯಶ।
ಶ್ಚಂದ್ರಿಕೆ ಪಸರಿಸೆ ಜಗವ ॥
ಸುಡಿಸಿ ಕಾದಂಬರಿಯನು ಲೀಲಾವತಿ।
ಗಡಿಸಿ ಕಪ್ಪನು ಕೀರ್ತಿಜಗವ ॥
ಯೆಡೆಗೊಂಡ ನೇಮಿಚಂದ್ರನ ಚಮತ್ಕೃತಿ ಬಂ।
ದೆಡೆಗೊಂಡೆನ್ನ ಚಿತ್ತದೊಳು ॥
ಜನ್ನನೊದಗು ಗುಣವರ್ಮನ ಚಾತುರ್ಯ।
ರನ್ನನ ಗುಣ ಪೊನ್ನನಿಂಪು ॥
ಎನ್ನ ಮತಿಮಣಿದರ್ಪಣವನು ಪ್ರ।
ಸನ್ನವೃತ್ತಿಯನೆಯ್ದಿಸೆನಗೆ ॥
ವಿಬುಧಜನಸ್ತುತ ಶ್ರೀ ವೀರದೋರನ।
ಸಭೆಗೆ ಮಂಗಳಲಕ್ಷ್ಮಿಯೆನಿಪ ॥
ಶುಭಗುಣಚರಿತೆ ಕಂತಿಕೆಯರ ಪೊಗಳ್ವೆನಾ:
ನಭಿನವ ವಾಗ್ದೇವಿಯರ ॥

* * * *

ಧರೆಯ ಸೃಷ್ಟಿಸಿ ಮತ್ತದರ ಚೆಲ್ವಿಕೆಯ ತಾ।
ನಿರದೆ ನೋಡುತಲಾ ನಗದ ॥
ಅರುಹನಾಲಯದ ಮುಂದಣ ಕಂಬದ ಮೇಲೆ।
ಕರವೆಸೆದಿಹನು ಪದ್ಮಜನು ॥
ಅವನೀಕೃತಿಗೆ ನಿರ್ವಿಘ್ನದಾಯಕನು ಮ।
ತ್ತವನಿಪ್ಪ ಗಿರಿಗೆ ದಕ್ಷಿಣದಿ ॥

ಶವೆ ಚೆಲ್ವೆತ್ತು ಶೃಂಗೇರಿ ವೆಸರ ಪುರ ।
ಭುವನ ಕಗ್ಗಳವೆನಿಸಿಹುದು ॥
ಅದನು ದಕ್ಷಿಣ ವಾರಣಾಶಿಯೆಂಬುದು ಮೇಲೆ ।
ಚದುರೆ ಸರಸ್ವತಿಯಿರ್ಪ್ಪ ॥
ಸದನವನದು ನೋಡೆ ತುಂಗಭದ್ರಾತೀರ ।
ವದರ ಮಾಹಾತ್ಮ್ಯಯಿನ್ನೆಂತೊ ॥
ಆಪುರದೊಳಗೆಲ್ಲ ಜನರೆಲ್ಲ ಸಕಲಕ ।
ಲಾಪ್ರವೀಣರು ನೀತಿವಿದರು ॥
ಪಾಪವಿದೂರರು ದಾನಿಗಳು ಧನಾಢ್ಯರು ।
ರೂಪಸಂಪನ್ನರಧಿಕರು ॥
ಮಣಿನಿಚಯದೊಳು ನಾಯಕ ರತ್ನ ತಾರಾ ।
ಗಣದೊಳು ಚಂದಿರನಿರ್ಪ್ಪ ॥
ಗಣನೆಯಿಂದೊಪ್ಪುತಿಪ್ಪದು ಸಂಣ್ಣಸಾಖ್ಯದ ।
ವಣಿಜ ಶಿರೋಮಣಿಯಲ್ಲಿ ॥
ಅತನ ಸದ್ವಧು ಬೊಮ್ಮಲ ದೇ(ವಿ) ಯೆಂ ।
ಬಾತರಳಾಕ್ಷಿ ಮತ್ತವಳು ॥
ನೀತಿಕೋವಿದೆ ಸಚ್ಚರಿತೆ ಸದ್ಗುಣವ್ರಾತೆ ವಿ ।
ನೂತನ ಸೀತೆ (ಪ್ರಖ್ಯಾತೆ) ॥
ತನುವೆರಡಸುವೊಂದೆನಿಸಿ ಪೊಗಳೆವೆ ।
ತ್ತನುರಾಗ ದಿಂದಿರಲವರ್ಗೆ ॥
ಜನಿಸಿದ ಭುಜಬಲಿಯೆಂದೆಂಬ ಕುವರನು ।
ವಿನಯ ವಾರಾಶಿ ಚಂದ್ರಮನು ॥
ಹರದಿಕೆ ದಯ ದಾನ ವ್ರತಶೀಲ ಚಾರಿತ್ರ ।
ಗರುವಿಕೆ ನೀತಿಚಾತುರ್ಯ ॥
ಸ್ಥಿರ ನೆಲಸಿದೆ ನಿನ್ನೆಳಿತೆ ಬಾಹುಬಲಿಯೆಂದು ।
ಧರೆಯೆಲ್ಲ ಕೀರ್ತಿಪುದವನ ॥
ಸವಿನುಡಿ ಸರ(ಸ ಸಲ್ಲಾಪ ಕೋವಿದನು) ।
ವಿವಿಧವಿದ್ಯಾ ಪರಿಣತನು ॥
ನವರಸ ಭರಿತದ ಕೃತಿವೇಳ್ವೆ ಮನದೆಂದು ।
ಕವಿರಾಜಹಂಸನೊಪ್ಪಿಹನು ॥
ಈಪರಿ ಯಿವನಿರಲಾ ಪುರಪತಿಯಾತಿ ।
ರೂಪಿನ ಸಾರದ ಮೂರ್ತಿ ॥
ಯೋಬೇಟಿಪ್ಪ ನರಸಿಂಹ ಭಾರತಿಮೋಹನು ಕೃ ।
ಪಾಪೂರ್ಣ ಶರಧಿ ತಾನೆನಿಸಿ ॥

ಸರ್ವತೋ ಭದ್ರವೆಂದೆಂಬ ದೇಗುಲವ ಸು।
ಪರ್ವಲೋಕವ ಸೋಂಕುವಂತೆ॥
ನಿರ್ವರ್ತಿಸಿದನು ತನ್ನಯ ಕೀರ್ತಿವಲ್ಲರಿ।
ಪರ್ವುವು ದಶದಿಶೆಗಳನು॥

ಆನರ ಸಿಂಹ ಭಾರತಿ [ಯಿಪ್ಪನು (ಯತಿಪನ) ಶುಭ।
ಧ್ಯಾನಕೆ ರಕ್ಷಕನೆನಿಸಿ॥
ತಾನಿಹ ಕೆಲವಾಸೆ ಸಿಂಹಾಸನದೊಳು।
ಮಾನವಪತಿ ಭೈರವೇಂದ್ರ॥

ಅರಿರಾಯರ ಗಂಡರ ದಾವಣಿ ಶ್ರೀಜಿನ।
ಚರಣಕಮಲ ಷಟ್ಚರಣ॥
ಶರಣಾಗತವಜ್ರ ಪಂಜರನೆಂದೆಂಬ।
ಬಿರುದಿನಿಂದೆಸೆವನಾ ರಾಯ॥

ಎಸಗಿ ದಿಗ್ವಿಜಯವ ರಿಪುಗಳ ಕೆಡೆ ಮೆಟ್ಟಿ।
ಮಸಕದಿ ಕಪ್ಪವ ಕೊಂಡು॥
ವಸುಧೆಯುಮನು ನೀತಿವಿಡಿದಾಳುತಿಹ ನವ।
ರಸಿಕನೊ ತೆಂಕಣರಾಯ॥

ಅರಿನೃಪರಿಗೆ ಕಾಲಭೈರವ ಮತ್ತವ।
ಪರಿಕಿಸೆ ಪರಮಯೋಗೀಂದ್ರ॥
ಪರಮ ಸಮ್ಯಗ್ದೃಷ್ಟಿಯವನ ಕಂಡೊಡೆ ಪಾಪ।
ಹರಿವುದು ಸ್ತುತಿಸಲಿನ್ನೆಂತೊ॥

ವರಗುರು ಲಲಿತಕೀರ್ತ್ಯಾರ್ಯರ ಸಭೆಯೊಳು।
ಪರಮಪುರಾಣದ ಕಥೆಯಾ॥
ಪಿರಿದಪ್ಪ ವಿದ್ವಜ್ಜನ ಸಹ ಕೇಳುತ।
ದೊರೆ ಭೈರವೇಂದ್ರನೊಪ್ಪಿದನು॥

ಬರಲು ಶ್ರೀಪಂಚಮಿಕಥೆಯ ಪ್ರಸ್ತುತವದ।
ಕಿರದೆನ್ನ ಮುಖವ ತಾನೋಡಿ॥
ಸರಸೋಕ್ತಿ ನಿನ್ನೊಳುಂಟೆಲೆ ಬಾಹುಬಲಿ !ಯಿದ।
ಚರಿತೆ ಮಾಡ್ಯೆ ನೀನೆಂದ॥

ಜಡಮತಿ ನಾನು ಮತ್ತದು ದೊಡ್ಡ ಕಥೆ ಯೆಂತು।
ನಡಸಿದಪೆ ನಾನೆಂದೆ॥

ಪೊಡವಿಪನದಕೆಂದ ಕನ್ನಡಿಯೊಳು ಮೋರು।
ವಡಗಿದಂತಿಹುದು ಬೇಟಿತೆಂದು॥
ಅರಸಿನ ನುಡಿಗೇಳ್ದು ಮೇಲಾವ ಕಾರಣ।
ಪುರುಷನ ಕಥೆ ಯೆಲೆ ಮಗನೆ॥

ಧರೆಗತಿಸೇವ್ಯಮಪ್ಪುದು ಪೇೞು ನೀನೆಂದ।
ವರಗುರು ಲಲಿತ ಕೀರ್ತ್ಯಾರ್ಯ॥
ಶ್ರೀಪಂಚಮೀಕಥೆ ಯಿದನು ವಿಸ್ತರಿಸಲು।
ವ್ಯಾಪಿಪುದೈ ಕೀರ್ತಿ ಜಗವ॥
ಪಾಪವಳಿವುದು ರಾಯನ ನುಡಿಗೇಳೆಂದ।
ರೇಪೇೞಿತ್ವ ವಿದ್ವಜ್ಜನರು॥
ಜಿನದತ್ತರಾಯನ ಕುಲವನ ಜೈತ್ರನು।
ಜಿನಧರ್ಮಸಂಘ ನಾಯಕನು॥
ನಿನಗದು ಪುಣ್ಯಕಾರಣವೆನೆ ನೆಗಳ್ದ ನಾ।
ನನುನಯಮಪ್ಪ ಸಂಗತಿಯು॥
ಹಣಹೊನ್ನು ತೃಣವೆಂದು ಒಗೆದು ಮೋಕ್ಷಕೆ ಸಂದ।
ಘಣಿಕುಮಾರನ ಸತ್ಕಥೆಯಾ॥
ಹಣಹೊನ್ನಿಗಾ [ಜ](ಸಿ) ಸಿ ಪೇೞ್ದವ ನಾನಲ್ಲ।
ಗುಣಪಕ್ಷವಿಡಿದು ಪೇೞಿದೆನು॥

* * * *

ಕನಕವ ಸೇವಿಸಿದವ ಮಣ್ಣು ಮಸಿಯನು।
ಕನಕವೆನುತ ನೆರಪಿದೊಡೆ॥
ಮನಬಂದ ತೆರದಿ ದುಷ್ಕವಿ ಕೃತಿವೇಳ್ದೊಡೆ।
ಜನರದ ಸ್ವೀಕರಿಸುವರೆ॥

* * * *

ವೀರ ಜಿನೇಶನ ಸಮವಸರಣ ಬಂದು।
ಸೇರಲು ವಿಪುಳಾದ್ರಿಯಲಿ॥
ಕಾರುಣ್ಯನಿಧಿ ಗೌತಮಮುನಿ ಪೇೞ್ದನು।
ಧೀರ ಶ್ರೇಣಿಕನೊಳೀ ಕಥೆಯ॥
ಉತ್ತರೋತ್ತರವಾಗಿ ಕವಿಪರಮೇಷ್ಠಿಗಳ್।
ಬಿತ್ತರಿಸಿದರು ಸತ್ಕಥೆಯ॥
ಮತ್ತದ ನಾನು ವರ್ಣಕವ ಮಾಡುವೆನೇಕ।
ಚಿತ್ತದಿ ಲಾಲಿಸಿ ಬುಧರು॥
ನೀತಿಕೋವಿದ ಕವಿತಾಮನೋಹರ ಗುಣ।
ವ್ರಾತನುದಾರನೆಂದೆನಿಸಿ॥
ಖ್ಯಾತಿಗೆ ನೆಲೆವಂದು ತೊಡಗಿದ ಕಥೆಯಸಂ।
ಗೀತಸುದಾಬ್ಧಿ ಚಂದ್ರಮನು॥
ವರಪುಣ್ಯನಿಧಿಯೆನಿಸಿದ ನಾಗತನಯನ।
ಚರಿತೆಯೊಳದು ಪೊಂದನೆಯ॥

ಸುರುಚಿರಾಶ್ವಾಸದೊಳೊಂದನೆಯದು ಸಂಧಿ।
ಸರಸಪ್ರವಾಹಾನುಬಂಧಿ ॥
ಕಡಿಸಿ ಕರ್ಮವನೊಂದುಪವಾಸ ಫಲದಿಂದ।
ತಡೆಯದೆ ಮೋಕ್ಷ ಸಂಪದವ ॥
ಪಡೆದ ಮಹಾತ್ಮನ ಕಥೆಯಿದು ಭವ್ಯರು।
ಬಿಡದೆ ಲಾಲಿಸಿ ಮುಕ್ತಿಯಹುದು ॥

* * * *

ವನಜವನಕೇಳಿಯ ನಿರ್ವರ್ತಿಸಿ ಪುರ।
ಜನಸಹ ಮಗುಳ್ದಿಯ್ದೆ ಪುರಿಗೆ ॥
ಮನಸಂದು ಪೃಥ್ವೀದೇವಿಯರ ಗಾಂಭೀರ್ಯವ।
ನೆನೆ (ನೆನೆ) ದಾನಂದಿಸುತ ॥
ನೀತಿಕೋವಿದ ಕವಿತಾಮನೋಹರ ಗುಣ।
ವ್ರಾತನುದಾರ ನೆಂದೆನಿಸಿ ॥
ಖ್ಯಾತಿಗೆ ನೆಲೆಯಾಗಿ ಪುರವ ಪೊಕ್ಕನು ಸಂ।
ಗೀತಸುಧಾಬ್ಧಿ ಚಂದ್ರಮನು ॥

Colophon :

ಇದು ವಿದಿತವಿವಿಧ ಪ್ರಬಂಧವನ ವಿಹಾರ ಪರಿಣತ ಜಿನವದನ ಕುಲಶೈಲೋಚ್ಛ್ರಯೋದ್ಭೂತ ಪ್ರವಚನ ಗಂಗಾ ತಟೋಪರಂಜತ್ಪುಂಜಾಯಮಾನಾ[ನು](ನೂನ)ಪುಣ್ಯೈಸ್ಯೈಕತಪ್ರಿಯ ವಿಬುಧನಸ್ತುತ್ಯ ಸತ್ಕೃಜಿತಪ್ರಾಕರಕವಿರಾಜ ಹಂಸ ಬಾಹುಬಲಿ ವಿರಚಿತಮಪ್ಪ ನಾಗಕುಮಾರಚರಿತ ಪುರಾಣದೊಳದುವೆ ಜಯಂಧರ ವಿಲಾಸ ವರ್ಣನಂ ನಾಮ ಪ್ರಥಮಾಶ್ವಾಸಂ. ಅಂತು ಸಂಧಿ ನಾಲ್ಕಕ್ಕಂ ಮಂಗಳ ಮಹಾ.

End :

ಧರೆಯೊಳೀಕೃತಿ ದೋರ್ಬಲಿಯೆಂಬ ಕವಿ ತಾನು।
ವಿರಚಿಸಿ ತುದಿಯೊಳಂತರಿಸೆ ॥
ತರಳನಹುದು ನಾನು ನಯಕಾತಿಶಯ ಬಿ।
ತ್ತರಿಪೆನಿದ (ನು) ಪೂರ್ತಿಯಾಗಿ ॥
ನೀತಿಕೋವಿದ ಕವಿತಾ ಮನೋಹರ ಗುಣ।
ವ್ರಾತನುದಾರನೆಂದೆನಿಸಿ ॥
ಖ್ಯಾತಿವಡೆದು ನೆರವಾದನೀಕೃತಿಗೆ ಸಂ।
ಗೀತಸುದಾಬ್ಧಿ ಚಂದ್ರಮನು ॥

Colophon :

ಇದು ವಿದಿತ ವಿವಿಧ ಪ್ರಬಂಧ ವನವಿಹಾರ * * * ಸತ್ಕೃಜಿತ ಪ್ರಕರ ಕವಿರಾಜಹಂಸ ವರ್ಧಮಾನ ಕವಿ ವಿರಚಿತಮಪ್ಪ ನಾಗಕುಮಾರ ಚರಿತದೊಳದುವೆ ನಿರ್ವಾಣ ಕಲ್ಯಾಣಾಭ್ಯುದಯ ವರ್ಣನಂ ಅಷ್ಟಮಾಶ್ವಾಸಂ. ಅಂತು ಆಶ್ವಾಸ ೮ ಕ್ಕಂ ಸಂಧಿ ೩೨ ಕ್ಕಂ ಪದನು ೩೬೦೦ ಕ್ಕಂ ಮಂಗಳಂ.

(ವಿ-ವಿ).—

ಸಮಗ್ರ. ಶ್ರೀತಾಳೆಪ್ರತಿ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಪುಸ್ತಕದಾದಿಯಲ್ಲಿ ಸಂಧಿ, ಸಂಧಿಯ ವಿಷಯ, ಮತ್ತು ಪುಟಗಳನ್ನು ಸೂಚಿಸುವ ಪಟ್ಟಿಯೊಂದಿದೆ. ಕೊನೆಯಲ್ಲಿ' "ಶ್ರೀಮದ್ಬೆಳ್ಗುಳ ಸಿಂಥಸಿಂಹಾಸನಾಧೀಶ್ವರರುಮಪ್ಪ ಶ್ರೀಮಥಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯಸ್ವಾಮಿಯವರ [ತತ್ಸಿ] (ಶಿ)ಷ್ಯನಾದ ಬಂಡಾರಿ ಬಸದಿಯ ಯಿಂದ್ರವರ್ಗದ ಪದುಮಯ್ಯನು ಬರೆದ ನಾಗಕುಮಾರಚರಿತೆ ಸಂಪೂರ್ಣ ಮಂಗಳ ಮಹಾ ಶ್ರೀ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕವರ್ಷ ೧೭೦೪ ನೆಯ ಶುಭಕೃತ್ಸಂವತ್ಸರದ ಆಶ್ವೀಜ ಬ ೧೪ ಯಲ್ಲು" ಎಂದಿದೆ.

ಇದು ಸಾಂಗತ್ಯ ರೂಪವಾದುದು. ಇದರಲ್ಲಿ ಆಶ್ವಾಸ ೮, ಸಂಧಿಗಳು ೩೪ ಇವೆ. ಇದನ್ನು ಬಾಹುಬಲಿಯೆಂಬ ಕವಿಯು ೭ ನೆಯ ಆಶ್ವಾಸದ, ೪೦ ನೆಯ ಸಂಧಿಯ, ೧೪೧ ನೆಯ ಪದ್ಯದ ವರೆಗೆ ಬರೆದಿರುತ್ತಾನೆ. ಮುಂದಿನ ಭಾಗವು ವರ್ಧಮಾನನೆಂಬ ಮತ್ತೊಬ್ಬನಿಂದ ಪೂರ್ಣವಾಗಿದೆ. ಗ್ರಂಥಾಂತ್ಯದಲ್ಲಿ ಹೇಳಿರುವ 'ಧರೆಯೊಳೀಕೃತಿ' ಎಂಬ ಪದ್ಯದಿಂದವರ್ಧಮಾನನು ಬಾಹುಬಲಿಯ ಮಗನಾಗಿದ್ದರೂ ಇರಬಹುದೆಂದು ತೋರುತ್ತದೆ. ಈ ಬಾಹುಬಲಿಯ ಕಾಲವು ಕ್ರಿ. ಶ. ಸುಮಾರು ೧೫೬೦ ಎಂದು ಕವಿಚರಿತ್ರಕಾರರು ಬರೆಯುತ್ತಾರೆ. ಉಳಿದ ಎಲ್ಲ ವಿಷಯಗಳನ್ನು ಉದಾಹೃತಭಾಗಗಳಿಂದ ತಿಳಿಯಬಹುದು.

No. 367 ನಾಗಕುಮಾರಚರಿತ್ರೆ.
NĀGĀKUMĀRACARITRE.

Substance, Sritala. Size, 14½ × 2 inches. Pages, 330. Lines, 10 on a page. Character, Kanarese. Condition, slightly injured. Appearance, old.

Complete.

Name of the scribe.—Ādirājaiyya, son of Vijayaṇṇaiyya of Indravarga of Beḷugula.

Same work as the above.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಶ್ರೀ ತಾಳೆಪ್ರತಿ. ಪುಸ್ತಕದ ಕೊನೆಯಲ್ಲಿ "ಬೆಳಗುಳದ ಇಂದ್ರವರ್ಗದ ವಿಜಯಣ್ಣಯ್ಯನ ಮಗ ಆದಿರಾಜಯ್ಯನ ಬರಹ" ಎಂದಿದೆ. ಮತ್ತು ಸಂಧಿ, ಸಂಧಿವಿಷಯ, ಪುಟಗಳನ್ನು ಸೂಚಿಸುವ ಪಟ್ಟಿಯೊಂದಿದೆ. ಇದು ಹಿಂದೆ ವರ್ಣಿತ ವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೩೬೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 368. ನಾಗಕುಮಾರಚರಿತ್ರೆ.
NĀGAKUMĀRACARITRE.

Substance, paper. Size, 12⅝ × 8⅛ inches. Pages, 225. Lines, 28 on a page. Character, Kanarese. Condition, good. Appearance, old.

Complete.

Same work as the above.

(ವಿ-ವಿ.)—

ಸಮಗ್ರ. ಕಾಗದದಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ಹೆಚ್ಚು ಬಯಸಲಪೇಕ್ಷಿಸುವರು ೩೬೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 369. ನಾಗಕುಮಾರ ಚರಿತ್ರೆ.
NĀGAKUMĀRACARITRE.

Substance, palm-leaf. Size, $17\frac{1}{16} \times 1\frac{1}{8}$ inches. Pages, 302. Lines, 7 on a page. Character, Kanarese. Condition, very much injured. Appearance, old.

Cantains the Sandhis 1 to 26 complete, and eight stanzas in the 27th sandhi.

Date of transcription :—This work was begun on Thursday, the eighth day of the bright fortnight of the lunar month Āṣāḍha in the year Viśvāvasu.

Name of the scribe :—Vaiyyāli Brahmayya's son Padma, who was worshipping Mallināthajina of Madhugiri.

Same work as the above.

(ವಿ-ವಿ.)—

ಅಸಮಗ್ರ ೧ ರಿಂದ ೨೬ ಸಂಧಿಗಳು ಸಮಗ್ರ. ೨೭ ನೆಯದರಲ್ಲಿ ೮ ಪದ್ಯಗಳವೆ. ಅತ್ಯಂತ ಶಿಥಿಲ. ತಾಳೆ ಪ್ರತಿ. ಪುಸ್ತಕದಾದಿಯಲ್ಲಿ 'ವಿಶ್ವಾವಸುನಾಮ ಸಂವತ್ಸರದ ಆಷಾಢ ಶು ೮ ಅಷ್ಟಮಿ ಗುರುವಾರ ನಾಗಕುಮಾರ ಚರಿತ್ರೆ ಬರೆವುದಕ್ಕೆ ಶುಭಮಸ್ತು. ಕ್ಷಿತಿಯೊಳಧಿಕ ಮಧುಗಿರಿಮಲ್ಲಿನಾಥನ । ಅತಿಶಯ ಪಾದಪದ್ಮವನು । ಸತತ ನಂಬಿದ ವೈಯ್ಯಾಳಿ ಬ್ರಹ್ಮಯ್ಯನ । ಸುತಪದ್ಮ ಬರೆದ ಸತ್ಕೃತಿಯು ॥' ಎಂದಿದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ಪರನಾಗಿ ಉಳಿದ ವಿಷಯಗಳನ್ನು ೩೬೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 370. ನಾಗಕುಮಾರ ಚರಿತ್ರೆ.
NĀGAKUMĀRACARITRE.

Substance, Śrītāla. Size, 12 × 1 inches. Pages, 286. Lines, 9 on a page. Character, Kanarese. Condition, very much injured. Appearance, very old.

Incomplete. Wants 2 foll in the beginning. Contains the sandhis 1 to 26 complete. 27th incomplete.

Same work as the above.

(ವಿ-ವಿ.)—

ಅಸಮಗ್ರ. ಆದಿಯಲ್ಲೆರಡು ಓಲೆಗಳಿಲ್ಲ. ೨೭ ನೇಯ ಅಧ್ಯಾಯದಲ್ಲಿ ೫೦ ನೇಯ ಪದ್ಯದ ವರೆಗಿದೆ. ಆದರೆ ಮಧ್ಯದಲ್ಲಿ ಅನೇಕ ಓಲೆಗಳು ಮುರಿದು ಹೋಗಿವೆ. ಅತ್ಯಂತ ಶಿಥಿಲ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದಕ್ಕೆ ಸಂಬಂಧವಾದ ವಿಷಯಗಳನ್ನು ೩೬೬ ನೇಯ ನಂಬರಿನಲ್ಲಿ ನೋಡಿ ತಿಳಿಯುವುದು.

No. **371**. ನಾಗಕುಮಾರ ಚರಿತ್ರೆ.
NĀGAKUMĀRA CARITRE.

Substance, Śrītāla. Size, $10\frac{9}{16} \times 1\frac{3}{4}$ inches. Pages, 320. Lines, 9 on a page. Character, Kanarese. Condition, injured. Appearance, old.

Contains 1 to 20 sandhis (Āśvāsas 5) complete, and 84 stanzas in the 21st sandhi. Foll. 59*b* and 60*a* are blank, and 75th is wanting.

Same work as the above.

(ವಿ-ವಿ.)—

ಅಸಮಗ್ರ. ಆಶ್ವಾಸ ೫, ಸಂಧಿ, ೨೦ ಇವೆ. ಆರನೆಯಾಶ್ವಾಸದ ಮೊದಲ ಸಂಧಿಯಲ್ಲಿ (೨೧ ನೇಯ ಸಂಧಿಯಲ್ಲಿ) ೮೪ ಪದ್ಯಗಳಿವೆ. ಶಿಥಿಲ. ಲಿಪಿ ಉತ್ತಮ. ಓಲೆಗಳು, ೫೯ *a* ಮತ್ತು ೬೦ b ಬರೆಯದಿರುವುವು. ೭೫ ನೇಯ ಓಲೆಯಿಲ್ಲ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೩೬೬ ನೇಯ ನಂಬರಿನಿಂದ ಎಲ್ಲಾ ವಿಷಯವನ್ನೂ ತಿಳಿಯುವುದು.

No. **372**. ನಾಗಕುಮಾರ ಚರಿತ್ರೆ.
NĀGAKUMĀRA CARITRE.

Substance, Śrītāla. Size, $11\frac{11}{16} \times 1\frac{7}{8}$ inches. Pages, 25. Lines, 9 on a page. Character, Kanarese. Condition, injured. Appearance, old.

Begins on fol. 98*a*. The other work here in is :—(1) Bharatēsvara caritre 1*a*.

Contains 23rd sandhi complete. Wants 17 stanzas in the beginning in the 28th sandhi.

Same work as the above.

(ವಿ-ವಿ.)—

ಇದರಲ್ಲಿ ೨೩ ನೇಯ ಸಂಧಿ ಸಮಗ್ರವಾಗಿದೆ. ೨೮ ನೇಯ ಸಂಧಿಯ ಆದಿಯಲ್ಲಿ ೧೭ ಪದ್ಯಗಳಿಲ್ಲ. ಅಸಮಗ್ರ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ೩೬೬ ನೇಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 373. ನಾಗರಪಂಚಮಿನೋಂಪಿ-
NĀGARAPANCAMĪNŌMPY.

Substance, Śrītāla. Size, 10 $\frac{3}{16}$ × 1 $\frac{7}{8}$ inches. Pages, 9. Lines, 8 on a page. Character, Kanarese. Condition, injured. Appearance, old.

Begins on fol. 28*a*. of the MS described under No 318 ante.

Complete.

Deals with the procedure for worshipping the snakes according to Jains, on the 5th day of the bright fortnight in the lunar month Śravana, every year.

Beginning:

ಕಂ॥ ಶ್ರೀಮದಮರೇಂದ್ರ ವಂದ್ಯಂ ।
ಕಾಮ[ಹರ](ಮದ)ಧ್ವಂಸಿ ಮುಕ್ತಿಲಕ್ಷ್ಮೀಕಾಂತಂ ॥
ಕಾಮಿತ್ರ ಫಲಮಂ ಭವ್ಯ ॥
[ಗಾ](ಗೇ)ರ್ವಮಾ ತೋಕುಡುವನ (ಮಲ) ಪಾರ್ಶ್ವಜಿ[ನಂ] (ನೇಶಂ) ।
ಧರೆಯೊಳ್ ನಾಗರನೋಂಪಿಯು ।
ಪರಿಯಿಂದಂ ನೋಂ[ಪ] (ತ) ವರ್ಗೆ ಗುರು ತಾನೆಂದೀ ॥
ವರ ಕಥೆಯುಂ ಭವ್ಯಾವಳಿ ।
ಗಿರದಾಂ ವಿರಚಿಸುವೆವೆಸೆವ ಪೊಸಕನ್ನಡದಿಂ ॥
ಇಳಿಯಾಂ ಕಪ್ಪೆಯುನೊಲವಿಂ ।
ದುಲಿದಟ್ಟ ತಗುಳ್ದು ತಿಂಬ ಪುತ್ತಿನಪುಳುವಂ ।
ಸಲೆನಾಗರೆಂದು ಪೂಜಿಪ ।
ರೊಲವಿಂ ಜನಮರುಳೊ ಜಾತ್ರ ಮರುಳೆಂಬಿನವ್ರೋಲ್.
ಮುಂಗುರಿ ನವಿಲುಂ ಪದ್ಬರ್ಂ ।
ಭೃಂಗಿಯು ಸಾರಂಗ ಪುಲಿಯುಮೆಂಬೀ [ವೆಲ್ಲಂ] ದೈವಂ ।
ಪಿಂಗದೆ ಸಾರು ಸಮ । (?)
ರ್ಥಂಗಳು ಕೂಡಲಿಂದು ಕೆಡುಪ ಕಾರಣದಿಂದಂ ॥

* * *

ಪಾವುಂ ಪುತ್ತುಮನಱಿಯದೆ ।
ದೇವತೆಗಳಿವೆಂದು ಪೂಜಿಸುತ್ತಿರ್ಪರ್ ಪ ।
ದ್ಮಾವತಿಯುಂ ಧರಣೇಂದ್ರಂ ।
ದೇವಶ್ರೀ ಪಾರ್ಶ್ವನಾಥ ಯಕ್ಷರದಲ್ತೇ ॥

ವ॥ ಮತ್ತಮಾ ಧರಣೇಂದ್ರನ ಕಥೆಯೆಂತೆಂದೊಡೆ:—ಈ ಜಂಬೂದ್ವೀಪದ ಭರತಕ್ಷೇತ್ರ ದಾರ್ಯಾಖಂಡದ ಮಾಗಧ ದೇಶದರಸಂ ಶ್ರೇಣಿಕ ಮಹಾಮಂಡಳಿಕಂ. ಆತನ ಪಟ್ಟ(ದ) ಮಹಾದೇವಿ ಸಕಲಗುಣ ಸಂಪೂರ್ಣೆ ಚೇಳನಿ ಮಹಾದೇವಿಯೆಂಬಳಂತವರಿರ್ವರುಂ ಸುಖಸಂ ಕಥಾವಿನೋದದಿಂ ರಾಜ್ಯ ಶ್ರೀಯುನನುಭವಿಸುತ್ತುಮಿರಲೊಂದು ದಿವಸಂ ॥

ಕಂ॥ ಪರಿತಂದು ಋಷಿನಿವೇದಕ ।
ನರಸಿಂಗಿಂತೆಂದು ಬಿನ್ನಪಂಗೆಯ್ದನವಂ।
ನರನಾಥ ! ವಿಪುಳಗಿರಿಯೊಳ್ ।
ಪರಮಾತ್ಮಂ ಬಂದು ನೆಲಸಿದಂ ವೀರಜಿನಂ ॥

ವ ॥ ಎಂದು ಬಿನ್ನಪಂಗೆಯ್ಯಲ್ ಹರ್ಷೋತ್ಕರ್ಷಚಿತ್ತನಾಗಿ ಚೇಳನಿ ಮಹಾದೇವಿ ಸಹಿತ ಶ್ರೇಣಿಕಮಹಾರಾಜಂ ಆ ದೇಶಿಗಳಡಿಯಿಂ ನಡೆದು ಸಾಷ್ಟಾಂಗ ಪ್ರಣುತನಾಗಿ,

* * * *

ತದನಂತರಂ ಚೇಳನಿಮಹಾದೇವಿ ಭಕ್ತಿಯಿಂ ಕರಕಮಲಮುಕುಳಿತೆಯಾಗಿ ಗೌತಮ ಸ್ವಾಮಿಗಳ್ಗೆ ಬಿನ್ನಪಂಗೆಯ್ಯೆ. ಎಲೆ ! ಸ್ವಾಮಿ ! ಬಂಧುಜನ ಸಮೃದ್ಧಿಯಿಂ ಪುಣ್ಯಾಬಂಧವಾಗಿ ಯಾವುದಾನೊಂದು ನೋಂಪಿಯಿಂ ಬೆಸಗೆಮೆನಲವರಿಂತೆಂದರ್.— ಕಮಠೋಪಸರ್ಗಮಂ ನಿವಾರಿಸಿದ ಧರಣೇಂದ್ರ ಪದ್ಮಾವತಿಯಿಂ ಪಾರ್ಶ್ವತೀರ್ಥಂಕರರುಮಂ ನೋ[ಂಪು] (ನು) ಪ್ರದೆನಲಾ ನೋಂಪಿಯಿಂ ವಿಧಾನಮೆಂತೆನೆ.—

ಶ್ರಾವಣ ಶುದ್ಧಪಂಚಮಿಂಗುಲ್ಲಿ ಶುಚಿರ್ಭೂತರಾಗಿಯಭಿಷೇಕಾಷ್ಟವಿಧಾರ್ಚನೆ ದ್ರವ್ಯಂ ಬೆರಸು ಚೈತ್ಯಾಲಯುಕ್ಕೆ ಬಂದು ಧರಣೇಂದ್ರ ಪದ್ಮಾವತಿ ಸಹಿತಮಾಗಿರ್ದ್ದ ಪಾರ್ಶ್ವತೀರ್ತ್ಥಕಂಗಭಿಷೇಕಾಷ್ಟ ವಿಧಾರ್ಚನೆಯಿಂ ಮಾಡಿ, ಅರಳು, ಕಡಲೆ, ನೌತೆಯಕಾಯಿ, ಮುಟ್ಟಿಗೆ, ಹಾಲು ತುಪ್ಪ, ಸಕ್ಕರೆವೆರಸಿ ಯಷ್ಟವಿಧಾರ್ಚನೆಯಿಂ ಮಾಡಿ, ಸಮ್ಯಗ್ದೃಷ್ಟಿಗಳಪ್ಪೈವರ್ ಸುವಾಸಿನಿಯುರ್ಗ್ಗೆ ಗಂಧಾಕ್ಷತೆ ತಾಂಬೂಲಮಂ ಕೊಟ್ಟು, ಅರಳು, ನೆನೆಗಡಲೆ, ನೌತೆಯ ಕಾಯಿ, ಹಾಲು, ತುಪ್ಪ, ಬೆಲ್ಲಮಿವಿನಿತುಮಂ ಕೊಡುವುದು· ಬಳಿಕ್ಕೆ ತಾನೇಕಭುಕ್ತಮಂ ಮಾಬ್ಪುದು· ಇದು ನೋಂಪಿಯ ಕ್ರಮಂ.

* * * *

ಮತ್ತಮೀ ನೋಂಪಿಯುಂ ಮುಂ ನೋಂತವರಾರಾರೆನೆ.—ಈ ಜಂಬೂ ದ್ವೀಪದ ಭರತ ಕ್ಷೇತ್ರದೊಳ್ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ರಥನೂಪುರ ಚಕ್ರವಾಳ ಪುರಮನಾಳ್ವಂ ಗರುಡವೇಗ ವಿದ್ಯಾಧರನೊಂದು ದಿವಸಂ ಅಕೃತ್ರಿಮಚೈತ್ಯಾಲಯಕ್ಕೆ ವಂದನೆಯಂಮಾಡಿ ಬಪ್ಪಲ್ಲಿಯಾತನ ಶತ್ರುಗಳ್ ಗಗನಗಾಮಿನಿ ವಿದ್ಯಾಚ್ಛೇದನಂಗೆಯ್ಯಲಂತಂ ಸಮಾಧಿಗುಪ್ತ ಮುನಿಗಳ ಪಾದೋ (ಪ) ಪ್ರಾಂತದೊಳಿರ್ದ್ದನಂ ಕಂಡು ಕರುಣದಿಂ ಬೆಸಸಿದರ್. ಧರಣೇಂದ್ರ ಪದ್ಮಾವತಿ ಸಹಿತಮಾಗಿರ್ದ್ದ ಪಾರ್ಶ್ವನಾಥನ ನೋಂಪಿಯಿಂ ನೋ[ನೆಗೆ] (ನಲ್ಕೆ) ನಿನ್ನ ವಿದ್ಯೆಗಳೆಲ್ಲಮುಂ ಮುನ್ನಿನಂತಕ್ಕುಮೆನಲಾ ನೋಂಪಿಯ ವಿಧಾನಮಂ ಕೇಳ್ ಪೇಟಿ, ಮತ್ತಮಿಂತೆಂದರ್.

End :

ಆಕ್ರಮದಿಂ ನೋನಲಾ ಧರಣೇಂದ್ರ ಪದ್ಮಾವತಿ ಜಕ್ಕಳೆಬ್ಬೆ ನಮ್ಮಿಬ್ಬರ ಭಕ್ತಿಯಿಂ ನೋಂತ ಮಗಳಗಾಪತ್ತಾಗದೆಂದಾ ಶಿಶುವಂ ತೊಟ್ಟಿಲೊಳಕ್ಕೆ ಕಳುಪಿದೊಡೆ ಸಂತೋಷದಿಂದೇಕ ಭುಕ್ತಮಂ ಮಾಡಿ ಮನೆಗೆ ಪೋಪಾಗಳಾ ಅತ್ತೆಯಾಕೆ ನೋಂತ ಫಲದಿಂ ಸಫಲಮೆಂದು ಸಂತೋಷಂಬಟ್ಟು ಪುತ್ರ ಪೌತ್ರಾದಿ ಸಹಿತ ಸುಖಮಿರ್ದ್ದಳೆಂದು ಪೇಟಿ, ಗರುಡವೇಗ ವಿದ್ಯಾಧರಂ ಗುರುಗಳ್ಬೆಸಸಿದಂದದಿಂ ನೋಂಪಿಯಿಂ ನೋಂತು ಗಗನಗಾಮಿನಿ ವಿದ್ಯೆಗಳೆಲ್ಲಂ ಸಾಧ್ಯಮಾಗಿ ಪುತ್ರಪೌತ್ರಾದಿ ಸಹಿತಂ ವಿದ್ಯಾಧರಸ್ತ್ರೀಯರನನುಭವಿಸಿದ [ರೆ] (ನೆ)ಂದು ಗೌತಮಗಣಧರ

ಸ್ವಾಮಿಗಳ್ ಚೇಳನಿಮಹಾದೇವಿಗೆ ಬೆಸಸೆ ಆ ನೋಂಪಿಯಂ ಯಥಾ ಕ್ರಮದಿಂ ನೋಂತು ದೇವಕುಮಾರ ಸನ್ನಿಭರಪ್ಪ ಪಲಂಬರ್ ಮಕ್ಕಳಂ ಪಡೆದು, ರಾಜ್ಯಶ್ರೀಯೊಳ್ಕೂಡಿ, ಸುಖಮನನುಭವಿಸಿ, ಕಡೆಯೊಳ್ ಸನ್ಯಸನ ಸಮಾಧಿಯಿಂ ಮುಡಿಪಿ, ಸ್ವರ್ಗ್ಗದೊಳ್ ದೇವನಾಗಿ ಪುಟ್ಟಿ, ತತ್ಸುಖಮನನುಭವಿಸಿ, ಪರಂಪರೆಯೊಳ್ ಶಾಶ್ವತ ಸುಖಕ್ಕೆ ಭಾಜನರಾದುದಂ ಭವ್ಯಜನಂಗಳೆಲ್ಲರ್ ಕೇಳ್ದು, ನಂಬಿ, ಭಕ್ತಿ ಪೂರ್ವಕದಿಂ ನೋಂತು ಸಪ್ತಪರಮಸ್ಥಾನದ ಸುಖಮಂ ಪಡೆದರ್. ಈ ನೋಂಪಿಯಂ ನೋಂತವರ್ಗ್ಗಂ (ನೋನಿಸಿದವರ್ಗ್ಗಂ) ಮಂಗಳ ಮಹಾ.

Colophon :

(ಸಂಪೂರ್ಣಂ.)

(ವಿ.ವಿ.)—

ಸಮಗ್ರ. ಶಿಥಿಲ. ಇದರೊಡನೆ ಇನ್ನೂ ಅನೇಕ ಗ್ರಂಥಗಳವೆ. ಅವನ್ನು ೩೧೯ ನೆಯ ನಂಬರಿನಲ್ಲಿ ನೋಡಿ ತಿಳಯುವುದು.

ಇದು ಗದ್ಯರೂಪವಾದುದು. ಆದರೆ ಆದಿಯಲ್ಲಿ ಕೆಲವು ಕಂದ ಪದ್ಯಗಳವೆ. ಹುತ್ತು ಮುಂತಾದುವುಗಳಲ್ಲಿರುವ ನಾಗರನ್ನು ಪೂಜಿಸಿ ವ್ರತವನ್ನಾಚರಿಸುವ ಕ್ರಮವನ್ನು ಹಾಸ್ಯಮಾಡಿ ಜೈನಮತಾನುಸಾರವಾಗಿ ನಾಗರಪಂಚಮಿಯ ನೋಂಪಿಯನ್ನು ಕವಿಯು ಹೇಳುವನು. ಈ ಕ್ರಮವನ್ನು ಮೇಲೆ ಉದಾಹರಿಸಿರುವ ಭಾಗಗಳಿಂದ ತಿಳಿಯಬಹುದು. ಕವಿಯಾರೆಂಬುದು ಈ ಗ್ರಂಥದಿಂದ ತಿಳಯಬರುವುದಿಲ್ಲ.

No. 374. ನೀತಿಸಾರ ಸಮುಚ್ಚಯ

NĪTISĀRASAMUCCAYA.

Substance, Śrītāla. Size, $15\frac{5}{16} \times 2\frac{1}{16}$ inches. Pages, 22. Lines, 10 on a page. Character, Kanarese. Condition, slightly injured. Appearance, old.

Begins on fol. 1*a* of the manuscript described under No. 321 ante.

Contains Kanarese meaning for 112 Sanskrit stanzas giving an account of Jain priests.

Beginning:

ಶ್ಲೋ ॥ ಪ್ರಣಮ್ಯ ತ್ರಿಜಗನ್ನಾಥಾ । ನಿಂದ್ರನಂದಿತ ಸಂಪದಃ ॥
ಅನಗಾರಾನ್ ಪ್ರವಕ್ಷ್ಯಾಮಿ । ನೀತಿಸಾರಸಮುಚ್ಚಯಂ ॥

ಟೀ॥ ಊರ್ಧ್ವಾಧೋಮಧ್ಯಮ ಲೋಕಾಧಿಪತಿಗಳೆನಿಸಿದ, ಇಂದ್ರನಂದಿತ ಸಂಪದಃ = ಭವನವ್ಯಂತರ ಜ್ಯೋತಿಷ್ಕಕಲ್ಪವಾಸಿಕರ ತಿರ್ಯ್ಯಗ್ (?) ಚಂದ್ರಮೊದಲಾದ ಶತೃಂದ್ರ (?) ವಂದಿತ ಜ್ಞಾನಾದಿ ಸಂಪತ್ತನುಳ್ಳ, ಅನಗಾರಾನ = ಬುದ್ಧಿ ತಪೋ ಬಲೌಷಧ ವೃದ್ಧ್ಯಾದಿ ಸರ್ವವೃದ್ಧಿ ಸಂಪನ್ನರಹ ಗಣಧರರು ಮೊದಲಾದ ಮುನಿಗಳನು ಸಮ್ಯಜ್ಞಾನ ಲಾಭಾದ್ಯಂತರಾಂಯ ವಿನಾಶನಿಮಿತ್ತವಾಗಿ, ಪ್ರಣಮ್ಯ = ನಮಸ್ಕರಿಸಿ, ನೀತಿಸಾರ ಸಮುಚ್ಚಯಂ = ಮುನಿಜನಂಗಳ ಚರಿತ್ರ ಪ್ರರೂಪಣಮಂ ಮಾಳ್ಪ ನೀತಿಸಾರಮೆಂಬ ಗ್ರಂಥಸಂಗ್ರಹ [ಮು] ಮಂ. ಪ್ರವಕ್ಷ್ಯಾಮಿ = ಭವ್ಯಜನ ಹೃದಯಾನಂದ ಸಂದೋಹೋತ್ಪಾದನಮೆ ಪ್ರಯೋಜನವಾಗಿ ಪೇಳ್ವೆಂ.

ಭರತೇ ಪಂಚಮೇಕಾಲೆ । ನಾನಾಸಂಘಸಮಾಕುಲಂ ॥
ವೀರಸ್ಯ ಶಾಸನಂ ಜಾತಂ । ವಿಚಿತ್ರಾಃ ಕಾಲಶಕ್ತಯಃ ॥

ಟೀ॥ ಭರತೇ = ಭರತಕ್ಷೇತ್ರದಲ್ಲಿ, ಪಂಚಮೇಕಾಲೇ = ಪಂಚಮಕಾಲದಲ್ಲಿ, ನಾನಾ ಸಂಘಸಮಾಕುಲಂ = ನಾನಾ ಸಂಘಗಳಿಂದ ಪರಿಪೂರ್ಣವಹಂತಾದ್ದು, ವೀರಸ್ಯ = ಶ್ರೀ ವೀರವರ್ಧಮಾನಸ್ವಾಮಿಯ, ಶಾಸನಂ = ಸಮಯವು, ಜಾತಂ = ಆಯಿತು. ಕಾಲಶಕ್ತಯಃ = ಕಾಲಂಗಳ ಶಕ್ತಿಗಳು. ವಿಚಿತ್ರಾಃ = ನಾನಾ ಪ್ರಕಾರಂಗಳು. ವೀರವರ್ಧಮಾನಸ್ವಾಮಿಯ ಶಾಸನವು ಕಾಲದೋಷದಿಂ ದ್ರಾವಿಡಾದಿ ನಾನಾಪ್ರಕಾರವಾದ ಸಂಘಗಳಿಂದ ಸಂಕೀರ್ಣವಾಯ್ತೆಂದು ತಾತ್ಪರ್ಯಂ.

ನಿಯಾಮಕರಿಲ್ಲದೆ ಜನಂಗಳು ಸ್ವಚ್ಛಂದ ವೃತ್ತರಾದರೆಂಬುದಂ ಪೇಳಲ್ಬಂದುದೆಂಬುದುತ್ತರಸೂತ್ರಂ.

ಸ್ವರ್ಗಂಗತೇ ವಿಕ್ರಮಾರ್ಕೇ । ಭದ್ರಬಾಹೌಚಯೋಗಿನಿ ।
ಪ್ರಜಾ ಸ್ವಚ್ಛಂದ ಚಾರಿಣ್ಯಃ । ಬಭೂವುಃ ಪಾಪಮೋಹಿತಾಃ ॥

ಟೀ॥ ವಿಕ್ರಮಾರ್ಕೇ = ವಿಕ್ರಮಾರ್ಕನೆಂಬ ಮಹಾರಾಜನು. ಭದ್ರಬಾಹೌಚಯೋಗಿನಿ = ಭದ್ರಬಾಹುಯೋಗೀಶ್ವರನು. ಸ್ವರ್ಗಂಗತೇಸತಿ = ಸ್ವರ್ಗವನೆಯ್ದಿದವರಾಗುತ್ತಮಿರಲು. ಕಾಲದೋಷತಃ = ಹುಂಡಾವಸರ್ಪಣದ ಪಂಚಮಕಾಲದೋಷದತ್ತಣಿಂದ. ಪಾಪಮೋಹಿತಾ = ಪಾಪಂಗಳಿಂದ ಮೂಢರಾದಂಥ. ಪ್ರಜಾಃ = ಪ್ರಜೆಗಳು. ಸ್ವಚ್ಛಂದಚಾರಿಣ್ಯಃ = ಸ್ವಚ್ಛಂದಚಾರಿಗಳು. ಬಭೂವುಃ = ಆದರು. ಧರ್ಮೋಪದೇಶಕರಹ ಭದ್ರಬಾಹುಸ್ವಾಮಿಗಳು, ಕುಲಾಚಾರಂಗಳ ನಿಯಮಿಸುವ ವಿಕ್ರಮಾರ್ಕನು ಸ್ವರ್ಗಸ್ಥರಾಗಲು ಪಾಪ ರಾಜಭೀತಿಗಳ ಭಾವದಿಂದ ಪ್ರಜೆಗಳು ನೀಚರಾದರೆಂಬುದು ಇದರ ತಾತ್ಪರ್ಯಂ.

ಯತಿಗಳ್ಗೆ ಸ್ವಪರ ಪರಿಜ್ಞಾನವಿಲ್ಲವೆಂಬುದನು ಸೂಚಿಸಲ್ಬಂದುದುತ್ತರ ಸೂತ್ರಂ.

* * * *

ತಸ್ಮೈದಾನಂ ಪ್ರದಾತವ್ಯಂ । ಯಃಸನ್ಮಾರ್ಗೇ ಪ್ರವರ್ತತೇ ॥
ಪಾಷಂಡಿಭ್ಯೋ ದದದ್ದಾನಂ । ದಾತಾ ಮಿಥ್ಯಾತ್ವವರ್ಧಕಃ ॥

ಟೀ॥ ಯಃ=ಆವನೊಬ್ಬನು, ಸನ್ಮಾರ್ಗೇ: ಶ್ರೀಜಿನಮಾರ್ಗದಲ್ಲಿ, ಪ್ರವರ್ತತೇ=ಪ್ರವರ್ತಿಸುತಂ ಯಿಹನು, ತಸ್ಮೈ=ಆತಂಗೋಸ್ಕರ, ದಾನಂ=ಆಹಾರದಾನಾದಿದಾನವು, ಪ್ರದಾತವ್ಯಂ: ಕೊಡಲು ಯೋಗ್ಯವು. ಪಾಷಂಡಿಭ್ಯಃ=ಪಾಷಂಡಿಗಳಿಗೋಸ್ಕರ, ದಾನಂ ದದತ್= ದಾನವನು ಕೊಡುತಂ ಯಿದ್ದು, ದಾತಾ=ದಾತೃ, ಮಿಥ್ಯಾತ್ವವರ್ತಕಃ=ಮಿಥ್ಯಾತ್ವವ ಹೆಚ್ಚಿಸುವಾತನಹನು.

ಜೀರ್ಣಂ ಜಿನಗೃಹಂ ಬಿಂಬಂ । ಪುಸ್ತಕಂ ಶ್ರಾದ್ಧಮೇವವಾ ॥
ಉದ್ಧಾರ್ಯ ಸ್ಥಾಪನಂ ಪೂರ್ವ । ಪುಣ್ಯಾತೋಧಿಕಮುಚ್ಯತೇ ॥

ಟೀ॥ ಜೀರ್ಣಂ=ಜೀರ್ಣವಾದ ಜಿನಗೃಹವನು, ಬಿಂಬಂ, ಜಿನಬಿಂಬವವನು, ಪುಸ್ತಕಂ: ಜಿನಶಾಸ್ತ್ರದ ಪುಸ್ತಕವನು, ಶ್ರಾದ್ಧಮೇವವಾ: ಪೂಜೆಯನಾಯಿತ್ತಾದಡೆಯೂ, ಉದ್ಧಾರ್ಯ ಸ್ಥಾಪನಂ. ಉದ್ಧರಿಸಿ ಸ್ಥಾಪಿಸುವುದು. ಪೂರ್ವ ಪುಣ್ಯಾತಃ=ಪೂರ್ವದಲ್ಲಿ ನಿರ್ಮಾಪಣ ಪುಣ್ಯಾದತ್ತಣಿಂದ, ಅಧಿಕಂ=ಅಧಿಕವೆಂದು. ಉಚ್ಯತೇ=ಹೇಳಲ್ಪಡುತಂ ಯಿಹುದು.

ಶಯಾನಂ ವ್ಯಗ್ರಮನಸಂ । ಮಲೋಜ್ಝಂ ನಿಂದ್ಯಕರ್ಮಕಂ ॥
ನವಂದತೇ ಯತಿಂಸಾಧು । ಧರ್ಮಧ್ಯಾನಪರಂ ನಮೇತ್ ॥

ಟೀ ॥ ಶಯಾನಂ: ಮಲಗಿದ್ದಂಥ, ವ್ಯಗ್ರಮನಸಂ : ಅನ್ಯಮನಸ್ಕನಹಂಥ, ಮಲೋಜ್ಝಂ ಮಲವಿಸರ್ಜನ ಮಾಡುವಂಥ, ನಿಂದ್ಯ ಕರ್ಮಕಂ : ಸೇವನಾದಿ ಕುಕರ್ಮಸ್ಥನಹಂಥ, ಯತಿಂ ತಪಸ್ವಿಯನು, ಸಾಧು : ಸತ್ಪುರುಷನು, ನವಂದತೆ : ನಮಸ್ಕರಿಸನು, ಧರ್ಮಧ್ಯಾನಪರಃ ಧರ್ಮ ಧ್ಯಾನದಲ್ಲಿ ತತ್ಪರನಹಂಥ, ಆತನನು ನಮೇತ್ : ನಮಸ್ಕರಿಸುವುದು.

End :

ಭಾನೋರುದಯತೋ ನಾಡಿ । ಷಟ್ಕಂ ಸ್ವಾಧ್ಯಾಯಗೋಚರಂ ॥
ತತೋ ಮುನಿ: ಪ್ರವರ್ತಂತೇ । ಯೋಗ್ಯ ಕೃತ್ಯೇಷು ನಿತ್ಯಶ : ॥

ಟೀ ॥ ಭಾನೋರುದಯತಃ : ಸೂರ್ಯೋದಯದತ್ತಣಿಂದ, ನಾಡಿಷಟ್ಕಂ : ಆರು ಗಳಿಗೆ ಯು, ಸ್ವಾಧ್ಯಾಯ ಗೋಚರಂ : ಸ್ವಾಧ್ಯಾಯಕ್ಕೆ ವಿಷಯವು. ತತಃ : ಅನಂತರದಲ್ಲಿ, ಮು ನಿಃ : ತಪೋಧನನು, ನಿತ್ಯಶಃ : ಅನವರತವೂ, ಯೋಗಕೃತ್ಯೇಷು : ಯೋಗಕೃತ್ಯಂಗದಲ್ಲಿ, ಪ್ರವರ್ತತೇ : ಪ್ರವರ್ತಿಸುವನು.

. . . . . . । ನಿತ್ಯ ನೈಮಿತ್ತಿಕಾತ್ಮಸು ॥
ಕ್ರಿಯಾಸು ವಿಸ್ತರಸ್ತಾಸಂ । ಪೂರ್ವಾಚಾರ್ಯಮತಾನ್ಮತಃ ॥

ಟೀ ॥ ನಿತ್ಯನೈಮಿತ್ತಿಕಾತ್ಮಸು ಕ್ರಿಯಸು : ನಿತ್ಯನೈ . . . . . ರಃ : ಆ ಕ್ರಿ ಯೆಗಳ ವಿಸ್ತರವು, ಪೂರ್ವಾಚಾರ್ಯ ಮತಾತ್ : ಪೂರ್ವಾಚಾರ್ಯರ ಮತದಿಂದ, ಮತಃ: ಹೇಳಲ್ಪಟ್ಟಿತು.

ತೀರ್ಥೇಶಾಂ ಸರ್ವಭಾವಾನಾಂ । ಮತಂ ಕೇನಾನು ಮನ್ಯತೇ ॥
ತನ್ಮನ್ವಾನಾ ನರೋ ಯಾಂತಿ । ಶಕ್ರನಂದಿತ ಸಂಪದಃ ॥

ಟೀ ॥ ಸರ್ವಭಾವಾನಾಂ : ಎಲ್ಲಾ ಪದಾರ್ಥಂಗಳ ಸ್ವರೂಪವನು ಬಲ್ಲಂಥ, ತೀರ್ಥೇ ಶಾಂ : ತೀರ್ಥಂಕರ ಪರಮದೇವರುಗಳ, ಮತಂ : ಅಭಿಪ್ರಾಯವನ್ನು, ಕೇ : ಯಾರೂ, ನಾನು ಮನ್ಯತೆ : ಬಗೆಯರು. ತನ್ಮನ್ವಾನಾ : ಅದನು ಸ್ವೀಕರಿಸುತಂ ಯಿದ್ದ, ನರಃ : ಮನುಷ್ಯರು ಗಳು, ಶಕ್ರನಂದಿತಸಂಪದಃ : ಮಹೇಂದ್ರನಂದಿತ ಸಂಪತ್ತುಗಳನು, ಯಾಂತಿ : ಎಯ್ದುತಂ ಯಿ ಹರು.

ಸ್ರ ॥ ಮಾದ್ಯತ್ಪ್ರತ್ಯರ್ಥಿ ವಾದಿದ್ವಿರದ ಪಟುಪಟಾಟೋಪ ಕೋಪಾಪನೋದೇ ।
ವಾಣೀಯಸ್ಯಾಭಿರಾಮಾ ಮೃಗಪತಿ ಪದವೀಗಾಹತೇ ದೇವಮಾನ್ಯಃ ॥
ಸಶ್ರೀಮಾನಿಂದ್ರನಂದಿರ್ಜಗತಿ ವಿಜಗುತಾಂ ಭೂರಿಭಾವಾನುಭಾವೀ ।
ದೈವಜ್ಞಃ ಕುಂಡ ಕುಂದ ಪ್ರಭುಪದವಿನಯ ಸ್ವಾಗಮಾಚಾರ ಚಂಚುಃ ॥

ಶ್ರೀ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದಿವೆ. ಅವಾವುವೆಂಬುದನ್ನು ತಿಳಿಯಲು ಹಿಂದೆ ವರ್ಣಿತವಾಗಿರುವ ೩೦೧ ನೆಯ ನಂಬರನ್ನು ನೋಡುವುದು.

ಇದರಲ್ಲಿ ಸಂಸ್ಕೃತ ಮೂಲ ಶ್ಲೋಕಗಳಿಗೆ ಕರ್ಣಾಟಕ ಟೀಕೆಯು ಬರೆದಿದೆ. ಶ್ಲೋಕಗಳು ೧೧೨, ವೃತ್ತ ೧. ಜೈನ ಮುನಿಗಳ ಇರುವಿಕೆಯು ಇದರಲ್ಲಿ ಉಕ್ತವಾಗಿದೆ.

No. 375. ನೇಮಿಜಿನೇಶ ಸಂಗತಿ.
NĒMIJINĒŚA SANGATI.

Substance, Śrītāḷa. Size, 10 $\frac{3}{16}$ × 2 $\frac{1}{16}$ inches. Pages, 448. Lines, 10 on a page. Character, Kanarese. Condition, much injured. Appearance, old.

Complete in 35 Sandhis.

Describes the story of Nēmināthajina who was the 22nd Tīrthankara. The author is Maṅgarasa. He makes a reference to poets from Pampa downwards, and gives the genealogy of himself in the beginning.

Beginning :

ಶ್ರೀಮದಮರಪತಿ ಮೌ(ಳ) ಕೀಲಿತ ಪಾದ ।
ತಾಮರಸದ್ವಯಾನಜಗೆ ॥
ಕಾಮಮದೇಭಹರಿಗೆ ನೇಮಿಜಿನಪತಿ ।
ಗಾ ಮೋದವೆತ್ತೆಱಗುವೆನು ॥
ಶ್ರೀಮತ್ಪಂಚ ಕಲ್ಯಾಣ ವೈಭವಯುತ ।
ರಾಮಕೇಶವನಾಥ ಚರಣ ॥
ಸೋಮಾರ್ಕ ಕೋಟಿಕಿರಣ ನೇಮಿನಾಥನು ।
ದ್ಧಾಮಸುಖವ ನೀವುದೆಮಗೆ ॥

*　　　*　　　*　　　*

ಶ್ರುತ ಮುನಿವರ ಸಹೋದರನಾಗಿ ಸಂ ।
ಕೃತಿ ಬಂಧನವ ಪರಿಪಡಿಸಿ ॥
ಅತಿ ಕೀರ್ತಿವಡೆದ ವಿಮಲಕೀರ್ತಿ ವೆಸರ ವಿ ।
ಶ್ರುತ ಮುನಿಗಿರದೆಱಗುವೆನು ॥
ಘಾಟ ಗೆಡಿಸುವೆ ವಪುವನೆಂಬಾ ನವ ।
ಕೋಟಿ ಮುನಿಗಳ ಮೆಲ್ಲಡಿಗೆ ॥
ತಾಟಿಸಿ ಹಣೆಯ ನೇಮೀಶ ಸಂಗತಿಯ ಸ ।
ಘಾಟಿಯಿಂದಾನುಸಾಱುವೆನು ॥
ಇನ್ನು ನಾನೊ ಱಿವೆ ಚವ್ವೀಶಜಿನೇಶ್ವರ ।
ತ್ಯನ್ನುತರಮಪ್ಪ ಸಂಗತಿಯ ॥ (?)
ಕನ್ನಡದೊಳು ಚಂಪುಕಾವ್ಯವನೆ ಪೇಳ್ದ ।
ಸನ್ನುತ ಸತ್ಕವೀಶ್ವರರ ॥

ಪುರುಜಿನಪತಿಯ ಪುರಾಣಮನುಸುರಿದ ।
ವರಕವಿ ಪಂಪರಾಜನನು ॥

ದುರಿತ ವಿದೂರ ರಚಿತ ಚರಿತವ ಪೇಳ್ದ ।
ಗುರುವ ರನ್ನನ ನುತಿಸುವೆನು ॥

ದೇವ ಚಂದ್ರಪ್ರಭುವನು ಕೊಂಡಾಡಿ ।
ದಾ ವಿಜಯರ ಪುಷ್ಪದಂತಾರ್ಯ ॥

ಭಾವಜಾರಿಯ ಪೊದಳದ ಗುಣವರ್ಮನ ।
ಭಾವ ಶುದ್ಧಿಯೊಳು ನೆನೆವೆನು ॥

ಪದಿನಾಲ್ಕನೆಯ ತೀರ್ಥಂಕರ ಚರಿತ್ರವ ।
ನೊದವಿ ಪೇಳಿದ ಜನ್ನಗನ ॥

ಮುದದಿಂದ ಧರ್ಮಚರಿತ್ರವು ನುಸುರಿದ ।
ಚದುರ ಮಧುರನ ನುತಿಪೆನು ॥

ಶಾಂತೀಶನ ಪೊಗಳಿದ ಪೊನ್ನನ ರಘು ।
ಕಾಂತನ ಮಲ್ಲಿತೀರ್ಥನ ॥

ಸಂತಸದಿಂ ನುತಿಸಿದ ನಾಗಚಂದ್ರನ ।
ಸಂತತಮಭಿನುತಿಸುವೆನು ॥

ಅಂಗಜರಿಪು ನೇಮಿವೀರೇಶಚರಿತವ ।
ಪೊಂಗಿ ಪೊಗಳ್ದ ಕಣ್ಣಪನ ॥

ಶೃಂಗಾರ ಕಾವ್ಯ ಲೀಲಾವತಿಯನು ಪೇ ।
ಳ್ದಂಗಿಕ ನೇಮಿಯ ನೆನೆವೆ ॥

ಬಂಧುರ ಭರತ ಯಾದವ ವಂಶಾನು ಕೃತಿ ।
ಬಂಧದೊಳಗೆ ಸೇರಿಸಿದ ॥

ಬಂಧುವರ್ಮನನು ನೆನೆದು ನೇಮಿಚರಿತ ಪ್ರ ।
ಬಂಧಮನಿರದುಸುರುವೆನು ॥

ಇವರಾದಿಯಾಗಿ ಯಿಳೆಯೊಳುಳ್ಳ ವರಜಿನ ।
ಕವಿಗಳನೆನ್ನ ಚಿತ್ತದೊಳು ॥

ಅವಿರತವಿರಿಸಿ ನೇಮೀಶನ ಚರಿತೆಯ ।
ಸವಿನಯ ದಿಂದುಸುರುವೆನು ॥

ಕೃತಿಯ ನೆವದಿ ನೇಮೀಶನ ಚರಿತೆಯ ।
ನುತಿಗೆಯ್ಯಲಘಸಂವರಣೆ ॥

ಹತವಾಗಲೆಂದು ಪೊರೆದೆ ನಿಂತಿದ ಭವ್ಯ ।
ಕ್ಷಿತಿಯಿರದೊಲಿದು ಲಾಲಿಪುದು ॥

ಕೇಳಿದೊಡೇನೊ ಕೇಳದೊಡೇನೊ ಮನಗೊಂಡು ।

ಕಾಲವಿಜಯನ ಕಥೆಯು ಪುಣ್ಯಕಾರಣ।
ಹೇಳದೆ ನೆನ್ನಱಿವನಿತ ॥

* * * *

ಇಂತು ದುರ್ಜನರ ದೂಷಿಸಿಯಾ ಸಜ್ಜನ
ಸಂತಾನವ ಸ್ತುತಿಗೆಯ್ದು ॥
ಕಂತುಮರ್ದನ ನೇಮಿನಾಥನ ಚರಿತ್ರೆಯ ।
ಸಂತಸದಿಂದುಸುಱುವೆನು ॥
ಹರಿಕುಲತಿಲಕ ಮಹಾಮಂಡಳಿಕ ಭೂ ।
ತರುಣೀಶ ಚೆಂಗಾಳ್ವ ನೃಪನ ॥
ವರ ಸಚಿವಾನ್ವಯಾಂಬರಭಾನು ಜನಪದ ।
ಸರಸಿಜ ಮದಮಧುಕರನು ॥
ಜನನುತ ಕಲ್ಲಹಳ್ಳಿಯ ನಾಡಿನ ಪ್ರಭು।
ವಿನಯವನಧಿ ಚಂದ್ರಮನು ॥
ಮನುನಿಭ ಚರಿತ್ರವಾದ . . . ಮಾಧವ ।
ತನುಜಸದೃಶ ವಿಜಯೇಂದ್ರ ॥
ವಿತರಣರೊಳು ವಿಭುಮಹೀಜಾತ್ರನುಮ।
ನುತ ವಿಭದೊಳಿಂದ್ರನನು ॥ (?)
ವಿಶ್ರತ ವಿವೇಕದೊಳಾ ವಿಧಿಯನು ಗೆಲ್ವ ।
ನುತಮಾದ ನಾ ವಿಜಯೇಂದ್ರ ॥
ಆ ಪ್ರಭುವಿನ ತನುಜಾತನು ಸಕಲ ಕ।
ಲಾ ಪ್ರವೀಣನುತ್ತಮನು ॥
ಅಪ್ರತಿಮ ಗುಣಾನ್ವಿತ ಕಾಮಧೇನು ಸ ।
ಮಪ್ರದ ನೆನೆ ರಂಜಿಪನು ॥ (?)
ಜನಪದಭಕ್ತ ಮಂಗರಸನಾಗಿ ಮುಕ್ತಿ ।
ವನಿತೇಶ ನೇಮಿ ತೀರ್ಥಕರ ॥
ವಿನುತಮಪ್ಪ ಕಥನವ [ಮಾ](ಪಾ)ಡುಗಬ್ಬದೊ ।
ಳನುಗೆಯ್ದ ನಾನದಂತೆನಲು ॥
ಗುರುಕಟಿ ಕಟವಿನ್ಯಸ್ತಹಸ್ತದ್ವಯ ।
ಧರಣಿಗಳಾ ಘೃಪ್ರಸರ ॥
ಊಗು ನರ್ತನಾಕಾರ ಮೂಲೋಕಮಿಪ್ಪುದು ।
ಮರುತತ್ರಯಾಧಾರದಿಂದ ॥

* * *

ಆ ಸಿಂಹಪುರವನಾಳುತಿರ್ಪ ಸರ್ಹ ।
ದ್ವಾಸವೆಸಱ ಭೂಭುಜನು ॥

ಭಾಸುರವಡೆದಮರಾವತಿಯೊಳಗಾ ।
ವಾಸವನಿರ್ಪಂತಿಹನು ॥
ನರವನಿತಾಜನ ಹೃದಯ ಕಮಲವ ।
ತರುಣ ಸಹಸ್ರಕಿರಣನು ॥
ನಿರುಪಮರೂಪನೊಪ್ಪಿದನು ಸತ್ಕವಿ ಚಿತ್ರ ।
ಶರಧಿ ಸಂಪೂರ್ಣ ಚಂದ್ರಮನು ॥

Colophon:

ಇದು ಜಿನಪದ ಸರಸಿಜ ಮದಮಧುಕರ ।
ಚದುರ ಮಂಗರಸ ರಚಿಸಿದ ॥
ಮದನಾರಿ ನೇಮಿಜಿನೇಶ ಸಂಗತಿಯೊಳ ।
ಗೊದನಿ ರಂಜಿಸಿತಾಶ್ವಾಸ ॥

ಅಂತು ಪ್ರಥಮ ಸಂಧಿ ೧ ಕ್ಕಂ ಪದನು ೪೨ ಕ್ಕಂ ಮಂಗಳ ಮಹಾ ಶ್ರೀ.

ಶ್ರೀಮದಮರಪತಿ ಮೌಳಿ ಕೇಲಿತ ಪಾದ ।
ತಾಮರಸ ದ್ವಯನಜಗೆ ॥
ಕಾಮಮದೇಭ ಹರಿಗೆ ನೇಮಿಜಿನಪತಿ ।
ಗಾಮೋದವೆತ್ತೆಱಗುವೆನು ॥
ಅರಿನೃಪಮರ್ದನ ನರುಹದ್ದಾಸಗೆ ।
ಸರಿಸಿಜ ಮುಖಿ ಜಿನದತ್ತೆ ॥
ಯರಸಿಯಾದಳು ಫಣಿಪತಿಗೆ ಪದ್ಮಾವತಿ ।
ವರ ಸತಿಯಾದಂದದೊಳು ॥

End:

ಆತಿಶಾಂತತೆಯಿಂತಪ್ಪ ಧರ್ಮಜವಾಯು (ಜ) ।
ಪಲ್ಗುಣ ಮುನಿವರರ್ಗೆ ॥ (?)
ಅತಿಶಯುಮಪ್ಪುದು ತುಪತಿಯಾ । (?)
ಯತಿವೇಗದೊಳು ಭೂವರಗೆ ॥
ಅನಿತಱೊಳಮರದುಂದುಭಿ ಮೊಳಗಲು ಸಿಂಹ ।
ನಿನದವ ಕೇಳ್ದಭದಂತೆ ॥
ಘನವಾಗಿ ಬೆದರಿ ಕಾಲ್ದೆಗೆದೋಡಿದೆ ದು ।
ರ್ಜನನಾಗಾ ಕಯ್ವಳನ ॥
ಅನಿಮಿಷಲೋಕಮೆಲ್ಲ ಕೂಡಿ ಬಂದತಿ ।
ವಿನಯದಿಂದಾ ಬಳಿಕವರ ॥
ಘನವಾಗಿ . ಳಸಿ ಫಲನುತಿಗೆಯ್ದಾ ।
ವಿನತರಾಗಿ ಪೋದರಿತ್ತ ॥

ಓರ್ವರ್ವಲೊಳು ಕಾಂತೆಯರುಗಳು ತಾ ।
ಕರ್ಮಸಂತಾನವ ಕೆಡಿಸಿ ॥
ನಿರ್ಮೂಲನಮಾಡಿ ಯೊಡನೆ ಕೂಡಿದರಾ ।
ನಿರ್ಮಲಮಪ್ಪ ಮುಕ್ತಿಯಸು ॥
ಮತ್ತೆ ನಕುಲಸಹದೇವ ಮುನೀಂದ್ರರು ।
ಚಿತ್ತಶುದ್ಧಿಯೊಳುಗವಳಬು ॥
ಉತ್ತಮಮಪ್ಪ ಸರ್ವಾರ್ಥ ಸಿದ್ಧಿಯೊಳು ।
ತೃಪ್ತಿಯಾದರು ಪಾಂಡವರು ॥

Colophon :

ಇದು ಜಿನಪದ ಸರಸಿಜ ಮದಮಧುಕರ ।
ಚದುರ ಮಂಗರಸ ರಚಿಸಿದ ॥
ಮದನಾರಿ ನೇಮಿ ಜಿನೇಶಸಂಗತಿಯೊಳ ।
ಗೊದವಿ ರಂಜಿಸಿತಾಶ್ವಾಸ ॥

ಅಂತು ಸಂಧಿ 35 ಕ್ಕಂ ಪದನು ೫೧೩೪ ಕ್ಕ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಶಿಥಿಲ. ಲಿಪಿ ಉತ್ತಮ.

ಇದು ಸಾಂಗತ್ಯರೂಪದಲ್ಲಿದೆ. ಸಂಧಿ, ೩೫ ; ಪದ. ೫೧೩೪. ಇದರಲ್ಲಿ ೨೨ ನೆಯ ತೀರ್ಥಂಕರನಾದ ನೇಮಿನಾಥ ಜಿನನ ಚರಿತ್ರೆಯು ವರ್ಣಿತವಾಗಿದೆ. ಗ್ರಂಥಾದಿಯಲ್ಲಿ ನೇಮಿನಾಥನ ಸ್ತುತಿಯೂ, ಸಿದ್ಧಮುಂತಾದವರ ನುತಿಯೂ ಇವೆ. ಬಳಿಕ ಕವಿ ಮಂಗರಸನು ಗೃಧ್ರಪಿಂಛಾಚಾರ್ಯನಿಂದ ವಿಮಲಕೀರ್ತಿಯ ವರೆಗೆ ಗುರುಗಳನ್ನೂ ಪಂಪಾದಿ ಪೂರ್ವ ಕವಿಗಳನ್ನೂ ಹೊಗಳಿ ತನ್ನ ವಂಶಾವಳಿಯನ್ನು ಹೇಳಿ ಗ್ರಂಥವನ್ನು ಆರಂಭಮಾಡಿದ್ದಾನೆ. ಉಳಿದ ವಿಷಯಗಳಿಗಾಗಿ ಮೇಲೆ ಉದಾಹೃತವಾಗಿರುವ ಭಾಗಗಳನ್ನೂ, ಹಿಂದೆ ವರ್ಣಿತವಾಗಿಯೂ ವಿಸ್ತೃತವಾಗಿಯೂ ಇರುವ ಜಯನೃಪ ಚರಿತ್ರೆ (ನಂ. ೩೩೨) ಯನ್ನೂ ನೋಡುವುದು.

No. 376. ಪಂಚಾಣುವ್ರತ ಕಥೆ.
PANCĀṆUVRATA KATHE.

Substance, palm-leaf. Size, $15\frac{1}{8} \times 1\frac{1}{4}$ inches, Pages, 8 Lines, 5 on a page. Character, Kanarese. Condition, very much injured Appearance, old.

Begins on a fol. 53*a*. The other works herein are :—(1) Jinākṣaramāle 1*a*. (2) Jinamunitanya 4*b*. (3) Jinālayavisaya 12*a* (Sanskrit). (4) Nītipadyagaḷu 14*a*. (5) Nītiśāstrasamuccaya (Satīka) 19*a*. (6) Ahimsācaritre 25*a*. (7) Jinadharma 56*b*. (8) **Kamadēvanatoravi** 59*b*.

Complete.

An account of Pancānu ceremony according to Jains. From an incomplete stanza at the end, it is made out that Kāmadēva is the name of the author.

Beginning:

ಶ್ರೀಸುರ ನರ ವಂದ್ಯ ಭಾಸುರ ತೇಜರ।
ಕೇಸರಿ ಪೀಠರೆಂದೆ ನಿಪ ॥ (?)
ವಾಸುಗಿ ನುತ ಚವ್ವೀಸ ಜಿನೇ ಶರ।
ಲೇಸಾಗಿ ಒಲಿದು ವಂದಿಸುವೆ ॥
ಮಂಡಲವೆಯ್ದೆ ಭಾಪುರೆಯೆಂದೆನುತಿರೆ।
ಚಂಡ ಮನ್ಮಥನ ಗೆಲಿದನ ॥
ಕೊಂಡ ಕುಂ . . . . ।
ಪುಂಡರೀಕಕೆ ನಮೊ ಯೆಂಬೆ ॥
ಅತಿಶಯಮೆನಿಸುವ ತಪದುನ್ನತಿಯಿಂ।
ಕ್ಷಿತಿಯನು ಮುಟ್ಟದೆ ನಡೆವ ॥
ನುತ ಕೊಂಡಕುಂದಿ ಮುನೀಂದ್ರನ ಪದಯುಗ।
ಶತಪತ್ರಕಾ ನೆರಗುವೆನು ॥
ಕೊಲ್ಲದ ಪ . . . . ।
. . . . . ಬಹು ಪರಿಗ್ರಹಕೆ ॥
ಸಲ್ಲದ ಪಂಚಾಣುವ್ರತಗಳು ಲೋಕಕ್ಕೆ।
ವಲ್ಲವೆ ವರ ರತ್ನಗಳು ॥
ಅನುಪಮ ರತ್ನವ ಕಂಡು ವಾಸಿಸಿ ನೋಡಿ।
ಅನುರಾಗದಿ ಮೆದ್ದು ನೋಡಿ ॥
ವನಚರರವೀಡಾಡುವಂತೆ ಕೆಲಂಬರು।
. . . . ॥

* * * *

End:

ಶ್ರೀಮತಿ ವಜ್ರಜಂಘರು ಚಾರಣರಿಗೆ।
ಪ್ರೇಮದಿಂದಾಹಾರವಿತ್ತು ॥
ಆ ಮಹಾ ದಾನದ ಫಲದಿಂದ [ಅ] ವನೂ।
ಈ ಮಹಿಗಧೀಶನಾದ ॥
ಕಾಮದೇವನು ನಾನೆ ಚಕ್ರವರ್ತಿಯು ನಾ .।
. . . . ॥
. ಮಿ ಶಾಂತೀಶನ ಪುಣ್ಯಾಸಮರ್ಥನು।
ಪ್ರೇಮದೊಳಂತು ಹೇಳದೆನು ॥
ಹದಿನೆಂಟು ದೋಷವ ಗೆಲಿದತಿ ಧೀರನ।
ಮದನನ ಮದವ ಗೆಲಿದನ ॥

ಸದಮಲಚರಿತ ನೆಂದೆನಿಸಿದ ಶ್ರೀ ಜಿನ ।
ಪದ ಕಮಲವೆ ಶರಣೆನಗೆ ॥
ನಿರ್ದೋಷಿ ಯೆನಿಸಿದ ಒ . . . . . ।
. . . . ವಾದ ದೋಷಗಳ ॥
ಹೊದ್ದಿಸಿ ನುಡಿದು ಪಾಪವ ಮಾಡಿಕೊಂಬರು ।
ಬಿದ್ದು ನರಕದೊಳಾವರು ॥

Colophon:

ಪಂಚಾಣುವ್ರತದ ಚರಿತೆ ಸಮಾಪ್ತ.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲ. ಲಿಪಿ ಉತ್ತಮ. ಗ್ರಂಥಪಾತ ಬಹಳ (ಹುಳು ತಿಂದಿರು ವುದರಿಂದ) ಈ ಪುಸ್ತಕದೊಡನೆ ಜಿನಾಕ್ಷರಮಾಲೆ, ಜಿನಮುನಿತನಯ, ಜಿನಾಲಯವಿಷಯ (ಸಂಸ್ಕೃತ), ನೀತಿಪದ್ಯಗಳು, ನೀತಿಶಾಸ್ತ್ರ ಸಮುಚ್ಚಯ (ಸಟೀಕ), ಅಹಿಂಸಾ ಚರಿತ್ರೆ, ಜಿನ ಧರ್ಮ, ಕಾಮದೇವನ ತೊರವಿ ಈ ಗ್ರಂಥಗಳೂ ಇವೆ.

ಇದು ಸಾಗತ್ಯರೂಪವಾಗಿದೆ. ೬೧ ಪದ್ಯಗಳಿವೆ. ಈ ಗ್ರಂಥದ ಕೊನೆಯಲ್ಲಿರುವ ಒಂದು ಅಸಮಗ್ರ ಪದ್ಯದಿಂದ ಕವಿಯು ಕಾಮದೇವನೆಂಬ ಹೆಸರಿನವನೆಂದು ತಿಳಿಯುವುದು. ಇತರ ವಿಷಯಗಳಾವುವೂ ಇದರಿಂದ ಗೊತ್ತಾಗುವುದಿಲ್ಲ.

No. 377. ಪಂಚಾಣುವ್ರತ ಕಥೆ.

PANCĀṆUVRATA KATHE.

Substance, paper. Size, $10\frac{7}{16} \times 9\frac{7}{16}$ inches. Pages, 5. Lines, 20 on a page. Character, Kanarese. Condition, good. Appearance, new.

Begins on page 56. The other works herein are :—(1) Jinākṣara māle 1. (2) Jinamunitanaya 3. (3) Jinālayaviṣaya 11 (Sanskrit). (4) Nītipadyagalu 12. (5) Nītiśāstrasamuccya (Satīka) 16. (6) Ahimsa caritre 21. (7) Jinadharma 61. (8) Kamadēvanatoravi 64.

Complete.

Same work as the above.

(ವಿ.ವಿ.)—

ಸಮಗ್ರ. ಗ್ರಂಥಪಾತ ಬಹಳ. ಇದರೊಡನೆ ಜಿನಾಕ್ಷರಮಾಲೆ, ಜಿನಮುನಿತನಯ ಮುಂತಾದ ಕೆಲವು ಗ್ರಂಥಗಳಿವೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 378. ಪದ್ಯ ಸಂಗ್ರಹ.

PADYASAṄGRAHA.

Substance, Śrītāla. Size, $16\frac{5}{8} \times 2\frac{3}{16}$ inches. Pages, 6. Lines, 10 on a page. Character, Kanarese. Condition, good. Appearance, old.

Begins on fol. 12 of the manuscript described under No. 321 ante.

A collection of stanzas from Paramāgamasāra and various other works.

Beginning:

ಸು ॥ ಸ್ರ ॥ ಜಿನರಾಕಾರಂತರಂ (?) ಕಣ್ಗೆಸೆದು ಜಿನವಚೋವಾಣಿ ಕರ್ಣಕ್ಕೆ
ಮತ್ತಂ।
ತನಗಾಹ್ಲಾದಂಕರಂ ಬಣ್ಣಿಸಲೆಸೆವಿನೆಗಂ ಚಿತ್ತಸಂಶುದ್ಧಿಯುಕ್ಕುಂ ॥
ನೆನೆವಂ ಸಂಸಾರವಾರಾಶಿಯುನಪಹರಿಕುಂ ಶುದ್ಧ ಚೈತನ್ಯರೂಪಂ ।
ನೆನೆ ನಿಚ್ಚ(ಂ) ತತ್ಸ್ವರೂಪಂ ನೆನೆದಡಿರದು ಮಿಥ್ಯಾತ್ವಮೆಂಬಂಧಕಾರಂ ॥

ಉ ॥ ಮಾ ॥ ನೋಡಲೊಡಂ ಮನಕ್ಕೆ ಪಿರಿದುಂ ಪರಿಣಾಮವಿಶುದ್ಧಿ ಪುಟ್ಟು
ಗುಂ ।
ನೋಡುಪವಂಗೆ ಶಾಂತರಸನಿಂ ನಿರವಿಂತುಟು ನಿರ್ವಿಕಲ್ಪನಂ ॥
ನೋಡೆಲೆ ಭವ್ಯನಿಂದ ನಿಜಮಂ ನಿಜರೂಪನನಾದಿದೇವನಂ ।
ನೋಡುವ ಕಣ್ಗಳನ್ಯರನದೇಂ ನಡೆ ನೋಡಲು ಕೇಕೆ ಬಲ್ಲವೇ (?) ॥

ನೋಡನವಶ್ಯ ಕುತ್ಸಿತ ಕುದೈವಕುಲಿಂಗಿಗಳಂ ಕುಶಾಸ್ತ್ರಮಂ ।
ನೋಡುವ ವಂಚಕಂ ಗುರುವೆನಿಪ್ಪನೆ ದೋಷಿಯೆ ದೇವನಪ್ಪೊಡಂ ॥
ಕೂಡದು ದೇವತಾವಿಷಯ ಬಾಹ್ಯಪರಿಗ್ರಹಮುಳ್ಳೊಡಾತಪಂ।
ಬೇಡದು ದೇವರಂತೆನಿಸಲಾರ್ಪರೆ ರಾಗಿಗಳುಂ ಜಿನೇಶ್ವರಾ ॥

ಎನ್ನ ವಿಭಾವದಿಂದೆ ತನುವಾದುದು ವಾದೊಡಮೇನೊ ಚೋದ್ಯಮೇ ।
ಎನ್ನ ವಿಕಾರ ಹೋಗಲಳಗುಂ ತನು, ಜೀವನನಾದಿಯೆಂಬಿದಂ (?) ॥
ಮನ್ನಿಸು ಬೇಱೆಮನ್ನಿಸದೆ ತೋಱಲುಪಟ್ಟ ಪದಾರ್ಥಮೆಲ್ಲಮಂ ।
ಭಿನ್ನಮಿದೆಂದು ತೋಱುವುದು ಸಮ್ಯಗು ದೃಷ್ಟಿ (?) ಗದೇನೊ ಚೋದ್ಯಮೇ ॥

ಕಾರಣಮಿಲ್ಲ ದೇಹದೊಳಗಿರ್ದಪೆ ನಿನ್ನ ಶರೀರಿ ಜೀವನೇ।
ಕಾರಣಮಿರ್ದಪಂ ತಿಳಿಯಲಾಗದೆ ನೀಂ ಬಿಡು ಪುಣ್ಯಪಾಪಮಂ ॥
ಸಾರದೆ ಬಾಹ್ಯವಸ್ತುಗಳೊಳೊಂದದೆ ನಿಂದೊಡೆ ನಿರ್ವಿಕಾಲನಾ ।
ಕಾರಮನೇನ ಬಣ್ಣಿಸುವೆ ನಿತ್ಯನಿರಂಜನ ಬೋಧರೂಪನಂ ॥

*   *   *   *

ಚಂ ॥ ತನು ತನಗೆಂಬ ತನ್ವಿತನಗೆಂಬ ಧನಂ ತನಗೆಂಬ ರಾಜ್ಯರಂ ।
ಜನೆ ತನಗೆಂಬ ದರ್ಪಮನುದಿರ್ಪಡೆ (?) ತನ್ನೊಳೆ ತಾನೆ ಭಾವಿಸಲ್ ॥
ತನು ತನಗಲ್ಲ ತನ್ವಿತನಗಲ್ಲ ಧನಂ ತನಗಲ್ಲ ರಾಜ್ಯರಂ ।
ಜನೆ ತವಗಲ್ಲದೆಂದುಳಿದಲ್ಲುವುದು ಯೋಗಿಗೆ ಯೋಗ್ಯಲಕ್ಷಣಂ ॥

ಕಂ ॥ ಆರೇನೆಂದೊಡಮೆಂಗೆ ತನ್ನ ಮನದೊಳ್ ಮಾನಾಪಮಾನಂಗಳಂ ।
ತಾರಂ ನಿಸ್ಪೃಹ ನಿಷ್ಕಳಂಕ ನೆನಿಪಂ ನಿಸ್ಸಂಗನಾದಂಗೆ ಸಂ ॥
ಸಾರಂ ಸಾರದು ಭಾವಿಕಾಲದೆಡೆಯೊಳ್ ಮುಂಗೆಯ್ದ ಪಾಪಕ್ರಿಯಾ ।
ಕಾರಂ ಕೆಟ್ಟುದು ಜಾತರೂಪ ಪದದೊಳ್ ನಿಂದಂಗದೇಂ ಚೋದ್ಯಮೇ ॥
ಉ ॥ ಮಾ ॥ ಪುಟ್ಟುವನಲ್ಲ ಜೀವನಶರೀರಿ ಶರೀರದೊಳಿಂತು ಪುಟ್ಟಿದಂ ।
ಕೆಟ್ಟುದನಾದಿಯೆಂಬ ನುಡಿ ಪುಟ್ಟದನಪ್ಪೊಡೆ ಸಾವನೆಯ್ದಿದಂ ॥
ನೆಟ್ಟನೆ ಕಂಡರಂತೆ ನುಡಿವೈ ಪರಮಾತ್ಮನ ಚಿತ್ಸ್ವರೂಪನಂ ।
ಮುಟ್ಟವಿರಣ್ಣ (?) ನಿನ್ನಳವೆ ತೋರಲು ಬರ್ಪುದೆ ಬ್ರಹ್ಮವಿದ್ಯೆಯುಂ ॥

End :

ಉ ॥ ಮಾ ॥ ಆತ್ಮಗೆ ದೇವನಾತ್ಮನೆ ಸದಾಶಿವನಾತ್ಮನೆ ವಿಷ್ಣುವೆಂದೊಡಂ ।
ತಾತ್ಮನೆ ಶುದ್ಧಬುದ್ಧನ[ರ್ಹಂ](ರುಹಂ) ಪರಮಾತ್ಮನೆ ಬ್ರಹ್ಮನೆಂದೊಡಂ ॥
ತಾತ್ಮನೆ ನಾಮಸಂಕುಳನೆ ಯೆಂಬಿವಕಂ ಗುರುವಾದನೆಂದೊಡಿ ।
ನ್ನಾತ್ಮನನೇನಬಣ್ಣಿಸುವೆ ನಿತ್ಯನಿರಂಜನ ಬೋಧರೂಪನಂ ॥
ಮ ॥ ವಿ ॥ ಮೊದಲುತ್ಪತ್ತಿ ವಿನಾಶವಿಲ್ಲದನನೆಂತಾರಾಧಿಪೆಂ ಶೂನ್ಯನಂ ।
ತದಱಿಂ ದೃಷ್ಟಿಗೆ ಗೋಚರಂ ಸಕಲ ನಿತ್ಯಾಧಾರನೆಂದೆಂಬೊಡಂ ॥
ತದು ನಿರ್ವಾದಕಮಲ್ಲ ತೋಱುವುದಿದೆಲ್ಲಂ ಪೂರ್ವಪಕ್ಷಕ್ಕೆ ನಿಂ ।
ತಿದನಾರಾಧಿಸುಗೆಂದು ತೋರಲಿಕೆ ಬಲ್ಲಂ ಬಲ್ಲನಿಂತೆಲ್ಲಮಂ ॥
ತನು ಚೈತ್ಯಾಲಯಮಾಗಿ ತನ್ನ ಮನಮೆಂಬುತ್ತುಂಗಕಂಠೀರವಾ ।
ಸನದೊಳ್ ದೇವರ ದೇವನಪ್ಪ ನಿಜರೂಪಸ್ವಾಮಿಯುಂ ಜ್ಞಾನಲೋ ॥
ಚನದಿಂ ನೋಡೆ ಜಿನೇಂದ್ರ ಚಂದ್ರಸದೃಶಾಕಾರಂ ನಿಜಾಕಾರಮಂ ।
ದಿನಿತಂ ಭಾವಿಸಲೆಂಟು ಕರ್ಮವಿಪಿನಂ ನಿರ್ಮೂಲಮೇನಾಗದೇ ॥

(ವಿ-ವಿ.)—

ಇದರಲ್ಲಿ ೫೦ ಪದ್ಯಗಳಿವೆ. ಉತ್ತಮ ಪ್ರತಿ. ಬಳ್ಳಿಯ ಲಿಪಿ. ತಪ್ಪುಗಳಿವೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಬರೆದಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೩೦೧ ನೆಯ ನಂಬರಿನ್ನು ನೋಡಿ ತಿಳಿಯುವುದು.

ಇದರಲ್ಲಿ ಕಂದಗಳೂ ವೃತ್ತಗಳೂ ಇವೆ. ಪರಮಾಗಮಸಾರ, ಮುಂತಾದ ಗ್ರಂಥಗಳಿಂದ ಪದ್ಯಗಳನ್ನು ತೆಗೆದು ಇಲ್ಲಿ ಕೂಡಿಸಿ ಬರೆದಿರುವ ಹಾಗೆ ಕಾಣುತ್ತದೆ. ಆದ ಕಾರಣ ಇದಕ್ಕೆ ‘ ಪದ್ಯ ಸಂಗ್ರಹ ’ ವೆಂದು ಹೆಸರು ಕೊಡಲಾಗಿದೆ.

No. **379.** ಪದ್ಮಾವತೀ ಚರಿತ್ರೆ.

PADMĀVATĪ CARITRE.

Substance, Śrītāla Size, $13\frac{7}{8} \times 1\frac{7}{8}$ inches. Pages, 164. Lines, 8 in a page. Character, Kanarese. Condition, slightly injured. Appearance, old. Mode of writing, not good and not free from mistakes.

Complete in 128 Sandhis.

A poem in the Sāngatya metre describing the story of Padmāvati, by Padmanābha. He was a jain poet and he was a treasurer in the Tirumala Sāmanta, the King of Tuḷuva country. It is stated in the Karnāṭaka Kavicaritre, that he wrote this work in 1680 A.D.

Beginning :

ಶ್ರೀ ಸುರ ನರ ನಾಗರಾಜ ಪೂಜಿತ ಪಾದ ।
ಭಾಸುರಜ್ಞಾನಪ್ರಕಾಶ ॥
ಸಾಸಿರನಾಮದೊಡೆಯು ಪಾರ್ಶ್ವೇಶ ।
ಲೇಸು ನಿತ್ಯಮ್ಮ ರಕ್ಷಿಪುದು ॥
ಹೊದ್ದಿದ ಕರ್ಮಾಷ್ಟಕವ ಕೆಡಿಸಿ ಬೇಗ ।
ಶುದ್ಧ ಗುಣವನೆಂಟ ಪಡೆದು ॥
ಸಿದ್ಧ ಕ್ಷೇತ್ರದೊಳು ನೆಲಸಿಯೊಪ್ಪುವ ಮಹಾ ।
ಸಿದ್ಧರಿಗಾನೆಱಗುವೆನು ॥

*　　　*　　　*　　　*

ವೀರ ಜಿನೇಶನ ಕಾರುಣ್ಯದಿಂದಲಿ ।
ವಾರಿಜಾನನೆ ಚೆನ್ನಾಂಬಿಕೆಯು ॥
ನಾರಿದ [ನಂಬಿದ] ಭವ್ಯಜನರ(ನು) ರಕ್ಷಿಸುತಲಿ ।
ಧಾರಣಿಯನು ಪಾಲಿಪಂದು ॥
ಧರೆಗತಿ ಸೇವ್ಯನೆನಿಪ ಕಾರಸ್ಕಾರ ।
ಪುರದ ಭವ್ಯರನು ಪಾಲಿಸುತ ॥
ವರ ವರ್ಧಮಾನ ಸ್ವಾಮಿಯ ಕೃಪೆಯಿಂದಲಿ ।
ಒರೆದೆ ನಾನೀ ಸತ್ಕಥೆಯಂ ॥
ತಿರುಮಲಸಾವಂತನೃಪನ ಕೋಶಾಧ್ಯಕ್ಷ ।
ವರ ಪದ್ಮನಾಭ ನಾನೊಲಿದು ॥
ಪರಮ ಪಾವನೆ ಪದ್ಮಾವತಿ ಚರಿತೆಯ ।
ಬರೆದೆನು ಭಕ್ತಿ ಪೂರ್ವಕದಿ ॥

*　　　*　　　*　　　*

ಪಾರಿಶ್ವಜಿನಪನ ಗೋರೋಪಸರ್ಗವ ।
ವಾರಿಜಾನನೆ ಕಾದಿದಳು ॥
ನಾರಿ ಪದ್ಮಾವತಿರೂಪಗುಣವನತಿ ।
ನಾರಿಪಲ್ಲಿಗೆ ಸಂಧಿಯಾಯ್ತು ॥
ಸೇರಿದ ಸಕಲಕರ್ಮವನು ಕಿಡಿಸಿ ಬಲು ।
ಗೋರೋಪಸರ್ಗವ ಜಯಿಸಿ ॥
ನಾರಿ ಕೈವಲ್ಯನಾರಿಯಳೊಡಗೂಡಿದ ।
ಪಾರಿಶ್ವಜಿನ! ಮತಿದೋರು ॥

ಚಂದದಿ ಚರಿತೆಯ ಬರೆದೋದಿ ಕೇಳ್ವರ್ಗೆ ।
ಚಂದದಿಂದಿತ್ತು ಭಾಗ್ಯವನು ॥
ಬಂದ ವಿಘ್ನವನು ಕೆಡಿಸಿ ಪದ್ಮಾವತಿ ।
ಯಿಂದೆನ್ನ ಬಿಡದೆ ರಕ್ಷಿಸಲಿ ॥

Colophon:

ಅಂತು ಸಂಧಿ ೧ ಕ್ಕಂ ಮಂಗಳಂ.

ಹದಿನೆಂಟು ದೋಷವ ಕೆಡಿಸಿ ಮೂಲೋಕದ ।
ತುದಿಯೊಳಗೊಪ್ಪುವ ಮಹಿಮ ॥
ಮದನನ ಮದವ ಮುರಿದ ಪಾರಿಶ್ವನು ।
ಸದಮಲಮತಿಯೀವುದೆನಗೆ ॥

* * * *

ಧರಣೀಶ ಜೀವನ ಬಿಡುವೆನೆಂದಿರುವಾಗ ।
ಧರಣೇಂದ್ರನ ಪಟ್ಟದರಸಿ ॥
ಮರೆಯಿಂದ ನುಡಿದಳು ಜಿನದತ್ತ ನಿನ್ನಯ ।
ತೆರನ ಕೇಳೆನುತಲಾದೇವಿ ॥
ಕಾಲದ ಮಹಿಮೆಯ ಹಲವ ಚಿಂತಿಸಬೇಡ ।
ಕಾಲ ಸಮೀಪವಾಯ್ತಿನ್ನು ॥
ಲೀಲೆಯಿಂ ತಪವನಾಚರಿಸಿ ಮುನ್ನಿನ ಬಲು ।
ಕಾಲನ ಜಯಿಸು ನೀನೆಂದು ॥
ಧರೆಯೊಳೀ ಲೊಕ್ಕಿಯ ಸಸಿಯುಳ್ಳನ್ನೆಗ ।
ವರಭವ್ಯಜನರ ಪಾಲಿಸುತ ॥
ಕರುಣದಿ ನಿನ್ನ ಸಂತತಿಯನು ರಕ್ಷಿಪೆ ।
ನಿರುತವು ನಂಬು ನೀನೆನಲು ॥
ಜಿನದತ್ತರಾಯ ತಾನೆಡಬಲವನು ನೋಡಿ ।
ಜಿನಯಕ್ಷಿ ಪೇಳ್ದುದೆಂದಱಿದು ॥
ತನುಜನ ಕರಿಸಿ ಸಾಮ್ರಾಜ್ಯ ಪಟ್ಟವ ಕಟ್ಟಿ ।
ಜಿನದೀಕ್ಷೆಯ ಕೈಕೊಂಡು ॥

End:

ಧರಣೇಂದ್ರನರಸಿ ಪದ್ಮಾವತಿದೇವಿಯ ।
ವ[ನಜ](ರ) ಪುತ್ರನ ತನುಜಾತ ॥
ಹರುಷದಿ ಹೊಂಬುಜಪುರವ ಪಾಲಿಸುವುದ ।
ನೊರೆಪಲ್ಲಿ ಸಂಧಿ ಹನ್ನೆರಡು ॥
ನಿತ್ಯಮಂಗಳನೆ ! ನಿರಾಪೇಕ್ಷ ! ಭವ್ಯರ ।
ಚಿತ್ತಕುಮುದಕೆ ಚಂದ್ರಮನೆ ! ॥
ಮುಕ್ತಿನಿವಾಸನೆ ! ಪಾರಿಶ್ವನಾಥನೆ !
ಯಾತ್ಯಂತು ಸುಖವೀವುದೆಮಗೆ ॥

ಭಕ್ತಿಯಿಂ ಬರೆದೋದಿ ಕೇಳದಗಿಗೆ ।
ಯತ್ಯಂತ ಸೌಭಾಗ್ಯವಿತ್ತು ॥
ನಿತ್ಯಮೂರುತಿ ! ಪದ್ಮಾವತಿ ರಕ್ಷಿಸು ।
ಚಿತ್ತಶುದ್ಧಿಯೊಳನುದಿನವು ॥
ಪರಹಿತಚರಿತ್ರೆ ಪಾರಿಶ್ವನಾಥನ ಭಕ್ತೆ ।
ವರವೀವ ಗುಣಾದಿ ವಿಖ್ಯಾತೆ ॥
ಕರುಣೆ[ಮೂರುತಿ] ಪದ್ಮಾವತಿ ಚರಿತೆಯ ಕೇಳ್ವರ ।
ದುರಿತಗಳರದೋಡುವುವು ॥
ಮಳೆಬೆಳೆ ಹೆಚ್ಚಲಿ ಗೆಲವಿಂದ ಪ್ರಜೆಗೂಡಿ ।
ಯಿಳೆಯರಾಣ್ಮನು ಸುಖವಿರಲಿ ॥
ಚೆಲುವೆ ಪದ್ಮಾವತಿ ಕೃತಿ ಭೂತಲದೊಳು ।
ಪಲಕಾಲ ವರ್ತಿಸುತಿರಲಿ ॥
ಅಂಗಜವಿಜಯಪಾರಿಶ್ವನಾಥನ ಭಕ್ತೆ ।
ಹಿಂಗದಿರುವ ಮಹಾಯಕ್ಷಿ ॥
ಹೆಂಗಳ ರನ್ನೆ ಪದ್ಮಾವತಿ ಚರಿತೆಗೆ ।
ಮಂಗಳ ಶುಭ ಜಯ ಜಯತು ॥
ಶ್ರೀ ಸುರನರನಾಗರಾಜಪೂಜಿತಪಾದ ।
ಭಾಸುರಜ್ಞಾನಪ್ರಕಾಶ ॥
ಸಾಸಿರನಾಮದೊಡೆಯ ಪಾರಿಶ್ವನ ।
ಲೇಸು ನಿತ್ಯಮ್ಮ (?) ರಕ್ಷಿಪುದು ॥

Colophon :

ಪದ್ಮಾವತೀ ಚರಿತ್ರೆ ಸಮಾಪ್ತಂ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ.

ಇದು ಸಾಂಗತ್ಯರೂಪವಾದುದು. ಸಂಧಿ ೧೨. ಪದ್ಯ ೧೬೭೧. ಈ ಗ್ರಂಥಕ್ಕೆ ಜಿನ ದತ್ತರಾಯ ಚರಿತ್ರೆಯೆಂಬ ಹೆಸರೂ ಇರುವುದಾಗಿ ತೋರುವುದು. ಜಂಬೂದ್ವೀಪದ ಮಧ್ಯಮ ಲೋಕದ ಆರ್ಯಾಖಂಡದಲ್ಲಿರುವ ಮಧುರಾಪುರಕ್ಕೆ ಅರಸು ಅರಸಿತಿಯರಾದ ಸಹಕಾರರಾಯ ಶ್ರೀಯಾಲದೇವಿಯರಿಗೆ ಧರಣೇಂದ್ರನ (ನಾಗರಾಜನ) ಪತ್ನಿಯಾದ ಪದ್ಮಾವತೀದೇವಿಯ ವರದಿಂದ ಜನಿಯಿಸಿದ ಜಿನದತ್ತರಾಯನೆಂಬ ಭಕ್ತನ ಚರಿತ್ರವು ಇದರಲ್ಲಿ ಉಕ್ತವಾಗಿದೆ. ಗ್ರಂಥಾದಿ ಯಲ್ಲಿ ಪಾರ್ಶ್ವಜಿನ, ಸಿದ್ಧಾದಿಗಳು, ಸರಸ್ವತಿ, ಬ್ರಹ್ಮ, ಪದ್ಮಾವತಿ ಇವರ ಸ್ತುತಿಯಿದೆ. ಕವಿ ಪದ್ಮನಾಭನೆಂಬುವನು. ಈತನು ತನ್ನ ಮತ್ತು ತನ್ನ ದೊರೆಯ ವಿಷಯವಾಗಿ ಹೀಗೆ ಬರೆದಿರು ತ್ತಾನೆ. ತುಳುವ ದೇಶದ ನಡುವೆ ಮೂಲಿಕೆಯೆಂಬ ಪಟ್ಟಣವಿದೆ. ಅದಕ್ಕೆ ಅಯಕಳ, ಬಳ ಲಂಕೆಯೆಂಬ ಹೆಸರುಗಳೂ ಉಂಟು ಅಲ್ಲಿಗೆ ದೊರೆ ದುರ್ಗಣಸಾಮಂತರಾಯನು. ಅವನ ಗುರು ವಿಜಯವರ್ಣಿ. ಕಾರಸ್ಕಾರಪುರದ ಭವ್ಯರು ಪ್ರಾರ್ಥಿಸಲು ಗುರುವಿನನುಜ್ಞೆಯಿಂದ ದೊರೆ ಅರ್ಹಂತನಾಲಯವನ್ನು ಕಟ್ಟಿಸಿ ವರ್ಧಮಾನಸ್ವಾಮಿಯ ಬಿಂಬವನ್ನು ಅಲ್ಲಿ ಪ್ರತಿಷ್ಠೆ

ಮಾಡಿಸಿದನು. ದೊರೆಯ ತಂಗಿ ದೇವಮ್ಮಾಜಿ. ಆಕೆಯ ಗಂಡ ಪಶ್ಚಿಮವೇಣುಪುರಪತಿಯಾದ ಮಾಲಿಂಗನೃಪತಿ. ಆ ದಂಪತಿಗಳಿಗೆ ಕಿನ್ನಿಗಸಾಮಂತ, ತಿರುಮಲೇಂದ್ರಮನ್ನೆಯ, ಚೆನ್ನಿಗ ಶಂಕರರನೃಪತಿ, ಚನ್ನಮಾಂಬಿಕೆ, ತಿರುಮಲರಸ, ಅಬ್ಬಕದೇವಿ, ಸುಗುಣಸಂಜೀವ ಎಂದು ಕ್ರಮವಾಗಿ ೮ ಮಕ್ಕಳು. ತುಳುವದೇಶದಲ್ಲಿ ಅಳಿಯ ಸಂತಾನವಾದುದರಿಂದ ಕಿನ್ನಿಗನು ದೊರೆಯಾದನು. ಅವನ ಬಳಿಕ ತಿರುಮಲರಾಯನು ಅರಸಾದನು. ಅವನಿಗೆ ಕಾದಂಬ ಕುಲದೀಪ, ಎಂಬ ಬಿರುದೂ ಹನುಮನಟೆಕ್ಕೆಯೂ ಇದ್ದುವು. ಅವನ ಬಳಿಕ ಚೆನ್ನಮಾಂಬಿಕೆ ಆಳಿದಳು. ಅವಳ ಗಂಡ ಶಂಕರರ ಮಗ ಚಿಕ್ಕರಾಯ. ಚೆನ್ನಮಾಂಬಿಕೆಯು ಧಾರಿಣಿಯನು ಪಾಲಿಪಂದು ಕಾರಸ್ಕರಪುರದ ವರ್ಧಮಾನಸ್ವಾಮಿಯ ಕೃಪೆಯಿಂದ ತಿರುಮಲಸಾಮಂತನೃಪನ ಕೋಶಾಧ್ಯಕ್ಷನಾದ ಪದ್ಮನಾಭನು ಈ ಪಾವನ ಚರಿತ್ರೆಯನ್ನು ಬರೆದನು. ಈ ಗ್ರಂಥವು ಸು. ೧೬೮೦ ರಲ್ಲಿ ಹುಟ್ಟಿರಬೇಕೆಂದು ಕವಿಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಕವಿ ಮತ್ತು ಈ ಗ್ರಂಥದ ಕಾಲ ಮುಂತಾದ ವಿಷಯಗಳಿಗಾಗಿ ಈ ಗ್ರಂಥದಿಂದ ಇನ್ನೇನೂ ಹೆಚ್ಚು ತಿಳಿಯ ಬರುವುದಿಲ್ಲ.

No. 380. ಪದ್ಮಾವತೀ ಚರಿತ್ರ.

PADMĀVATI CARITRE.

Substance, Śrītāla. Size, $13\frac{7}{8} \times 2\frac{13}{16}$ inches. Pages, 194. Lines, 9 on a page. Character, Kanarese. Condition, good. Appearance, old.

Complete.

Same work as the above.

Date of transcription :—Sunday the fifth day of the bright fortnight of the lunar month Phālguna in the year Sarvadāri and finished on Friday the third day of the dark fortnight of the lunar month Vaiśākha in the year Citrabhānu, Śaka 1683.

Name of the scribe :—Gummanna, son of Gummannaupadhyāya of Mūḍabidare for Surālacand a yarasar in the jain temple of Candranātha.

(ವಿ-ವಿ.)—

ಸಮಗ್ರ. ಉತ್ತಮ ಪ್ರತಿ. ಉತ್ತಮ ಲಿಪಿ. ಆದಿಯಲ್ಲಿ ‘ ಸರ್ವದಾರಿ ಸಂವತ್ಸರದ ಫಾಲ್ಗ(ಣ) ಶು ೫ ಯು ರವಿವಾರ ಪದ್ಮಾವತೀ ಚರಿತ್ರ ಪ್ರಾರಂಭ ’ ಎಂದೂ, ಅಂತ್ಯದಲ್ಲಿ ‘ ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೮೩ ನೆಯ ಚಿತ್ರಭಾನು ಸಂವತ್ಸರದ ವೈಶಾಖ ಬ ೩ ಯು ಶುಕ್ರವಾರ ಮೂಡಬಿದುರೆ ಗುಮ್ಮಣ್ಣ ವುಪಾಧ್ಯಾಯರ ಮಗ ಗುಮ್ಮಣ್ಣನು ಬರೆದ ಪದ್ಮಾವತೀ ಚರಿತ್ರ ಸಂಪೂರ್ಣವಾಯಿತು. ಸುರಾಲಚಂದಯರಸರು ಬರಸುವಾಗ ಹೊಸ ಬಸ್ತಿ ಚಂದ್ರನಾಥಸನ್ನಿಧಿಯಲ್ಲು ಬರೆದನು ’ ಎಂದಿದೆ.

ಕಡೆಯಲ್ಲಿ ಬರೆದಿರುವ ಪದ್ಮಾವತಿಯಮ್ಮನವರ ಸ್ತುತಿರೂಪವಾದ ಹಾಡನ್ನು ಈ ಕೆಳಗೆ ಬರೆದಿದೆ.

॥ ರಾಗ ॥ ಬಿಲಹರಿ ॥ ಆದಿತಾಳ ॥

ಒಲಿದು ಪಾಲಿಸೆನ್ನ ತಾಯೆ ಪಾವನ ಕಾಯೆ ।
ಫಲ ಪಾಶಾಂಕುಶಭಯಪಾಣಿ ಪದ್ಮಿನಿ ನಿತ್ಯಕಲ್ಯಾಣಿ ॥ ಪ ॥
ಭೃಂಗಕುಂತಳೆ ಭುಜಗೇಂದ್ರನ ರಾಣಿ ।
ಅಂಗನೆ ಅತಿ ಚಲುವೆಯುರ ಕಟ್ಟಾಣಿ ॥
ಹಿಂಗದೆ ಭಜಿಪ ಭಕ್ತರಿಗೆ ನಿರ್ವಾಣಿ ।
ತುಂಗಪಯೋಧರೆ ಪನ್ನಗವೇಣಿ ॥ ೧ ॥
ಪಂಕಜಗಂಧಿ ಕುಂಕುಮಸಮಗಾತ್ರೆ ।
ಕಂಕಣಕರಕಮನೀಯ ಸುನೇತ್ರೆ ॥
ಬಿಂಕದಿ ರಾಜಿಪ ಬಿರುದಿನ ಸ್ತೋತ್ರೆ ।
ಸಂಕುಗೊರಳೆ ಶಶಿವದನೆ ಚರಿತ್ರೆ ॥ ೨ ॥
ದೊರೆ ಚಂದ್ರಶೇಖರ ಚೌಟನೃಪತಿಯ ।
ಅರಮನೆಯೊಳಗಿಹ ಪುರುಷ ಮೂರುತಿಯ ॥
ಹರುಷದಿ ಸೇರಿದ ಜನರಿಗೆ ಸ್ತುತಿಯ ।
ಕರುಣಿಪ ಪದ್ಮಾವತಿ ಕೊಡುಮತಿಯ ॥ ೩ ॥

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಹೆಚ್ಚು ವಿಷಯಗಳಗಾಗಿ ಹಿಂದಣ ನಂಬರನ್ನು ನೋಡುವುದು.

No. **381**. ಪದ್ಮಾವತೀ ಚರಿತ್ರ-
PADMÁVATĪ CARITRE.

Substance, Śrītāla. Size, $13\frac{1}{2} \times 1\frac{13}{16}$ inches. Pages, 205. Lines, 8 on a page. Character, Kanarese. Condition, slightly injured. Appearance, old.

Complete.

Same work as the above.

Name of the scribe :—Ādappa.

(ವಿ.ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕೊನೆಯಲ್ಲಿ 'ಆದಪ್ಪನು ಬರೆದ ಗ್ರಂಥ' ಎಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಹೆಚ್ಚು ವಿಷಯಗಳಗಾಗಿ ೩೭೯ ನೆಯ ನಂಬರನ್ನು ನೋಡುವುದು.

No. **382**. ಪದ್ಮಾವತೀ ಚರಿತ್ರ-
PADMĀVATĪ CARITRE.

Substance, Śrītāla. Size, $13\frac{3}{16} \times 2\frac{3}{13}$ inches. Pages, 146. Lines, 10 on a page. Character, Kanarese. Condition, slightly injured. Appearance, old.

Complete.

Same work as the above.

Name of the scribe :--Ādicandradēva of Nirvāṇa.

(ವಿ.ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕಡೆಯಲ್ಲಿ 'ನಿರ್ವಾಣದ ಆದಿಚಂದ್ರದೇವರ ಸ್ವಹಸ್ತದ ಬರೆಹ ' ಎಂದಿದೆ. ಮತ್ತು ಪದ್ಮಾವತೀ ದೇವಿಯನ್ನು ಸ್ತುತಿಸುವ ಹಾಡೊಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಹೆಚ್ಚು ವಿಷಯಗಳಿಗಾಗಿ ೩೮೧ ನೆಯ ನಂಬರನ್ನು ನೋಡುವುದು.

No. 383. ಪದ್ಮಾವತೀ ಚರಿತ್ರ.

PADMĀVATĪ CARITRE.

Substance, Śrītāla. Size, 8⅞ × 2¼ inches. Pages, 206. Lines, 10 on a page. Character, Kanarese. Condition, good. Appearance, old.

Complete.

Same work as the above.

Date of transcription :—Tuesday the first day of the dark fortnight of the lunar month Māgha (?) in the year Krōdhana, Saka year 1728.

Name of the scribe :—Puṭṭaṇṇa Śāstry, son of Appaṇṇa Śāstry and gran'son of Timmappa Śāstri of Sidhaśṛlōgrahāra.

(ವಿ.ವಿ.)—

ಸಮಗ್ರ. ಉತ್ತಮ ಪ್ರತಿ. ಉತ್ತಮ ಲಿಪಿ. ಕೊನೆಯಲ್ಲಿ ' ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕವರ್ಷ ೧೭೨೮ ವರ್ತಮಾನಕ್ಕೆ ಸಲ್ಲುವ ಕ್ರೋಧನ ಸಂವತ್ಸರದ ಮಾಘ (?) ಬಹುಳ ಪಾಡ್ಯವು ಕುಜವಾರ ಸೂರ್ಯೋದಯವಾದ ಗಳಿಗೆ ೫೦ ಕ್ಕೆ. ವಿರುಪಾಪುರ ಗ್ರಾಮದ ಶ್ರೀ ಮೂರ್ತ್ಯಾತ್ಮಕ ಅಶುವಥ (ಅಶ್ವತ್ಥ) ನಾರಾಯಣ ಸನ್ನಿಧಿಯಲ್ಲು ಪದ್ಮಾವತೀ ಚರಿತ್ರ ಸಂಪೂರ್ಣಂ. ಈ ಪ್ರಸಂಗ ಬರದಾತ ಸಿಧಶೃಲೊಗ್ರಹಾರದಲ್ಲು ಸುಸ್ಥಿರವಾಸಗೃಹಿಹ (ಗೆಯ್ಹಿಹ) ತಿಮ್ಮಪ್ಪ ಶಾಸ್ತ್ರಿಗಳ ಮೊಮ್ಮಗ, ಅಪ್ಪಣ್ಣ ಶಾಸ್ತ್ರಿಗಳ ಮಗ ಪುಟ್ಟಣ್ಣ ಶಾಸ್ತ್ರಿಯು ಶ್ರೀಮತಜ್ಞವಾತ್ಮಕ ಸೀತಾಪತಿ ರಾಮಚಂದ್ರಾನುಗ್ರಹದಿಂದ ಕರದೊಳ್ ಕಂಠಮಂ ಪಿಡಿದು ಈ ಸಂಚಿಕೆಯೊಳ್ ಬರೆದ ಬರಹವು ಸಂಪೂರ್ಣಂ ' ಎಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಹೆಚ್ಚು ವಿಷಯಗಳಿಗಾಗಿ ೩೮೨ ನೆಯ ನಂಬರನ್ನು ನೋಡುವುದು.

No. 384. ಪದ್ಮಾವತೀ ಚರಿತ್ರ.

PADMĀVATĪ CARITRE.

Substance, Srītāla. Size, 12½ × 2 1/16 inches. Pages, 134. Lines, 10 on a page. Character, Kanarese. Condition, slightly injured. Appearance, old.

Wants five foll. in the beginning, otherwise complete.

Same work as the above.

Name of the scribe :—Ādicandradēva of Nirvāṇa.

(ಪಿ.ವಿ).—

ಅಸಮಗ್ರ. ಆದಿಯಲ್ಲಿ ಐದು ಓಲೆಗಳಿಲ್ಲ. ಮತ್ತು ಏಳನೆಯ ಓಲೆಯಿಲ್ಲ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕಡೆಯಲ್ಲಿ 'ನಿರ್ವಾಣದ ಆದಿಚಂದ್ರ ದೇವರ ಸ್ವಹಸ್ತ ಬರಹ' ಎಂದಿದೆ. ಮತ್ತು ಪದ್ಮಾವತೀದೇವಿಯನ್ನು ಸ್ತುತಿಸುವ ಹಾಡೊಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಹೆಚ್ಚು ವಿಷಯಗಳಿಗಾಗಿ ೩೭೯ ನೆಯ ನಂಬರನ್ನು ನೋಡುವುದು.

No. 385. ಪರಮಾಗಮಸಾರ.

PARAMĀGAMASĀRA.

Substance, Sritala Size, $16\frac{3}{8} \times 2\frac{1}{4}$ inches. Pages, 8. Lines, 11 on a page, Character, Kanarese. Condition, slightly injured. Appearance, old.

Begins on fol. 19b, of the manuscript described under No. 321 *ante*.

Complete.

A work in Kanda metre on the doctrines of Jain religion; By Candra kirti.

It is stated in 'Kavi caritre' that a work in prose having the same nāme was written in about 1400 A.D.

Beginning:

ಕಂ ॥ ಶ್ರೀಮನ್ನಿರ್ವೃತ್ತಿವನಿತಾ ।
ಕೋಮಳಮುಖತಿಳಕನಮಳಗುಣಗಣನಿಳಯಂ ॥
ಭಾಮಿಕರ ಸಮದೇಹಂ (?) ।
ಪ್ರೇಮದಿ ನೆಮಗೀಗೆ ಮುಕ್ತಿಯಂ ಪುರುದೇವಂ ॥
ಎಮಗೀಗೆ ವಿಪುಳ ಸುಖಮಂ ।
ಸುಮನಸವಂದ್ಯರ್ಕ್ಕನೋಜ ಮದಕರಿ ಸಿಂಹರ್ ॥
ಕ್ರಮಕರಣರಹಿತ ಬೋಧರ್ ।
ಸಮಸ್ತಸರ್ವಜ್ಞರನುಪಮಾನಂದಸುಖರ್ ॥
ಪರಮಾತ್ಮನನನುಪಮನಂ ।
ದುರಿತಾರಿಯನಿತ್ಯಪೂರ್ವನಂ ಶಾಶ್ವತನಂ ॥
ಧರಿಯಿಸಿ ಮನದೊಳ್ ಪೇಳ್ವೆಂ ।
ಪರಮಾಗಮಸಾರಮಂ ಮನೋಮುದದಿಂದಂ ॥

ಹಿತಮಲ್ಲದುದರ್ಕಂಜುವೆ ।
ಹಿತಮಂ ಬಯಸುತ್ತಮಿರ್ದೆಯದಱಿಂ ನಿನಗಾಂ ॥
ಹಿತಮಲ್ಲದುದಂ ಕೆಡಿಸುವ ।
ಹಿತಮಂ ಮಾಟ್ಪುದನೆ ಪೇೞ್ವೆನೊಲವ್ದೊಡೆ ಭವ್ಯಂ ॥

ಕೇವಳಬೋಧನ ಮತದಿಂ ।
ಜೀವಾ ! ಕೇಳ್ತ್ರಿಪ್ರಕಾರದಿಂ ವರ್ತಿಸುಗುಂ ॥
ಭಾವಕರಪ್ಪ ವಿಶಿಷ್ಟರ್ ।
ಭಾವಿಸೆ ಬಹಿರಂತರಾತ್ಮಪರಮಾತ್ಮತೆಯಂ ॥

ತನು ಮೊದಲಾದುವವೆಲ್ಲಂ ।
ಮನದೊಳ್ ತಾನಾತ್ಮನೆಂಬ ವಿಭ್ರಮಯುಕ್ತಂ ॥
ಜಿನಮಾರ್ಗ ಬಾಹ್ಯನಾತಂ ।
ಗನುಪಮಸುಖಮಾಗದವನೆ ಕೇಳ್ಬಹಿರಾತ್ಮಂ ॥

ದುರಿತ್ರಸಮೂಹದಿನಗಲ್ವೆಂ ।
ದುರಿತಂಗಳನಪ್ಪ ಸಕಲಭಾವದಿನಗಲ್ವೆಂ ॥
ಪರಮಾತ್ಮನೆ ನಾನೆಂಬೀ ।
ಪರಭಾವನೆಯುಳ್ಳನಂತರಾತ್ಮನಮೋಘಂ ॥

* * * *

ಚಂ॥ ಅಱಿದು ಸಮಸ್ತದೋಷಮನಘೋದ್ಭವಮಂ ಸದಸದ್ವಿಭೇದದಿಂ ।
ದಱಿದು ನಿಜಾತ್ಮತತ್ವಮುಮನಂತತಿ ಶುದ್ಧಮೆನಿಪ್ಪ ಭಾವದೊ ॥
ಳ್ನಱಿದು ನಿಜಾತ್ಮತತ್ವಮನಹರ್ನಿಶಮರ್ಥಿಯಿ (?) ಬಾವಿಸಿರ್ಪವಂ ।
ಪಱಿಗುಮಘಂಗಳಂ ಬಗೆದು ನೋಳ್ಪೊಡೆವಂಗಡಿವಂತರಾತ್ಮಕಂ ॥

ಕಂ ॥ ಕೂಡದಘಕುಲದೊಳೆಂದುಂ ।
ಕೂಡಂ ದೇಹದೊಳಮೊಂದಿಯೊಂದುವನಲ್ಲಂ !
ಕೂಡಿದ ಗುಣಗಣದಿಂದಂ ।
ನೋಡಿ ಮನಂ ಪಿಂಗದವನೆ ತಾಂ ಬಹಿರಾತ್ಮಂ ॥

ಕಡೆಯಿಲ್ಲದ ಕಾಣ್ಕೆಯೊಳಂ ।
ಕಡೆಯಿಲ್ಲದ ಸುಖದ ಪೆರ್ಮೆಯೊಳಮಿಂ ಪರಮಂ ॥
ಕಡೆಯಿಲ್ಲದ ಬೋಧದೊಳಂ।
ಕಡೆಯಿಲ್ಲದ ವೀರ್ಯಗುಣದೊಳಂ ನೆಱೆದಿರ್ದಂ ॥

ರಹಿತರಸವರ್ಣಗಂಧಂ ।
ರಹಿತಸ್ಪರ್ಶನನಮೂರ್ತನಕ್ಷಯನನಘಂ ॥
ರಹಿತರಸಬಾಧಂ ಜಿನೇಂದ್ರಂ ।
ರಹಿತಭಯಂ ರಹಿತಕೋಪನಭವಂ ಜೀವಂ ॥

* * * *

೮೦ ॥ ಮ॥ ॥ ಕಾರಣಮಿಲ್ಲದೇಹದೊಳಗಿರ್ದಪೆ ನಿನ್ನ ಶರೀರಿ ಜೀವನೇ ।
ಕಾರಣಮಿರ್ದಪ್ಪೆ ತಿಳಿಯಲಾಗದೆ ನೀಂ ಬಿಡು ಪುಣ್ಯಪಾಪಮಂ ॥
ಸಾರದೆ ಬಾಹ್ಯವಸ್ತುಗಳೊಳೊಂದದೆ ನಿಂದೊಡೆ ನಿರ್ವಿಕಲ್ಪನಾ ।
ಕಾರಮನೇನ ಬಣ್ಣಿಸುವೆ ನಿತ್ಯನಿರಂಜನ ಬೋಧರೂಪನಂ ॥
ಸಾರೆಲೆ ಜೀವ ಚಿದ್ವಿಷಯಮಂ ಪರಭಾವಮ (?) ಪತ್ತುವಿಟ್ಟು ನೀಂ ।
ಸಾರಲು ಕರ್ಬುನಂ ಪುರುಷವೇದಿಯು (?) ಮುಟ್ಟಲು ಹೇಮಮಾದುದೇ ॥
ಕಾರಣಮಂತುಟೆಂದು ಬಗೆ ಭಾವಿಸು ನಿರ್ಮಲಮಪ್ಪ ನಿಶ್ಚಲಾ ।
ಕಾರಮನೇನ ಬಣ್ಣಿಸುವೆ ನಿತ್ಯನಿರಂಜನಬೋಧರೂಪನಂ ॥ [ಮಾ ।
ಕನ್ನಡಿಯೆಂಬುದೊಂದು ಪ್ರತಿಬಿಂಬಮ [ನೋಡಲು] (ನೀಕ್ಷಿಸೆ) ತೋಱುತಿರ್ಕು
ಕನ್ನಡಿ ಕೊಂಕ (?) ತಿದ್ದಲಿಕೆ ಬಲ್ಲುದೆ ನೋಡ ನಿಮಿತ್ತಮೆಂಬುದಂ ॥
ಬಣ್ಣಕನಾಗಿ ಮಾತ ನುಡಿವ್ಪೆ ಪರಮಾತ್ಮನೆ ನೀನೆ ಕಾರಣಂ ।
ನಿನ್ನ ವಿಕಲ್ಪದಿಂದೊಗೆದ ಕನ್ನಡಿ ಬೇಱದು ತೋಱಬಲ್ಲುದೇ ॥
ಚಂ॥ ತನು ತನಗೆಂಬ ತನ್ವಿತನಗೆಂಬ ಧನಂ ತನಗೆಂಬ ರಾಜ್ಯರಂ ।
ಜನೆ ತನಗೆಂಬ ದರ್ಪಮನುದಿರ್ಬಿಯೆ (?) ತನ್ನೊಳೆ ತಾನೆ ಭಾವಿಸಲ್ ॥
ತನು ತನಗಲ್ಲ ತನ್ವಿತನಗಲ್ಲ ಧನಂ ತನಗಲ್ಲ ರಾಜ್ಯರಂ ।
ಜನೆ ತನಗಲ್ಲದೆಂದುಳಿದು ನಿಂದುದೆ ಯೋಗಿಗೆ ಯೋಗಲಕ್ಷಣಂ ॥
ಕಂ ॥ ಆರೇನೆಂದೊಡಮೆಂಗೆ ತನ್ನ ಮನದೊಳ್ ಮಾನಾಪಮಾನಂಗಳಂ ।
ತಾರಂ ನಿಸ್ಪೃಹ ನಿಷ್ಕಳಂಕನೆನಿಸಲ್ ನಿಸ್ಸಂಗನಾದಂಗೆ ಸಂ ॥
ಸಾರಂ ಸಾರದು ಭಾವಿ ಕಾಲದೆಡೆಯೊಳ್ ಮುಂ ಗೆಯ್ದ ಪಾಪಕ್ರಿಯಾ ।
ಕಾರಂಗೆಟ್ಟುದು ಜಾತರೂಪಪದದೊಳ್ ನಿಂದಂಗದೇಂ ಜೋದ್ಯಮೇ ॥

End :

ಶ್ರೀಯುಂ ರೂಪುಂ ಸೌಖ್ಯಮು ।
ಮಾಯುಂ ಯೌವನಮು ಮಾಣ್ಮೆಯುಂ ಕಲಿತನಮುಂ ॥
ವಾಯುಂ ಮಂಜಿನ ಪುಂಜಂ ।
ಶ್ರೀಯುತ ಶುದ್ಧಾತ್ಮರೂಪಮೆಂದಱಿ ನಿತ್ಯಂ ॥
ದಾನದಿನಕ್ಕು ಭೋಗಮು ।
ಮೌನ ತಪಶ್ಚರಣದಿಂದಮಕ್ಕುಂ ಸ್ವರ್ಗಂ ॥
ಜ್ಞಾನಯುತನಾಗಿ ಧ್ಯಾನಯು ।
ತನಾಗಿ (?) ಧ್ಯಾನಿಸಲಕ್ಕುಂ ವಿನೂತ ಪರಮಸ್ಥಾನಂ
ಮುನಿಪತಿದರ್ಶನ ಶುದ್ಧಂ ।
ವಿನುತಯಶಂ ಶೀಲರತ್ನನಚಳಿತ ಧೈರ್ಯಂ ॥
ಮನಸಿಜ ಮದಕರಿ ಸಿಂಹಂ ।
ವಿನಯ ಸದಾನಂ ಸರಸ್ವತೀ ಮುಖತಿಲಕಂ ॥
ಭವ್ಯಜನಕುಮುದ ಚಂದ್ರಂ ।
ದ್ರವ್ಯಜ್ಞಾನೋಪಯೋಗ ಯುಕ್ತನತರ್ಕ್ಯಂ ॥
ದಿವ್ಯತಪಶ್ಚರಣಯುತಂ ।
ಸೇವ್ಯಗುಣಂ ಚಾರುಚರಿತ್ರನಭಿಜನಮಿತ್ರಂ ॥

ಶಮ ನಿಯಮಧ್ಯಾನಯುತಂ ।
ಸಮುಚಿತ್ತಂ ತತ್ವವೇದಿ ವೈರಾಗ್ಯಯುತಂ ।
ಸಮಿತಕಷಾಯಂ ನಿಸ್ಪೃಹ ।
ನಮಲಂ ಭವ್ಯಂ ಸರಸ್ವತೀ ಮುಖತಿಲಕಂ ॥
ನಿರಘರ್ ಶಾಶ್ವತರಭವರ್ ।
ಪರಮಾತ್ಮಜ್ಞಾನರೂಪರನುಪಮಸೌಖ್ಯರ್ ॥
ಪರಮಪದಸ್ಥರ್ ಸಿದ್ಧರ್ ।
ಪರಮಪದಸ್ಥದೊಳು ನಿಲಿಸುಗೆಮ್ಮಂ ದಯೆಯಿಂ ॥
ಪರಮಜಿನೇಶ್ವರಮತದೊಳ್ ।
ಪರಿಕಿಸಿ ಸಾರಾಯಮಪ್ಪುವಂ ಕೊಂಡು ಕರಂ ॥
ವಿರಚಿಸಿತಪ್ಪುದಱಿಂದಂ ।
ಪರಮಾಗಮಸಾರಮಾದುದೀ ಕೃತಿಯಿಂದಂ ॥
ವರ ಚಂದ್ರಕೀರ್ತಿ ಮುನಿಪತಿ ।

ವಿರಚಿಸಿದೀಗ್ರಂಥದಲ್ಲಿ ತಪ್ಪುಳ್ಳೊಡದಂ ॥
ಪರಮಾಗಮ ವೇದಿಗಳ್ದಾ ।
ದರದಿಂದಂ ತಿರ್ದಿ ಬರೆಗುಮೇಕ್ಷಿಸನೇಡಿಂ ॥
ಇದಸಾವಂ ಬಾಜಿಸುವಂ ।
ಮುದದಿಂದಂ ಕೇಳ್ದುಪೋದುಗುಂ . . . . ॥
ತ್ರಿದಶೇಂದ್ರಾದಿ ವಿಶಿಷ್ಟಾ ।
ಭ್ಯುದಯಮುಮಂ ಮೋಕ್ಷಪದಮುಮಂ ಪಡೆಗುಮವಂ ॥
ಶುಭಮಕ್ಕೆ ಶಾಂತಿಪೊರ್ದುಗೆ ।
ವಿಭವಂ ಕೈಸಾರ್ಗೆ ಧರ್ಮದೊಳ್ ನಿಳ್ಕೆಮನಂ ॥
ಶುಭಮತಿಯಿಂತೀ ಗ್ರಂಥಮ ।
ನಭಿವರ್ಣಿಸುತಿರ್ಪ ಭವ್ಯಕೋಟಿಗೆ ನಿಚ್ಚಂ ॥

Colophon:

ಪರಮಾಗಮಸಾರ ಸಮಾಪ್ತಂ.

(ವಿ-ವಿ)—

ಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲ. ಶುದ್ಧಪ್ರತಿ. ಲಿಪಿ ಉತ್ತಮ. ಇದರೊಡನೆ ನೀತಿ ಸಾರಸಮುಚ್ಚಯ ಮುಂತಾದ ಪುಸ್ತಕಗಳೂ ಬರೆದಿವೆ. ಅವಾವುವೆಂಬುದನ್ನು ತಿಳಿಯಲು ಬಯಸುವವರು ಹಿಂದೆ ವರ್ಣಿತವಾಗಿರುವ ೩೦೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಕಂದವೃತ್ತಗಳಲ್ಲಿ ಬರೆದಿದೆ. ಪದ್ಯ ೧೩೦. ಕಂದಗಳೇ ಹೆಚ್ಚು. ಜೈನತತ್ವವನ್ನು ಬೋಧಿಸುತ್ತದೆ. ಗದ್ಯರೂಪವಾದ ಈ ಹೆಸರಿನ ಮತ್ತೊಂದು ಗ್ರಂಥವು ಸು ೧೪೦೦ (ಕ್ರಿ.ಶ.) ದಲ್ಲಿ ವಿರಚಿತವಾಗಿರುವುದಾಗಿ ಕವಿಚರಿತ್ರೆ ೩ ನೆಯ ಭಾಗದ ೬೯ ನೆಯ ಪುಟದಲ್ಲಿ ವರ್ಣಿತವಾಗಿದೆ. ಗ್ರಂಥದಾದಿಯಲ್ಲಿ ಪುರುದೇವಸ್ತುತಿಯಿದೆ. ಬಳಿಕ ಕವಿ ಸಮಸ್ತ ಸರ್ವಜ್ಞರನ್ನೂ ಸ್ಮರಿಸಿ, 'ಪರಮಾತ್ಮನಂ ಧರಿಯಿಸಿ ಮನದೊಳ್ ಪೇಳ್ವೆಂ ಪರಮಾಗಮಾ ಸಾರಮಂ' ಎಂದು ಹೇಳುತ್ತಾನೆ. ಇದು ಲಲಿತವಾಗಿಯೂ ಮೃದುಮಧುರ ಪದಗಳಿಂದ ಕೂಡಿದುದಾಗಿಯೂ ಇದೆ.

ಕವಿ ಚಂದ್ರಕೀರ್ತಿ. ಇವನ ಪದ್ಯರಚನೆಯನ್ನು ನೋಡಿದರೆ ಈತನನ್ನು ಪ್ರೌಢಕವಿಯೆಂದೇ ಹೇಳಬಹುದು. ಆದರೆ ಈತನು ಇನ್ನೂ ಆವ ಗ್ರಂಥಗಳನ್ನು ಬರೆದಿರುವನೋ ತಿಳಿಯುವುದಿಲ್ಲ. ತನ್ನ ವಿಷಯವಾಗಿ ಹೆಚ್ಚೇನೂ ಹೇಳಿಕೊಂಡಿಲ್ಲ.

No. 386. ಪರಮಾತ್ಮಜ್ಯೋತಿ.

PARAMĀTMAJYOTI.

Substance, Sritala. Size, $16\frac{1}{4} \times 2\frac{3}{16}$ inches. Pages, 8. Lines, 11 on a page. Character, Kanarese. Condition, slightly injured. Appearance, old.

Begins on fol. 30b of the manuscript described under No. 321 *ante*.

Complete.

Deals with the nature of the soul and the means of obtaining liberation from bondage according to Jain philosophy.

The name of the author is not known.

Beginning:

ಮ ॥ ಸ್ರ ॥ ಶ್ರೀಮತ್ಸ್ಯಾದ್ವಾದಧರ್ಮಾಮೃತಶರನಿಧಿಸಂಜಾತನತ್ಯಂತತೇಜೋ ।
ಧಾಮಂ ಸನ್ಮಾರ್ಗವೃತ್ತಂ ಸಕಲಜನಮನಾನಂದ ನೇತ್ರಪ್ರಸಾದಂ ॥
ಶ್ರೀವಂತಂ ಜ್ಞಾನರಶ್ಮಿಪ್ರಸರಿತಕುಮತಧ್ವಂ . . . . . .
. ಮಬ್ರೀಮಪ್ರದಾನಂ ಕುಡುಗೆಮಗೆ ನಿಜಾವಾಸಮಂ ನೇಮಿಚಂದ್ರಂ ॥

ಉ ॥ ಮಾ ॥ ಘೋರದುರಂತಕರ್ಮಗಳ ಗೆಲ್ದು ಗುಣಂಗಳನೆಂಟ ತಾಳ್ದಿ ಸಂ ।
ಸಾರಸಮುದ್ರಪಾರಗರನಿಂದ್ಯರನಂತಸುಖಸ್ವರೂಪರಾ ॥
ಚಾರನಿದಾನರಪ್ರತಿಮಸಿದ್ಧಶಿಲಾಗ್ರದೊಳಿರ್ದ ಸಿದ್ಧರುಂ ।
ಸಾರಮೆನಿಪ್ಪ ತಮ್ಮ ಪದಮಂ ನಮಗೀಗೆ ಕೃಪಾನುಭಾವದಿಂ ॥ (?)

* * * *

ಕಂ ॥ ಅರುಹಂತಸಿದ್ಧಗಾಚಾ ।
ರ್ಯರನು ಪ್ರಪಾಧ್ಯಾಯ ಸರ್ವಸಾಧುಪದಂಗಳ (?) ॥
ನಿರುತಂ ವಂದಿಸಿ ಪೇಳ್ವೆಂ ।
ಪರಮಾತ್ಮಜ್ಯೋತಿಯಂ ಸುವಿಸ್ತರದಿಂದಂ ॥

ವ ॥ ಅಂತಪ್ಪ ಪರಮಾತ್ಮಜ್ಯೋತಿಯೆಂತಪ್ಪದೆಂದೊಡೆ—

ಮ ॥ ವಿ ॥ ನಿರುತಂ ದರ್ಶನಭಾಜನಾನ್ವಿತಲಸದ್ಜ್ಞಾನಾಮೃತಸ್ನೇಹದಿಂ ।
ಪರಿಪೂರ್ಣಂ ಸುಚರಿತ್ರವರ್ತಿಮುಖಮಾಕ್ರಾಂತಂ ಸುನಿರಂಜನಂ (?) ॥
ಪರಿನಿರ್ವಾಣಪಥಪ್ರಕಾಶಕಮಹಾಪಾಪಾಂಧಕಾರಾಪಹಂ ।
ಹರುಷಂ ಮಾಳ್ಪುದು ಭವ್ಯತಾ ಜನರಿಗಾತ್ಮಜ್ಯೋತಿ ತೇಜೋಮಯಂ ॥

ಮ ॥ ಸ್ರ ॥ ಹರಿನಾದಂಗೇಳ್ದ ಮಾತಂಗದ ಸಮುದಯಮೆಂತಂತೆ ಗಾರುತ್ಮನಂ ಕಂ ।
ಡುರಗವ್ರಾತಕ್ಕೆ ಭೀತಿಪ್ರಚುರತೆ ಯಿರವೆಂತಂತೆ ಪೂರ್ವಾದ್ರಿಯೊಳ್ಭಾ ॥
ಸ್ಕರತೇಜಂಬೀರಲಾಕಟ್ಟಿಲೆಯ ಮಹಿಮೆಯೆಂತಂತೆ ಪೊರ್ದಿರ್ದ ಪಾಪಂ ।
ಪರಮಾತ್ಮಧ್ಯಾನದಿಂದಂ ಕೆಡುವುದು ಭವನಾಶಂ ಜಿನೇಂದ್ರಾಗಮೋಕ್ತಂ ॥

ವ ॥ ಅಂತಪ್ಪಾತ್ಮನ ಸ್ವರೂಪಮೆಂತಪ್ಪುದೆಂದೊಡೆ—

ಸಹಜ ಶುದ್ಧಜ್ಞಾನಾನಂದೈಕ ಸ್ವಭಾವೋಽಹಂ, ನಿರ್ವಿಕಲ್ಪೋಽಹಂ, ಉದಾಶೀನೋಽಹಂ, ನಿರಂಜನ ಸ್ವಶುದ್ಧಾತ್ಮ ಸಮ್ಯಗ್ಜ್ಞಾನಾನುಷ್ಠಾನರೂಪೋಽಹಂ, ನಿಶ್ಚಯರತ್ನತ್ರಯಾತ್ಮಕ ನಿರ್ವಿಕಲ್ಪ ಸಮಾಧಿ ಸಂಜಾತ ವೀತರಾಗ ಸಹಜಾನಂದರೂಪ ಸುಖಾನುಭೂತಿ ಮಾತ್ರ ಲಕ್ಷಣೇನ ಸ್ವಸಂವೇದನೇನ ಸಂವೇದ್ಯಾಗಮ್ಯ ಪ್ರಾಪ್ಯಭರಿತಾವಸ್ಥೋಹಂ, ರಾಗದ್ವೇಷಕ್ರೋಧಮಾನಮಾಯಾಲಾಭ ಪಂಚೇಂದ್ರಿಯ ವ್ಯಾಪಾರ ಮನೋವಚನ ಕಾಯ ವ್ಯಾಪಾರ ಕರ್ಮ ಭಾವಕರ್ಮ ದ್ರವ್ಯ ಕರ್ಮಣಃ ಕರ್ಮಖ್ಯಾತಿ ಪೂಜಾಲಾಭ ದೃಷ್ಟಶ್ರುತಾನುಭೂತ ಭೋಗ ಕಾಂಕ್ಷಾರೂಪ ನಿದಾನ ಶಲ್ಯ ಮಾಯಾಶಲ್ಯ ಮಿಥ್ಯಾಶಲ್ಯತ್ರಯಾದಿ ಸರ್ವ ವಿಭಾವ ಪರಿಣಾಮ . . ತ ಶೂನ್ಯೋಽಹಂ, ಜಗತ್ರಯ ಕಾಲತ್ರಯೇಪಿ ಮನೋವಚನಕಾರ್ಯೇ ಕೃತಕಾರಿತಾನುಮತ್ಯೇಶ್ಚ ಶುದ್ಧ ನಿಶ್ಚಯನಯೇನ ಸರ್ವೇಪಿಜೀವಾ ಇತಿ ನಿರಂತರಂ ಭಾವನಾ ಕರ್ತವ್ಯಂ. (?)

ಕಂ ॥ ಜೀವಂಗಳ ರಾಶಿಗಳೊಳು ।
ಜೀವನು ಭವ್ಯನು ಅ (?) ಭವ್ಯನೆಂದೆರಡು ತೆಱಂ ॥

ಜೀವಂ ಭವ್ಯನು ಮುಕ್ತನು ।
ಜೀವನಭವ್ಯನು ಅ (?) ಮುಕ್ತನಿದು ಜಿನವಾಕ್ಯಂ ॥

ಕಲೆಶಿಲೆಗಳು ಸುವರ್ಣಮಿರ್ಪಂ ।
ತಿಳಿಗೊಳು ತಾಂ ತೈಲಮಿರ್ಪ ತೆಱದಿಂದೆಂತುಂ ॥
ಪುಳ್ಳಿಯೊಳು ಅ(?)ಗ್ನಿಯಿಪ್ಪಂ ।
ತೆಲ್ಲಾ ಜೀವಗಳ ದೇಹಮಾತ್ರಂ ಜೀವಂ ॥

ಅಂತಪ್ಪ ಜೀವನಂ ನಿ ।
ಶ್ಚಿಂತದಿ ಮನವಚನಕಾಯ ಯೋಗಾಭ್ಯಾಸದೊ (?) ॥

ಳಂತು ನಿನ್ನಾತ್ಮನಂ ನೀಂ ।
ಸಂತತ ಭಾವಿಸಲು ಮುಕ್ತಿಯಕ್ಕುಮಮೋಘಂ ॥

End :

ಉ ॥ ಮಾ ॥ ಕರ್ಮಮದೇಭಕೇಸರಿ ಜಿನೇಶ್ವರ ನಿನ್ನಯ ರೂಪನಾವಗಂ ।
ಕೂರ್ಮೆಯ ಪೆರ್ಮೆಯಿಂದೆ ಹೃದಯಾಂಬುಜದೊಳ್ನೆಲೆಸಲ್ಕೆ ಸಂತಸಂ ॥
ನೂರ್ಮಡಿ ಹೆಚ್ಚಿಯುಚ್ಚಳಿದಪ್ಪೋಲ್ನೆನೆಯುತ್ತಿರೆ ಚಿತ್ತದಲ್ಲಿಯಾ ।
ನಿರ್ಮಲ ಪಾರಿಣಾಮಿಕದ ಭಾವನೆ ಭವ್ಯಗೆ ಮೋಕ್ಷಸಾಧನಂ ॥
ಕೇವಲ ಬೋಧಭಾನು ಜಿನ ನಿನ್ನಯ ಮೂರ್ತಿಯ ನೆನ್ನ ಚಿತ್ತದಾ ।
ಪ್ರೋವರಿಯಲ್ಲಿ ನಿರ್ಮಿಸಿದೆ ನಿರ್ಘನಿಕಂ ಧನಗಂಡ ಮಾಟಿಕ್ಕೆಯಿಂ ॥
ಭಾವಿಸುವಂತುಟಾಗಿ ಬಿಡಲಾರೆನು ಮೇರುಮಹೀಧರಕ್ಕೆ ದೇ ।
ವಾವಳಿಗೂಡಿಯಿಂದ್ರ ನಿಮಗಂದು ಮಹೋತ್ಸವದಿಂದ ಪೂಜೆಯಂ ॥
ಭಾವವಿಶುದ್ಧಿಯಿಂ ರಚಿಸಿ ನಿಲ್ಲದಗಲ್ದು ಮದೆಂತು ಪೋದನೋ ॥

ಕಂ ॥ ಒರ್ವನೆ ಭವಭವಗಳ ಬಂ ।
ದೊರ್ವನನಂತಾನನಂತ ದುಃಖವನುಂಡೆನು (?) ॥
ಒರ್ವನೆ ಸಂಸೃತಿಗಾಱಿನು ।
ನಿರ್ವಾಣಾಧಿಪ ಜಿನೇಂದ್ರ ಸಲಹುವುದೆನ್ನಂ ॥

೮೦ ॥ ಮಾ ॥ ಆತ್ಮನ ಚಿಂತೆಯಾತ್ಮನ ವಿಚಾರತೆ ಯಾತನ ಕಥಾನುರಾಗ ಶು ।
ದ್ಧಾತ್ಮನ ಬೋಧೆಯಾತ್ಮನ ಗುಣಸ್ತುತಿಯಾತ್ಮ ಹಿತಾನುವರ್ತನಂ ॥
ಆತ್ಮಸುತತ್ವಲೀನತೆ ನಿಜಾತ್ಮರು ಚ[ಂ](?)ಸಹಜಾತ್ಮ ಭಾವನಂ ।
ಆತ್ಮನೆ ದೈವವೆಂದು ನೆನೆವಾತಗ ಮೋಕ್ಷರತಂ ಜಿನೇಶ್ವರಾ ॥

ಚಂ ॥ ಮನದೊಳಗಾತ್ಮತತ್ವರುಚಿಯಾತ್ಮವಿಚಾರತೆಯಾತ್ಮತತ್ವಭಾ ।
ವನೆ ಪರಮಾತ್ಮತತ್ವಕಥನಂ ಪರಮಾಗಮ ಗೋಷ್ಠಿಯುಳ್ಳೊಡಾ ॥
ತನೆ ಕೃತಕೃತ್ಯನಾತನೆ ಜಗತ್ಪ್ರಭುವಾ . . . . . ।
ತನೆ ನೆಗಳ್ದೇಕದೇಶಜಿನನೆಂಬುದು ನಿನ್ನ ಮತಂ ಜಿನೇಶ್ವರಾ ॥

೮೧ ॥ ಮಾ ॥ ಜೀವನಸಾಧ್ಯನೈ(ಕ್ಯ)ದಸನಂತಗುಣ ಪ್ರಭುಕರ್ತೃ ಭೋಕ್ತೃಸಂ ।
ತಾವಗ(?) ಪುಣ್ಯಪಾಪಗಳ ಮಿಶ್ರದಿ ಮಾನುಷನಕ್ಕು ಪುಣ್ಯದಿಂ ।
ದೇವನೆನಿಕ್ಕು ಪುಣ್ಯದಘನಾಶದಿ ನಿರ್ವೃತಿಯಕ್ಕು ಶ್ರೀಜಿನಾ ॥ (?)

Colophon :

ಪರಮಾತ್ಮಜ್ಯೋತಿ ಸಮಾಪ್ತಂ.

(ವಿ.-ವಿ.)—

ಸಮಗ್ರ. ಸ್ವಲ್ಪಶಿಥಿಲ. ಲಿಪಿ ಉತ್ತಮ. ಅಶುದ್ಧಪ್ರತಿ. ಇದರೊಡನೆ ನೀತಿಸಾರ ಸಮುಚ್ಚಯ ಮುಂತಾದ ಇತರ ಪುಸ್ತಕಗಳೂ ಬರೆದಿವೆ. ಅವಾವುವೆಂಬುದಕ್ಕೆ ಹಿಂದೆ ವರ್ಣಿತವಾಗಿರುವ ೩೨೧ ನೆಯ ನಂಬರನ್ನು ನೋಡುವುದು.

ಇದು ಕಂದವೃತ್ತವಚನಗಳಲ್ಲಿ ಬರೆದಿದೆ. ಅಲ್ಲಲ್ಲಿ ಸಂಸ್ಕೃತವಾಕ್ಯಗಳೂ ಕೆಲವಿವೆ. ಪದ ೯೫ ಜೈನಮತ ರೀತಿಯಾಗಿ ಆತ್ಮವಿಚಾರವನ್ನು ಬೋಧಿಸುತ್ತದೆ. ಗ್ರಂಥದಾದಿಯಲ್ಲಿ ನೇಮಿಚಂದ್ರ ಜಿನಸ್ತುತಿಯಿದೆ. ಬಳಿಕ ಕವಿ, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಇವರುಗಳನ್ನು ನುತಿಸಿದ್ದಾನೆ.

ಕವಿ ಮುಂತಾದ ವಿಷಯಗಳು ಈ ಗ್ರಂಥದಿಂದ ಗೊತ್ತಾಗುವುದಿಲ್ಲ.

No. 387. ಪುಷ್ಪದಂತಪುರಾಣ-
PUṢPADANTAPURĀṆA.

Substance, Śrītala. Size, $16\frac{3}{10} \times 2\frac{1}{4}$ inches. Pages, 133. Lines, 11 on a page. Character, Kanarese. Condition, injured. Appearance, old.

Complete in 14 Āsvāsas.

A campu kavya describing the story of Puṣpadanta who was the 9th Tīrthankara. The author is Guṇavarma II. In the introductory stanzas he refers to a large number of poets who flourished before him. He studied under Municandra paṇḍita-deva and was a court pandit of Nāgavarma. It is stated in 'Kavicaritre' that he flourished in 1235 A.D.

Beginning :

ಸ್ರ॥ ಶ್ರೀಪಾಲೋಮೀಶ ಭೂಭೃತ್ಪ್ರಮುದಯವಿನುತಂಗಳ್ತ್ಪಮಸ್ತೋಮ ಜೈತ್ರಾ ।
ಟೋಪಂಗಳ್ದರ್ಶಿತಾಶಾಂಬರ ಸಕಲಪದಾರ್ಥ ಕ್ರಮಂಗಳ್ಸದಾ ಲೋ ॥
ಕಾಪದ್ವಿಚ್ಛೇದಕಂಗಳ್ಕ್ರಹದಮೃತ ನಿಧಿಸ್ಫೂರ್ತಿಗಳ್ಪುಷ್ಪದಂತ ।
ಶ್ರೀಪಾದಂಗಳ್ಸ ಮತ್ಪಾದಿಸುಗೆಮಗೆ ಹೃದಿಂದೀವರಾನಂದದೊಳ್ಪಂ ॥

ಮ॥ ವಿ॥ ಅನಿಶಂ ಸ್ವಾತ್ಮಗುಣ ಪ್ರಸಿದ್ಧರೆನಿಸಿದ್ರ್ಪಗಂ ಮುಕ್ತರಾದಂ ನಿರಂ ।
ಜನರಾಗಿದ್ದರ್ಮಶೇಷ ಲೋಕಹಿತಾರ್ಥಗ್ರಾಹಿಗಳ್ ಯೋಗವ ॥
ರ್ಜನವೊಂದುಂ ತಮಗೆಂಬುವಿಲ್ಲೆನಿಸಿಯುಂ ಸಿದ್ಧರ್ಕಳೆಂದೆಂಬ ಟೆಂ ।
ಪಿನಮೂರ್ತರ್ಪರಮಾತ್ಮರುದ್ಧರಿಸುಗೆಮ್ಮಂ ಸಿದ್ಧಿಯುಷ್ಪನ್ನಿಗಂ ॥

*   *   *   *

ಚಂ॥ ವದನಮತಪ್ರಸನ್ನತೆಯನಾಳ್ದುದು ಶಾಂತಿಯನಾಂತುದಂತವೆ ।
ಯ್ದಿದುದತಿಕಾಂತಿಯಂ ತನು ದಯಾರ್ಣವಮಂ ಸಲೆ ಪೆರ್ಚಿಸಿತ್ತು ನೋ ॥
ಡಿದೊಡೊಗೆತಂದ ಚಂದ್ರಿಕೆ ಕಳಾಕಳಿತಂ ವಚನಾಮೃತಂ ಮನೋ ।
ಮುದಮನೊಡರ್ಚಿದತ್ತು ವಿಬುಧರ್ಗಿಳೆಯೊಳ್ಕನಿಚಂದ್ರದೇವರಾ ॥

ಕಂ॥ ಭೂತಭವದ್ಭಾವಿ ಮುನಿ ।
ವ್ರಾತಂ ಸತತಂ ತ್ರಿಹೀನನವಕೋಟೀಸಂ ॥
ಖ್ಯಾತಂ ಮಾನಸಹಂಸಂ ।
ಪ್ರೀತಿಯನೊಡರಿಕೆ ದಯಾಪಯೋವಾಹಿನಿಯುಂ ॥

ಚಂ॥ ವಿಷಯವಿಲೀನಮಾನಸದ ಮಾನಿಸರಂ ತಿಳಿಪಲ್ಕೆವೆ(ಡಿ)ನಿ ।
ರ್ವಿಷಯಜಿನೇಂದ್ರ ರುದ್ರಕಥೆಯೊಳ್ನವಭಾವರಸಂಗಳಂ ತಳಂ ॥
ಕಷವೆನೆತೋಱಿ ತದ್ರು . . ಮೆಯ್ಯೊಳೆ ಸದ್ರುಚಿಯೊಳೆಗೊಡರ್ಚುವೀ ।
ಮಿಷದ ಕವೀಂದ್ರರೀಗೆ ಸುಖಸೃಷ್ಟಿರತರ್ ಕವಿತಾಪ್ರಸಾದಮಂ ॥

ಮ॥ ಸ್ರ॥ ಮಣಿಯಂತೆ ರಂಜಿಪಂತೊಪ್ಪಮನೆಸಗುಗೆ ಕೈಯ್ಕೊಂಡುಕೊಂಡಾಡಿ ವಿದ್ಯಾ ।
ಗ್ರಣಿಗಳ್ ಭವ್ಯಾಘಸಂಸೇವ್ಯ ಮನಮಳೆವಚೋನವ್ಯಮಂ ಸ್ವಾರ್ಥಸಿದ್ಧಿ ॥
ಪ್ರಣಯಿಪ್ರೋದ್ಯೋದ್ಯಮಂ ವಿಶ್ರುತನವರಸಭಾವಾಭಿದಾನವ್ಯಮಂ ಸಂ ।
ದ್ಗಣಿ ವಿದ್ವದ್ಭವ್ಯಮಂ ಶ್ರವ್ಯಮನನುಪಮಮತ್ಕಾವ್ಯಮಂ ಸತ್ಕವೀಂದ್ರರ್ ॥

ಚಂ॥ ಅನುಗುಣಮಾಗಿ ಕೂಡೆ ಗುಣವರ್ಮನ ಮೆಯ್ಸಿರಿ ಪಂಪನೋಜೆ ಪೊ ।
ನ್ನನ ಪೊಸದೇಸೆ ರನ್ನನ ಗುಣೋನ್ನತಿಯಗ್ಗಳನೊಳ್ಪು ನಾಗವ ॥
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ ॥
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯಮೆನ್ನಯ ನವ್ಯಕಾವ್ಯದೊಳ್ ॥

*   *   *   *

ಉ॥ ನೋಡಿರೆ ಪೂರ್ವದೊಳ್ಗಣಧರಾದಿ ಮಹಾಮುನಿಸತ್ಕವೀಶ್ವರ ।
ರ್ಮಾಡಿದ ಪುಷ್ಪದಂತಜಿನನಾಥ ಪುರಾಣಮನಿಂದು ಕನ್ನಡಂ ॥
ಮಾಡುವೆನೆಂದು ಪೂಣ್ದೆನಿದು ಶಕ್ತಿಯೊ ಭಕ್ತಿಯೊ ವೈನತೇಯನಿ ।
ರ್ದಾಡಿದ ಗಾಳಿವಟ್ಟೆಗೆ ಮಸಂಬಿಡೆ ಧೀಂಕಿಡುವಂತೆ ಟಿಟ್ಟಿಭಂ ॥

*　　　*　　　*　　　*

ಕಂ॥ ಭಾವಿಸೆ ಚಿತ್ರಮೆನಲ್ ವಿಭು ।
ಧಾವಳ ಗುಣವರ್ಮಬುಧನನತಿಕೃಪೆಯಿಂ ಕೊ ॥
ರ್ತೋವಿ ಮುನಿಚಂದ್ರ ಪಂಡಿತ ।
ದೇವರ್ ಗುರುವಾಗೆ ಕವಿತೆ ಬಂದುದು ಚಿತ್ರಂ ॥

ತಣಿವಂತಿರೆ ರಸದಿಂ ಬುಧ ।
ತಣಿಯುರಮೆಸಗುವುದು ಸುಕವಿಸತ್ಕೃತಿಯುನೆಱಂ ॥

ಗುಣವರ್ಮನಾಗಿ ಶಿತಮಾ ।
ರ್ಗಣದಂ ತುಚ್ಛಳಿಪದಿರ್ಪಿನಂ ಖಳವಚನಂ ॥

ಪ್ರಕಟಂ ಸುಕವಿಮಧುವ್ರತ ।
ನಿಕರಮನೆಱಗಿಸುವ ಛೂತಮಂಜರಿ ಕಾಕಪ ॥

ಪ್ರಕರಮಧುಪಕ್ಕೆ ಕೃತಿಚಂ ।
ಪಕಮಂಜರಿಯೆನಿಸಿ ಪೇೞ್ದಪಂ ಗುಣವರ್ಮಂ ॥

ಪದಮೇ ಪದಮರ್ಥಮರ್ಥಂ ।
ಪುದಿದ ರಸಂ ತೃಪ್ತಿಕರರಸಂ ಭಾವಂ ಪೊ ॥
ಣ್ಮಿದ ಸದ್ಭಾವಂ ದನಿ ಯಿಂ ।
ಪೊದವಿದ ದನಿಯೆನಿಸಿ ಪೇೞ್ದಪಂ ಕವಿತಿಲಕಂ ॥

ಸ್ವೀಕೃತಜಿನ ಧರ್ಮನನಂ ।
ಗೀಕೃತ ಖಳವರ್ಮನಮಳವಾಣೀಕರುಣಾಂ ॥

ಗೀಕೃತ ಕವಿತಾವರ್ಮನ ।
ಪಾಕೃತ ದುಷ್ಕರ್ಮನಮಮ ಕವಿ ಗುಣವರ್ಮಂ ॥

ಕವಿ ಗಮಕಿವಾದಿ ವಾಗ್ಮಿ ।
ಪ್ರವರರ್ಗುಣವರ್ಮನೊಳ್ಸಮಂ ಬರ್ಪವರಾ ॥

ರ್ಕವಿತೆಯೊಳಂ ಗಮಕದೊಳಂ ।
ಕುವಾದಿ ವಿಜಯದೊಳಮಮೃತ ವಾಗ್ವೃತ್ತಿಯೊಳಂ ॥

ವಿವಿಧಕಳಾಭಿಜ್ಞಂ ಭಾ ।
ವವಿದಂ ರಸರಚಿಕನುಚಿತ ಕವಿತಾಚತುರಂ ॥

ಸುವಿವೇಕನಿದಾನಂ ವಿಬು ।
ಧವತ್ಸಲಂ ಮಾನಮೇರು ನೃಪತತಿಮಹಿತಂ ॥

ಚಂ॥ ರತಿ ಪದದಂತೆ ಚಂದ್ರಕಿರಣಂಗಳ್ ಪೊಲ್ಗುಡಿವಂತೆ ಮಂದಮಾ ।
ರುತನೊಡಗೂಡಿ ಬಂದ ಸಹಕಾರಪರಾಗದೊಳಾಡಿದಂತೆ ರಾ ॥
ಜಿತಮಧುಮಾಸದೊಳ್ ಪರೆಯಾದಿಂ ಪೊರೆದಂತಬಲಾಕಟಾಕ್ಷ ಶಿ ।
ಕ್ಷಿತಮೆನಿಪಂತೆ ಮೋಹಿಸದೆಪೇಳ್ ಗುಣವರ್ಮನ ಸೂಕ್ತಿಸಂಚಯಂ ॥

ಶಾ॥ ಎಂದೋರಂತಿರೆ ವಜ್ರದೇವನೆರನಾಥಾಸ್ಥಾನದೊಳ್ ಕೀರ್ತನ ।
ಣ್ಪಿಂದಂ ಕೋವಿದರೆಯ್ದೆ ಕೊಂಡುಕೊನೆಯಲ್ ಕೇಳ್ದಟ್ಟಿಱಿಂ ಶಾಂತಿವ ॥
ರ್ಮಂ ದೀನಾನತವರ್ಮನಾದರಿಸಿ ನೀಂ ಪೇಳೆಂದೊಡೀಗಳ್ ಮನಂ ।
ದಂದೆಂ ಪೊಲ್ಗಡ ಮರ್ದಿಸಲ್ ಅನೇಕಕಥಾವಿಸ್ತಾರಮಂ ಸಾರಮಂ ॥

* * * *

ಕಂ॥ ಅಳಿಯುಂ ಪೆಱತೆಯುಂ ಭಾಗ್ಯದಿ ।
ನಳಿಯುಂ ಸೌಭಾಗ್ಯದಿಂದ ಮಳಿಯುಂ ಗುಣದಿಂ ॥
ದಳಿಯುಂ ವಿತರಣಗುಣದಿಂ ।
ದಳಿಯು ನೆನಿಪ್ಪಂಗೆ ಕುಡುಗೆ ಕೃತಿಕನ್ನಿಕೆಯುಂ ॥
ಕೃತಿಬೆಲೆಯಿಂ ಬರ್ಕುಮೆ ಪಂ ।
ಡಿತರಾರ್ಬೆಲೆಯಿಲ್ಲರಿರ್ದೊಡಂ ಕೃತಿಗೊಳ್ವಂ ॥
ಕೃತಿಗೆ ಬೆಲೆಯುಂ ಬರಿದು ಮನ ।
ಕೆತ್ತವಾದೊಡೆ ಕೇಳ ವಿಬುಧ ವಿದ್ವತ್ಸಭೆಯೊಳ್ ॥

ಮ॥ ಸ್ರ॥ ಕ್ಷಿತಿಯೊಳ್ಕೃಷ್ಣಬ್ಜನೇತ್ರಂ ಮನೆಯುಳಿಯನೆನಲ್ ಕ್ಷೀರವಾರಾಶಿಯಿಂ ವಿ ।
ಶ್ರುತಲಕ್ಷ್ಮೀದೇವಿಯುಂ ಕೌಸ್ತುಭಮಣಿಸಹಿತಂ ಕೊಂಡನೆಂತಂತೆ ತನ್ನಂ ॥
ಸತತಂ ಕೂರ್ತಿತ್ತು ಕೊಂಡಂ ಗುಣನಿಧಿ ಗುಣವರ್ಮಂಗೆ ಕೀರ್ತ್ಯನ್ವಿತಂ ಸ ।
ತ್ಕೃತಿ ಲಕ್ಷ್ಮೀ[ದೇವಿಯುಂ ಕೌಸ್ತುಭಮಣಿ] ಕಾಂತೆಯುಂ [ತಂದ] (ರಂ) ಜಿತ
[ವಿಬುಧಜನಸ್ವಾಂತೆಯುಂ ಶಾಂತಿವರ್ಮಂ ॥

ಕಂ॥ ಆತನ ನಿಖಿಲಮಹೀ ವಿ ।
ಖ್ಯಾತನ ಸನ್ಮಾನದಾನಸಂಚಿತ ಸುಕೃತ ॥
ವ್ರಾತನ ಗುಣವೇಣಿಕೆಗೆ ಘನ ।
ವೇತಱಿತೊಳ್ಗಂ ಕೆಱೆದಱಿಂದಮಱಿಪುವೆನಿನಿಸಂ ॥

ವ॥ ಅದೆಂತೆನೆ—

ಚಂ॥ ಸಕಳಜನೈಕಮಿತ್ರನನವದ್ಯಕಲಾಧರ ನಿಷ್ಟಶಿಷ್ಟ ಕ ।
ಲ್ಪಕುಜನುಪಾಶ್ರಿತಾಖಿಲಬುಧಂ ನಯವಾಕ್ಪತಿ ಸತ್ಯವಿತ್ತ್ವರಂ ॥
ಜಕನಹಿತಾದ್ರಿಸಂಗತ ಮಹಾಶನಿ ಸಂತತಭೋಗಿರೂಪ ಕಾ ।
ತುಕಜಿತಮೀನಕೇತುವೆನೆ ಶಾಂತಿ ನವಗ್ರಹಭಾಸಿ ಲೋಕದೊಳ್ ॥
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕವೊಲ್ದುದನಿತ್ತ್ರಭಿರಕ್ಷಿಪರ್ಥಿಯಿಂ ॥
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಾ ॥

ಮ॥ ವಿ॥ ಜಗದೊಳ್ ನಾಟ್ಪ್ರಭು ಶಾಂತಿವರ್ಮನೆಸೆವಂ ಪ್ರೋದ್ದಾಮ ಲಕ್ಷ್ಮೀಗೃಹಂ ।
ಜಗತೀ ಮಂಗಳರತ್ನಭೂಷಣಗೃಹಂ ಸಾಹಿತ್ಯಲೀಲಾಗೃಹಂ ॥
ಭಗವಜ್ಜೈನಮತೋಕ್ತಿ ನರ್ತನಗೃಹಂ ದಿಕ್ಕಾಮಿನೀವರ್ತಿ ಕೀ ।
ರ್ತಿಗೃಹಂ ಕೀರ್ತಿತ ಸತ್ಯಸಂಪದಗೃಹಂ ಸಂಗೀತವಿದ್ಯಾಗೃಹಂ ॥

* * * *

ನಿರವದ್ಯ ಶ್ರೀನಿಜೋನ್ನತ್ಯದಿನವೃತ ನಿಧಿಸ್ಫೂರ್ತಿಯಾಂ ಸತ್ಯಭಾಮಾ ।
ಪರಿಭಾಸ್ವಸ್ಪಂದದಿಂ ಶಾರ್ಜೆಯನುಮೆಯಿನುಮಾದೀಶನಂ ಮಾರ್ಗಣಾಡಂ ॥
ಬರದಿಂ ನೈಷಂಗವಂ ಸತ್ಕವಿಕಳತ ಕಳಾರಂಭದಿಂ ಶಾಂಭದಬ್ಜಾ ।
ಕರಮಂ ಪೋಲ್ವಂ ಮಹೀಭೂಸುರಗುಣನಿಳಯಂ ಶಾಂತನುತ್ಕೀರ್ತಿವಂತಂ ॥

ವ॥ ಎಂದಿತು ಸಮಸ್ತಭುವನಂ ಪೊಗೞ್ತೆ ನೆಗೞ್ತೆವಡೆದ ನಪ್ಪುದಱಿಂ ಕೀರ್ತಿಪತಾಕನುಂ ಅಗ್ರ್ಯಪುಣ್ಯಾ ಲಕ್ಷ್ಮೀಸದನ ವಕ್ಷಸ್ಥಳನಪ್ಪುದಱಿಂ ಪುರುಷೋತ್ತಮನುಂ ಆತ್ಮೀಯಾನ್ವಯಮಂ ಗುಣರತ್ನದಿಂದ ಲಂಕರಿಸುವುದಱಿಂ ಗುಣರತ್ನಭೂಷಣನುಂ, * * * ಸಿಂಹಣ ಸೀಮಂತಿನೀಮಂತ ಸಿಂಧೂರನುಮೆನಿಸಿ ನೆಗೞ್ದನಾಟ್ಪ್ರಭು ನಭೋಮಣಿ ಶಾಂತಿವರ್ಮನ ಯಶೋಲತೆಗಾಲಂಬನ ಮನೋಹರಮಾದ ಕಥಾವನಿತೆ ಗುದ್ಭವಸ್ಥಾನ ಮೆಂತೆಂದೊಡೆ.

ಮ॥ ವಿ॥ ನಿರುತಂ ನಾಲ್ಕನುಯೋಗಮೆಂಬ ದೆಸೆಯೊಳ್ ನಾಲ್ಕುಂ ಶ್ರುತಸ್ಕಂಧಬಂ ।
ಧುರ ಭೂಚಕ್ರದೊಳೊಪ್ಪುತಿರ್ಪುದದಱತೊಳ್ ಪ್ರಾಗ್ವಾನುಯೋಗಸ್ಥಿತಂ ॥
ಸುರರಾಜದ್ವಿಪದಂತೆ ಬೆಂಪೆಸೆವುದೀ ಶಾಂಭತ್ಕಥಾಂಗಂ ನಿ . ।
. . ನಾನಪ್ರತಿಭಾಸಿ ಭದ್ರಗುಣಸಂಪೂರ್ಣಂ ಬುಧೋಧಿಷ್ಠಿತಂ ॥

ಕಂ॥ ಪುರುಜನ ವೀರಜಿನೋಕ್ತಿ ।
ಸ್ವರೂಪಮಂ ವೃಷಭಸೇನ ಗೌತಮಗಣಗಳ್ ॥
ಭರತನೃಪಮ . . . . ಜ ।
ಗೇರೂಪ್ಯ ಗಿರಿವಿಪುಳಗಿರಿಗಳೊಳ್ ಬೆಸಸಿ(ದು)ದಂ ॥

ಮ॥ ವಿ॥ ಹರಿಯುಂತಂತಿರನೇಕ ಪಾಪಹರಣೈಕಪ್ರಾಥಮಂ ಕಿನ್ನರೇ ।
ಶ್ವರನಂತಂತಿರಗಣ್ಯ ಪುಣ್ಯಜನಸೇವ್ಯೈಶ್ವರ್ಯಮಂ ಮೇರುಭೂ ॥
ಧರಮೆಂತಂತಿರೆ ಪುಷ್ಪದಂತಪರಿವೃತ್ತೋದಾತ್ತಮಂ . . . ।
. ರಿಸಲ್ಭಕ್ತಿಯಿನಾಂ ವಿನಿರ್ಮಿಸುವೆನೀ ಶ್ರೀಮತ್ಕಥಾಬಂಧಮಂ ॥
ಸುಕೃತಂ ಶಾಂತದಿನಕ್ಕುಮೀ ಕತೆಗೆ ಶೃಂಗಾರಾದಿನಾನಾರಸಾ ।
ಷ್ಟಕವೇ ಬಾರ್ತೆಯೊ ರಾಗಕಾರಣವೆನಲ್ವೇಡೆಯ್ದುಗುಂ ಷೇತರಾ ॥
ಗಕಥಾಂತರ್ಗತಮಾದೊಡಾವ ರಸಮುಂ ಶಾಂತ . . . ದ ।
ಪ್ರಕರಾಂತ(ರ್ಗತ)ವಾರ್ಧಿವಾರಿವಡೆವಂತತ್ಯಂತ ಮಾಧುರ್ಯಮಂ ॥

ವ॥ ಆ ಕಥಾವತಾರ ಮೆಂತೆಂದೊಡೆ.

ಮ॥ ಸ್ರ॥ ನಿರುತಂ ಷಡ್ದ್ರವ್ಯಗರ್ಭೋದರ ವಿತರವಿತರ್ಕಾತಿರಿಕ್ತ ಸ್ವರೂಪಂ ।
ಪರಮೇಷ್ಠಿಜ್ಞಾನ ದೃಷ್ಟಿಪ್ರಸರ ವಿಷಯಮಾದ್ಯಂತ ಶೂನ್ಯ . . . ॥
ಜರಮಧ್ಯಸ್ಥಾಯಿಲೋಕಂ ಕ್ರಮಗತಿಯಿನಧಸ್ತಿರ್ಯಗೂರ್ಧ್ವತ್ರಿಭೇದಂ ।
ಬೆರಸೊಪ್ಪುತ್ತಿರ್ಪುದಾತ್ಮೋಚ್ಛ್ರಯ ಮಧುಪದಿಸಾಲ್ಕಗೆ ರಜ್ಜುಪ್ರಮಾಣಂ ॥

* * * *

ಚಂ॥ ನೆನೆಯಿಪುದೆಯ್ದೆ ಮೇರುಗಿರಿ ವಿಶ್ವಜ . ನುತ ದಿವ್ಯಪಾದದಿಂ ।
ಜನಪತಿಯುಂ ಮಹಾಕಟಕದಿಂ ನೃಪನಂ ವಿಧೃತಕ್ಷಮಶ್ವದಿಂ ॥
ಮುನಿಜನಮಂ ನಿತಂಬಗತ ಕಾಂಚನಮೇಖಲೆಯಿಂ ಲತಾಂಗಿಯುಂ ।
ವಿನುತಪವಿತ್ರಪ್ರೂ . . ಣದಿಂ ಗುಣಿ-ನಾಳ್ಪ್ರಭು ಶಾಂತಿವರ್ಮನಂ ॥

Colophon:

ಇದು ಸಮಸ್ತಭುವನಜನಸಂಸ್ತುತಜಿನಾಗಮ ಕುಮುದ್ವತೀಚಾರುಚಂದ್ರಾಯಮಾನ ಮಾನಿತ ಶ್ರೀಮದುಭಯ ಕವಿ ಕಮಳಗರ್ಭ ಮುನಿಚಂದ್ರ ಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನಪರಿಪುಷ್ಟಮಾನಸ ಮರಾಳ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್. ಪೀಠಿಕಾವರ್ಣನಂ ಪ್ರಥಮಾಶ್ವಾಸಂ.

ಕಂ॥ ಶ್ರೀನಿಧಿ ಮಹಿಮಧ್ಯಸ್ಥಂ ।
ಮಾನಿತ ಕಲ್ಯಾಣರೂಪಮೆಸೆವುದು ಸತ್ಯಂ ॥
ತಾನಯುತಂ ದಿವಿಜಾದ್ರಿಸ ।
ಮಾನೀಕೃತ ಸಹಜಕವಿ ಸರೋವರಹಂಸಂ ॥

ವ॥ ಆ ಮೇರುವಿನ ಪೂರ್ವ ಪಶ್ಚಿಮ ಪ್ರದೇಶದೊಳ್.

ಕಂ॥ ಓರೊಂದಱತೊಳಗೆ ನಾಡುಗ ।
ಳೀರೆಂಟುಗಳಾಗಿ ಕೂಡಿ ಮೂವತ್ತೆರಡುಂ ॥
ರಾರಾಜಿಸಿ ಸೊಗಯಿಪ್ಪ ದಿ ।
ಳಾರಮಣೀ ರಮ್ಯ[ಮಾ]ಗೇಹ ಮುಭಯವಿದೇಹಂ ॥

End:

ಮ॥ ವಿ॥ ಸುರಪಂ ಮಾಡಿದನೂನದಿವ್ಯ ಪರಿನಿರ್ವಾಣೋದ್ಘ ಕಲ್ಯಾಣ ವಿ ।
ಸ್ತರ ಪೂಜಾತಿಶಯಕ್ಕಮಿಂತಿದೆನಸುಂ ಮೇಲೆಂಬಿನಂ ಮಾಡಿದಂ ॥
ಪರಮಾರ್ಹತ್ಪದ ಪೂಜೆಯಂ ಬಹುವಿಧದ್ರವ್ಯಾರ್ಚನಾನೀಕದಿಂ ।
ಧರಣೀ ವಿಶ್ರುತಕೀರ್ತಿ ಕೀರ್ತಿಧರಭೂಪಂ ಭವ್ಯರತ್ನಾರ್ಣವಂ ॥

ಚಂ॥ ನವರಸಮಂ ನಿಮಿರ್ಚುವ ಬೆಡಂಗನಮರ್ಚುವ ದೋಷಮಂ ತಳ್ ।
ರ್ಚುವ ಗುಣಮಂ ಕೆಳರ್ಚುವಮರ್ದಿಂಪನೊಡರ್ಚುವ ಬಂಧಮಂ ತೊಡ ॥
ರ್ಚುವ ಕಿವಿವೊಕ್ಕಲರ್ಚುವೆಳೆನುಣ್ಪನೊಡರ್ಚುವ ಕಾವ್ಯಸತ್ಕಳಾ ।
ರ್ಣವ ಮೃಗಲಕ್ಷ್ಮಲಕ್ಷಣ ವಚೋವಧುವಂ ಬುಧರೊಲ್ದು ವರ್ಣಿಕುಂ ॥

ಉ॥ಮಾ॥ ಶಲ್ಯವಿದೂರ ಬಂಕರಸನಂಕದ ಮಾಚಿಯತಂದೆ ನಿತ್ಯಮಾಂ ।
ಗಲ್ಯ ಸುಶೀಲಯುಕ್ತಿ ಮಹದೇವಿಯು ವಲ್ಲಭನೊಲ್ಪುವೆತ್ತ ಸಾ ॥
ಕಲ್ಯ ಕುಲಾಮೃತಾಂಬುನಿಧಿ ಸೋಮನ, ಭಾಮನ ಸೂನುವೊಲ್ದು ಸಾ ।
ಕಲ್ಯಗುಣಾಸ್ಪದಂ ಬರೆದಪಂ ಬುಧಮಾಧವನೀ ಪ್ರಬಂಧಮಂ ॥
ಬಿಂದುವಿನೊಂದು ಶೋಭೆತಲೆಕಟ್ಟಿನ ಪೊರ್ಕುಳ ಚೆಲ್ವುಮಾತ್ರೆಯೊಳ್ ।
ನಿಂದಬೆಡಂಗು ಒಳ್ಪಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ ॥
ಳೊಪ್ಪಂದಿರಲಕ್ಕರಕ್ಕೆ ಬರೆವಂ ಚತುರರ್ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜವಿಬುಧಂ ವಿಬುದೋತ್ಥಿತನವ್ಯ ಕಾವ್ಯಮಂ ॥

Colophon:

ಇದು ಸಮಸ್ತ ಭುವನಜನ ಸಂಸ್ತುತ * * * * ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಪರಿನಿರ್ವಾಣ ಮಹಾಕಲ್ಯಾಣವರ್ಣನಂ ಚತುರ್ದಶಾಶ್ವಾಸಂ.

(ವಿ.ವಿ.)—

ಸಮಗ್ರ ಶಿಥಿಲ. ಗ್ರಂಥಮಾತ್ರ ಸ್ವಲ್ಪ. ಲಿಪಿ ಉತ್ತಮ. ಈ ಪುಸ್ತಕದ ಕೊನೆಯಲ್ಲಿ ಬರೆದಿರುವ ಪದ್ಯಗಳಿಂದ ಇದನ್ನು ನಲ್ಲೂರಿನ ಪಾದಿರಾಜನು (ಭೀಮನ ಮಗ ಮಾಧವ) ಬರೆದ ಹಾಗೆ ತಿಳಿಯುತ್ತದೆ.

ಇದು ಚಂಪೂ ರೂಪವಾದುದು. ಆಶ್ವಾಸ ೧೪. ಇದರಲ್ಲಿ ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತ್ರೆಯು ವರ್ಣಿತವಾಗಿದೆ. ಗ್ರಂಥಾದಿಯಲ್ಲಿ ಪುಷ್ಪದಂತ ಜಿನಸ್ತುತಿಯೂ ಮತ್ತು ಸಿದ್ಧಾದಿಗಳು ಸರಸ್ವತಿ ಯಕ್ಷಯಕ್ಷಿಯರು, ಅನುಬದ್ಧ ಕೇವಲ ಶ್ರುತಕೇವಲ ದಶ ಪೂರ್ವಿಗಳು ಏಕಾದಶಾಂಗಧಾರಿಗಳು, ಆಚಾರಾಂಗಧರರು ಕೊಂಡ ಕುಂದಾಚಾರ್ಯರಿಂದ ಮುನಿಚಂದ್ರದೇವರ ವರೆಗೆ ಗುರುಗಳು ಇವರ ಸ್ತುತಿಯೂ ಇವೆ. ಬಳಿಕ ಕವಿ ಗುಣವರ್ಮ (2 ನೆಯ ಗುಣವರ್ಮ) ಗುಣವರ್ಮ ಪಂಪ ಪೊನ್ನ ರನ್ನ ಅಗ್ಗಳ ನಾಗವರ್ಮ ನೇಮಿಚಂದ್ರ, ಜನ್ನ, ನಾಗಚಂದ್ರ ಮುಂತಾದ ಪೂರ್ವ ಕವಿಗಳನ್ನು ಸ್ಮರಿಸಿ, ತನ್ನ ಪೋಷಕನಾದ ನಾಟ್ಪ್ರಭು ಶಾಂತಿವರ್ಮನನ್ನು ವಿಶೇಷವಾಗಿ ಹೊಗಳಿ ಕಥೆಯನ್ನು ಆರಂಭಿಸುತ್ತಾನೆ. ಕವಿಗೆ ಕವಿ ತಿಲಕ, ಕಾವ್ಯಸತ್ಕಳಾರ್ಣವ ಮೃಗಲಕ್ಷ್ಮಮುಂತಾದ ಬಿರುದುಗಳಿದ್ದಂತೆ ಗೊತ್ತಾಗುತ್ತದೆ. ಈತನ ಗುರು ಮುನಿಚಂದ್ರ ಪಂಡಿತದೇವನು. 'ಮುನಿಚಂದ್ರ ಪಂಡಿತದೇವರ್ ಗುರುವಾಗೆ ತನಗೆ ಕವಿತೆ ಬಂದುದು' ಎಂದು ಹೇಳಿದ್ದಾನೆ. ಈತನು ತನ್ನ ತಾಯ್ತಂದೆ, ಸ್ಥಳ ಮುಂತಾದ ವಿಷಯಗಳನ್ನು ಹೇಳಿಲ್ಲ. ಈತನ ಕಾಲವು ಸು. ೧೨೩೫ (ಕ್ರಿ.ಶ.) ಎಂದು ಕವಿಚರಿತ್ರಕಾರರು ಬರೆಯುತ್ತಾರೆ. ಉಳಿದ ವಿಷಯಗಳನ್ನು ಮೇಲೆ ಉದಾಹೃತ ಭಾಗಗಳಿಂದಲೂ, ಕವಿಚರಿತ್ರೆ (ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ ವಿರಚಿತ) ಪ್ರಥಮ ಭಾಗ ೨೯೫ ನೆಯ ಪುಟದಿಂದಲೂ ತಿಳಿಯುವುದು.

No. 388. ಪೂಜ್ಯಪಾದ ಚರಿತ್ರೆ.
PŪJYAPĀDACARITRE.

Substance, palm-leaf. Size, $12\frac{7}{8} \times 1\frac{5}{8}$ inches. Pages, 314. Lines, 6 on a page. Character, Kanarese. Condition, much injured. Appearance, old.

Complete.

Deals with the life of Pūjyapāda; The author is Padmarāja who wrote this in the Śaka year 1714 (A.D. 1792) with the assistance of Dēvacandra. For particulars regarding the author see extracts given below.

Beginning:

ಭಾ॥ ಷ॥ ಶ್ರೀಸುರೋರಗ ಮರ್ತ್ಯಮಕುಟಾ ।
ವಾಸ ಮಣಿಗಣ ರತ್ನಕೀಲಿತ ।
ಭಾಸುರೋಜ್ವಲಕಿರಣ ಜೀವಿತಧಾತಪದಯುಗಳ ॥

ಭೂಸುರಾರ್ಚಿತ ಮೋಕ್ಷ ಲಕ್ಷ್ಮಿಗ ।
ಧೀಶ ವಿಜಯ ಜಿ । (?)
ನೇಶ ಪಾಲಿಸು ನಿರಘನಿತ್ಯಾನಂದ ಸಂಪದವ ॥

ಸಾಂ॥ ಅತಿಮಮತೆಯೊ[ಳ್] (ೞ್ಯು)ತಿಪತಿಯ ಕೃತಿಯ ಪೇೞ್ವೆ ।
ಮತಿವಂತರಿರದೆ ಲಾಲಿಪುದು ॥ ಪ ॥

ಶ್ರೀಸುಮನಸ ಮಾನುಷಭೋಗೇಶ್ವರ ।
ಭಾಸುರಮಕುಟ ಪಙ್ತಿಯೊಳು ॥
ಲೇಸಾಗಿ ಮೆರೆವ ಶ್ರೀವಿಜಯಜಿನರ ಪಾದ ।
ಕೇಸಡಿಗಳಗೆಱಗುವೆನು ॥
ಹೊದ್ದಿದ ಕರ್ಮಾಷ್ಟಕವ ಕೆಡಿಸಿ ಬೇಗ ।
ಶುದ್ಧಗುಣಗಳೆಂಟ ಪಡೆದು ॥
ಸಿದ್ಧಲೋಕದ ಮಸ್ತಕಾಗ್ರದೊಳೊಪ್ಪುವ ।
ಸಿದ್ಧರಿಗಾನೆಱಗುವೆನು ॥

* * *

ಕವಿಕುಲತಿಲಕ ಪಂಪನು ರನ್ನ ಜ[ಂನೊ] (ನ್ನಿ)ಗ ।
ಸುವಿವೇಕಿ ಸುಜನಮನೋಜ ॥
ಇವರು ಮುಂತಾಗಿ ಧರೆಯೊಳು ಕನ್ನಡ ಜಿನ ।
ಕವಿಗಳಗಾನೆಱಗುವೆನು ॥

* * *

ಅಂಬರ ಕಾಂತಿಸ್ವರೂಪ ವಿಮಲಗುಣ ।
ತುಂಬಿದಮೃತ(ದ) ಕಡಲಂತೆ ॥
ಬಿಂಬಿಸು ತೆನ್ನಂತರಂಗದೊಳಿರುವ ಚಿ ।
ದಂಬರಪುರುಷನ ನೆನೆದು ॥
ಚಿತ್ತಜಹರ ಪೂಜ್ಯಪಾದ ಮುನೀಶನ ।
ವೃತ್ತಾಂತವ ಪೇೞುವೆನು ॥
ಚಿತ್ತಕ್ಕೆ ತಂದುಕೊಂಬುದು ಸದ್ಭವ್ಯರಿ ।
ದುತ್ತಮಕಥೆಯೆಂದು ತಿಳಿದು ॥
ಕೇೞದಷ್ಟಕೆ ಮನದೊಳಗೆ ಗ್ರಹಿಸಿ ನಾನು ।
ಹೇೞದೆನಯ್ಯ ಬಲ್ಲವರು ॥
ಕೇೞ ಸಂತಸದಿಂದ ತಾಳಿ ಮನದೊಳದ ।
ನೇೞಗೆ ಮಾಡಿಳೆಯೊಳಗೆ ॥

* * *

ಸಿದ್ಧರಸವನುರೆ ಮಾಡಿ ಜಗದೊಳು ಪ್ರ ।
ಸಿದ್ಧಿವಡೆದ ಮುನಿಕಥೆಯ ॥
ಬುದ್ಧಿಯೊಳರಿದಷ್ಟ ಪೇೞ್ವೆನೀ ಕೃತಿಯನು ।
ಬದ್ಧ ಕರ್ಮವು ಕೆಡಲೆಂದು ॥

ಕೀರ್ತಿಲಾಭವು ಪೂಜ್ಯಗಳನು ಬಯಸಿನಾನು ।
ಅರ್ಥಿಯಿಂ ಪೇೞಿದುದಲ್ಲ ॥
[ಸ್ವಾರ್ಥವಾಗಲಿ ಅನ] (ಸಾರ್ಥಕವಾಗೆ) ನ್ನ ಭವ ಕುಂದಲೆಂದು ನಾ ।
ಪ್ರಾರ್ಥಿಸಿಕೊಂಡು ಬೇೞುವೆನು ॥

ಕ್ಷಿತಿಯೊಳು ಜೈನಮತವನಾಚರಿಪರು ।
ಕೃತಿಯಾದ್ಯಂತವ ಕೇಳಿ ॥
ಯತಿರಾಯನ ಪುಣ್ಯಕಥೆಯೆಂದು ಮನಕೆ ಸಂ ।
ತ(ತ) [ಸ] (ಸುಖ) ವನಿರದೆ ಭಾವಿಪ್ಪುದು ॥

ಆದಿಮಧ್ಯಾಂತದೊಳಿರೆ ದೋಷಂಗಳ ।
ಭೇದಿಸಿ ತಿದ್ದಿ ಬಲ್ಲವರು ॥
ಮೇದಿನಿಯೊಳು ಮೆಱೆವಂತೆ ಮಾೞ್ಪುದು ಪೂಜ್ಯ ।
ಪಾದ ಮುನಿಯ ಚರಿತವನು ॥

* * * *

ದೇಶವ ಸಂಕ್ಷೇಪದಿಂ ಪೇೞಿ ಕಾಲದ ।
ರಾಶಿಯ ಪೇೞ್ವೆ ಸ್ವಲ್ಪದೊಳು ॥
ದೇಶಕಾಲವು ಅನಾದಿನೀವನ ಮತ್ತೆ । (?)
ಭೂಸುರ ವಂಶವನಾದಿ ॥

ದಶಕೋಟಿ ಕೋಟಿ ಸಮುದ್ರೋಪಸ್ಥಿತಿಯುನಾಂ ।
ತೆಸೆವವಸರ್ಪಿಣಿಯೊಳಗೆ ॥
ಒಸೆದುದುಷ್ಷಮ ನಾಮಪಂಚಮ ಕಲಿಯುಗ ।
ಪಸರಿಪ ಶಕನ ಕಾಲದೊಳು ॥

ಅಂಬುಧಿಸೋಮ ಶೈಲೇಕ ಸಂದಿರಲಾ ।
ಗಿಂಬಾದ ಪರೀಧಾವಿ ನಾಮ ॥
ವೆಂಬ ಸಂವತ್ಸರದಾಶ್ವೀಜ ಪೂರ್ವದ ।
ತುಂಬಿದ ಪಂಚಮಿಯೊಳಗೆ ॥

ಪ್ರೀತಿಯೋಗವು ಮೈತ್ರತಾರೆ ಕೂಡಿರೆ ।
ಮತ್ತಾ ಶುಕ್ರವಾರದ ಮೊದಲಾ ।
ಸಾತಿಶಯದ ಸಪ್ತನಾಡಿ ತುಲಾಲಗ್ನ ।
ಕೋತಿರೆ ಗುರುವದಱೊಳಗೆ ॥
ಭಾಸುರ ಪಂಚಾಂಗ ಶುದ್ಧಿಯ ದಿನದೊಳ ।
ಗೀ ಸತ್ಕಥೆಯ ಪೇೞಿದೆನು ॥
ದೇಶಕಾಲವ ಬೇೞಿ ಕಥಕನ ವಂಶವಿ ।
ಲಾಸವ ಪೇೞ್ವೆನಿಂತೆಂದು ॥
ಗಿರಿಪುರ ದೊಳಗಿರ್ಪ ಸಕಲಸಂಪತ್ತಿಗಾ ।
ಭರಣವೆನಿಪ ವಿಪ್ರನೊರ್ವ ॥

ಸುರನಂತೆ ಸಕಲವೈಭವ ಚಲುವಿಕೆಯೊಳು ।
ಮೆರೆದಿಹನಾದ್ವಿಜವರನು ॥
ಶ್ರೀಪಾರ್ಶ್ವಜಿನಪನ ಪಾದವ ಸತತನಾ ।
ನೇ ಪೇಟಿಬ್ವೆ ನತಿಭಕ್ತಿಯಿಂದ ॥

ಭಾವಿಸೆ ಪೂಜಿಪ ದೇವೇಂದ್ರನೆಂಬಂ ।
ತಾ ಪರಿಯೇನ ಬಣ್ಣಿಪೆನು ॥
ವರಶಾಸ್ತ್ರವೆಂಬ ತಾವರೆಗೆ ಭಾನುವಿನಂತೆ ॥
ಕರಣಿಕೋತ್ತಮ ಶಚಿವೇಂದ್ರ ॥ (?)

ಪರಮಾತ್ಮ ಧ್ಯಾನಸಂಪನ್ನ ಬೊಮ್ಮಣ್ಣನೆಂ ।
ಬುರುತರ ಸತ್ವಸಂಯುತನು ॥
ಆತನ ತನುಜರಪ್ರತಿಮರು ಧರ್ಮಾರ್ಥ ।
ಪ್ರೀತರವರೆ ಕಾಮಯುತರು ॥

ನಾತಪ್ಪ ಹುಚ್ಚಬೊಮ್ಮರಸ ದೇವರಸ ವಿ ।
ಖ್ಯಾತ ಬೊಮ್ಮರಸರೆಂದಿವರು ॥
ಒರ್ವನಿಂದ್ರನು ಜಿನರರ್ಚಿಸುತಿರ್ದನು ।
ಸಾರ್ವ್ವಕಾಲದಿ ಮತ್ತೆ ಸುತರು ॥

ಉರ್ವಿಗಗ್ಗಳರಪ್ಪರಿವರ ಸಂತಾನದಿ ।
ಸಾರ್ವ್ವದು ನಾಲ್ವರೆಂದಿಂತು ॥
ನೀತಿಕೋವಿದ ಕವಿತಾಮನೋಹರ ವಿ ।
ಖ್ಯಾತ ಕರಣಿಕರ ಶಿರದ ॥

ನೂತನ ರತ್ನನೆನಿಸಿ ಮೆರೆದನು ಸಮ ।
ನಾತನಸ್ತುತಿ [ವಿಂಧ್ಯ] (ನಿತ್ಯ)ದಲಿ ॥
ವಿಪ್ರಕುಲೋತ್ತಮ ಬೊಮ್ಮರಸಸುತ ।
ಸುಪ್ರಸಿದ್ಧನು ವಿಜಯಪ್ಪ ॥
ನಪ್ರತಿಮನು ಗುಣಯುಕ್ತನಾತನ ಸೂನು ।
ನಿಪ್ರಪಂಚನು ಬೊಮ್ಮರಸ ॥
ಆತನ ತನುಜ ವಿಜಯವಿಪ್ರನಾತನ ।
ಪ್ರೀತಿಯ ಸುತನು ದೇವಯ್ಯ ॥
ನೂತನ ಗುಣಿ ಸಕಲಾಗಮ ಕೋವಿದ ।
ನಾತಗೆ ಯೊಬ್ಬನೆ ಮಗನು ॥
ಪುಟ್ಟಿ ತ್ರಯೋದಶ ವರುಷಕ್ಕೆ ತನಗ ।
ರಿಷ್ಟವೆಂದಱಿದು ಮತ್ತವಗೆ ॥
ಅಷ್ಟರೊಳಗೆ ಕಾವ್ಯಶಬ್ದ ಜನೇಂದ್ರ ಪ್ರ ।
ತಿಷ್ಟಾದಿಶಾಸ್ತ್ರವನಱಿವ ॥

ಬಲ್ಲಿದನೆನಿಸಿ ಆರ್ಯಪ ಸರ್ವಶಾಸ್ತ್ರದಿ ।
ಸಲ್ಲಲು ಕೆಲವಾನುದಿವಸ ॥
ನಿಲ್ಲದೆ ಬಂದು ಜನಿಸಿದನು ವಿಜಯಪ್ಪ ।
ಎಲ್ಲಶಾಸ್ತ್ರದಿ ತಾತನಂತೆ ॥
ಆತನ ಕಿರಿಯುವ ದೇವರಸನು ಅಂತೆ ।
ನೂತನಗುಣಿ ಬೊಮ್ಮರಸ ॥
ಭೀತನು ಪಾಪಕ್ಕೆ ದೇವಚಂದ್ರನು ಕಿರಿ ।
ಯಾತನು ಯಿವನ ಗರ್ಭದೊಳು ॥
ಲೆಕ್ಕಿಸಲ್ಕೈವರು ಮಕ್ಕಳು ಕಿರಿಯುವ ।
ನಕ್ಕು ಸುರನು ದ್ವಿಜನ್ಮದೊಳು ॥
ಕಕ್ಕುಲತೆಯು ಮನನಲ್ಲವಾತಗೆ ನಾಮ ।
ಸಿಕ್ಕಿತು ದೇವಪ್ಪನೆಂದು ॥
ಅಪ್ಪನೆಂದುಸುರಿದನೆನಬೇಡ ಅವನೊಳು ।
ಗಿಪ್ಪವು ವೆಗ್ಗಳಗುಣವು ॥
ಮುಪ್ಪಿನೊಳಗೆ ಜಿನಪಾದದ ಧ್ಯಾನದಿ ।
ತೆಪ್ಪನೆ ಸ್ವರ್ಗವೆಯ್ದಿದನು ॥
ಕ್ರೂರಮಾನುಷನೊರ್ವ ಕಪಟವಮಾಯುವ ಮಾಡೆ ।
ಪೂರೈಸಿ ಅನಮನದಿ ॥ (?)
ಆರಯ್ಯದೆ ಬಿದ್ದು ಸಾಲ್ಕೈದಾಳುದ್ದದಿಂ ॥
ದೋರಂತೆಯಾರಂತೊಳಗುರುಳಿ ॥
ಕಿಂಚಿತ್ತುನೋವಾಗದೆ ಪೂರ್ವಪುಣ್ಯದ ।
ಸಂತತಿಫಲದಿಂದವನು ॥
ಮಂಚವಮಾಡಿ ಸ್ವರ್ಗದಿ ಜ್ಞಾನದಿಂದೆಲು ।
ಚಿಂತೆಯಿಲ್ಲದೆ ಪೋದನವಗೆ ॥
ಶ್ರೀವತ್ಸ [ವ್ಯ] (ಋ)ಷಿಯ ಶಿಷ್ಯದ್ವಿಜಸಂತಾನ ।
ಶ್ರೀವತ್ಸಗೋತ್ರೋದ್ಭವನು ॥
ಭೂವಳಯದೊಳು ವರ್ತಿಪ ಸೂರ್ಯವಂಶವು ।
ದೇವಯ್ಯವೆಂಬ ಭೂಸುರಗೆ ॥
ಕುಸುಮಮ್ಮನೆಂದೊಪ್ಪುತಿಹಳು ಜಿನಾಗಮ ।
ವುಸುರಲು ಮೇಘನಾದವನು ॥
ಪೊಸತಾಗಿ ಕೇಳದ ನವಿಲಿನಂದದಿ ದಿವ್ಯ ।
ರೂಷವಾಂತು ಕೇಳುವಳೊಲಿದು ॥
ಆಕೆಯ ಗರ್ಭದೊಳಗೆ ಪುಟ್ಟಿದನು ವಿ ।
ಖ್ಯಾತನು ಜಿನಭಕ್ತಿಯೊಳಗೆ ॥ (?)
ಏಕಾಂತದೊಳು ಸಮ್ಯಕ್ತ್ವವುಳ್ಳನು ನಾಮ ।
ಸ್ವೀಕರಿಸಿತು ಚಂದ್ರಜಿನನ ॥

ಚಂದಯ್ಯಾನಿಂ ತಿರಿಯುವ ಪದ್ಮರಾಜನೀ ।
ಅಂದವಡದ ಮುನಿಕಥೆಯು ॥
ಸಂದ ಭಕ್ತಿಗೊಳೊರೆಯುತ್ತಿರೆ ದೇವ ।
ಚಂದ್ರನೂ ಸಹ ಪೇಳಿದನು ॥
ಕಥೆಯು ಪೇಳಿವರೇನು ಕಾಣದೆ ನನ್ನಯು ।
ಕಥೆಯು ಪೇಳಿದನೆನ್ನಬೇಡ ॥
ಕಥೆಯ ಪೇಳುವೆ ಮುಂದೆ ಚೆನ್ನಾಗಿ ಲಾಲಿಸಿ ।
ಸತತ ನಿರ್ಜರಸುಖವಹುದು ॥
ಮೂಲಶಾಸ್ತ್ರನು ಶಾಸ್ತ್ರದೊಳದ್ದರ್ಥವ ।
ಸಾಲಾಗಿ ತಂದು ಸೇರಿಸುವೆ ॥
ಪಾಲಿಪ ಧರ್ಮಶಾಸ್ತ್ರಾಗಮಸಾರರ ।
ಲೋಲ ಕಥೆಯು ಪೇಳುವೆನು ॥
ಕಾಲದ ಸ್ಥಿತಿ ಲೋಕದಿರ ಕರ್ಮಬಂಧದ । (?)
ಕೇಲು ಮುಂತಾಗಿ ಜೀವಗಳ ॥
ಮಾಲೆಗಳೆಲ್ಲವ ಪೇಳಿತೆ ಮೊದಲು ಧರ್ಮ ।
ಶೀಲರಿರದೆ ಲಾಲಿಪುದು ॥
ಲೋಕವೆಂತಿಹುದು ನಾರಕಸ್ವರ್ಗದಿರವೆಂತು ।
ಬೇಕಾದ ಶಿವಪದವೆಲ್ಲಿ ॥
ಏಕೆಮ್ಮ ಮನಕೆ ತಿಳಿಯದೆಂಬ ಮನುಜರ್ಗೆ ।
ನಾ ಕನ್ನಡದೊಳುಸುರುವೆನು ॥
ಅನ್ಯಚಿತ್ತವ ಬಿಟ್ಟು ಏಕಮಾನಸನಾಗಿ ।
ಚೆನ್ನಾಗಿ ಲಾಲಿಸಬೇಕು ॥
ಮುನ್ನ ಜಿನೇಂದ್ರನ ಮುಖಪದ್ಮದೊಳು ಪುಟ್ಟ ।
ದುನ್ನತವಾಕ್ಯ ಕೇಳುವುದು ॥

Colophon :

ಅತಿಶಯದಿಂದಿಷ್ಟದೇವರ ವಂದನೋ ।
ನ್ನತಿ ಸುಜನರಗುಣ ಮತ್ತೆ ॥
ಕೃತಿಯು ಪೇಳಿದನ ವೃತ್ತಾಂತಗಳಲ್ಲಿಗೆ ।
ಪ್ರಥಮವೃತ್ತಾಂತದ ಸಂಧಿ ॥
ಇದು ಜಿನಪದ ಶರನಿಧಿ ಸಂಪೂರ್ಣೇಂದು ।
ವಿದು ಭವ್ಯಜನರಿಗಾನಂದ ॥
ಮುದವೀವ ಪೂಜ್ಯಪಾದಸ್ವಾಮಿ ಕೃತಿಯೊಳ ।
ಗಿದು ಮೊದಲಿನದೊಂದು ಸಂಧಿ ॥
ಲೋಕದೊಳುಳ್ಳ ಚರಾಚರದ್ರವ್ಯವ ।
ನೀಕಂಡು ಭವ್ಯರ್ಗೆ ಪೇಳ್ವ ॥
ಬೇಕಾದ ಸುಖವೀವ ಶ್ರೀಪಾರ್ಶ್ವಜಿನನಾಥ ।
ನೇ ಕೊಡೆನಗೆ ಸನ್ಮತಿಯ ॥

ಪ್ರಥಮ ಸಂಧಿ ೧ ಕ್ಕಂ ಪದನು ೧೨೭ (?) ಕ್ಕಂ ಜಯಮಂಗಳ ಮಹಾಶ್ರೀ.

ಭಾ ॥ ಷ ॥ ಕಳದು ದುರ್ಮೋಹಾಂಧಕಾರವ ।
ತಿಳಿದು ತತ್ವದ ಮಾರ್ಗವೆಲ್ಲವ ।
ತಳೆದು ಮನದೊಳು ಶಾಂತಭಾವವನಿಳೆಗೆ ಪೊಸತೆನಿಸಿ ॥
ಅಳಿದು ಧರ್ಮವನೊಳಗೆ ಭೇದಿಸಿ ।
ಕಳೆದು ಕರ್ಮವ ದಾಂಟಿ ಮೋಕ್ಷದೊ ।
ಳೊಳೆವ ಬುದ್ಧಿಯನಾಂತ ವೀ (ರ) ಜಿನೇಶ ! ಸಲಹೆನ್ನ ॥
ರಾಂ ॥ ಗಣನೆಯಿಲ್ಲದ ಸಿರಿ ವೀರ್ಯಸುಜ್ಞಾನವ ।
ನೆಣಿಸಬಾರದು ನಿನ್ನ ಸೊಬಗ ॥
ಅನಿತಿನಿತೆಂದು ನುಡಿಯಲರಿಯೆನು ಯೆನ್ನ ।
ಮನವ ಬೆಳಗು ಪಾರ್ಶ್ವೇಶ ॥
ಲೋಕದಿರವ ಕಾಲದಿರವನೆಲ್ಲವ ಪೇಳ್ವೆ ।
ಏಕಚಿತ್ತದೊಳು ಲಾಲಿಪುದು ॥
ಲೋಕದ ನೆಲೆಯು ತಾನೆಂತಿಹುದೆನೆ ।
ಬೇಕಾದಸಂಖ್ಯಾತಮುರ್ವಿ ॥

End:

ಪರಮಶಕ್ತಿಯನತಿ ಕ್ರಮಿಸದೆಯುಪವಾಸ ।
ವಿರತಿರ್ದು-ಅನುಪ್ರೇಕ್ಷೆಗಳ ॥
ಅರಿದು ಲೋಕಾಗ್ರದ ಚಿಂತನೆಯಿಂದ ಲು ।
ಯಿರದೆ ಸಮಾಧಿವಡೆದನು ॥
ನಿಮಿಷಮಾತ್ರದಿ ತನುವನು ಬಿಟ್ಟು ಪೋದನು ।
ವಿಮಲಸನ್ಯಸನ ಫಲಕೆ ॥
ಅಮರಿದ ಗತಿಗೆಯ್ದಿದ ಪೂಜ್ಯಪಾದನು ।
ಕುಮತಾಂಧಕಾರ ಚಂದ್ರಮನು ॥

Colophon:

ಇದು ಜಿನಮತಶರನಿಧಿ ಸಂಪೂರ್ಣೇಂದು ।
ಇದು ಭವ್ಯಜನರಿಗಾನಂದ ॥
ಮುದಯಿಪ ಪೂಜ್ಯಪಾದೇಂದ್ರನ ಚರಿತದೊ।
ಳಿದು ಪಂಚಾದಶ ಸಂಧಿ ॥
ಖಂಡಮನ್ಮಥಬಾಣ ತುಂಡ ಕೋಪಮಾನಲ ।
ಕುಂಡ ದುಷ್ಕರ್ಮಪ್ರಚಂಡ ॥
ದಂಡಧರನ ಭಯನಾಶನ ಮತಿದೋರು ।
ಮುಂಡೆ ಬಾಗುವೆ ಪಾರಿಶ್ವೇಶ ॥
ಅತಿಶಯ ಪ್ರಥಮವೃತ್ತಾಂತ ಬಳಿಕ ಲೋಕ ।
ಸ್ಥಿತಿಕ್ರದದವತಾರಪುರದ ॥ (?)
ವಿತತವರ್ಣನೆ ಧರ್ಮೋಪದೇಶವು ಮತ್ತೆ ।
ವ್ರತಿಕರನೆಲೆಯು ಸುಸಂಧಿ ॥

ಜನನವು ಪೂಜ್ಯಪಾದನ ತಂಗಿ ಮಂಗಲ ।
ವಿನುತಶೌಚಾಚಾರ ಬಳಿಕ ॥
ಜನಯುಜನವು ದೀಕ್ಷೆವಿದ್ಯಾರ್ಥಿ ಪದ್ಮಿನಿ ।
ಘನವರವಿತ್ತ ಸುಸಂಧಿ ॥

ಅಡಿಗಳಲೇಶದಿಂ ಪೂಜ್ಯಪಾದೇಂದ್ರನು ।
ನಡೆದುದು ಪೂಜ್ಯದೇಹಕ್ಕೆ ॥

. . . ಸಂಧಿಯು ಪೂಜ್ಯಪಾದಸುಗತಿ ಪ್ರಾಪ್ತ ।
ನುಡಿಯೆ ಪಂಚಾದಶ ಸಂಧಿ ॥

ಮಂಗಲಮಹಿಮ ಮಾಂಗಲ್ಯವರ್ಧನ ಭು ।
ಜಂಗಭೂಷಣ ಮರಕತದ ॥

ಅಂಗನೆ ಮತಿದೋರಿ ರಕ್ಷಿಪುದೆನ್ನನು ।
ಶೃಂಗಾರಯುತ ಪಾರ್ಶ್ವಜಿನಪ ॥

ಮ॥ ವಿ॥ ಉರಗಾಧೀಶನ ಭೋಗಮುಂ ಭರತಚಕ್ರಾಧೀಶನೈಶ್ವರ್ಯಮುಂ ।
ಸುರರಾಜೋನ್ನತಿಯುಂ ವಿಚಾರಿಪೊಡೆ ವಿದ್ಯುಲ್ಲೇಖೆ ಶುಭ್ರಾಭ್ರದೇ ।
ಳ್ತರಮಾಖಂಡಲಚಾಪವೆಂಬ ಬಗೆಯಂ ಮಚ್ಚಿತ್ತದೊಳ್ಮಾಡಿ ಸು ।
ಸ್ಥಿರನಾನಂದ ವಿಭೂತಿಯೊಳ್ ನಿ[ನೆ] (ಲೆ) ಸುಗೇಂ ಶ್ರೀಪಾರ್ಶ್ವತೀರ್ಥೇಶ್ವರಾ ॥
ಮ॥ ಸ್ರ॥ ವಡಬಾಗ್ನಿಜ್ವಾಲೆಗಂ ವಾರಿಧಿಮೃಗಪತಿಗಂ ವಾರಣಂ, ರಾಹುವಂ ಕಂ ।
ಡಡೆಯೊಳ್ ಕ್ಷತ್ರಾಧಿನಾಥಂ, ಗುಡುಗುಡಿಸುತ ಕಾರ್ಗಾಲಕಂ ಹಂಸೆ, ಪೆಣ್ಣ ।
ರ್ದಡೆಗಂ ಯೋಗೀಶ್ವರಂ, ಸಂಪಗೆಗೆ ಮಧುಕರಂ, ಬೆಚ್ಚುವಂತಂತೆಯೆನ್ನೊ ।
ಳ್ಗಡುಕಂ ಪುಟ್ಟಿತ್ತು ನೀನಲ್ಲದೆಯುಳಿದಳದೈವಂಗಳೊಳ್ ಪಾರ್ಶ್ವನಾಥಾ ॥
ಕರುಣಾಲಂಕಾರ ಚೇತ (೦) ವರಮುನಿಪದಪಂಕೇಜಸೇವಾನುಭೃ(೦)ಗ(೦) ।
ಸ್ಮರಬಾಣಧ್ವಂಸಿಯುಪ್ಪಾಜಿನಪತಿನುತಿಯಂ ತನ್ನವಾಕ್ಯೋಪಹಾರಂ ॥
ಸ್ಫುರಿಸಲ್ ಶ್ರೀವತ್ಸಗೋತ್ರದ್ವಿಜನತಿಮುದದಿಂ ಪೇಟಿನ್ ಸೌಖ್ಯಂಗಳಂ ವಾ ।
ಬಿಕ್ಕಿರದೀ ಭವ್ಯರ್ಗೆ ಸೇವ್ಯಂ ಕನಕಗಿರಿ ಪರಾಧೀಶ್ವರಂ ಪಾರ್ಶ್ವನಾಥಂ ॥

ಅಂತು ಸಂಧಿ ೧೫ ಕ್ಕಂ ೧೯೩೦ ಸಾವಿರದೊಂಬೈನೂರ ಮೂವತ್ತೊಂಬತ್ತಕ್ಕಂ (?) ಮಂಗಳ ಮಹಾಶ್ರೀ.

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಲಿಪಿ ಉತ್ತಮ.

ಇದು ಸಾಂಗತ್ಯರೂಪವಾದುದು. ಇದರಲ್ಲಿ ಪ್ರಥಮ ವೃತ್ತಾಂತ. ಲೋಕಾವತಾರ, ಶ್ರುತಾವತಾರ, ಪುರವರ್ಣನೆ, ಧರ್ಮೋಪದೇಶ, ವ್ರತೋಪದೇಶ, ಪೂಜ್ಯಪಾದ ಜನನ, ಕಮಲಿನೀಗುಣ ಭಟ್ಟರ ವಿವಾಹ, ಶೌಚಾಚಾರ, ಪೂಜೆ, ಪೂಜ್ಯಪಾದ ದೀಕ್ಷಾಗ್ರಹಣ, ವಿದ್ಯಾತೀರ್ಥತಪೋಮಹಿಮೆ, ಪದ್ಮಾವತಿ ನಾಗಾರ್ಜುನನಿಗೆ ವರವನ್ನು ಕೊಟ್ಟುದು, ಗಗನಗಾಮಿ ನೀಲೇಪದಿಂದ ಪೂಜ್ಯಪಾದನು ಪೂರ್ವವಿದೇಹಕ್ಕೆ ಹೋದುದು, ಪೂಜ್ಯಪಾದನು ಸುಗತಿಪ್ರಾಪ್ತನಾದುದು ಎಂಬುದಾಗಿ ಹದಿನೈದು ಸಂಧಿಗಳಿರುವುವು. ಪ್ರತಿ ಸಂಧಿಯ ಮೊದಲು ಒಂದೊಂದು ಭಾಮಿನಿ ಷಟ್ಪದಿಯೂ, ಕಡೆಯಲ್ಲಿ ಒಂದೆರಡು ಕಂದ, ವೃತ್ತಗಳೂ ಸಹ ಇರುವುವು. ಗ್ರಂಥದಾದಿಯಲ್ಲಿ

ಜಿನಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳು, ಶಾರದೆ, ವೃಷಭಸೇನರಿಂದ ಗೌತಮರವರೆಗಿರುವ ಋಷಿಗಳು, ವಿಶ್ವೇಶ್ವರಿ, ದ್ವಾದಶ ಕಲ್ಪೇಂದ್ರರು, ಯಕ್ಷಯಕ್ಷಿಗಳು, ಪದ್ಮಾವತಿ, ಕವಿಪರಮೇಷ್ಠಿ, ಸಮಂತಭದ್ರ, ಜಿನಸೇನ, ಭೂತಬಲಿ, ಪುಷ್ಪದಂತ, ವೀರಸೇನ, ವಿಷ್ಣುವರ್ಣಿ, ದೇವಕೀರ್ತಿ, ಅಕಲಂಕಪಂಡಿತಯತಿ, ವಿದ್ಯಾನಂದ, ಭಟ್ಟಾಕಳಂಕ, ಪಂಪ, ಹೊನ್ನ ಜನ್ನಮುಂತಾದವರನ್ನು ಸ್ತುತಿಸಿ, ಈ ಕಥೆಯನ್ನು ಕೀರ್ತಿಲಾಭಾದಿಗಳ ಬಯಕೆಯಿಂದ ಹೇಳುವುದಿಲ್ಲ ತನ್ನ ಭವವು ಕುಂದಲೆಂದು ಹೇಳುವೆನೆಂದು ಹೇಳಿದ್ದಾನೆ ತನ್ನ ವಿಷಯವಾಗಿ ಹೀಗೆ ಹೇಳಿದ್ದಾನೆ. ಭರತಕ್ಷೇತ್ರದ ಆರ್ಯಾಖಂಡದ ಕರ್ಣಾಟಕದೇಶದ ಮಧ್ಯದಲ್ಲಿ ಕನಕಗಿರಿಯಿರುವುದು. ಆಗಿರಿಮಧ್ಯದಲ್ಲಿ ಮುಗಿಲನ್ನು ಮುಟ್ಟುತ್ತಿರುವ ಕಲ್ಲಿನ ಕಂಬವೊಂದಿದೆ. ಆ ಕಂಬದ ಮಧ್ಯದಲ್ಲಿ (ಮೇಲ್ಭಾಗದಲ್ಲಿ) ಎರಡು ಗೋಡೆಗಳ ಪ್ರಾಕಾರದೊಳಗೆ ಪಾರ್ಶ್ವನಾಥ ಜಿನಾಲಯವಿದೆ. ದೇವರಿರುವ ಸ್ಥಳದಲ್ಲಿ ದೊಡ್ಡ ಶಿಖರವಿದೆ. ಆ ಜಿನಾಲಯದ ಪೂರ್ವದಿಕ್ಕಿನಲ್ಲಿ ಗಿರಿಯಾ ಹೆಸರಿನ ಊರೊಂ(ಗಿರಿಪುರ)ದಿದೆ. ಅದಕ್ಕೆ ಎರಡು ಸುತ್ತುಕೋಟೆಯಿದೆ ಕಡೆಯ ಕೋಟೆಯಲ್ಲಿ ಶೂದ್ರದಿರುವರು. ಊರಜನರೆಲ್ಲರೂ ಜಿನಭಕ್ತರು. ಒಳಕೋಟೆಯಲ್ಲಿ ಕೆಲವರು ಲಿಂಗಧರರಿರುವರು. ಅಂಕದ ಬಾಗಿಲಲ್ಲಿ ಆಳುದ್ದದ ಶಾಸನದ ಕಲ್ಲಿದೆ. ಬೆಟ್ಟವೆಲ್ಲ ಶಾಸನಮಯವಾಗಿದೆ, ವಿಜಯಪ್ಪ ಕಟ್ಟಿಸಿದ ವಿಜಯ ಸಮುದ್ರವೆಂಬ ಕೆರೆಯೊಂದಿದೆ. ಬಾವಿ, ಕೊಳ, ಪುಷ್ಕರಿಣಿ, ಕುಂಟೆ ಮುಂತಾದುವುಗಳಿಗೆ ಅಳವೇ ಇಲ್ಲ. ಆ ವೂರಲ್ಲಿ ಹೂವಿನ ತೋಟ ಮುಂತಾದವುಗಳು ಮತ್ತು ದನಗಳು ಹೆಚ್ಚಾಗಿವೆ. ಊರ ಮಧ್ಯದಲ್ಲಿ ಬ್ರಾಹ್ಮಣರ ಕೇರಿಯಿದೆ. ಅಲ್ಲೊಬ್ಬನು ಶ್ರಾವಕದ್ವಿಜನಿರುವನು. ಆತನ ಹೆಸರು ಬೊಮ್ಮಣ್ಣ. ಅವನಿಗೆ ಸಾತಪ್ಪ, ಹುಚ್ಚ ಬೊಮ್ಮರಸ, ದೇವರಸ, ಬೊಮ್ಮರಸರೆಂದು ನಾಲ್ವರು ಮಕ್ಕಳು. ಬೊಮ್ಮರಸನ ಮಗ ವಿಜಯಪ್ಪ, ಅವನ ಸುತ ಬೊಮ್ಮರಸ, ಅವನ ಕುಮಾರ ವಿಜಯವಿಪ್ರ, ಅವನ ತನುಜ ದೇವಯ್ಯ, ಅತನ ಕುಮಾರ ಆರ್ಯಪ. ಈತನು ಹುಟ್ಟಿದ ೧೪ ವರ್ಷಕ್ಕೆ ಗ್ರಂಥಾದಿಗಳಲ್ಲಿ ಪಾಂಡಿತ್ಯಹೊಂದಿದನು. ಈತನಿಗೆ ವಿಜಯಪ್ಪ, ದೇವರಸ, ಬೊಮ್ಮರಸ, ದೇವಚಂದ್ರರೆಂದು ನಾಲ್ವರು ಪುತ್ರರು. ದೇವಚಂದ್ರನಿಗೆ ಐವರು ಮಕ್ಕಳು ಕಿರಿಯವನು ದೇವಪ್ಪ (ದೇವಯ್ಯ). ಒಬ್ಬ ದುಷ್ಟನು ಕಪಟವನ್ನು ಮಾಡಿಸಲು ದೇವಪ್ಪನು ನಾಲ್ಕೈದಾಳುದ್ದದಿಂದ ಕೆಳಕ್ಕೆ ಬೀಳುವಾಗ ಅದೃಷ್ಟವಶದಿಂದ ಹೂವಿನ ಮೇಲುರುಳಲು ಸ್ವಲ್ಪವೂ ನೋವಾಗದೆ ಪೂರ್ವಸಂಚಿತ ಪುಣ್ಯದ ಫಲದಿಂದ 'ಮಂಚವಮಾಡಿ ಸ್ವರ್ಗದಿಜ್ಞಾನದಿಂದಲು ಚಿಂತೆಯಿಲ್ಲದೆ ಹೋದನು' ಶ್ರೀವತ್ಸಗೋತ್ರೋದ್ಭವನಾದ, ಸೂರ್ಯವಂಶಸ್ಥನಾದ ಈತನಿಗೆ ಕುಸುಮಮ್ಮನೆಂಬುವಳು ಹೆಂಡತಿ. ಇವರ ಮಕ್ಕಳು ಚಂದಯ್ಯ, ಪದ್ಮರಾಜ ದೇವಚಂದ್ರರು. ಪದ್ಮರಾಜನು ಈ ಮುನಿಕಥೆಯನ್ನು ಹೇಳುತ್ತಿರಲು ದೇವಚಂದ್ರನೂ ಸಹ ಕೇಳಿದನು. ಈ ಗ್ರಂಥವನ್ನು ಶಾ. ಶ. ೧೫೧೪ (ಕ್ರಿ. ಶ.) ೧೫೯೨ ನೆಯ ಪರಿಧಾವಿ ಸಂವತ್ಸರದ ಆಶ್ವಯುಜ ಶುದ್ಧ ಪಂಚಮಿ ಶುಕ್ರವಾರ ತುಲಾ ಲಗ್ನದಲ್ಲಿ ರಚಿಸಿದಂತೆ ಕವಿಯು ಹೇಳಿರುತ್ತಾನೆ.

ಕಥಾಗರ್ಭ.—ಕರ್ಣಾಟಕದೇಶದಲ್ಲಿ ಕೊಳ್ಳೇಗಾಲದಲ್ಲಿ ಮಾಧವ ಭಟ್ಟನೆಂಬ ಬ್ರಾಹ್ಮಣನಿರುವನು. ಅವನ ಹೆಂಡಿತಿ ಶ್ರೀದೇವಿ. ಆಕೆಯ ಗರ್ಭದಲ್ಲಿ ವರಶ್ರಾವಣ ಶುದ್ಧ ಪೌರ್ಣಿಮಾ ಚಂದ್ರವಾರ ಶ್ರವಣ ಕರ್ಕಾಟಕ ಲಗ್ನದಲ್ಲಿ ಪೂಜ್ಯಪಾದನು ಹುಟ್ಟಿದನು ಪೂಜ್ಯಪಾದನ ತಂಗಿ ಕಮಲಿನಿ. ಮಾಧವ ಭಟ್ಟನು ತನ್ನ ಸಹೋದರಿಯನ್ನು ಪಾಣಿನಿಗೆ ಕೊಟ್ಟು ಲಗ್ನಮಾಡಿದಂತೆಯೇ, ಆತನ ಮಗನೂ ತನ್ನ ಸೋದರಳಿಯನೂ ಆದ ಗುಣವರ್ಮನಿಗೆ ಕಮಲನಿಯನ್ನು ಮದುವೆಮಾಡಿದನು. ಸೋದರಳಿಯನ ಊರು ಮುಡಿಗುಂಡ ಕಮಲಿನಿಯ ಗರ್ಭದಲ್ಲಿ ನಾಗಾರ್ಜುನನು ಹುಟ್ಟಿದನು.

ಪೂಜ್ಯಪಾದನು ಜೈನಶಾಸ್ತ್ರದಲ್ಲಿ ಕೋವಿದನಾಗಿ ತಾಯ್ತಂದೆ, ತಂಗಿ, ಬಾವ ಮುಂತಾದ ಬಂಧುಜನರನ್ನು ನಾನಾವಿಧದಿಂದ ಹೇಳಿ ಒಪ್ಪಿಸಿ ಜೈನದೀಕ್ಷೆಯನ್ನು ತಾಳಿ ತಪಂಗೆಯ್ದು ತತ್ಫಲದಿಂದ ಸಕಲ ವಿದ್ಯೆಗಳನ್ನೂ ತಿಳಿದು ತ್ರೈವಿದ್ಯಚಕ್ರೇಶ್ವರನೆಂದು ಹೆಸರುಗೊಂಡನು. ಒಂದು ದಿನ ಈತನ ಸಂಚಾರಮಾರ್ಗದಲ್ಲಿ ಒಂದು ಘಟಸರ್ಪವು ರೋಷದಿಂ ಬರುತ್ತಿರುವಲ್ಲಿ ಅದನ್ನು ನೋಡಿ ತನ್ನ ಸೋದರ ಮಾವನಾದ ಪಾಣಿನ್ಯನೆಂದರಿತು ಮಿನಾಂಕ ಹರನಾಣೆಗೂ ವ್ಯಾಕರಣವನ್ನು ಮಾಡುವೆನೆಂದು ನಂಬಿಕೆಯನ್ನು ಹೇಳಿ ಅದನ್ನು ಸಮಾಧಾನಪಡಿಸಿ ತೆರಳಿ ಮರು ದೆವಸದಿಂದ ವ್ಯಾಕರಣವನ್ನು ಬರೆಯಲು ತೊಡಗಿದನು.

ಕಮಲಿನಿಯು ಪತಿವಿಯೋಗಾನಂತರದಲ್ಲಿ ಕಷ್ಟಕ್ಕೆ ಸಿಕ್ಕಲು, ಮಗನನ್ನು ಬ್ರಾಹ್ಮಣರ ಮನೆಯ ದನಗಳನ್ನು ಕಾಯುವಂತೆ ನಿಯಮಿಸಿ, ಅವರಿಂದ ಅನ್ನವನು ಬೇಡಿ ಭುಜಿಸುವಂತೆ ಹೇಳಿ ತಾನು ಕೂಲಿಯಿಂದ ಜೀವಿಸುತ್ತಿರಲು, ಕೊಳ್ಳೇಗಾಲಕ್ಕೆ ಬಂದ ಪೂಜ್ಯಪಾದ ಮುನಿಯನ್ನು ಕಂಡು ಪೂಜಿಸಿ ತನ್ನ ದಾರಿದ್ರ್ಯವನ್ನು ಹೇಳಿಕೊಳ್ಳಲಾಗಿ ಪೂಜ್ಯಪಾದ ಮುನಿಯು ಕೇಳಿ ಮರುಗಿದವನಾಗಿ ನಾಗಾರ್ಜುನನು ಊಟಮಾಡುವ ಬಟ್ಟಲನ್ನು ತರೆಸಿ ಮೂಲಿಕೆಯನ್ನು ತೊಡವಿ ಕೊಟ್ಟು ಬೆಂಕಿಯಲ್ಲಿ ಹಾಕಿಸಿ ಎರಡು ಜಾವ ಕಳೆದಮೇಲೆ ತೆಗೆದರೆ ಚಿನ್ನವಾಗುವುದೆಂದೂ, ಅದರಿಂದ ಆಕೆಯು ಜೀವನಮಾಡಿಕೊಂಡಿರುವುದೆಂದೂ ಹೇಳಿ ಹೋಗಲು, ದನಗಳನ್ನು ಹೊರೆದುಕೊಂಡು ಮನೆಗೆ ಹಿಂದಿರುಗಿದ ನಾಗಾರ್ಜುನನು ಊಟಮಾಡುವುದಕ್ಕಾಗಿ ತಾಯಿಯನ್ನು ಬಟ್ಟಲನ್ನು ಕೇಳಲು, ಆಕೆಯು ಬಟ್ಟಲಿನ ಯಾವದ್ವೃತ್ತಾಂತವನ್ನೂ ತಿಳಿಯಿಸಲು, ಅಗ್ನಿಯಲ್ಲಿ ಹಾಕಿದ್ದ ತಟ್ಟೆಯು ಒಂದು ಜಾವದಲ್ಲಿಯೇ ಕೆಂಪು ವರ್ಣಕ್ಕೆ ತಿರುಗಿದ್ದುದನ್ನು ಕಂಡು ತನ್ನ ಮಾವನಾದ ಪೂಜ್ಯಪಾದನು ಬಲ್ಲಿದನೆಂದರಿತು ಆತನಲ್ಲಿ ಗೌರವ ವಿಶ್ವಾಸಗಳನ್ನಿಟ್ಟು, ತಾನೂ ಆ ವಿದ್ಯವನ್ನು ಕಲಿಯಬೇಕೆಂಬ ಬಯಕೆಯಿಂದ ತೆರಳಿ ಪೂಜ್ಯಪಾದ ಮತ್ತು ಪದ್ಮಾವತಿ ದೇವಿಯರ ಅನುಗ್ರಹವನ್ನು ಸಂಪಾದಿಸಿದನು. ಇವನು ಚಿನ್ನವನ್ನು ಮಾಡುವುದನ್ನು ತಿಳಿದುಕೊಂಡು ಯಂತ್ರಮಂತ್ರಾದಿಗಳನ್ನು ಕಲ್ಪಿಸಿ ಕೀರ್ತಿವಂತನಾಗಿದ್ದು ಬಳಿಕ ಬುದ್ಧಿಗೆಟ್ಟು ಬಂಗಾರವನ್ನು ಮಾಡುವುದರಲ್ಲಿಯೇ ಅತ್ಯಾಸೆಯುಳ್ಳವನಾಗಿ ಬ್ರಾಹ್ಮಣರ ಮಾತನ್ನೂ ಲಕ್ಷ್ಯೈಕ್ಕೆತಾರದೆ, ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನ ಪ್ರತಿಷ್ಠೆಯನ್ನು ಮಾಡಿ ದೇಶದೇಶಗಳಲ್ಲಿ ಸಂಚರಿಸುತ್ತ ಚಿನ್ನವನ್ನು ಮಾಡತೊಡಗಲು ಬಂಗಾರವು ಅಗ್ಗವಾಗಿ ವೈಶ್ಯರ ವ್ಯಾಪಾರಕ್ಕೆ ಅಡ್ಡಿಯಾಗಲು ಅವರು ಈತನನ್ನು ಕೊಲ್ಲಲು ಯತ್ನಿಸಿ ತಮ್ಮಿಂದ ಸಾಧ್ಯವಾಗದಿರಲು ವೇಶ್ಯೆಯರನ್ನು ಪ್ರೇರಿಸಿ ಕಳುಹಿಸಲು, ಅವರು ನಾಗಾರ್ಜುನನಿರುವೆಡೆಗೆಯ್ದಿ ಆತನನ್ನು ತಮ್ಮ ಮೋಹಜಾಲದಲ್ಲಿ ಬೀಳಿಸಿ ಅವನ ಗುಟ್ಟನ್ನು ತಿಳಿದು ವಂಚಿಸಿ ಕೊಲ್ಲುವರು.

ಇತ್ತ ಪೂಜ್ಯಪಾದನು ಗಗನಗಾಮಿನಿಯೆಂಬ ಲೇಪವನ್ನು ಮಾಡಿ ತನ್ನ ಪಾದಕ್ಕೆ ಲೇಪಿಸಿಕೊಂಡು ಪೂರ್ವವಿದೇಹಕ್ಕೆ ತೆರಳಿ ಜಿನಪತಿಗಳನ್ನು ವಂದಿಸಿ, ಭರತಕ್ಷೇತ್ರಕ್ಕೆ ಹೋಗುವಾಗ ಸೂರ್ಯಕಿರಣದ ಉಷ್ಣದಿಂದ ದೃಷ್ಟಿಯು ಕೆಟ್ಟುಹೋಗಲು, ಬಂಕಾಪುರದಲ್ಲಿ ಶಾಂತೀಶ್ವರನನ್ನು ವಂದಿಸಿ ಶಾಂತ್ಯಷ್ಟಕವನ್ನು ಹೇಳಿ ದೃಷ್ಟಿಯನ್ನು ಪಡೆದು ತೀರ್ಥ ಸ್ಥಳಗಳಲ್ಲಿ ಸಂಚರಿಸಿ ಬಳಿಕ ಕೊಳ್ಳೇಗಾಲಕ್ಕೆ ಬಂದು ಜಿನಾಲಯದಲ್ಲಿ ಜಿನಪತಿಯನ್ನು ಪೂಜಿಸಿ ಅಲ್ಲಿಗೆ ದಕ್ಷಿಣಕ್ಕಿರುವ ನಾಕೋಪಮಾನ ಶೈಲಕ್ಕೆ ಏಕೋಪವಾಸದಿಂ ಬಂದು ಜಿನಪತಿಯನ್ನು ಬಲಗೊಂಡು ಇರುತ್ತಿರಲು, ತನ್ನ ಉಪದೇಶವನ್ನು ನಾಗಾರ್ಜುನನು ಸದ್ವರ್ತನೆಯಲ್ಲಿ ಉಪಯೋಗಿಸದೆ ಕೆಟ್ಟುಹೋದ ವೃತ್ತಾಂತವನ್ನರಿತು ಮನಸ್ಸಿನಲ್ಲಿ ಹೇಸಿ, ತಾನು ಪೂರ್ವವಿದೇಹದಿಂದ ಸಂಗ್ರಹಿಸಿ ತಂದ ಗ್ರಂಥಗಳನ್ನು ಶಿಷ್ಯರ್ಗೆ ಕೊಟ್ಟು ಸಮಾಧಿಪಡೆದು ಸದ್ಗತಿ ಪ್ರಾಪ್ತನಾದನು. ಈತನ ತಾಯ್ತಂದೆಗಳೂ ಉತ್ತಮ ಲೋಕವನ್ನು ಪಡೆದರು.

No. 389. ಪೂಜ್ಯಪಾದ ಚರಿತ್ರೆ.
PŪJYAPĀDA CARITRE.

Substance, paper. Size, 10¼ × 9 ½ inches. Pages, 480. Lines, 20 on a page. Character, Kanarese. Condition, good. Appearance, new.

Complete.

Same work as the above.

(ವಿ.ವಿ.)—

ಸಮಗ್ರ. ಉತ್ತಮ ಕಾಗದದ ಪ್ರತಿ. ಲಿಪಿ ಸಾಮಾನ್ಯ. ಇದು ಹಿಂದಿನ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

No. 390. ಪೂಜ್ಯಪಾದ ಚರಿತ್ರೆ.
PUJYAPĀDA CARITRE.

Substance, paper. Size 10 × 8½ inches. Pages, 232. Lines, 18 on a page. Character, Kanarese. Condition, good. Appearance, old.

Contains the Sandhis 8 to 15 complete.

Same work as the above. But contains different readings.

(ವಿ.ವಿ.)—

ಅಸಮಗ್ರ. 8 ನೆಯ ಸಂಧಿಯಿಂದ 15 ನೆಯ ಸಂಧಿಯ ಕಡೆಯುವರೆಗೂ ಇದೆ. ಉತ್ತಮ ಕಾಗದದ ಪ್ರತಿ. ಲಿಪಿ ಉತ್ತಮ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವಾಗಿರುವುದಾದರೂ, ಹಿಂದಣ ಮತ್ತು ಈ ಪ್ರತಿಗಳಲ್ಲಿ ವಿಶೇಷ ಪಾಠಾಂತರಗಳೂ, ಪದ್ಯಸಂಖ್ಯೆ ಮುಂತಾದುವುಗಳಲ್ಲಿ ಹೆಚ್ಚು ವ್ಯತ್ಯಾಸಗಳೂ ಕಂಡು ಬರುವುವು.

No. 391. ಪ್ರಭಂಜನ ಚರಿತ್ರೆ.
PRABHANJANA CARITRE.

Substance, Śrītāla. Size, 10⅝ × 1$\frac{1}{16}$ inches. Pages, 16. Lines, 6 on a page. Character, Kanarese. Condition, much injured. Appearance, old.

Contains 92 stanzas complete in the 1st Sandhi, and 93rd incomplete.

A work written in Sāngatya metre, describing the story of Prabhañjana who was the son of Dēvasēna, the king of Bhambhāpura.

The author is Mangarasa.

Beginning :

ಶ್ರೀಮೃದುಪಾದಕೊಲಿದು ವಂದಿಪೆನು ।
ದ್ಧಾಮ ಸದ್ಗತಿವಡೆದವನ ॥
ಪ್ರೇಮವನಾಕುವರಿಯು ಕಾಣಿಸಿದಾ ।
ಸ್ವಾಮಿಜಿನೇಂದ್ರ ಚಂದ್ರಮನ ॥
ಅಡಿಯಣುಪಾದ ಮೇಲಣ ಕಾಳಕವನು ।
ಬಡಿಗೆ . . . . ಪದಂತೆ ॥
ಕಡುಸೊಗಯಿಸುವ ಪರಂಜ್ಯೋತಿರೂಪ ನಿ
ನ್ನಡಿಗಳಿಗಾನೆಱಗುವೆನು ॥
ಮಧ್ಯಭಾವವನು ಹಿತಾಹಿತ ಜನದೊಳು ।
ಸಾಧ್ಯಮಾಡಿದ ಕಾರಣದಿಂ ॥
ಮಧ್ಯಮಗುರುವೆಂದೆನಿಸಿಕೊಂಡವರ ಶು ।
ಭಧ್ಯಾನದಿಂದ ವಂದಿಪೆನು ।

* * *

ಸಿಕ್ಕಿಭವ್ಯಾಂಬುಧಿಯೊಳು ದುಃಕಿಸುವನ ಕೈ ।
ಯಿಕ್ಕಿ ಸತ್ಪಥಕೆತ್ತಿ ಪಿಡಿದ ॥
ಚಿಕ್ಕಪ್ರಭೇಂದುವಡಿಗೆ ತನ್ನ ಹಣೆಯ ತಂ ।
ದಿಕ್ಕಿ ಪೇಟ್ವೆನು ಸಂಗತಿಯನು ॥
ವೈಷಮ್ಯದಿಂದ ವಾಸವನ ಜನಾಂತದೊಂ ।
ದೈಸಿರಿಯುನ್ನತಿಕೆಯನು ॥
ಕೈಸೆರೆವಿಡಿದಂದದಿನೊಪ್ಪಿದಾ ।
ಹೊಯ್ಸಳವೆಂದೆಂಬ ವಿಷಯ ॥
ಅದಱೊಳು ಪೊಸವೃತ್ತಿಯೆಂಬ ಪೆಸರ ಜನ ।
ಪದವನೊಪ್ಪದಿ ಪಾಲಿಸುವನು ॥
ವಿದಿತವಿನೋದಿ ವಿಕ್ರಮ ಕಲ್ಲ ಹಳ್ಳಿಯ ।
ಚತುರ ವಿಜಯ ಭೂವರನು ॥
ಆಸುಜನೋತ್ತಂಸಗೆ ಸುರುಚಿರ ಸದ್ವಿ ।
ಲಾಸಾನ್ವಿತೆ ಪುಣ್ಯವಂತೆ ॥
ಭಾಸುರಗುಣಭೂಷಿತೆ ದೇವಿಲೆಯಂ ।
ಬಾ ಸುದತೀಮಣಿಯಿಹಳು ॥
ಸುಕೃತಿಗಳವರುವರದೊಳುದಯಂಗೆಯ್ದು ।
ಸಕಲಕಲಾನ್ವಿತನಾಗಿ ॥
ಪ್ರಕಟಿಸಿದನು ಪೊಲ್ಗಡಲೊಳಗುದಯಿಸಿ ।
ದಕಲಂಕ ಚಂದ್ರನಂದದೊಳು ॥
ಯಾದುವಂಶನೃಪಸಚಿವಾನ್ವಯಾಂಬರ ಭಾನು ।
ಸದಮಲಗುಣಭೂಷಣನು ॥

ಮದನ ಸ್ವರೂಪ ಮಂಗರಸ ನಾ [ನಿದ] ನತಿ ಸ ।
ಮ್ಮುದದಿನೊರೆವೆನೀ ಕೃತಿಯ ॥
ಊಟಾಳದಂತೆ ಪಲ ಪಗಲಿಂ ಕ ।
ರ್ಮ್ಮಟವಿಯೊಳಗೆ ತೊಳಲುವ ।
ಆಟಕೋಟಲೆ ಪಿಂಗಲೆಂದು ಬರೆದೆನು ಸ ।
ಘೋಟಕೆಯಿಂದೀ ಕೃತಿಯ ॥

*　　　　　*　　　　　*

ಭವಮೆಂಬ ಬಲು ಬೆಂಜದೊಳು ಬಹುದಿನದಿಂದ ।
ಬವಣೆಗೆ ಬಪ್ಪ ಬೇಸರನು ॥
ತ್ರವಿಸುವೆನೆಂದು ಪೇಳ್ದೆನೀಕೃತಿಯನೊ ।
ಲ್ಪವಧರಿಸುವುದು ಬಲ್ಲವರು ॥

*　　　　　*　　　　　*

ಮಕ್ಕಳ ಮುದ್ದುನುಡಿಯ ಮಾತಾಪಿತೃಮನ ।
ಮಿಕ್ಕಿ ಮಮತೆವಡೆದಂತೆ ॥
ಚೊಕ್ಕಳಿಕೆಯ ಪಡೆದೆನ್ನ ಕೃತಿಯ ಭವ್ಯ ।
ರಕ್ಕಱು ಮಿಗೆ ಲಾಲಿಪುದು ॥

*　　　　　*　　　　　*

ಮುಂದೆಕೆಳೆ ಮುಖದಾಕ್ಷಿಣ್ಯಕನುವಾಯಿ ।
ತೆಂದು ಪಿರಿದು ಕೊಂಡಾಡೆ ॥
ಹಿಂದೆಯದೇತ್ರಱದೆಂದು ಹಳಿವ ಖಳ ।
ವೃಂದಕ್ಕೆ ನಾನಳುಕುವೆನು ॥
ಅದು ತಾನೆಂತೆನಲವನಿವನಿತೆಯ ।
ವದನದಂದದಿ ಶೋಭೆವಡೆದು ॥
ವಿದಿತವೆನಿಸಿ ಪೂರ್ವವೆಂಬ ಹೆಸರ ಜನ ।
ಪದವೊಪ್ಪಂ ಬಡೆದಿಹುದು ॥
ರಾಜಹಂಸಾದಿತ ಭೂಮಿಯಾದುದಱಿಂ ।
ಯೋಜಿಸಿ ಬುಧರೊಸೆದಿಡಲು ॥
ಆ ಜನಪದವಾ ಪೂರ್ವವೆಸರನು ವಿ ।
ಭ್ರಾಜಿಪಂದವ ಧರಿಸಿದುದು ॥
ಸಿರಿಯಿಕ್ಕೆದಾಣ ಸಿಂಗರದ ತವರ್ಮನೆ ।
ಸುರಭಿಶರನ ಬೀಡುದಾಣ ॥
ಗರುವಿಕೆಯೆಂಬ ಗಾಡಿಯ ಭಾಂಡಾಗಾರ ।
ದಿರವಾದುದಾ ಜನಪದವು ॥
ಆಪೂರ್ವದೇಹದ ಪುಣ್ಯಾನಗರಿಯೊಳು ।
ಶ್ರೀಪೂರ್ಣ ಭದ್ರನೆಂದೆಂಬ ॥
ಭೂಪತಿಭುವನ ಭುಂಭುಕ ಭಾಮಿನಿಯಿಂ ।
ಬಾಷ್ಣೆಣ್ಣಣೆ ಸಹಿತಿಹನು ॥

ಇಂತಿರುತಾ ಪೂರ್ಣಭದ್ರ ಭೂವರನತಿ
ಸಂತೋಷದಿಂದೊಂದು ಪಗಲು ॥
ತಿಂತಿಣಿಗೊಂಡು ವಿರಾಜಿಪ ನೃಪರಸ ।
ಭಾಂತರದೊಳು ಕುಳ್ಳಿರಲು ॥
ಆ ವೇಳೆ ಯೊಳೊರ್ವ ವನಪಾಲನೆಯ್ತಂದು ।
ಶ್ರೀವರ್ಧನಾಚಾರ್ಯರು ॥
ದೇವ ! ಕೇಳಾನೋವ್ರುವ ದೇವವನಕೆ ಸ ।
ದ್ಭಾವದಿಂ ಬಂದು ನಿಂದಿಹನೆ ॥
ಎಂದವಗಂಗಚಿತ್ರವನಿತ್ತು ಸುರಪತಿ ।
ನಂದನವನಕೆಯ್ದುವಂತೆ ॥
ಅಂದವಡೆದಾನೆಯುನೇಱಿಯುತ್ಯಾ ।
ನಂದದಿನಂ ವನಕೆಯ್ದೆ ॥

* * *

ವ್ರತಿಪತಿ ! ಕೇಳಾನು ಮೊದಲು ಕಂಡಾ ರಾಜ ।
ಯತಿಯಾಖ್ಯವಾವುದಾ ತಪಕೆ ॥
ಮತಿಯಿತ್ತ ಕಾರಣವಾವುದಾವನೊಳು ।
ನ್ನತಿಕೆಯುನೆನ್ನೊಳಗೆ ॥
ಉದಯಂಗೆಯ್ದ ಕಾರಣವಾವುದು ಮ ।
ತ್ತಿದಱನೆಲೆಯು ವಿವರವನು ॥
ಸದಮಲಗುಣಗಣ ರತ್ನವಿಭೂಷಣ ।
ಮುದದಿನೆನಗೆ ನಿರವಿಪುದು ॥

* * *

ಎಂದು ಗಂಭೀರವುಪ್ಪ ವಚನದೆ ಮುನಿ ।
ವೃಂದಾರಕನಿಂತು ನುಡಿದ ॥
ಮಂದರಧೀರ ಪ್ರಭಂಜನನೃಪವರ ।
ನೊಂದು ಕಥೆಯುನಾ ನೃಪಗೆ ॥

* * *

ರಂಭಾರಮಣನ ರಾಜ್ಯದಂತೆಸೆವಾ ।
ಶಂಭದೇಶದ ಮಧ್ಯದೊಳು ॥
ಅಂಭೋರಾಶಿಯುಣಗೆ ಯಿಕ್ಕೆವನೆಯಾಗಿ ।
ಭಂಭಾವುರ ವೊಪ್ಪುತಿಹುದು ॥

End :

ತಂದೆ ತಮಗೆ ಕೊಟ್ಟ ಪುರವರ . . ಳಾ ।
ನಂದದಿನಾಕುಮಾರಕನು ॥
ಮಂದೇತರ ಕ್ರಮದಿ ತಮಗೆ ಸಲೆ ।
ಸಂದ ರಾಜ್ಯಮನಾಳು ತಿರಲು ॥

ಅಂದಿನ ಬಲವಾಸ . . . . ಕರ್ಗಳವರೆಂ ।
ಬಂದದಿಂದಲ್ಲಿ ತನ್ಮೊಳಗೆ ॥
ಮಂದೇತರಮಮತೆಯೊಳು ರಾಜ್ಯವನಾ ।
ನಂದದಿ ಪರಿರಕ್ಷಿಸಿದರು ॥
ಕಲಿಗಳರಸ ಕಾಮಿನಿಜನ ಮನ್ಮಥ ।
ನಲಘುಪರಾಕ್ರಮಯುತನು ॥
ಚಲದಂಕಣಾಪ್ರ . . . .

(ವಿ.ವಿ.)——

ಇದರಲ್ಲಿ ಮೊದಲನೆಯ ಸಂಧಿಯಲ್ಲಿ ೯೦ ಪದ್ಯಗಳು ಪೂರ್ಣವಾಗಿವೆ. ೯೩ ನೆಯದು ಅಸಮಗ್ರವಾಗಿದೆ. ಅತಿ ಶಿಥಿಲವಾಗಿದೆ. ಗ್ರಂಥಪಾತವು ಸ್ವಲ್ಪವಿದೆ. ಬರೆವಣಿಗೆ ಚೆನ್ನಾಗಿದೆ.

ಇದು ಸಾಂಗತ್ಯರೂಪವಾದುದು. ಇದರಲ್ಲಿ ಶಂಭನೀಶದ ಭಂಭಾಪುರದ ರಾಜನಾದ ದೇವಸೇನನ ಮಗ ಪ್ರಭಂಜನನ ಕತೆ. ಉಕ್ತವಾಗಿದೆ. ಗ್ರಂಥದಾದಿಯಲ್ಲಿ ಜಿನ, ಮಧ್ಯಮ ಗುರು, ಉಪಾಧ್ಯಾಯರು, ಸಾಧುಗಳು, ಶಾರದೆ, ಯಕ್ಷರು. ನವಕೋಟಿ ಮುನಿಗಳು, ಚಕ್ರ ಪ್ರಭೇಂದು ಇವರ ಸ್ತುತಿಯಿದೆ.

ಕವಿ ಮಂಗರಸನೆಂಬುವನು. ಇವನ ವಿಷಯವಾಗಿ ಹಿಂದೆ ವರ್ಣಿತವಾಗಿರುವ ೩೩೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 392. ಭರತೇಶ್ವರ ಚರಿತ್ರೆ.
BHARATEŚVARA CARITRE.

Substance, Sritala. Size, $11\frac{11}{16} \times 1\frac{7}{8}$ inches. Pages, 194. Lines, 9 in a page. Character, Kanarese. Condition, injured. Appearance, old.

Begins on fol 1*a*. The other work herein is.—(1) Nāgakumāra caritre, 98*a*.

Contains 13 sandhis (Kavivākya, Munibhukti, parvābhiṣēka, Jatvōpadēsa, Cittajanirvēga, Ṣōḍasasvapna. Dīkṣā, Tīrthēsapuja, Namirāja vinaya, Tirthāgamana, Virakti, Bharatēsanirvēga, Dhyānatāmarthya-complete and one sandhi (Sthriratna sambhoga) incomplete.

A poem in kanarese in the Sāngatya metre describing the story of Bharata, the first son of Vṛsbhatīrthankara. The author Ratnākaravarṇi was a jain poet who had the title Niranjanasiddha. For other particulars see, Karnātaka kavicaritre Part II, and the printed edition of the work.

Date of transcription.—Twenty eighth day of the month of Karkāṭaka in the kolla year 950 corresponding to 1775 A.D.

Name of the scribe.—Appaya, grand son of Doḍḍaṇṇa Appayya Setty of Navanītapura.

Beginning :

ಪರಮಾರ್ಥ ಗುರುವೆ ಪರಂಜ್ಯೋತಿರೂಪನೆ ।
ಗರಳಹರನೆ ಭವಹರನೆ ॥

ಸರಸದೊಳಿನಗೆ ಸನ್ಮತಿ[ಯ]ದೋರು ಭವ್ಯಾಬ್ಜ ।
ತರಣಿ ! ನಿರಂಜನಸಿದ್ಧ ! ॥
ಸಂಗೀತದ ಗೋಷ್ಠಿ ನಿಂದುದು ಸಾಹಿತ್ಯ ।
ಸಂಗತಿಗೆಳಸಿ ನರೇಂದ್ರ ॥

ತುಂಗವಿದ್ವಾಂಸರ ನೆರವಿಗೊಯ್ಯನೆ ತನ್ನ ।
ಕಂಗಳ ಕಾಂತಿದೋಱಿದನು ॥

ಕವಿಗಳು ಪಲಂಬರುಂಟವರ ಮಧ್ಯದೊಳೊಬ್ಬ ।
ದಿವಿಜಕಲಾಧರನೆಂಬ ॥

ಕವಿಯಿದ್ದನವನ ಮೊಗವ ನೋಡಲೊಡನಾ ।
ಕವಿ ನುಡಿದನು ಭಾವವಱಿದು ॥
ಶ್ರೀಜಿನಚರಣಾಬ್ಜಸುರಭಿ ಮಧುವ್ರತ ।
ರಾಜಾಧಿರಾಜಾಗ್ರಗಣ್ಯ ॥
ರಾಜಿತಹಂಸ ಕಲಾನಂದ ನಿನಗೆ ಮ ।
ಹಾಜಯಸಿದ್ಧಿರಸ್ತೆಂದ (?)

* * *

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮ ।
ಯೋಗವಿಲ್ಲವೆ ಯೋಗಿಯಹುದು ॥
ಭೋಗದೊಳಿದ್ದು ಯೋಗವ ಮಾಡಿ ಭವ ಮುಕ್ತ ।
ರಾಗುವರಾರು ನಿನ್ನಂತೆ ॥
ವಿಷಯ ವಿಷವನುಂಡು ದಕ್ಕಿ (ಸ) ಬಲ್ಲ ನಿ ।
ರ್ವಿಷಸಿದ್ಧ ನೀನವನೀಶ ॥
ವಿಷಮಚಿತ್ತವ ನಾತ್ಮನೊಳು ನಿಲಿಸಿದ ರಾಜ ।
ರುಷಿಯಲ್ತೆ ರಾಜನೆ ! ನೀನು ॥
ಕಂಡವರಿಗೆ ಪುಣ್ಯ ನೃಪತಿ ! ನಿನ್ನಯ ಬೆಸ ।
ಗೊಂಡವರಿಗೆ ಪಾಪನಾಶ ॥
ಕಂಡುದ ನುಡಿದೆನು ಸ್ತುತಿಯೆನ್ನದಿರು ಲೇಸ ।
ಕಂಡು ಬಾಯಡಾಲ್ವನು ಕವಿಯೆ ? ॥

* * *

ಕವಿ ತನ್ನ ಹೃದಯವಱಿದು ನುಡಿದುದ ಮೆಚ್ಚು ।
ತವನೀಶನೆದ್ದು ಯೋಗಿಗಳ ॥
ಭವನಕ್ಕೆ ತರಲನುವಾದನೆಂಬಲ್ಲಿಗೆ ।
ಕವಿವಾಕ್ಯದ ಸಂಧಿ ಸುಸಂಧಿ ॥

ಈಜನಕಥೆಯನು ಕೇಳದವರ ಪಾಪ ।
ಬೀಜ ನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ ।
ರಾಜತೇಶ್ವರನ ಕಾಣುವರು ॥
ಪ್ರೇಮದಿಂದಿದ ನೋಡಿದರೆ ಪಾಡಿದರೆ ಕೇ ।
ಳ್ದಾವೋದವೆ [ಯಿದ] (ಯ್ದುವ) ರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ ।
ಸ್ವಾ(ಮಿ)ಯ ಕಾಣ್ಬರರ್ಥಿಯೊಳು ॥
ಜ್ಞಾನವಾವುದು ಸುಖವಾವುದು ಪ್ರಭೆಯಾವು ।
ದಾನಾವನೆಂ (ಬೀ) (ಬವಿ) ಕಲ್ಪ ॥
ಏನು (ವಿ) (ಮಿ)ಲ್ಲೆನ ಲೆನ್ನನೆನಹಿನೊಳರು ದಿವ್ಯ ।
ಭಾನು ಚಿದಂಬರ ಪುರುಷ ॥

Colophon:

ಕವಿವಾಕ್ಯದ ಸಂಧಿ ಸಮಾಪ್ತಂ.

ಸಂಜೀವನಸಿದ್ಧ ಸಹಜಾತ್ಮಸಿದ್ಧವೋ ।
ಹಂ ಜಯಸಿದ್ಧ ಪ್ರಸಿದ್ಧ ॥
ಮಂಜುಳಮತಿದೋರು ಜಯಜಯ ಗುರುವೆ ನಿ ।
ರಂಜನ ಸಿದ್ಧವಿಶುದ್ಧ ॥

End:

ತನ್ನೊಳಗಾದವರ್ಮಾಡಿದ ತಪ್ಪನು ।
ನನ್ನದೆಂದೆ ಕಾಣಿರಕ್ಕ ॥
ಮನ್ನಿಸುವೆನು ನಾನು ನಿಮ್ಮನೆಂದನು ಚಕ್ರಿ ।
ಮನ್ನಣೆಯೇನೆಂದರವರು ॥
ರನ್ನಚಿನ್ನದೊಳು ಮಾಡಗಳು ನಿಮ್ಮಿರ್ವರ್ಗೆ ।
ಹೊನ್ನುಯ್ಯಲೊಬ್ಬರೊಬ್ಬರಿಗೆ ॥
ಪನ್ನೆರಡಿತೋಡಿ ಗ್ರಾಮವ ನೀವೆ ಹಿರಿಯಿತಾ ।
ರನ್ನಮುದ್ರಿಕೆಯ ನೆಂದಿತ್ತ ॥
ನಗುತೊಲ್ಲು ಸ್ತ್ರೀಪುರುಷರು ಸುಖಬಾಳರೆಂ ।
ದೊಗುಮಿಗೆ ಸೇಸೆಯನಿಟ್ಟು ॥
ಜಗಕಗ್ರಗಣ್ಯನ ಸೋದರಿಯರು ಪೋದ ।
ರಗಣಿತೈಶ್ವರ್ಯ ಲಾಭದೊಳು॥

(ವಿ-ವಿ.)--

ಅಸಮಗ್ರ. ಇದರಲ್ಲಿ ಕವಿವಾಕ್ಯ, ಮುನಿಭುಕ್ತಿ, ಪಟ್ಟಾಭಿಷೇಕ, ತತ್ವೋಪದೇಶ, ಚಿತ್ರ, ಜನಿರ್ವೇಗ, ಷೋಡಶಸ್ವಪ್ನ, ಧೀಕ್ಷೆ, ತೀರ್ಥೇಶಪೂಜಾ, ನಮಿರಾಜ ವಿನಯ, ತೀರ್ಥಗಮನ, ವಿರಕ್ತಿ, ಭರತೇಶನಿರ್ವೇಗ. ಧ್ಯಾನಸಾಮರ್ಥ್ಯ ವೆಂಬ ಹದಿಮೂರು ಸಂಧಿಗಳು ಪೂರ್ಣವಾಗಿ ಯೂ, ಸ್ತ್ರೀರತ್ನ ಸಂಭೋಗಸಂಧಿಯೆಂಬುದು ಅಪೂರ್ಣವಾಗಿಯೂ (೫೧ ಪದ್ಯಗಳುಮಾತ್ರ ಇವೆ) ಇರುವುದು ಶಿಥಿಲ. ಇದರೊಡನೆ ನಾಗಕುಮಾರ ಚರಿತ್ರೆಯಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ೮೦ ಸಂಧಿಯುಳ್ಳುದು. ಕವಿ ರತ್ನಾಕರ ವರ್ಣಿ. ಈ ಗ್ರಂಥವು ಸಂಪೂರ್ಣವಾಗಿ ಭರತೇಶ್ವರ ವೈಭವವೆಂಬ ಹೆಸರಿನಿಂದ ಪುತ್ತೂರು ಜೈನಯುವಕ ಸಂಘದವರಿಂದ ಮಂಗಳೂರು ಕೆನರಾ ಛಾಪಾಖಾನೆಯಲ್ಲಿ ಕ್ರಿ.ಶ. ೧೯೨೩ ರಲ್ಲಿ ಮುದ್ರಿತವಾಯಿತು ಈಗ್ರಂಥಕ್ಕೆ ಸಂಬಂಧಪಟ್ಟ ಉಳಿದ ವಿಷಯಗಳನ್ನು ಮೇಲ್ಕಂಡ ಪುಸ್ತಕದಿಂದಲೂ, ಕರ್ಣಾಟಕ ಕವಿಚರಿತ್ರೆಯ ಎರಡನೆಯ ಭಾಗದಿಂದಲೂ ತಿಳಿಯುವುದು. ಪುಸ್ತಕಾಂತ್ಯದಲ್ಲಿ ' ಕೊಲ್ಲ. ೧೪೦ ನೆಯ [ಕ್ಕಕ್ಕ್] (ಕರ್ತ್ಕಾ)ಟಕ ಮಾಸ ೨೮ ಸಂದು ಬಡೆದ ಪುಸ್ತಕಕ್ಕೆ ಮಂಗಳ ಮಹಾ. ನವನೀತ ಪು(ರ)ದ [ದೊಡಂಣಾಲ ಪೈಸಟಿಯರ] (ದೊಡ್ಡಣ್ಣ ಅಪ್ಪಯ್ಯ ಸೆಟ್ಟಿಯರ) ಮೊಂಮಗ ಅಪ್ಪಯ್ಯನು ಬರೆದನು ' ಎಂದಿದೆ.

No. 393. ಭರತೇಶ್ವರ ಚರಿತ್ರ.
BHARATĒSVARA CARITRE.

Substance, Sritala. Size, 11 15/16 × 1 13/16 inches. Pages, 184. Lines, 9 on a page. Character, Kanarese. Condition, injured. Appearance. old.

Contains the Sandhis Kavivākya, Śrēnyārōhaṇa, Samavāsaraṇa; Divyadhvani, Tatvārtha, Mōkṣamārga. Pancaiśvarya, Jinamuktigamana Nirvēga, Dhyānasamarthya complete and Kamadēvāsthānasandhi incomplete.

Samē work as the above but different sandhis ; by the same author Ratnākaravarṇi.

Name of scribe.—Rājaiyyapandita.

Beginning :

ಪರಮಾರ್ಥಗುರುವೆ ಪರಂಜ್ಯೋತಿ ರೂಪನೆ ।
ಗರಳ ಹರನೆ ಭವಹರನೆ ॥
ಸರಸದೊಳೆನಗೆ ಸನ್ಮತಿದೋರು ಭವ್ಯಾಬ್ಜ ।
ತರಣಿ ! ನಿರಂಜನ ಸಿದ್ಧ ! ॥

ಸಂಗೀತಗೋಷ್ಠಿ ನಿಂದುದು ಸಾಹಿತ್ಯದ ।
ಸಂಗತಿಗೆಳಸಿ ನೃಪೇಂದ್ರ ॥
ತುಂಗ ವಿದ್ವಾಂಸರ ನೆರವಿಗೊಯ್ಯನೆ ತನ್ನ ।
ಕಂಗಳ ಕಾಂತಿದೋರಿದನು ॥

* * *

ಕವಿ ತನ್ನ ಹೃದಯವಱಿದು ನುಡಿದುದ ಮೆಚ್ಚಿ ।
ಭುವನೇಶನೆದ್ದ ಯೋಗಿಗಳ ॥
ಭುವನಕೆ ತರಲನುವಾದನೆಂಬಲ್ಲಿಗೆ ।
ಕವಿವಾಕ್ಯಸಂಧಿ ಸುಸಂಧಿ ॥
ಈಜಿನಕಥೆಯನು ಕೇಳದವರ ಪಾಪ ।
ಬೀಜನಿರ್ನಾಶನವಹುದು ॥

ತೇಜವಹುದು ಮುಕ್ತಿಯಹುದು ಮುಂದೊಲಿದಪ ।
ರಾಜಿತೇಶ್ವರನ ಕಾಣ್ಬರವರು ॥
ಜ್ಞಾನವಾವುದು ಸುಖವಾವುದು ಪ್ರಭೆಯಾವು ।
ದಾನುವವೆಂಬ ವಿಕಲ್ಪ ॥
ಏನುವಿಲ್ಲೆನ್ನ ನೆನಹಿನೊಳಿರು ದಿವ್ಯ ।
ಭಾನು ಚಿದಂಬರ ಪುರುಷ ॥

Colophon:

(ಕವಿವಾಕ್ಯ ಸಂಧಿ ಸಮಾಪ್ತಂ.)

ಶತ್ರುಗಳಲ್ಲವೆಂಬಂತೆ ಷಟ್ಖಂಡದ ।
ಧಾತ್ರೀಪಾಲರ ಗೆಲ್ದು ಚಕ್ರಿ ॥
ಮಿತ್ರಭಾವದೊಳಾಳುತಿರ್ದನುರ್ವಿಯನೇಕ ।
ಚ್ಛತ್ರದೊಳೇನ ಬಣ್ಣಿಪೆನು ॥

End:

ಉಡುಗೊರೆಯಿತ್ತು ದಕ್ಷಿಣೆಗೆ ಮತ್ತೀತನ ।
ಪಡೆಯ ಮನ್ನಿಸು ಮಂತ್ರಿಯೆಂದು ॥
ನಡೆಯಿಂದು ವಿಶ್ರಮಿಸೆಂದು ತನ್ನಯ ಸಖ ।
ರೊಡನೆ ಬೀಳ್ಕೊಟ್ಟನಾ ಮಾರ ॥
ಬೆಲೆವೆಂಗಳೆಲ್ಲರು ಬೀಳ್ಕೊಟ್ಟು ಹೊದಡು ।
ರುಲಿಯ ಸಿಂಹಾಸನದಿಂದ ॥
ಲಳಯೊಳಿದ್ದನು ತನ್ನ ರಾಣಿಯರೊಡಗೂಡಿ ।
ನಿಳಯವ ಪೊಕ್ಕನಾ ಸೊಬಗ ॥

(ವಿ-ವಿ.)—

ಅಸಮಗ್ರ. ಕವಿವಾಕ್ಯ, ಶ್ರೇಣ್ಯಾರೋಹಣ, ಸಮವಸರಣ. ದಿವ್ಯಧ್ವನಿ ತತ್ವಾರ್ಥ, ಮೋಕ್ಷಮಾರ್ಗ, ಪಂಚೈಶ್ವರ್ಯ, ಜಿನಮುಕ್ತಿಗಮನ, ನಿರ್ವೇಗ, ಧ್ಯಾನ ಸಾಮರ್ಥ್ಯದ ಸಂಧಿಗಳು ಪೂರ್ಣವಾಗಿವೆ. ಕಾಮದೇವಾಸ್ಥಾನದ ಸಂಧಿ ಅಪೂರ್ಣವಾಗಿದೆ. ಶಿಥಿಲ. ಶ್ರೀತಾಳ ಪ್ರತಿ. ಪುಸ್ತಕಾಂತ್ಯದಲ್ಲಿ ' ಯೂರವಿಜೆಯಂ ಮ . . ವರು ರಾಜಯ್ಯ ಪಂಡಿತರ ಕೈಯಲ್ಲಿ ಬರೆಯಿಸಿದ ಭರತೇಶ್ವರನಿಗೆ ಮಂಗಳ ಮಹಾ ಶ್ರೀ ' ಎಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹಿಂದಣ ನಂಬರನ್ನು ನೋಡುವುದು.

No. 394. ಭರತೇಶ್ವರ ಚರಿತ್ರೆ.
BHARATEŚVARA CARITRE.

Substance, palm-leaf. Size, $9\frac{5}{8} \times 1\frac{7}{16}$ inches. Pages, 192. Lines, 5 on a page. Character, Kanarese. Condition, very much injured. Appearance, old.

Contains the Sandhis; (Upparige, Rājalāvaṇya. Argiliyātapa, Mannaṇe, and Sarasa) complete and Arōgaṇeyasandhi incomplete.

Same work as the above, but contains different sandhis; by Ratnākaravarṇi.

Date of Transcription.—Tenth day of dark fortnight of the lunar month Kartika in the Saka year Plava.

Beginning:

. . . . ಡಬಿಟ್ಟುರಹಃದೆಂದು ।
ಗಂಡ ಬೇಟ್ಟಿಂತೆ ಕೇಳದರು ॥
ಪೆಂಡಿರು ಕೇಳ್ವುದೇನವನ ವಾಕ್ಯವನು ಷ ।
ಟ್ಬುಂಡದೊಳಾರು ಮೀಱುವರು ॥
ಹೊಂಗಿಂಡಿಯುದಕವ ತನ್ನ ಕೈವಿಡಿದೆತ್ತಿ ।
ಹೆಂಗಳ ಕರೆದು ಕೈವಿಡಿದು ॥
ಅಂಗಾಲ ತೊಳೆದೊಳೆಯಿಕೆ ಬನ್ನಿರೆಂದವ ।
ನಂಗಜರೂಪನರ್ಥಿಯೊಳು ॥

* * * *

ವಾರಿಜಾಕ್ಷಿಯರೊಳು ಸರಸಸಲ್ಲಾಪ ಗಂ ।
ಭೀರ ಪ್ರಸಂಗ ಕೇಳಿಯೊಳು ॥
ಆರಾಜಯೋಗೀಂದ್ರನಿರುತಿದ್ದನಲ್ಲಿಗೆ ।
ಆರೋಗಣೆಯು ಸುಸಂಧಿ ॥

ಬರೆಯು ಬಾರದ ತಿದ್ದ ಬಾರದ ಕಡೆದರೆ ।
ದೊರೆಯಬಾರದ ರೂಪಿನಭವ ॥
ಬರೆದು ಬಚ್ಚಿಸಿದಂತೆ ತನ್ನೆದೆಯೊಳಗಿರು ।
ಗುರುವೆ ಚಿದಂಬರ ಪುರುಷ ॥

Colophon:

ಅಂತು ಸಂಧಿ ನಾಲ್ಕಕ್ಕಂ ಪದನು ೪೯೪ ಕ್ಕಂ ಮಂಗಳ ಮಹಾ.

ಕಡೆಯಿಲ್ಲದಮೃತಸಂಪದವ ನಿನ್ನೊಳಗಿಟ್ಟು ।
ಬಡವರಂತಿಳೆಗೆ ಕಾಣಿಸುವ ॥
ಬೆಡಗಿನ ಸಿದ್ಧ ! ಸನ್ಮತಿದೋರು ಭವ್ಯಾತ್ಮ ।
ರೊಡೆಯ ನಿರಂಜನ ಸಿದ್ಧ ! ॥

End:

ಸರಸಕಾಂತೆಯ ಕೈವಿಡಿದನು ಜಿನಸಿದ್ಧ ।
ಶರಣೆನುತಿದ್ದನಾಕ್ಷಣವೆ ॥
ಭರತೇಶ ಮೇಲೆಲೆ ಗಟ್ಟಿಯಿಟ್ಟನಿಲ್ಲಿಗೆ ।
ಸರಸದ ಸಂಧಿ ಸುಸಂಧಿ ॥

ಹಗಲಿರುಳನ ಸೂರ್ಯ ಹಾರಿ ಹಾರದ (ಹಂಸ) ।
ಹಗೆ[ಕೆ](ಗೆ)ಳೆಯುಳಿದ ಹಮ್ಮಿರ ॥
ಅಗಲದೆ ನನ್ನಂತರಂಗದೊಳಿರು ಬಲು ।
(ವಿಗಡ ಚಿ)ದಂಬರ ಪುರುಷ ॥

Colophon :

ಅಂತು ಸಂಧಿ ೯ ಕ್ಕಂ ಪದನು ೧೦೩೯ ಕ್ಕಂ ಮಂಗಳಂ.

(ವಿ.ವಿ.)—

ಇದರಲ್ಲಿ ೫ ರಿಂದ ೯ ಸೇರಿ ೫ ಸಂಧಿಗಳು ಸಮಗ್ರ. ೪ ನೆಯದು ಅಸಮಗ್ರ. ಅತಿ ಶಿಥಿಲ. ಪ್ರತಿ ಸಂಧಿ ಯಂತ್ಯದಲ್ಲಿ ಕಡೆಯ ಪದ್ಯದ ಮೇಲಿನ ಎರಡು ಪದ್ಯಗಳನ್ನು ಸಂಪೂರ್ಣವಾಗಿ ಬರೆಯದೆ, ಅವು ಅಲ್ಲಿರತಕ್ಕುವೆಂಬುದಕ್ಕೆ ಗುರುತಾಗಿ ಪದ್ಯಗಳ ಮೊದಲ ಪದಗಳನ್ನು ಬರೆದು ಬಳಿಕ ಕೊನೆಯ ಪದ್ಯವನ್ನು ಬರೆಯುತ್ತಾನೆ. ಪುಸ್ತಕಾಂತ್ಯದಲ್ಲಿ ' . . . . . . ಷ ಪ್ಲವ ಸಂವತ್ಸರದ ಕಾರ್ತಿಕ ಬ। ಬಂ ಲೂ ಹುಲ್ಲನಹಳ್ಳಿ ಪ್ರ . . . . . . ಕೈಯ್ಯ . . . . ಚಿಗನಾಯಕನಹಳ್ಳಿ ಲಿಂಗಪ್ಪನು ಧನಕನಕ ವಸ್ತುವಾಹನ ಅಷ್ಟಪು(ತ್ರ)ರು) ಆಗಿ ಸುಖದಲ್ಲಿ ನೂತನ ರಾಜ್ಯಾಧಿಪತ್ಯವುಂಟಾಗಿ ನಮ್ಮಂಥ ನಂಬಿದ ಅನಾಥರ ರಕ್ಷಿಸಿಕೊಂಡು ಬರಲಿಯೆಂದು ತ್ರಿಸಂಧ್ಯಾಕಾಲದಲ್ಲಿಯೂ ರಂಗನಾಥ ಸ್ವಾಮಿಯನ್ನೆ ಭಜಿಸಿಕೊಂಡು ಬರೆದಂಥ ಶ್ರೀಭರತೇಶ್ವರ ವೈಭವವೆಂಬ ಮಹಾಕೃತಿಗೆ ಜಯಮಂಗಳ ಮಹಾ ' ಎಂದಿದೆ.

ಇದೂ ಹಿಂದಿನ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕವೂ ಒಂದೇ ಗ್ರಂಥವಾಗಿರುವುದಾಗಿದ್ದರೂ ಎರಡೂ ಅಸಮಗ್ರ ಪ್ರತಿಗಳಾಗಿ ಬೇರೆ ಬೇರೆ ಸಂಧಿಗಳನ್ನುಳ್ಳವಾಗಿರುವುವು. ಉಳಿದ ವಿಷಯಗಳಿಗಾಗಿ ೩೯೩ ನೆಯ ನಂಬರನ್ನು ನೋಡುವುದು.

No. 395. ಭರತೇಶ್ವರ ಚರಿತ್ರೆ.

BHARATEŚVARA CARITRE.

Substance, paper. Size, $10\frac{1}{2} \times 9\frac{3}{8}$ inches. Pages, 54. Lines, 20 on a page. Character, Kanarese. Condition, fair. Appearance, new.

Contains from the middle of the fourth sandhi to the sixth complete. (i.e. Arōgaṇe, Upparige, and Rājalāvaṇya.)

Same work as the above.

(ವಿ.ವಿ.)—

ಇದರಲ್ಲಿ ೫, ೬ ನೆಯ ಸಂಧಿಗಳು ಸಮಗ್ರ. ನಾಲ್ಕನೆಯದು ಮಧ್ಯದಿಂದಿದೆ. ಕಾಗದದ ಪ್ರತಿ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥಕ್ಕೆ ಸಂಬಂಧಪಟ್ಟ ವಿಷಯಗಳನ್ನು ೩೯೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 396. ಭರತೇಶ್ವರ ಚರಿತ್ರೆ.

BHARATEŚVARA CARITRE.

Substance, palm-leaf. Size. $14 \times 1\frac{5}{8}$ inches. Pages, 96. Lines, 7 on a page. Character, Kanarese. Condition, very much injured. Appearance, old.

Begins on fol. 60 *a*. The other works herein are :—(1) Tripuradahanasaṅgatya 1 *a*. (2) Gurudatta caritre 18 *a*.

Contains the Ṣōḍaśa svapna, Abhiṣēka, Pāraṇe, Ārōgaṇe and Tirthēśa pūja Sandhis complete and stanzas 5 in Munibhukti, 69 in Sarvara Mōkṣa sandhi, but wants 14 Stanzas in the beginning of Ṣōḍaśa svapna sandhi.

Same work, as the above but different sandhis ; by Ratnākaravarni. For other particulars see under No. 392 ante.

Beginning :

. . . . . . ಯು ಸೃಷ್ಟಿಯೊಂದು ಸಂ ।
ಗಡಿಸುವೃದದಱಿಂದ ಕತನ ॥

ಇಂದಿನವರೆಗಿದು ಬಿನದವಾಗಿಯೆ ಹೋಹು ।
ದಂದಿನವರು ಸತ್ಯವೆನಲು ॥
ಮುಂದಾದೆ ವರ್ಣ ಹೊಂದವು ಹೋಗ । (?)
. ಡಾಡದಿಹರೆ ಕರ್ಮಿಗಳು ॥ (?)

* * *

ಕೂಡೆ ಸರ್ವರ ಬೀಳ್ಕೊಟ್ಟು ವಿರೋಧ ವಿ ।
ಬಾಧ ತನ್ನರಮನೆಗೆಯ್ದಿ ॥
ಕೋಡಿಯಿಲ್ಲದ ವಿಲಾಸದೊಳರ್ದ್ದನಿಲ್ಲಿಗೆ ।
ಷೋಡಶಸ್ವಪ್ನದ ಸಂಧಿ ॥
ದಿನದಿನಕೆಯ್ದುವ ಸುಖದುಃಖ ಸಖಶತ್ರು ।
ಧನ ದಾರಿದ್ರ್ಯವು ಕನಸೆಂದು ॥
ಅನುಗುಣಿಸುತ ತನ್ನ ಸೆನಹಿಸೊಳರು ಸುಖ ।
ಸನನೆ ಚಿದಂಬರ ಪುರುಷ ॥

Colophon :

(ಷೋಡಶ ಸ್ವಪ್ನದ ಸಂಧಿ ಸಮಾಪ್ತಂ).

ಕಣ್ಮುಚ್ಚಿ ನೋಡಿದರಾತ್ಮಸುಖವ ಕಪ ,
ಗಣ್ಮಸುವಾನಂದರೂಪ ॥
ಕಣ್ಮಲೆದುತ್ತಮ ಮತಿದೋರು ಸುಕೃತಾತ್ಮ ।
ರಾಣ್ಮ ! ನಿರಂಜನ ಸಿದ್ಧ ॥

End :

ಹುರುಮುಂಜಿ ಕಾಶಿ ಹಮ್ಮಿರ ಬಂಗಾಳ ಖ ॥
ಬರ್ಬರಸಿಂಧು ಪಲ್ಲವಮಗದ ॥
ತುರುಕಾಣ್ಯ ಮೊದಲಾದ ದೇಶದೊಳ್ವಿಹರಿಸಿ
ಸುರಿದ ರಾತ್ಮಾಮೃತರಸವ ॥

ನವ್ಯಪೂಜೆಯು ಮಾಡಿ ನಮಿಸುತಲಲ್ಲಲ್ಲಿ ಕ ।
ರ್ಶಸ್ಯವ ಪ್ರಜೆ ಬೆಸಗೊಳಲು ॥
ದಿವ್ಯನಿನಾದದೊಳಾ . . . . ।

(ವಿ.ವಿ.)—

ಅಸಮಗ್ರ. ಅಭಿಷೇಕ, ಪಾರಣೆ, ಆರೋಗಣೆ, ತೀರ್ಥೇಶಪೂಜಾ ಸಂಧಿಗಳು ಸಮಗ್ರ. ಷೋಡಶಸ್ವಪ್ನ, ಮುನಿಭುಕ್ತಿ, ಸರ್ವರ ಮೋಕ್ಷಸಂಧಿಗಳಲ್ಲಿ ಕೆಲಕೆಲವು ಭಾಗಗಳು ಹೋಗಿವೆ. ಅತ್ಯಂತ ಶಿಥಿಲ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೩೯೨ ನೆಯ ನಂಬರನ್ನು ನೋಡಿ ತಿಳಿಯುವುದು.

No. 397. ಭರತೇಶ್ವರ ಚರಿತ್ರೆ.
BHARATEŚVARA CARĪTRE.

Substance, paper. Size, 10½ × 9½ inches. Pages, 5. Lines, 20 on a page. Character, Kanarese. Condition, fair. Appearance, new.

Begins on a page 91*a*. The other works herein are.—(1) Tripuradahana sāngatya 1. (2) Gurudatta caritre 25.

Contains 48 stanzas from 14 to 61 complete in the Abhiṣēksandhi of Bharatēśvara caritre.

Same work as the above. For other particulars see under No 392 ante.

(ವಿ.ವಿ.)—

ಅಸಮಗ್ರ. ಅಭಿಷೇಕ ಸಂಧಿಯ ೧೪ ನೆಯ ಪದ್ಯದಿಂದ ೬೧ ನೆಯ ಪದ್ಯದ ವರೆಗೆ ಪೂರ್ಣವಾಗಿದೆ. ಕಾಗದದ ಪ್ರತಿ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೩೯೨ ನೆಯ ನಂಬರನ್ನು ನೋಡುವುದು.

No. 398. ಭರತೇಶ್ವರ ಚರಿತ್ರೆ.
BHARATEŚVARA CARITRE.

Substance, Śrītāla. Size, 9¾ × 1¾ inches. Pages, 136. Lines, 9 on a page. Character, Kanarese. Condition, very much injured. Appearance, old.

Contains 5 Sandhis, Virakti, Samavasaraṇa, Kumāraviyōga, Munibhukti and Tattvārtha but Kumāraviyōga sandhi is incomplete and three stanzas are wanting in the end of Virakti and Munibhukti Sandhis. The two penultimate stanzas of the Tattvārtha Sandhi. are also wanting

Same work as the above but different sandhis ; by Ratnākaravarṇi

Beginning :

ಶ್ರೀಕರ! ಬೋಧ ರತ್ನಾಕರ! ದಿವ್ಯ ಗು।
ಣಾಕರ! ವಾಚಾಮಗಮ್ಯ! ॥
ಲೋಕ ತ್ರಯಾಧಿಪ! ಮತಿದೋರು ಸೂರ್ಯ।
ಪ್ರಕಾಶ (?) ನಿರಂಜನ ಸಿದ್ಧ ॥
ಹಸ್ತಿನಪುರಪತಿ ಮೋಘೇಶ್ವರನು ಪ್ರ।
ಶಸ್ತದೀಕ್ಷೆಯ ನಾಂತನೆಂದು ॥
ಪ್ರಸ್ತುತವಾರ್ತೆಯು ಸಾಹಿತ್ಯಗೋಷ್ಠಿಯು।
ಪ್ರಸ್ತಾವದೊಳು ಬಂದುದವರ್ಗ್ಗ ॥

*　　　*　　　*　　　*

ಅಲ್ಲಲ್ಲಿ ಗುಡಿತೋರಣ ಗಟ್ಟಿಯದಿಗೊರ್ಳು।
ತಲ್ಲಲ್ಲಿ ನಿಂದು ವಿಶ್ರಮಿಸಿ ॥
ಎಲ್ಲರರ್ಥಿಯ ಸಲಿಸುತ ಬಂದರುಬ್ಬಿ ನಿಂ।
ಬೆಳ್ಳವೆಟ್ಟಕೆ ಮುಟ್ಟಮುಟ್ಟ ॥
ಅನುಜರುಗೂಡಿ ಮೋಘೇಶ್ವರಮುನಿಯಾವ।
ನೆನಲ್ಪೈಯ್ದು ಕೈಲಾಸಗಿರಿಯ ॥
ಸನಿಹಕೆ: ಬಂದರೆಂಬಲ್ಲಿಗೆ ಭರತನಂ।
ದನರ ವಿರಕ್ತಿಯ ಸಂಧಿ ॥

Colophon :

(ಸಂಪೂರ್ಣಂ).
ದುರಿತಗೋಧೂಮ ಘರಟ್ಟ ಸಜ್ಜ್ಯಾತ ಕಿಟ್ಟ।
ವರಹೇಮನಿಭ ಶುದ್ಧವಸ್ತು ॥
ಕರುಣಿಸು ಮತಿಯ ರತ್ನಾಕರ ಸಿದ್ಧನ।
ಗುರುವೆ! ನಿರಂಜನ ಸಿದ್ಧ! ॥

End :

ತತ್ವಪದಾರ್ಥವ ಸೂಚಿಸಿ ಮೋಕ್ಷಗ।
ತಿತ್ವರಿತರಿಗಾದಿಜಿನನು ॥
ತತ್ವದೊಳಾತ್ಮಸಿದ್ಧಿಯ ತೊಡಗಿದನಿದು।
ತತ್ವಾರ್ಥಸಂಧಿ ಸುಸಂಧಿ ॥

ವಿಮಲಲೋಚನ ವಿಮಲಾಕಾರ ವಿಮಲಾಂಗ।
ವಿಮಲ ಪುರುಷ ವಿಮಲಾ[ಂಗ](ತ್ಮ)॥
ವಿಮಲದೊಳೆನ್ನಂತರಂಗದೊಳರು ಲೋಕ।
ವಿಮಲ ಚಿದಂಬರ ಪುರುಷ ॥

(ವಿ.ವಿ.)—

ಇದರಲ್ಲಿ ವಿರಕ್ತಿ, ಸಮವಸರಣ, ಕುಮಾರ ವಿಜಯ, ಮುನಿಭುಕ್ತಿ, ತತ್ವಾರ್ಥಗಳೆಂದು ಐದು ಸಂಧಿಗಳವೆ. ವಿರಕ್ತಿ, ಮುನಿಭುಕ್ತಿ ಸಂಧಿಗಳಲ್ಲಿ ಕಡೆಯ ಮೂರು ಪದ್ಯಗಳಿಲ್ಲ. ತತ್ವಾರ್ಥ ಸಂಧಿಯಲಿ ಕೊನೆಯ ಪದ್ಯದ ಮೇಲಿನ ಎರಡು ಪದ್ಯಗಳೂ ಇಲ್ಲ. ಕುಮಾರ ವಿಜಯ ಸಂಧಿಯಲ್ಲಿ ೬೯ ಪದ್ಯಗಳವೆ. ಸಮವಸರಣ ಸಂಧಿ ಸಮಗ್ರ. ಅತಿ ಶಿಥಿಲ.

ಇದು ಹಿಂದೆ ವರ್ಣಿತವಾಗಿರುವ ಈ ಗ್ರಂಥದ ಸ್ವಲ್ಪ ಭಾಗವಾಗಿದೆ. ಉಳಿದ ವಿಷಯಗಳಿಗಾಗಿ ಹಿಂದಣ ೩೯೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 399. ಭರತೇಶ್ವರ ಚರಿತ್ರ-

BHARATĒŚVARA CARITRE.

Substance, palm-leaf. Size, $11\frac{13}{16} \times 1\frac{1}{4}$ inches. Pages, 234. Lines, 6 on a page. Character, Kanarese. Condition, very much injured. Appearance, old.

Contains the Sandhis (Samavasarana, Parvābhiṣēka, Dīkṣa, Putra-viyōga, Putra vaivāha, Tīrthāgawana and Ambikādarsana) complete, and Kamadēvasthāna sandhi incomplete. (96 stanzas only are in this Sandhi).

Same work as the above but different sandhis ; by the same author.

Beginning :

ಪರಮ ಪರಂಜ್ಯೋತಿ ! ಕೋಟಿಚಂದ್ರಾದಿತ್ಯ ।
ಕಿರಣ! ಸು . . . ॥
. . . . ।
. . . . ಥಮ ಜಿನೇಶ ॥
ದುರಿತಗೋಧೂಮಘರಟ್ಟ ಸಜ್ಯಾ ತಕಿಟ್ಟ ।
ಪರದೇವ . . . . . ॥
. . . . ।
. . . . . ಸಿದ್ಧ ॥

End :

. . . ದಕ್ಷಿಣಹಯಗಜಾಭರಣಗೆ ।
ಳೆಲ್ಲಲ್ಲಿ ಬಡವರೊಳರಲು ॥
ಎ . . . . ।
. . . . . ॥
. . ವರಾ ರೊಡೆಯವ್ಯಂತರರು ಖೇಚರರೇನು ।
ಬಿಡುವರೆ ಮ್ಲೇಚ್ಛ . . . ॥
. . . . ಶಕ್ತಿ ।
ವಿಡಿದತಿಬಲರಲ್ಲಿಯೆಂದ ॥
. . . . ।
. . . . . ಊರಿಯ ॥
ಭೇರಿಯ ದನಿಗಳ್ಕೆ ಬಂದು ಕಂಡರು ವೇಗ ।
ಮಾರನಣ್ಣನ . . . . .

(ವಿ-ವಿ.)—

ಅಸಮಗ್ರ. ಸಮವಸರಣ, ಪರ್ವ್ಯಾಭಿಷೇಕ, ದೀಕ್ಷಾ, ಪುತ್ರವಿಯೋಗ, ಪುತ್ರವೈವಾಹ, ತೀರ್ಥಾಗಮನ, ಅಂಬಿಕಾದರ್ಶನ ಸಂಧಿಗಳು ಸಮಗ್ರ. ಕಾಮದೇವಾಸ್ಥಾನದ ಸಂಧಿಯಲ್ಲಿ 96 ಪದ್ಯಗಳಿವೆ. ಅತ್ಯಂತ ಶಿಥಿಲ. ಗ್ರಂಥಪಾತ ಬಹಳವಾಗಿದೆ.

ಕವಿ ರತ್ನಾಕರವರ್ಣಿ. ಈ ಗ್ರಂಥದ ವಿಷಯವಾಗಿ ಮಿಕ್ಕ ಎಲ್ಲ ಸಂಗತಿಗಳನ್ನೂ ೩೯೦ ನೆಯ ನಂಬರಿನಲ್ಲಿ ನೋಡಿ ತಿಳಿದುಕೊಳ್ಳುವುದು.

No. 400. ಭವ್ಯಾನಂದ ನೋಂಪಿ.

BHAVYĀNANDANŌMPY.

Substance, Śrītala. Size, $10\frac{1}{16} \times 1\frac{7}{8}$ inches. Pages, 5. Lines, 8 on a page. Character, Kanarese. Condition, injured. Appearance, old.

Begins on fol. 37*b*. For other works in this manuscript see under No 318 ante.

Complete.

Deals with the procedure for the performance of the ceremony known as Bhavyānanda Nōmpi according to jainism.

Beginning:

ಶ್ರೀಪಂಚಗುರು ಪದಂಗಳ, ಭಾವಿಸಿ ಸದ್ಭಕ್ತಿಯಿಂದಮೆಱಗಿ ಬಳಿಕ್ಕಂ, ಭೂವಳಯ ದೊಳೆಸೆವಂತಿರೆ, ಸೂಚಿಸು, ವೆಂ ಭವ್ಯಾನಂದಮೆಂಬ ನೋಂಪಿಯ ಕಥೆಯಂ ॥

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡು. ರಾಜಗೃಹಮೆಂಬುದು ಪೊಱಲ್. ಅದನಾಳ್ವಂ ಶ್ರೇಣಿಕ ಮಹಾ ಮಂಡಲೇಶ್ವರಂ. ಆತನ ಪಟ್ಟದರಸಿ ಚೇಳನಿ ಮಹಾದೇವಿಯೆಂಬಳ್. ಅಂತವರಿರ್ವರುಂ ಸುಖದಿಂ ರಾಜ್ಯಂಗೆಯ್ಯುತ್ತುಮಿರಲೊಂದು ದಿವಸಂ ವನಪಾಲಕಂ ಬಂದು ಸಾಷ್ಟಾಂಗ ಪ್ರಣುತನಾಗಿ ಕೈಗಳಂ ಮುಗಿದು, ಯೆಲೆ ಸ್ವಾಮಿ ! ಯಶೋಭದ್ರರೆಂಬ ದಿವ್ಯಜ್ಞಾನಿಗಳ್ ಮೂಱು ಸಾವಿರದೇಳ ನೂಱೈವತ್ತು, ತಂಡ ಋಷಿ ಸಮುದಾಯಂ ಬೆರಸು ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖ ಸಂವಾಹನಂಗಳೊಳ್ ಜನೋಪದಿಷ್ಟಂ ವಿಹರಿಸುತ್ತಂ ಬಂದು ನಮ್ಮ ಪುರದ ಬಹಿರುದ್ಯಾನವನದೊಳ್ನಿಲ ಸಿದ್ದರೆಂದು ಬಿನ್ನಪಂಗೆಯ್ಯಲ್,

* * * *

ನೋಂಪಿಯ ವಿಧಾನಮೆಂತೆನಲಾವುದಾನೊಂದು ನಂದೀಶ್ವರದ ಶುದ್ಧಪಂಚಮಿಯೊಳ್ಮೊದಲ್ಗೊಂಡು ನೋಂಪರೆಲ್ಲರ್ ದಂತಧಾವನ ಸ್ನಾನಧೋತ್ರ ಸಮೇತರಾಗಿ ಚೈತ್ಯಾಲಯಕ್ಕೆ ಬಂದು ಪಂಚಪರಮೇಷ್ಠಿಗಳ್ಗೆ ಪಂಚಾಮೃತದಿಂದಭಿಷೇಕಮಂ ಮಾಡಿ, ಶ್ರೀಗಂಧ ಕುಂಕುಮ ಕರ್ಪೂರರ ಸುಗಂಧದಿಂದುದ್ವರ್ತನಂ ಮಾಡಿ ಪಂಚಪರಮೇಷ್ಠಿಗಳ ಶ್ರೀಪಾದ ಸನ್ನಿಧಿಯೊಳ್,

ಕಂ॥ ಜಲಧಾರೆಯನ್ನೈದಂ ಸ ।
ತ್ತಿಲಕಮನ್ನೈದಂ ಸುಲಕ್ಷಣಾಕ್ಷತೆ [ಪುಂಜಮನ್ನೈ] (ಯ್ಯ) ದಂ ॥
ವಿಲಸಿತ [ಪ್ರಸೂನ] (ಕುಸುಮ) ಮನ್ನೈದಂ ।
ಫಲಮೈದಂ ಭಕ್ತಿಯಿಂದ ಮಚ್ಚಿರ್ಸಿ ಬಳಯಂ ॥

ತದನಂತರಮೇನಾನುಮೊಂದು ಭಕ್ಷ್ಯಸಹಿತ ಮಷ್ಟವಿಧಾರ್ಚನೆಯಂ ಮಾಡಿ ತದನಂತರಂ ಶುಕ್ರಗುರು ಪೂಜೆಯಂ ಮಾಡಿ ಕಥೆಯಂ ಕೇಳ್ದು [ಸ್ಯೆ] (ಸಂ) ಯಮದಿಂದ್ಯೆದು ಜಪಹಂ ಮಾಡಿ ಯಥಾಶಕ್ತಿಯಿಂ ಸ್ತುತಿಯಿಸಿ, ಪಂಚಪರಮೇಷ್ಟಿಗಳ(ಂ) ಪಂಚ ನಮಸ್ಕಾರ (ಂ ಗೊಂಡು) [ಜಪಿಯಿಸಿ] ಪವಾಸಮಂ ಕೈಕೊಂಡು, ವ್ರುಪವಾಸಕ್ಕಾರದಿದ್ಬೊರ್ಡೆ ಯೇಕಭುಕ್ತಮಂ ಮಾಬ್ಪುದುಮಿಂಪಾಂಗಿನಿಂ ಮುಂದಣಾಷ್ಟಮಿ ಚತುರ್ದಶಿಗಳೊಳಂ ತಪ್ಪದೆ ನೋಂತು ಕೃಷ್ಣಪಕ್ಷದ ಪಂಚಮಿ ಯಷ್ಟಮಿ ಚತುರ್ದ್ದಶಿಗಳೊಳುಂ ತಪ್ಪದೆ ನಾಲ್ಕನೆಯ ತಿಂಗಳ ನಂದೀಶ್ವರದ ಶುಕ್ಲಪಕ್ಷದ ಪಂಚಮಿಯಂದು ಉದ್ಯಾಪನೆಯಂ ಮಾಬ್ಪ ಕ್ರಮಮೆಂತೆನೆ.

End:

ನೋಂಪಿಯ ವಿಧಾನಮನುಜ್ಜವಣೆಯ ಕ್ರಮಮಂ ಬೇಬಿತೆ ಕೇಳ್ದು ಪರಮಾನಂದಂ ಪುಟ್ಟಿ ಮುನಿಪಾದಕ್ಕೆಱಗಿ ಬೀಳ್ಕೊಂಡು, ಪುರಮನರಮನೆಯಂ ಪೊಕ್ಕು ಸುಖದಿಂದಿರೆ, ನೋಂಪಿಯ ದಿಸಂ ಬರೆ ಪರಮಾನುರಾಗದಿಂ ಯಥಾ ಕ್ರಮದಿಂ ಸವಿಸ್ತರಂ ನೋಂತು [ಜ್ಜಸ್ಕ] (ಜ್ಜಗಿ)ಸಿ ತತ್ಫಲದಿಂ ತದ್ಭವದಲ್ಲಿಯ ಪಲವು ನಿಧಿನಿಧಾನಂಗಳೊಡೆಯರಾಗಿ ಪರಮೈಶ್ವರ್ಯದೊಳ್ಕೂಡಿ, ದೇವಕುಮಾರ ಸನ್ನಿಭರಪ್ಪ ಪಲಂಬರ್ಮಕ್ಕಳಂ ಪಡೆವು. ದಿವ್ಯಸುಖಮನನುಭವಿಸಿ, ಜಿನಧರ್ಮ ಪ್ರಭಾವಮಂ ಪಿಱಿದಾನುರಾಗದಿಂ ಮಾಡಿ ಭಕ್ತೋತ್ತಮರೆನಿಸಿ ನೆಗಬ್ದಿ ಪರಂಪರೆಯಿಂ ಸ್ವರ್ಗ್ಗಾಪವರ್ಗ್ಗಸುಖಮನೆಯ್ದಿದರಿಂತೀ ಭವ್ಯಾನಂದವೆಂಬ ನೋಂಪಿಯಂ ಸಮ್ಯಕ್ತ್ವ ಪೂರ್ವಕಮಾಗಿ ನೋಂತವರ್ಗ್ಗಂ ನೋನಿಸಿದವರ್ಗ್ಗಂ ಮಂಗಳಂ.

Colophon:

(ಸಂಪೂರ್ಣಂ).

(ವಿ-ವಿ.)—

ಸಮಗ್ರ. ಶಿಥಿಲ. ಇದರೊಡನೆ ಇನ್ನೂ ಅನೇಕ ಗ್ರಂಥಗಳವೆ. ಅವನ್ನು ೩೧೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಗದ್ಯರೂಪವಾದುದು. ಆದರೆ ಮಧ್ಯದಲ್ಲೊಂದು ಕಂದಪದ್ಯವಿದೆ. ಗ್ರಂಥಾವತಾರದಲ್ಲಿ ಪದ್ಯದ ಶೈಲಿಯನ್ನನುಸರಿಸಿದ ಗದ್ಯ ಭಾಗವು ಸ್ವಲ್ಪವಿದೆ. ಜೈನಮತನೀತಿಯಂತೆ ಭವ್ಯಾನಂದ ನೋಂಪಿಯ ವಿಧಾನವು ಹೇಳಿದೆ. ಅದನ್ನು ಉದಾಹರಣೆಗಾಗಿ ಮೇಲೆ ಕೊಟ್ಟಿರುವ ಭಾಗಗಳಿಂದ ತಿಳಿಯುವುದು. ಕವಿಯಾರೆಂಬುದು ಗೊತ್ತಾಗುವುದಿಲ್ಲ.

No. 401. ಮಿಗೆಯರಳ ನೋಂಪಿ.

MIGEYARAḶANŌMPY.

Substance, Srītala. Size, $10\frac{1}{16} \times 1\frac{7}{8}$ inches. Pages, 6. Lines, 8 on a page. Character, Kanarese Condition, injured. Appearance, old.

Begins on fol. 34*a*. For other works herein see under No. 318 **ante**.

Complete.

Deals with the procedure for the performance of Migeyarala ceremony according to Jain system. The performance of this ceremony, is believed to be effective in removing poverty.

The name of the author is not known ; but the date of the work is presumed to be about the 13th century A.D.

Beginning:

ಶ್ರೀವರ್ಧಮಾನ [ಜಿನ] ಮುಕ್ತಿಸು ।
ಖಾವಾಪ್ತಿ ನಿಮಿತ್ತಮರು . ರತ್ನತ್ರಯಮಂ ॥
ದಾವನ ಬೋಧಂ ಬೆಳಗಿದು ।
ದಾವಿಭು ನಮಗೀಗೆ ವಿಮಳರತ್ನತ್ರಯಮಂ ॥

ಮಿಗೆ ಪಂಚಗುರು ಪದಂಗಳ ।
ನಗಣಿತಮತಿಯಿಂದಮೆಱಗಿ ಭಕ್ತಿಯ ಭರದಿಂ ॥
ಸೊಗಯಿಪ ಕನ್ನಡದಿಂದಂ ।
ಜಗಕ್ಕೆ ಮಿಗೆಯರಳ ನೋಂಪಿಯಂ ಪ್ರಕಟಿಸುವೆಂ ॥

ವ॥ ಅದೆಂತೆದೊಡೀ ಜಂಬೂದ್ವೀಪದೊಳ್ ಭರತಕ್ಷೇತ್ರದಾವಂತಿ ವಿಷಯಮೆಂಬುದು ನಾಡು. ಕನಕಪುರಮೆಂಬುದು ಪೊಬಿಲ್. ಅದನಾಳ್ವಂ ಜಯಂಧರನೆಂಬರಸಂ. ಆತನ ಪಟ್ಟದರಸಿ ಪೃಥ್ವೀಮತಿ ಮಹಾದೇವಿಯೆಂಬಳ್. ಅಂತವರೀರ್ವರುಂ ಸುಖಸಂಕಥಾ ವಿನೋದ ದಿಂ ರಾಜ್ಯಂಗೆಯ್ಯುತ್ತುಮಿರಲಾಪುರದೊಳೊರ್ವ ಧನಪಾಲನೆಂಬ ಪರದನಾತನ ಪಂಡಿತಿ ಧನ ಶ್ರೀಯೆಂಬಳ್ ತನಗುಡಲುಂ ತೊಡಲುಮಿಲ್ಲದೆ ಕಡುಬಡತನಂ ಪೆರ್ಚೆ ದರಿದ್ರಪೊಱೆಯಂ (?) ಪೊತ್ತು ಆಯುಮಿಳಪಲೆಡೆಯಿಲ್ಲದೆ ನಾನಾಕ್ಲೇಶ ಪರಂಪರೆ [ದುಃಖಮ] (ಯ) ನನುಭವಿಸು ತ್ತುಂ, ಪೆಱರ ಮೆಯ್ಯೊಳಾದರಿಸಿ ಸೌಭಾಗ್ಯ ರೂಪವಿಲಾಸ ವಿಭವ ಜೋಗೋಪ ಭೋಗ [ದ] ಸಂಪತ್ತುಗಳಂ ಕಂಡು ತನ್ನ ಮನದೊಳ್ ಬಯಸುತ್ತುಂ, ತನಗಂತಪ್ಪುದಂ ಪಡೆಯದೆ ಪಿಱಿ ದುಮ್ಮಳಸುತ್ತುಮಿರ್ಪನ್ನೆಗಮೊಂದು ದಿವಸಂ ಶ್ರುತಸಾಗರ ಭಟ್ಟಾರಕರೆಂಬನಧಿಜ್ಞಾನಸಂ ಪನ್ನರುಂ ಚರಿಗೆ ನಿಮಿತ್ತಂ ಬಂದಾಪುರದೊಳಗಣ ಪರದ ಸಿರಿಯೊಳ್ ಚರ್ಯಾಮಾರ್ಗದಿಂ ಬರು ತ್ತಿರೆ ದೂರಾಂತರದೊಳ್ ವರದತ್ತ ಪರದಂ ಕಂಡು ಪಿರಿದೊಂದುತ್ಸಾಹದಿಂ ಸುವಸ್ತ್ರೋತ್ತ ರಾಂಗಂ ಬೆರಸಿ ಬಂದು ತ್ರಿಪ್ರದಕ್ಷಿಣಂಗೆಯ್ದುಮಲ್ಲಿ ಪಂಚಮುಷ್ಟಿಯಿಂ ಬಂಧಿಸಿ ನಿಲ್ಲಿಸಿ ನವ ನಿಧಿ ಸಪ್ತಗುಣ ಸಮನ್ವಿತನಾಗಿ ನಿರಂತರಾಯಮಂ ಮಾಡಿಸಿದನಂತರಂ ಧರ್ಮ ಶ್ರವಣಮಂ ಕೇ ಳುತ್ತುಮಿರೆ, ತದವಸರದೊಳ್ ಧನಶ್ರೀಯುಮಲ್ಲಿಗೇನಾನುಂ ಕಾರಣದಿಂ ಬಂದು ತಾನುಂ ಸದ್ಧರ್ಮಶ್ರವಣಮಂ ಕೇಳ್ದು ಸಂತುಷ್ಟಚಿತ್ತೆಯಾಗಿ ಗುರುಗಳ್ ಶ್ರೀಪಾದಪದಂಗಳಗೆಱಗಿ ಕೈ ಗಳಂ ಮುಗಿದು, ಯೆಲೆ ಸಾಮಿ ! ಯೆನಗೀಭವದೊಳಂತಪ್ಪ ದರಿದ್ರಾವಸ್ಥೆಯಾವ ಪಾಪದ ಫಲದಿಂದಾದುದೆಂದು ಬೆಸಸಿಮೆಂದು ಬಿನ್ನಪಂಗೆಯ್ಯೆ ಅವರಿಂತೆಂದು ಪೇಳ್ದಿರ್.

* * * *

ನೀನೀ ಮಿಗೆಯರಳ ನೋಂಪಿಯಂ ಜಿನಭಕ್ತಿ ಪೂರ್ವಕಂ ಕೈಕೊಂಡುದ್ಯಾಪನೆಯಂ ಮಾ ಡಲ್ ನಿನಗೆ ದರಿದ್ರಾವಸ್ಥೆ ಪಿಂಗು[ಗೆ] (ಮೆ)ಂದು ಪೇಳ್ದುದುದಾ ನೋಂಪಿಯ ವಿಧಾನಮೆಂ ತೆನೆ ;—

ಅಷಾಢಮಾಸದ ನಂದೀಶ್ವರದಷ್ಟಮಿಯೊಳ್ ನೋಂಪುವರೆಲ್ಲರ್ ಶುಚಿಭೂರ್ತರಾಗಿ ಚೈತ್ಯಾಲಯಕ್ಕೆ ಬಂದು ಜಿನೇಶ್ವರಂಗೆ ಯಥಾಶಕ್ತಿಯಿಂದಭಿಷೇಕಾಷ್ಟ ವಿಧಾರ್ಚನೆಯಂ ಮಾಡಿ ತದನಂತರಂ ಜಿನಭಕ್ತಿ ಪೂರ್ವಕಂ ನೋಂಪಿಯಂ ಕೈಕೊಂಬುದು. ಆದಿನಂ ಮೊದಲ್ಗೊಂಡು ದೊರಕೊಂಡ ತೆಱದಿಂ ಪುಷ್ಪದೊಳೊಂದರಳಾದಿಯಾಗಿ ದಿನಂಪ್ರತಿ ಪ್ರತಿಯೊಂದೊಂದರಳಂ ಮಿಗಿಲಾಗಿ ತ್ರಿಕರಣಶುದ್ಧಿಯಿಂ ಜಿನೇಶ್ವರಂಗರ್ಚಿಸುವುದು. ನಿರ್ಭರಭಕ್ತಿಯಿಂ ವಂದಿಸುವುದು. ಇಂತೀಕ್ರಮದಿಂ ಕಾರ್ತಿಕ ನಂದೀಶ್ವರದ ಪೌರ್ಣಮಾ ಪರ್ಯಂತಂ ಮಾಳ್ಪುದು. ಪೌರ್ಣಮಿಯೊಳ್ ಯಥಾಶಕ್ತಿಯಿಂ ಜಿನೇಶ್ವರಂಗಭಿಷೇಕ ಪೂಜೆಯಂ ಮಾಡಿಸುವುದು. ತದನಂತರಂ ದೇವಗೊರ್ಗೆಂದು ಸುವರ್ಣ ಪುಷ್ಪಮನರ್ಚಿಸುವುದು. ನೋಂನಿಸಿದಜ್ಜಯಾಗ್ಗೆಡೆ ಕೊಡುವುದು. ಇಂತಿದು ಉಜ್ವವಣೆಯ ಕ್ರಮಂ. ಇಂತೀ ನೋಂಪಿಯಂ ಜಿನಭಕ್ತಿ ಪೂರ್ವಕಂ ನೋಂತ ಫಲದಿಂ ಸೀತಾದೇವಿ ಶ್ರೀರಾಮಚಂದ್ರಂಗೆ ಪಟ್ಟದರಸಿಯಾದಳ್. ಚೇಳನಿ ಮಹಾದೇವಿ ಶ್ರೇಣಿಕ ಮಹಾರಾಯಂಗೆ ಪಟ್ಟದರಸಿಯಾದಳ್. ಪ್ರಭಾವತಿ ಮಹಾದೇವಿ ಪ್ರೋದಾಯನ ಮಹಾರಾಯಂಗೆ ಪಟ್ಟದರಸಿಯಾದಳ್. ರೇವತಿ ಮಹಾದೇವಿ ವರುಣಮಹಾದೇವಂಗೆ ಪಟ್ಟಮಹಾದೇವಿಯಾದಳ್.

End:

ಜಿನಭಕ್ತಿ ಪೂರ್ವಕಂ ನೋಂಪಿಯಂ ಕೈಕೊಂಡು ಗುರುಗಳಂ ಬಿಳ್ಕೊಂಡು ಬಳಯ ನೋಂಪಿಯ ದಿನಂ ಬರೆ ಲಕ್ಷ್ಮಿಮಗಂತಿಯರ ಸಮಕ್ಷಮದೊಳೀ ಕ್ರಮದಿಂ ನೋಂತುಜ್ಜವಣೆಯಂ ಮಾಡಿ ತತ್ಫಲದಿಂ ತದ್ಭವದಲ್ಲಿಯೇ ಧನಕನಕಸಮೃದ್ಧಿಯಾಗಿ ತನಗಿಷ್ಟ ವಿಷಯ ಕಾಮ ಬೋಗ ವಿಜ(ವ)ದೊಳ್ಕೂಡಿ ದೇವಕುಮಾರ ಸನ್ನಿಭರಪ್ಪ ಪಲಂಬರ್ಮಕ್ಕಳಂ ಪಡೆದು ಜಿನೇಂದ್ರ ಧರ್ಮದ ಮಹಾಮಹಿಮೆಯಿಂದೀಡಾಡಿ ಪ್ರಭಾವಿಸುತ್ತುಮಿರ್ದ್ದರ್ಗಳಿಂತೀ ಲೋಕೋತ್ತಮಮಾಗಿರ್ದ್ದ ಪರಮೈಶ್ವರ್ಯಕ್ಕೆ ಕಾರಣಮಪ್ಪ ಮಿಗೆಯರಳ ನೋಂಪಿಯಂ ಸಂಯುಕ್ತ್ವ ಪೂರ್ವಕಂ ನೋಂತವರ್ಗ[ಳು]ಂ ನೋನಿಸಿದವರ್ಗ[ಳು]ಂ ಸ್ವರ್ಗಾಪವರ್ಗಮಂ ಪಡೆವರ್.

Colophon:

(ಸಂಪೂರ್ಣಂ).

(ವಿ-ವಿ.)—

ಸಮಗ್ರ. ಶಿಥಿಲ. ಇದರೊಡನೆ ಇನ್ನೂ ಅನೇಕ ಗ್ರಂಥಗಳವೆ. ಅವುಗಳನ್ನು ೩೧೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ವಚನರೂಪವಾದುದು. ಜೈನಮತ ಸಂಬಂಧವಾದ ಮಿಗೆಯರಳ ನೋಂಪಿಯ ವಿಧಾನವು ಇದರಲ್ಲಿ ವರ್ಣಿತವಾಗಿದೆ. ಆ ಬಗ್ಯೆ ಮೇಲೆ ಉದಾಹೃತವಾಗಿರುವ ಭಾಗಗಳಿಂದ ನೋಡಿ ತಿಳಿಯುವುದು. ಕವಿಯಾರೆಂಬುದು ತಿಳಿಯುವುದಿಲ್ಲ. ಈ ಗ್ರಂಥ ರಚನೆಯ ಕಾಲವು ಸು. ೧೩ ನೆಯ ಶತಮಾನವಾಗಿರಬಹುದು.

No. 402. ಯೋಗಾಮೃತಂ.

YŌGĀMṚTAM.

Substance, Śrītala. Size, $16\frac{3}{8} \times 2\frac{1}{16}$ inches. Pages, 7. Lines, 11 on a page. Character, Kanarese. Condition, good. Appearance, old.

Begins on fol. 15*a*, of the manuscript described under No. 321 ante.

A work on Jain philosophy dealing with the nature of the soul, its bondage and liberation.

The name of the author is not known but the date of the work is presumed to be 1300 A.D.

Beginning :

ಮ॥ ಸ್ರ॥ ವಸುಧೇಂದ್ರವ್ರಾತ ದೇವಪ್ರಭುತತಿಪಿನುತಂ ನಿತ್ಯಮತ್ಯಂತಶಾಂತಂ ।
ರಸಗಂಧಸ್ಪರ್ಶವರ್ಣಂ ಅ (?) ಘಹರನಭವಂ ವಿಶ್ವತತ್ವಪ್ರಕಾಶಂ ॥
ಸ್ವಸಹಾಯಂ ನಿಷ್ಕಳಂಕಂ ಸುಖದಪರಮ ಚಿದ್ರೂಪನಪ್ಪಾತ್ಮನಂ ವಂ ।
ದಿಸಿ ಭವ್ಯಾನಂದ ಯೋಗಾಮೃತದ ಮಹಿಮೆಯಂ ಭವ್ಯಲೋಕಕ್ಕೆ ಪೇೞ್ವೆಂ ॥

ಮ॥ ವಿ॥ ಅರಹಂತಾವಳಿಯಿಂದನಾದ್ಯನಿಧನಂ ದ್ರವ್ಯಶ್ರುತಂ ಪುಟ್ಟಿ ವಿ ।
ಸ್ತರದಿಂದಂ ಗಣನಾಥರಿಂ ಗಣನೆವೆತ್ತಾಚಾರ್ಯ ಸಂತಾನದಿಂ ॥
ಬರಲಿಂತೀ ಶ್ರುತಮಲ್ಲಿ ಸಾರಕಥನಂ ದ್ರವ್ಯಾನುಯೋಗಂ ಕರಂ ।
ದೊರೆವೆತ್ತಿರ್ದುದು ಪಾಹುಡತ್ರಯದಿನಾತ್ಮಜ್ಞಾನವಿಜ್ಞಾನದಿಂ ॥

ಶಾ॥ ಆಚಾರ್ಯೋತ್ತಮರಾಪ್ತರಿಂ ತಿಳಿದು ತತ್ವಜ್ಞಾನಿಗಳ್ ಕೊಂಡಕುಂ ।
ದಾಚಾರ್ಯರ್ ಸಕಳಾನುಯೋಗದೊಳಗಂ ತತ್ಸಾರಮಂ ಕೊಂಡು ಪೂ ॥
ರ್ವಾಚಾರ್ಯಾವಳಿಯೋಜೆಯಿಂ ಸಮಯಸಾರಗ್ರಂಥಮಂ ಮಾಡಿ ವಿ ।
ದ್ಯಾಚಾತುರ್ಯಮನೀಜಗಕ್ಕೆ ಮೆಱೆದರ್ ಚಾರಿತ್ರಚಕ್ರೇಶ್ವರರ್ ॥

ಕಂ॥ ಅಱಿಯದವರಱಿವರೊಳ್ ತಾ ।
ಮಱಿವುದು ಪರಮಾತ್ಮಗುಣಮನಱಿವಿಂ ಕರ್ಮಂ ॥
ಪಱಿಪಡುಗುಮಱಿಯದಿರ್ದೊಡೆ ।
ಯಾಱತೆಯುಟ್ಟ್ಟ ತಗುಳ್ದು ಸುತ್ತುತಿರ್ಕುಂ ಕರ್ಮಂ ॥

ಚಂ॥ ಗರುಡಸಮುದ್ರೆಯಿಂ ವಿಷಮಸರ್ಪವಿಷಂ ಕೆಡುವಂತೆ ತೀವ್ರ ಭಾ ।
ಸ್ಕರಕಿರಣಂಗಳಿಂ ತಮದ ಪರ್ವು ತೆರಳ್ದಗಿವಂತೆ ಕೋಪದೊಳ್ ॥
ಪೊರೆಯದೆ ರಾಗದೊಳ್ ಸತತಮೊಂದದೆ ಶುದ್ಧನಿಜಾತ್ಮತತ್ವಮಂ ।
ಸ್ಮರಿಯಿಸಿ ತ್ರಾಳ್ದು ಪೋಕುಮಘ ಸಂಕುಳಮೆಂಬುದಿದಾವ ವಿಸ್ಮಯಂ ॥

ಕಂ॥ ಎಂದಿಂತು ಬಗೆದಬಗೆಯಿಂ ।
ದಂದುಗಮಂ ಬಿಟ್ಟು ಶುದ್ಧಭಾವನೆಯಿಂದಂ ॥
ಕುಂದದೆ ನೋೞ್ಪುದು ನಿಚ್ಚಂ ।
ಸಂದೇಹಂ ಬಿಡದೆ ನಿನ್ನ ಚಿತ್ತದೆ ನಿನ್ನಂ ॥

* * * *

ಕಂ॥ ರಾಗಂ ತಿರ್ಯಗ್ಗತಿಗಳ ।
ನಾಗಿಸುಗುಂ ದ್ವೇಷಮಂತೆ ನರಕಕ್ಕೊಯ್ಗುಂ ॥
ರಾಗದ್ವೇಷಂಗಳ ತಾ ।
ನಾಗದೆ ಸತೆ ಯೋಗಿಗಳ್ಗೆ ಕರ್ಮಂ ಕಿಡುಗುಂ ॥

ವಾಲಾಗ್ರ ಪರಿಗ್ರಹಮೇ ।
ನಾಳಾಪಂ ನಿನ್ನನದುವೆ ಕಿಡಿಸಲ್ ಸಾಲ್ಗುಂ ॥
ಸ್ಥೂಳ ಪರಿಗ್ರಹಸಹಿತಂ ।
ಬಾಳಸಲಾರ್ತಪನೆ ನರಕದುಃಖದೊಳಾಳ್ಗುಂ ॥

ಮಾಳನಿ॥ ಉಭಯಸಮಯಸಾಗಂ ಸಾರತತ್ತ್ವ ಸ್ವರೂಪಂ ।
ಶುಭಮಶುಭವಿದೂರಂ ಶುದ್ಧಚೈತನ್ಯಮೇಕಂ ॥
ಪ್ರಭವಹರಣಮೋಕ್ಷಾಪಾಯಮಾನಂದ ಚಿಹ್ನಂ ।
ಪ್ರಭುಗಳಱಿದು ನಂಬಿಂ ಜೈನಭಾವಂ ಪ್ರಭಾವಂ ॥

ಕಂ॥ ಸಮಭಾವನೆ ಮಿಕ್ಕ ತಪಂ ।
ಸಮಭಾವನೆ ತಾನೆ ಮಿಕ್ಕ ಸಚ್ಚಾರಿತ್ರಂ ॥
ಸಮಭಾವನೆ ಶುದ್ಧಾತ್ಮಂ ।
ಸಮಭಾವನೆ ಸಕಲಕರ್ಮನಿರ್ಮೂಲಕರಂ ॥

End:

ಕಂ॥ ಸಂಸಾರಿ ಜೀವನಂ ಸಲೆ ।
ಸಂಸಾರಾಂಬುಧಿಯೊಳದುರ್ಗುಂ ಪರಭಾವಂ ॥
ಸಂಸಾರ ಶರಧಿಯಿಂವಂ ।
ಸಂಶಯಮೇನಾತ್ಮಭಾವಮದು ಪೊಱಮಡಿಕುಂ ॥
ಪೊರ್ದದೆ ಜಳಮಳನತೆಯುಂ ।
ಪೊರ್ದದೆ ಪರದ್ರವ್ಯಮೆನಿತುಮಂ ಪರಿಕರಮಂ ॥
ಪೊರ್ದದೆ ನಿಜಾತ್ಮಭಾವದೊ ।
ಳಿರ್ದುದು ಶುದ್ಧೋಪಯೋಗಮಿಂತಿದು ಸಾರಂ ॥
ಮಱೆಯಿಲ್ಲದದುವೆ ಶ್ರುತಮುಂ ।
ಮಱೆಯಿಲ್ಲದದುವೆ ಮೋಕ್ಷಮಾರ್ಗಮದೆನಿತ್ರುಂ ॥
ಮಱೆಯಿಲ್ಲದದುವೆ ತಪಮುಂ
ಮಱೆಯಿಲ್ಲದೆ ಶಿಕ್ಷೆವೇಳ್ವ ನಿಜಗುರುವೆನಿಕುಂ ॥
ಇಂತೀ ನಿಲಪಿಂ ಪಡೆವರ ।
ನಂತಸುಖಾಸ್ಪದಮನೆಯ್ದುವರ್ ಜಿನಪರ್ ವೇ ॥
ಬ್ದಿಂತಿರ್ದು ನಿನ್ನನಿಂ ನಿ ।
ಶ್ಚಿಂತಂ ನೋಡುವುದು ನಿನ್ನ ಜ[ಲ್ಪ](ನ್ಮ)ದ್ವಯಮಂ ॥
ಪರಿಣಾಮವೊಂದೆ ದುಃಖದ ।
ಬರವಿಂಗಂ ಸೌಖ್ಯದೇಳ್ಗೆಗಂ ಕಾರಣಮಾ ॥
ಪರಿಣಾಮದಿಂದ ದುಃಖಂ ।
ಪರಿಹರಿಸುವ ಸೌಖ್ಯಮಪ್ಪ ಪಾಂಗಿಂ ನೆಗೞಾ ॥
ಭವ್ಯಾವಳಿಗೆ ಹಿತಂ ಸ್ವ ।
ದ್ರವ್ಯಾರಾಧನೆಯೆ ಮೋಕ್ಷಮಿದಱಿಂದಕ್ಕುಂ ॥
ನಿರ್ವ್ಯಾಜಂ ಯೋಗಿಪರ ।
ದ್ರವ್ಯಾರಾಧನೆ ಶುಭಾಶುಭಂಗಳೆನಿಕ್ಕುಂ ॥

Colophon:

ಯೋಗಾಮೃತಂ ಸಮಾಪ್ತಂ.

(ವಿ.ವಿ.)—

ಸಮಗ್ರ. ಉತ್ತಮ ಶ್ರೀತಾಳಪತ್ರ. ಒಳ್ಳೆಯ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೩೦೧ ನೆಯ ನಂಬರಿಂದ ತಿಳಿಯುವುದು.

ಇದು ಕಂದವೃತ್ತಗಳಲ್ಲಿ ಬರೆದಿದೆ. ಪದ್ಯಗಳು ೧೦೨. ಇದು ವೇದಾಂತವನ್ನು ಬೋಧಿಸುವ ಗ್ರಂಥವು. ಗ್ರಂಥದಾದಿಯಲ್ಲಿ ಕವಿ ಆತ್ಮನನ್ನು ವಂದಿಸಿದ್ದಾನೆ. ಕವಿಯಾರೆಂಬುದು ಇದರಿಂದ ತಿಳಿಯುವುದಿಲ್ಲ. ಕವಿಚರಿತ್ರಕಾರರು ಈ ಗ್ರಂಥದ ಕಾಲವನ್ನು ಸು ೧೩೦ ಇರಬಹುದೆಂದು ಬರೆದಿದ್ದಾರೆ (ಕವಿಚರಿತೆ, ೩ ನೆಯ ಸಂಪುಟ, ಪುಟ ೨೬೨.)

No. 403 ರತ್ನಕರಂಡಕ (ಕರ್ಣಾಟಕ ಟೀಕಾ ಸಹಿತ).
RATNAKARANḌAKA (WITH KANARESE ṬĪKA).

Substance, palm-leaf. Size, $9\frac{1}{2} \times 1\frac{1}{4}$ inches. Pages, 168. Lines, 6 on a page, Character, Kanarese. Condition, injured. Appearance, old.

Complete in 7 Paricchēdas.

A manual of Jainism. The work contains a commentary in Kanarese for the Sanskrit original by Pujyapāda. The name of the commentator is not known.

The subjects treated herein are :—

(1) ದರ್ಶನಾಧಿಕಾರ.
(2) ಸಮ್ಯಗ್ಜ್ಞಾನಾಧಿಕಾರ.
(3) ಅಣುವ್ರತಾಧಿಕಾರ.
(4) ಗುಣವ್ರತಾಧಿಕಾರ.
(5) ಶಿಕ್ಷಾವ್ರತಾಧಿಕಾರ.
(6) ಸಲ್ಲೇಖನಾಧಿಕಾರ.
(7) ಶ್ರಾವಕನಿಲಯಾಧಿಕಾರ.

The transcription of this manuscript was completed on Wednesday the 8th day of the bright half of Śrāvaṇa in the year Kālayukti.

Beginning:

ಶ್ಲೋ ॥ ನಮಃ ಶ್ರೀವರ್ಧಮಾನಾಯ । ನಿರ್ಧೂತಕಲಿಲಾತ್ಮನೇ ॥
ಸಾಲೋಕಾನಾಂ ತ್ರಿಲೋಕಾನಾಂ । ಯದ್ವಿದ್ಯಾ ದರ್ಪಣಾಯತೇ ॥

ಟೀ॥ ಸಾಲೋಕಾನಾಂ = ಆಲೋಕದೊಡನೆ ಕೂಡಿದ, ತ್ರಿಲೋಕಾನಾಂ = ಮೂರು ಲೋಕಂಗಳಿಗೆ, ಯದ್ವಿದ್ಯಾ = ಆವನೋರ್ವ ಪರಮೇಶ್ವರನ ಕೇವಲ ಜ್ಞಾನವು, ದರ್ಪಣಾಯತೆ = ಕನ್ನಡಿಯ ಹಾಗೆ ಆಚರಿಸುತ್ತಿಹುದು, ಆ ನಿರ್ಧೂತ = ಕೆಡಿಸಲ್ಪಟ್ಟ, ಕಲಿಲಾತ್ಮನೇ = ಜ್ಞಾನಾವರಣಾದಿ ಕರ್ಮಸ್ವರೂಪವನುಳ್ಳ, ಶ್ರೀವರ್ಧಮಾನಾಯ = ಅಂತರಂಗ ಬಹಿರಂಗ ಶ್ರೀಯೊಳ್ಕೂಡಿದ ವರ್ಧಮಾನ ತೀರ್ಥೇಶ್ವರಂಗೆ, ನಮಃ = ನಮಸ್ಕಾರವ ಮಾಡಿಹೆನು.

ದೇಶಯಾಮಿ ಸಮೀಚೀನಮ್ । ಧರ್ಮಂ ಕರ್ಮನಿಬರ್ಹಣಮ್ ॥
ಸಂಸಾರದುಃಖತಸ್ಸತ್ವಾನ್ ಯೋಧರತ್ಯುತ್ತಮೇ ಸುಖೇ ॥

ಟೀ॥ ಯಃ = ಆವುದೊಂದು, ಸತ್ವಾನ್ = ಜೀವಂಗಳನ್ನು, ಸಂಸಾರದುಃಖತಃ =, ಚತುರ್ಗತಿ ಭ್ರಮಣರೂಪವಹ ಸಂಸಾರ ದುಃಖದತ್ತಣಿಂದತ್ತು, ಉತ್ತಮೇ = ಉತ್ಕೃಷ್ಟವಹ ಸುಖೇ = ಅಭ್ಯುದಯ ನಿಶ್ರೇಯಸರೂಪವಹ ಸುಖದಲ್ಲಿ, ಧರತಿ = ಇರಿಸುವುದು, ಕರ್ಮನಿಬರ್ಹಣಮ್ = ಕರ್ಮಗಳನ್ನು ಕೆಡಿಸಿದ, ಸಮೀಚೀನಂ = ಒಳ್ಳಿತ್ತಹ, ತಂ ಧರ್ಮಂ = ಅಂತಹ ಧರ್ಮವನ್ನು, ದೇಶಯಾಮಿ = ಹೇ[ಳಿಹೆನು] (ಳುತ್ತೇನೆ).

* * * *

॥ ವಸಂತ ತಿಲಕ ॥

ದೇವೇಂದ್ರ ಚಕ್ರಮಹಿಮಾನಮಮೇಯಮಾನಂ ।
ರಾಜೇಂದ್ರ ಚಕ್ರಮ ವನೀಂದ್ರ ಶಿರೋಽರ್ಚನೀಯಂ ॥
ಧರ್ಮೇಂದ್ರ ಚಕ್ರಮಧರೀಕೃತ ಸರ್ವಲೋಕಂ ।
ಲಬ್ಧ್ವಾ ಶಿವಂಚ ಜಿನಭಕ್ತಿರುಪೈತಿ ಭವ್ಯಃ ॥

ಟೀ॥ ಜಿನಭಕ್ತಿ = ಜಿನೇಶ್ವರನಲ್ಲಿ ನಿರ್ಭರವಹ ಭಕ್ತಿಯನುಳ್ಳ, ಭವ್ಯಃ = ಭವ್ಯನು, ಅಮೇಯಮಾನಂ = ಹಿರಿದಹ ಪೂಜೆಯನುಳ್ಳ, ದೇವೇಂದ್ರ ಚಕ್ರಮಹಿಮಾನಂ = ದೇವೇಂದ್ರರ ಸಮೂಹದ ಮಾಹಾತ್ಮ್ಯವನ್ನು, ಅವನೀಂದ್ರ=ಮಕುಟಬದ್ಧರ, ಶಿರಃ, ಶಿರಸ್ಸಿನಿಂದ, ಅರ್ಚನೀಯಂ = ಅರ್ಚಿಸಲ್ಪಟ್ಟ, ರಾಜೇಂದ್ರಚಕ್ರಂ = ಚಕ್ರವರ್ತಿಗಳ ಚಕ್ರರತ್ನವನ್ನು, ಅಧರೀಕೃತ = ತಮ್ಮಿಂದೀಙಿಗಿಸಲ್ಪಟ್ಟ ಸರ್ವಲೋಕಂ = ಎಲ್ಲಲೋಕವನುಳ್ಳ, ಧರ್ಮೇಂದ್ರ ಚಕ್ರಂ = ತೀರ್ಥಂಕರ ಪರಮಧರ್ಮ ಚಕ್ರವನ್ನು, ಲಬ್ಧ್ವಾ = (ಪ) ಡೆದು, ಶಿವಂಚ = ಮೋಕ್ಷವನ್ನು, ಉಪೈತಿ = ಎಯ್ದುವನು.

Colophon:
ಇತಿ ಶ್ರೀ ಸಮಂತಭದ್ರಸ್ವಾಮಿವಿರಚಿತ ರತ್ನಕರಂಡಕೇ ಸಮ್ಯಗ್ದರ್ಶನಾಧಿಕಾರಃ.

ಆ॥ ಅನ್ಯೂನಮನತಿರಿಕ್ತಂ । ಯಥಾತಥ್ಯಂ ವಿನಾಚ ವಿಪರೀತಾತ್ ॥
ನಿಸ್ಸಂದೇಹಂ ವೇದಯದಾಹುಸ್ತದ್ಜ್ಞಾನಮಾಗಮಿನಃ ॥

End:
ಯಃಶ್ರಾವಕವ್ರತೇ ಶುದ್ಧಃ । ಪರಮಾರಾಧನಾಂಚ ಸಃ ॥
ಕರೋತ್ಯಂತೇಽಚ್ಯುತೇ ಸ್ವರ್ಗೇ, ದೇವಾನಾಮಧಿಪೋ ಭವೇತ್

ಟೀ॥ ಶ್ರಾವಕವ್ರತೇ = ಶ್ರಾವಕವ್ರತದಲ್ಲಿ, ಶುದ್ಧ = ಶುದ್ಧನಹ, ಯಃ = ಆವನೊರ್ವನು, ಅಂತೇ = ಸಮಾಧಿಯ ಕಡೆಯಲ್ಲಿ, ಪರಮ = ಉತ್ಕೃಷ್ಟವಹ, ಆರಾಧನಾಂಚ = ಚತುರ್ವಿಧಾರಾಧನೆಯನ್ನು, ಕರೋತಿ = ಮಾಡುತಿಹನು, ಸಃ = ಆತನು. ಅಚ್ಯುತೇ ಸ್ವರ್ಗೇ = ಹದಿನಾರನೆಯ ಅಚ್ಯುತವೆಂಬ ಸ್ವರ್ಗದಲ್ಲಿ, ದೇವಾನಾಂ = ದೇವರ್ಕಳುಗಳಗೆ, ಅಧಿಪಃ = ಒಡೆಯನು, ಭವೇತ್ = ಅಹನು.

ಮಾಲಿನಿ॥ ಸುಖಯತು ಸುಖಭೂಮಿಃ ಕಾಮಿನಂ ಕಾಮಿನೀವ ।
ಸುತಮಿವ ಜನನೀ ಮಾಂ ಶುದ್ಧ ಶೀಲೋಭುನಕ್ತು ॥
ಕುಲಮಿವ ಗುಣಭೂಷಾ ಕನ್ಯಕಾಸಂಪುನೀತಾತ್ ।
ಜಿನಪತಿಪದಪದ್ಮ ಪ್ರೇಕ್ಷಣೀದೃಷ್ಟಿಲಕ್ಷ್ಮೀಃ ॥

ಟೀ॥ ಸುಖಭೂಮಿಃ = ಮೋಕ್ಷಸುಖಕ್ಕೆ ಸ್ಥಾನವಾದ, ಜಿನಪತಿ = ಶ್ರೀಜಿನೇಶ್ವರನ, ಪದಪದ್ಮ = ಪಾದಪದಂಗಳ, ಪ್ರೇಕ್ಷಣೀ = ಕಾಣ್ಕೆಯನುಳ್ಳ, ದೃಷ್ಟಿಲಕ್ಷ್ಮೀಃ = ಸಮ

ಗ್ದರ್ಶನ ಸಂಪತ್ತಿ, ಮಾಂ = ಎನ್ನನ್ನು, ಸುಖಯಿತು = ಸುಖಯಿಸಲಿ, ಕಾಮಿನೀಂ = ಅವಳು ಅವನ ಸುಖಯಿಸುವಹಾಗೆಂದೊಡೆ, ಸುಖಭೂಮಿಃ = ಇಂದ್ರಿಯಸುಖಕ್ಕೆ ಸ್ಥಾನವಾದ, ಕಾಮಿನೀ = ಪತಿವ್ರತಾಗುಣಂಗಳೊಡನೆ ಕೂಡಿದ ಸ್ತ್ರೀ, ಕಾಮಿನೀಮಿವ=ಪುರುಷನ ಸುಖಯಿಸುವಹಂಗೆ, ಶುದ್ಧಶೀಲಾ = ಗುಣವ್ರತ ಶಿಕ್ಷಾವ್ರತ ಲಕ್ಷಣವಹ ಶುದ್ಧಮಪ್ಪೇಳು ಶೀಲಂಗಳನುಳ್ಳ, ಜಿನಪತಿ = ಜಿನೇಶ್ವರನ, ಪದಪದ್ಮ = ಪದಪದ್ಮಂಗಳ, ಪ್ರೇಕ್ಷಣೀ = ಕಾಣ್ಕೆಯನುಳ್ಳ, ದೃಷ್ಟಿ ಲಕ್ಷ್ಮೀ = ಸಮ್ಯಗ್ದರ್ಶನ ಲಕ್ಷ್ಮಿಯು, ಮಾಂ = ಎನ್ನನ್ನು, ಭನಕ್ತು = ರಕ್ಷಿಸಲಿ, ಕಾ = ಅವಳು ಆವನ ರಕ್ಷಿಸುವ ಹಂಗೆಂದೊಡೆ, ಶುದ್ಧಶೀಲಾ = ದುಶ್ಚಾರಿಣಿಯಲ್ಲದ, ಜನನೀ = ತಾಯಿ, ಸುತಮಿವ = ಮಗನನ್ನು ರಕ್ಷಿಸುವಹಂಗೆ,ಗುಣಭೂಷಾ = ಎಂಟು ಮೂಲಗುಣಂಗಳಿಂದೊಪ್ಪುತಿರ್ಪ, ಜಿನಪತಿ = ಜಿನೇಶ್ವರನ, ಪದಪದ್ಮ = ಪದಪದ್ಮಂಗಳ, ಪ್ರೇಕ್ಷಣೀ = ಕಾಣ್ಕೆಯನುಳ್ಳ, ದೃಷ್ಟಿಲಕ್ಷ್ಮೀಃ = ಸಮ್ಯಗ್ದರ್ಶನ ಲಕ್ಷ್ಮಿ, ಮಾಂ = ಎನ್ನನ್ನು, ಸಂಪುನೀತಾತ್ = ಎಲ್ಲದೋಷಂಗಳನು ತಿರಸ್ಕರಿಸಿ ಪಾವನಮಾಡಲಿ, ಕಾ = ಅವಳು ಆವುದನು ಪಾವನಮಾಡುವ ಹಂಗೆಂದೊಡೆ, ಗುಣಭೂಷಾ = ಗುಣಂಗಳೆಂಬಾಭರಣಂಗಳನುಳ್ಳ, ಕನ್ಯಕಾ = ಕೂಡಗೂಸು, ಕುಲಮಿವ = ತನ್ನಕುಲವ ಪಾವನಮಾಡುವ ಹಂಗೆ.

Colophon :

ಇತಿ ಶ್ರೀ ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡಕೇ ಶ್ರಾವಕನಿಲಯಾಧಿಕಾರಃ
ಸಪ್ತಮ ಪರಿಚ್ಛೇದಃ ಸಮಾಪ್ತಃ.

(ವಿ-ವಿ).—

ಸಮಗ್ರ. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ೫೩ ನೆಯ ಓಲೆಯು ಮುರಿದಿದೆ. ಕೊನೆಯಲ್ಲಿ ' ಕಾಳಾಯುಕ್ತಿ ಸಂವತ್ಸರದ ಶ್ರಾವಣಶುದ್ಧ ಅಷ್ಟಮಿಯೂ ಬುಧವಾರದಲ್ಲಿ ರತ್ನಕರಂಡಕವು ಬರೆದು ಮುಗಿಯಿತು ' ಎಂದಿದೆ. ಈ ಪುಸ್ತಕದೊಡನೆ, ವೈದ್ಯವಿಷಯವನ್ನು ತಿಳಿಸುವ ಮೂರು ಓಲೆಗಳು ಕಡೆಯಲ್ಲಿ ಸೇರಿವೆ. ಮತ್ತು ಈ ಪುಸ್ತಕವು ಸಂಸ್ಕೃತ ' ಡಿಸ್ಕ್ರಿಪ್ಟೀವ್ ಕ್ಯಾಟಲಾಗ್ ' ಸಂಪುಟ ೧೧ ರಲ್ಲಿ ೫೧೬೭ ನೆಯ ನಂಬರಾಗಿ ವರ್ಣಿಸಿದೆ.

ಇದರಲ್ಲಿ ಸಂಸ್ಕೃತಮೂಲ ಶ್ಲೋಕಗಳಿಗೆ ಕರ್ಣಾಟಕಾರ್ಥವು ಪ್ರತಿಪಾದಿತವಾಗಿರುವುದು. ಮೂಲವು ಪೂಜ್ಯಪಾದ ವಿರಚಿತವಾದುದು. ಸಮ್ಯಗ್ ದರ್ಶನ, ಸಮ್ಯಗ್ಜ್ಞಾನ, ಅಣುವ್ರತ, ಗುಣವ್ರತ, ಶಿಕ್ಷಾವ್ರತ, ಸಲ್ಲೇಖನ, ಶ್ರಾವಕನಿಲಯ ಎಂಬ ಏಳು ಅಧಿಕಾರಗಳಾಗಿ ವಿಭಾಗಿಸಿದೆ. ಗ್ರಂಥದಾದಿಯಲ್ಲಿ ವರ್ಧಮಾನ ಜಿನಸ್ತುತಿಯಿದೆ. ಜೈನಧರ್ಮವನ್ನು ಬೋಧಿಸುವ ಗ್ರಂಥವು. ಕರ್ಣಾಟಕಾರ್ಥವನ್ನು ಬರೆದವರಾರೆಂಬುದು ಇದರಿಂದ ತಿಳಿದುಬರುವುದಿಲ್ಲ. ಭಾಷೆಯನ್ನು ನೋಡುವುದಾದರೆ ೧೮ ನೆಯ ಶತಮಾನದಲ್ಲಿ ಬರೆದಿರಬೇಕೆಂದು ತೋರುತ್ತದೆ.

No. 404. ರತ್ನಕರಂಡಕ ಟೀಕೆ.
RATNAKARANḌAKA ṬĪKE.

Substance, Srītāḷa. Size $13\frac{3}{8}$ × 2 inches. Pages, 93. Lines, 8 on a page. Charactor, Kanarese. Condition, much injured. Appearance, old,

Begins on fol. 57*a* of the manuscript described under No. 5167 in the Sanskrit descriptive catalogue Vol. XI.

The puranic stories in a modified form are narrated here to illustrate some of the jain doctrines. The name of the author is not known. In " The lives of kannada poets " Vol II it is stated that one Kamalapandita wrote a commentary on Ratnakarandaka in 1886. But it is not certain whether the present writer is the same as Kamalapandita mentioned above.

Beginning :

ಮಂ ನುಡಿದಪ್ಪೆಯೆನೆ ಅರಸನಳಿಯನಸ್ನಾತ್ವಮನಱಿದು ಕನ್ಯಾಂತಃಪುರದೊಳಿರ್ದ ಕನ್ನೆಯರೊಳ್ ನಿಮ್ಮನೊಲ್ವಳಂ ಮದುವೆನಿಲ್ಲಿಮೆನಲಂತೆಗೆಯ್ವೆನೆಂದು ತನಗೆ ತಕ್ಕಳಂ ನೋಡಲೆಂದು ಪೋಪನಂ ಬೇತಾಳ ಸನ್ನಿಭನಂ ಕಂಡುರೂಪಕಳಾಸಂಪನ್ನೆಯರ್ ಕನ್ನೆಯರುಪಹಾಸ್ಯಂಗೆಯ್ವು ಕಾಡಿದೊಡೆ ಕ್ಷುದ್ರವಿದ್ಯೆಯಿಂ ಕನ್ನೆಯರಂ ಗುಜ್ಜೆಯರಂ ಮಾಡಿದುದಂ ಕಂಡೀ ತಪಸ್ವಿ ಶಾಪಾನುಗ್ರಹ ಸಮರ್ಥನೆಂದರಸಂ ಕನ್ನೆಯರಂ ಕ್ಷಮೆಗೊಳಿಸಿದಾಗಳ್ ಮುನ್ನಿನಂತೆ ಮಾಡಿದೊಡಂದಿಂದಿತ್ತಲಿಂದ್ರಪುರಕ್ಕೆ ಕನ್ನೆವುಜ್ಜೆನಿ (ಕನ್ಯಾಕುಬ್ಜ) ಯೆಂಬ ಪೆಸರಾಯ್ತು ಮತ್ತಂಯ (ಜ) ಮದಗ್ನಿ ಕೆಯ್ಯೇಳಿರ್ದ ಮಾವಿನ ಪಣ್ಗೆಳಸಿದ ಯಶೋವತಿ ಮಹಾದೇವಿಯ ಮಗಳು ರೇಣುಕೆಯಂ ತನ್ನನೊಲ್ವಳೆಂದರಸಂಗೆಪೇೞೆ, ಕೂಸಂ ಕುಡೆ, ಮದುವೆನಿಂದು ಯಮುನಾನದೀ ತಟಸ್ಥಲಮಪ್ಪ ತಾಪಸಾಶ್ರಮಮಂ ಪೊರ್ದಿ ಕೆಲವಾನು ದಿವಸದಿಂದಾ ಯಮದಗ್ನಿಗಂ ರೇಣುಕಿಗಮಿಂದು ರಾಮನುಂ, ಶ್ವೇತರಾಮನುಮೆಂಬ ಯಿರ್ವ್ವರ್ ಮಕ್ಕಳಾಗಿರ್ಪಿನಮೊಂದು ದೆವಸಂ ರೇಣುಕಿ ವ್ರೊಡವುಟ್ಟಿದರಿಂಜಯ ಋಷಿಯಂ ನೋಡಲೆಂದು ಬರೆ ಯಥೋಪಚಾರ ದರ್ಶನಾನಂತರಂ ಯಮದಗ್ನಿಯ ಪ್ರೇರಣೆಯಿಂ ರೇಣುಕಿ ತಮ್ಮಣ್ಣನನೆಂದಳ್.—ತನ್ನ ಮದುವೆಯಂದೇನಂ, ಬಳುವಳಗೊಟ್ಟಿರಿಲ್ಲಿನ್ನಾದೊಡಂ ಕುಡಲು ವೇಳ್ಕುಮೆಂದೊಡೆಮಗೆ ಧರ್ಮಮೆ ಧನಮದಂ ನಿನಗೆ ಕೊಟ್ಟಪೆವದರ್ಕೆ ತ್ರೈಲೋಕ್ಯಮುಂ ಬೆಲೆಯಲ್ಲಿಳದ ಧನವೊಂದು ಭವದೊಳ ಚಿರಮುಮಪಾಯಬಹಳಮುಮಾಗಿ ಸಲ್ಗುಂ. ಸಮ್ಯಗ್ದರ್ಶನಧನಂ ಸ್ವರ್ಗಾಪವರ್ಗ ವಿವಿಧ ಧನಮನೀವುದೆನೆ ರೇಣುಕಿ ಪಿರಿದುಮರ್ಥಿಯಿಂ ಸಮ್ಯಕ್ತ್ವಪೂರ್ವಕಂ ಶ್ರಾವಕವ್ರತಂಗಳಂ ಕೈಕೊಂಡುದರ್ಕೆ ಯಕ್ಷಿದೇವತೆ ಮೆಚ್ಚಿ ಮನೋಭಿಲಷಿತವಸ್ತು ಪ್ರಧಾನ ಸಮರ್ಥವಪ್ಪ ಕಾಮಧೇನು ವಿದ್ಯೆಯುಮನದಂ ಕಾಯಲೆಂದು ಮಂತ್ರಪೂತಮಪ್ಪ ಪರಮವಿದ್ಯೆಯುಮನರಿಂಜಯ ಮುನಿಗಳಿ ಕೊಟ್ಟರೆಂಬಂತಾಗಿ ಕೊಟ್ಟುಪೋದಳಿತ್ತ ಮತ್ತೊಂದು ದೆವಸಮಯೋಧ್ಯಾಪುರದಿಂ ಸಹಸ್ರಬಾಹು ತನ್ನಮಗಂ ಕೃತವೀರಂಬೆರಸು ಯಮದಗ್ನಿಯ ತಪೋವನಕ್ಕೆ ತಮ್ಮ ನಂಟು ಕಾರಣವಾಗಿ ನೀನೆಮ್ಮ ಮನೆಯೊಳುಂಡು ಪೋಪುದೆಂದು ಕಾಮಧೇನುವಿನ ಬಲದಿಂ ಬಲಮೆಲ್ಲಮಂ ತಕ್ಷಣದೊಳೂಡುವುದುಮವನಱಿದು ಕೃತವೀರಂ ತನ್ನ ಕಿರಿಯವ್ವೆ ರೇಣುಕಿಯನೆನ್ನವ್ವ ! ಕಾಮದೇನುವನೆನಗೀಯಲು ವೇಳ್ಕುಮೆಂದೊಡಿದೆಮ್ಮ ಕಾಮಧೇನು ತಾಪಸಯೋಗ್ಯಂ. ವರ್ಣಾಶ್ರಮ ಪರಿಪಾಲಕನಪ್ಪ ನಿನಗೆ ಯೋಗ್ಯಮಲ್ಲೆಂದೊಡಾ ನುಡಿ ತನಗೆ ಕರ್ಣಶೂಲಮಾಗೆ ಜಗದೊಳಾವುದನರ್ಘ್ಯವಸ್ತು ನರಪತಿಗಕ್ಕುಂ. ಕಂದಮೂಲ ಫಲಕಾರಿಗೆ ಗೊರವಂಗಿದೇಕೆಂದಾರಾನುವಡ್ಡಂಬರ್ಪರ್ಬರ್ಕ್ಕೆಂದು ಬಲ್ಲಾಳ್ತನದಿಂ ಕಾಮಧೇನುವನೆಳೆದೊಯ್ವಾಗಳಡ್ಡಂಬಂದ ಯಮದಗ್ನಿಯ (೦) ಕೊಂದು ಪೊೞಲ್ಗೆಪೋದನಿತ್ತಲ್.

* * * *

ದೇವಗುರುಗಳೆಂಬ ಚಾರಣ ಋಷಿಯರ ಸಮೀಪದೊಳ್ ಸಮಸ್ತ ಪರಿಗ್ರಹ ಪರಿತ್ಯಾಗಂಗೆಯ್ದು ವಿಶುದ್ಧಪರಿಣಾಮದಿಂ ಚಾರಣ ಋದ್ಧಿಯನೆಯ್ದಿ ಹಿಮವ . . . ನವಂ ಪಡೆದು ವಿಹರಿಸಿ ಕೈಲಾಸಗಿರಿಯೊಳ್ ಮುಕ್ತಿ ಲಕ್ಷ್ಮೀಕಟಾಕ್ಷೈಕ ಲಕ್ಷಣನಾದನದಱಿನಿಂತು ದೈವ ಗುರುತತ್ವ ವಿಷಯದೊಳ್ ನಿಶ್ಶಂಕಿತರಪ್ಪೆಲ್ಲರ್ಗಮುಭಯಭವಸಿದ್ಧಮಕ್ಕುಮೆಂಬುದೀ ಕಥಾಭಿಪ್ರಾಯಂ.

ನಿಷ್ಕಾಂಕ್ಷಿತೆಯಪ್ಪನಂತಮತಿಯ ಕಥೆಯೆಂತೆಂದೊಡೆ,—ಮಗಧ ವಿಷಯದ ಚಂಪಾನಗರಮನಾಳ್ವ ಸುವರ್ಧನನೆಂಬರಸನ ರಾಜಶ್ರೇಷ್ಠಿ ಪ್ರಿಯದತ್ತಂಗ ಮಂಗಮತಿಗಂ ಪುಟ್ಟಿದ ಮಗಳತ್ಯಂತ ರೂಪಲಾವಣ್ಯಾದಿಗಳಿಂ ನೆಱೆದನಂತಮತಿಯೆಂಬಳು ಸುಖದಿನಿರಲೊಂದು ದಿವಸಂ ನಂದೀಶ್ವರದಷ್ಟಮಿಯೊಳು ಜಿನೇಶ್ವರ ಪೂಜಾನಿಮಿತ್ತಮರ್ಚನಾಸಮೇತಂ ಪ್ರಿಯದತ್ತನುಮಂಗಮತಿಯುಂ ಬರುತ್ತ ಮುಂದೊಡೆಯೊಳು ಮಕ್ಕಳೆಲ್ಲಂ ನೆರೆದು ಅನಂತಮತಿಗೆ ಮದುವೆಯಂ ಮಾಡಿ ದೇವಿ[ಕೆ]ಗೆ ಬಳವಳಿಯಂ ಕೊಡಿಮನೆ,

* * * *

ಒರ್ಮೆ ವಿಲಚರವರಾಹನಿರ್ದ ಗುಹೆಗೆ ಸಮಾಧಿಗುಪ್ತರುಂ ತ್ರಿಗುಪ್ತರೆಂಬಿರ್ವರವಧಿಜ್ಞಾನಿಗಳು ಬರಲೊಡನವರಂ ಕಂಡು ವರಾಹಂ ಜಾತಿಸ್ಮರನಾದುದನಱಿದು ಧರ್ಮಮಂ ಬೆ ಬಿತೆ ಕೇಳ್ದು ವ್ರತಂಗಳಂ ಕೈಕೊಂಡಿರ್ಪುದುದಾ ಪ್ರಸ್ತಾವದೊಳು ಧಮ್ಮಿಲ್ಲಚರವ್ಯಾಘ್ರಂ ಮನುಷ್ಯರ ಸವಡಿಂ ಗಲ್ಲಿಗೆವಪ್ಪುದಂ ಸೂಕರಂ ಮುನಿರಕ್ಷಣಾರ್ಥ(ಂ)ಗುಹಾದ್ವಾರದೊಳಿರ್ದದಱಿತೊಡ[ತ್ರೆ] (ನೆ) ಪೊ[ದಿ] (ರ್ದ)ಪ್ರ[ರ]ದುಂ ಪುಲಿಕಾದ್ರ ಪರಿಣತೆಯಿಂ ಸತ್ತು ನರಕಕ್ಕೆಪ್ರೋಯ್ತು. ಸೂಕರಂ ಕಂಠಗತಪ್ರಾಣನಾಗಿ ಮುನಿಗಳ ಧರ್ಮೋಪದೇಶದಿಂ ದೇಶಾಂತರಂಗನಾಗಿ ಮುಡಿಪಿ ಸೌಧರ್ಮಕಲ್ಪದೊಳುಮಹರ್ದ್ಧೀಕನೆಂಬ ದೇವನಾದನದು ಕಾರಣದಿಂದಾಶ್ರಯದಾನದೊಳು ನಿರತರಕ್ಕೆಂಬುದು ಕಥಾತಾತ್ಪರ್ಯಂ.

ಶ್ರೀ ಜಿನೇಶ್ವರ ಪೂಜಾಫಲಕ್ಕೆ ಭೇಕನುದಾಹರಣ ಮಾದುದದೆಂತೆಂದೊಡೆ.—

End :

ಒರ್ಮೆ ಸುವ್ರತರೆಂಬವಧಿಜ್ಞಾನಿಗಳಪ್ಪ ಋಷಿಯರಂ ಕಂಡು ಭೇಕವೃತ್ತಾಂತಮಂ ಬೆಸಗೊಳಲವರ್ಗೇಱಿತೆ ತನ್ನ ಪುರುಷನಂ . ಳದು ಮಱವಿತೆಯಾಗಿ ವೈರಾಗ್ಯದಿಂ ವ್ರತಗಳಂ ಕೈಕೊಂಡೆನ್ನ ಮನೆಗೆ ತಂದು ಯೋಗ್ಯಮಪ್ಪೆಡೆಯೊಳಿರಿಸಿರ್ದೀಗಳು ನೀಂ ಸಮವಸರಣಕ್ಕೆ ಬರ್ಪಲ್ಲಿ ನಿನ್ನೊಡನೆನ್ನ ಮನೆಯ (ವ) ರೆಲ್ಲಮರ್ಚನೆಯಂ ಕೊಂಡು ಬರಲಾನುಮಲ್ಲಿಯೊಂದು ಬಿರ್ದ ಪೂವಂ ಕಚ್ಚಿಕೊಂಡು ಪೂಜಾನಿಮಿತ್ತಂ ಬರ್ಪಾಗಳೊಂದಾನೆ ಮೆಟ್ಟಿ ಶುಭಪರಿಣಾಮದಿಂ ಪಂಚತ್ವಮನೆಯ್ದಿ ಸೌಧರ್ಮಕಲ್ಪದೊಳು ಪುಟ್ಟಿವುದು ಮುನ್ನೆಂದು ತೆಱೆಯದ ವಿಮಾನದ ಪಡಿಗಳು ನವಸುರಭಿಗಂಧ ಮುಣ್ಕೆ ತೆಱೆವುದುಮವಱೊಳು ರತ್ನತೋರಣಂಗಳುಮ (ಂ) ದೇವಾಂಗದ ವಸ್ತ್ರದ ಗುಡಿಗಳುಮಂ ಕಲ್ಪವೃಕ್ಷದ ಪೂಮಳೆಯುಮಂ ದೇವದುಂದುಭಿಗಳುಮಂ ದೇವಾಂಗ ನೃತ್ಯಮುಮಂ ಜಯಜೀಯವನಂದನವರ್ಧನಮುಮಂ ಮತ್ತಂ ತಮ್ಮತಮ್ಮ ನಿಯೋಗಂಗಳಂ ನಿವೇದಿಸುವ ನಾಕಿನೀನಿಕಾಯಮುಮಂ ಭೋಂಕನೆ ಕಂಡಿವೆಲ್ಲಮೆತ್ತಣದಾನೆತ್ತಣನೇನಿನಿಮಿತ್ತಮಿಲ್ಲಿ ಪುಟ್ಟಿದೆನೆಂಬುದುಮಾಗಳೆನಗೆ ಭವಪ್ರತ್ಯಯಮಪ್ಪವಧಿಜ್ಞಾನ ಪುಟ್ಟಲದಱಿಂದೆನ್ನ ಪೂರ್ವಭವ ಸಂಬಂಧಮನಱಿದು ಪೂಜಾಮಾಹಾತ್ಮ್ಯಮಂ ಭವ್ಯಜನಕ್ಕಮೆಲ್ಲಮಱಿಪಲೆಂದು ಭೇಕಚಿಹ್ನಮಂ ಮಾಡಿ ಬಂದೆನಾ ಭೇಕಕಳೇವರಮಂ ಪು . ಮಂ ಕಚ್ಚಿಕೊಂಡಿದ್ದುದೆಂಬುದಂ ಕೇಳ್ದು ಸಮಸ್ತ ಜನಂಗಳೆಲ್ಲಂ ಪೂಜಾನುರಾಗಪರಿಣತರಾದರದು ಕಾರಣದಿಂ ಪುಣ್ಯಾರ್ಥಿಗಳೆಲ್ಲಂ ಜಿನಪೂಜಾನಿರತರಕ್ಕೆಂಬುದು ಕಥಾತಾತ್ಪರ್ಯಂ.

Colophon :

ರತ್ನಕರಂಡಕದ ೬೩ ಕಥೆ ಸಮಾಪ್ತಂ.

AGENTS FOR THE SALE OF MADRAS GOVERNMENT PUBLICATIONS

IN INDIA

NEW BOOK CO., Booksellers, etc., "Kitab Mahal," 188-90, Hornby Road, Bombay.
D. B. TARAPOREVALA SONS & CO., Bombay.
THACKER & CO. (LTD.), Bombay.
N. S. WAGLE, Circulating Agent and Bookseller, No. 6, Tribhuvan Road, Girgaon, Bombay.
THE BOOK COMPANY, Calcutta.
BUTTERWORTH & CO. (LTD.), 6, Hastings Street, Calcutta.
R. CAMBRAY & CO., Calcutta.
THACKER, SPINK & CO., 3, Esplanade East, Calcutta.
K. KRISHNA AYYAR BROTHERS, Booksellers, Publishers, etc., The Round, Trichur (Cochin State).
THE CHRISTIAN LITERATURE SOCIETY FOR INDIA, Post Box No. 501, Park Town, Madras.
CITY BOOK COMPANY, Post Box No. 283, Madras.
C. COOMARASWAMY NAIDU & SONS, 27 and 35, Chinnathambi Street, Madras.
HIGGINBOTHAMS (LTD.), Mount Road, Madras.
THE LAW PRINTING HOUSE, 11, Mount Road, Madras.
G. A. NATESAN & CO., Madras.
P. R. RAMA IYER & CO., 368, Esplanade Row, Madras.
P. VARADACHARI & CO., Booksellers, 8, Linga Chetti Street, Madras.
Agent, THE SOUTH INDIA SAIVA SIDDHANTHA WORKS PUBLISHING SOCIETY, LTD., 6, Coral Merchant Street, Madras.
VENKATRAMA & CO., Educational Publishers and Booksellers, Esplanade, Georgetown, Madras.
THE LITTLE FLOWER CO., Educational Publishers and Booksellers, 44, Lingha Chetti Street, Georgetown, Madras, E.
D. SREE KRISHNAMURTHI, Editor of "Grama Paripalana," Ongole (Madras)
E. M. GOPALAKRISHNA KONE, Pudumantapam, Madura (Madras).
NATIONAL WELFARE PUBLICITY, LTD., Mangalore (Madras).
M. SESHACHALAM & CO., Proprietors, The Hindu Press, Masulipatam (Madras).
B. VENKATARAMAN, Correspondent, Permanent Fund Buildings, Neela South Street, Negapatam (Madras).
THE HINDUSTAN PUBLISHING CO. (LTD.), Rajahmundry (Madras.)
THE MODERN STORES, Salem (Madras).
The Proprietor, THE HOUSE OF KNOWLEDGE, Booksellers and Publishers, Pallíagraharam P.O., Tanjore (Madras).
S. KRISHNASWAMI & CO., Teppakulam Post, Trichinopoly Fort (Madras).
L. VAIDYANATHA AYYAR, Law Bookseller, Teppakulam P.O., Trichinopoly (Madras).
A. VENKATASUBBAN, Law Bookseller, Vellore (Madras).
BHAWNANI & SONS, Booksellers, etc., Connaught Place, New Delhi.
The Manager, THE INTERNATIONAL BOOK SERVICE, Booksellers, Publishers, News Agents and Stationers, Poona, 4.
P. N. SWAMINATHASIVAN & CO., Commission Agents, Booksellers, etc., Pudukkotta State. (Branches also at Karaikudi and Devakottai.)
The Proprietor, THE PUNJAB SANSKRIT BOOK DEPOT, Saidmitha Street, Lahore, Punjab.
MOHANLAL DOSSABHAI SHAH, Books Agent, etc., Rajkot.
B. S. MATHUR & CO., Chatur Vilas, Paota Civil Lines, Jodhpur (Rajputana).
THE BOOKLOVERS RESORT, Booksellers and News Agents, Talkad, Trivandrum.

NOTICE

Official publications may be obtained in the United Kingdom either direct from the office of the High Commissioner for India, India House, Aldwych, London, W.C. 2, or through any bookseller